(ಖಾಸಗಿ ಉಪಯೋಗಕ್ಕಾಗಿ ಮಾತ್ರ)

# ಪೂಜ್ಯ ಬಾಬೂಜಿಯವರ ಪತ್ರಗಳು

ಎರಡನೆಯ ಸಂಪುಟ

(೧೯೬೧-೧೯೮೦)

ಪ್ರಸ್ತುತ ಪಡಿಸಿದವರು:

ಯೋಗಾಶ್ರಮ ಕಮಿಟಿ (ರಿ)

೫೩, ಬನಶಂಕರಿ ನಗರ ಧಾರವಾಡ - ೫೮೦ ೦೦೮

(ಖಾಸಗಿ ಉಪಯೋಗಕ್ಕಾಗಿ ಮಾತ್ರ)

# ಪೂಜ್ಯ ಬಾಬೂಜಿಯವರ ಪತ್ರಗಳು

ಎರಡನೆಯ ಸಂಪುಟ

(೧೯೬೧-೧೯೮೦)

ಪ್ರಸ್ತುತ ಪಡಿಸಿದವರು:

ಯೋಗಾಶ್ರಮ ಕಮೀಟಿ ( ರಿ )

೫೩, ಬನಶಂಕರಿ ನಗರ ಧಾರವಾಡ - ೫೮೦ ೦೦೮

ಈ ಸಂಕಲನವನ್ನು ಆಧ್ಯಾತ್ಮಿಕ ಮಾರ್ಗದ ಸಾಧಕರ ಮಾರ್ಗದರ್ಶನಕ್ಕಾಗಿ ತಯಾರಿಸಲಾಗಿದೆ. ಈ ಸಂಕಲನದ ಯಾವುದೇ ಭಾಗವನ್ನು ಮುದ್ರಿಸುವುದು ಅಥವಾ ಇನ್ನಾವುದೇ ರೀತಿಯಲ್ಲಿ ಉಪಯೋಗಿಸುವುದನ್ನು ನಿಷೇಧಿಸಲಾಗಿದೆ.

ಅಕ್ಟೋಬರ, ೧೯೯೩

ಅರ್ಪಣೆ : . . . . .

ಪೂಜ್ಯ ಬಾಬೂಜಿಯವರ ಕಣ್ಮಣಿಗಳಾಗಿ, ಈ ಸಂಕಲನದ ಅನೇಕ ಕಡೆ ಉಲ್ಲೇಖಿಸಲಾದ ಸಹೋದರಿ "ಮೀರಾ" ಮತ್ತು "ಗುಲಾಬಿ" ಇವರಿಗೆ.

# ಮುನ್ನುಡಿ

ಈ ಸಂಪುಟದಲ್ಲಿ ಆ ಮಹಾಪುರುಷ ಸದ್ಗುರು ಶ್ರೀ ರಾಮಚಂದ್ರಜೀ ಮಹಾರಾಜ್, ಷಹಜಹಾನ್‌ಪೂರ್ (ಉ.ಪ್ರ) ಇವರು ಶ್ರೀ ರಾಘವೇಂದ್ರರಾಯರು, ರಾಯಚೂರು, ಇವರಿಗೆ ಉತ್ತರ ರೂಪದಲ್ಲಿ ಉರ್ದು ಭಾಷೆಯಲ್ಲಿ ಬರೆದ (ಫೆಬ್ರವರಿ ೧೯೬೧ ರಿಂದ ೧೯೮೦ ರವರೆಗೆ) ಓಲೆಗಳ ಕನ್ನಡ ಭಾಷೆಯ ಅನುವಾದಗಳ ಸಂಕಲನವಿರುತ್ತದೆ. ಮೊದಲನೆಯ ಸಂಪುಟವು ಮಾರ್ಚ್ ೧೯೫೫ರಿಂದ ಫೆಬ್ರವರಿ ೧೯೬೧ ರವರೆಗಿನ ಒಂದು ನೂರು ಪತ್ರಗಳ ಅನುವಾದವನ್ನು ಒಳಗೊಂಡಿರುತ್ತದೆ.

ಈ ಓಲೆಗಳಲ್ಲಿ ಅವರ ವಿಚಾರಗಳು ವಿದ್ವಾಂಸರ ಉಪನ್ಯಾಸಗಳಂತಿರದೆ ಜೀವನದ ಪಾಳೆಗಳೇ ಆಗಿವೆ. ಇವುಗಳಲ್ಲಿ ಜೀವಂತ ಧರ್ಮವೇನೆಂಬುದು, ದೇವರನ್ನು ಬದುಕಿನಲ್ಲಿ ಮುಖಾಮುಖಿ ನೋಡುವುದು ಮತ್ತು ದೇವರೊಬ್ಬನೇ ಸತ್ಯ, ಉಳಿದುದೆಲ್ಲವೂ ಮಾಯೆ ಎಂಬುವುದು ಎದ್ದು ಕಾಣುತ್ತದೆ.

ಈ ಓಲೆಗಳಿಂದ ಒಂದು ಮಹತ್ತರ ವಿಷಯ ತಿಳಿದು ಬರುವುದೇನೆಂದರೆ ಈ ಓಲೆಗಳನ್ನು ಪಡೆದವರ ಜೀವನ ಆ ಮಹಾಪುರುಷನ ಕೃಪೆಯಿಂದ ಪರಿವರ್ತನವಾಗಿ ಈ ಅಂತಿಮ ಸತ್ಯದಲ್ಲಿ ಸಮರಸಗೊಂಡು ಸ್ಥಿತಪ್ರಜ್ಞಾವಸ್ಥೆಯಲ್ಲಿ ಇರುವುದು. ಅವರ ಪ್ರೇಮವು ಯಾವುದರಿಂದಲೂ ಸೀಮಿತವಾಗದ ಅನಂತ ಪ್ರವಾಹವಾಗಿದೆ.

ಈ ಕೃತಿಯನ್ನು ಓದುವ ಎಲ್ಲರ ಪಾಲಿಗೆ ಆ ಮಹಾಪುರುಷನ ದೈವೀಪ್ರೇಮವು ಒಂದು ಸ್ಫೂರ್ತಿಯಾಗಿ ನೆಲಸಲಿ.

ಡಿ.ಆರ್. ವಿಠಲ್‌ರಾವ

ಬೆಂಗಳೂರು.
10.10.1993.

**Justice D.R. VITHAL RAO**
Judge, High Court of Karnataka (Retd.)
President,
Karnataka State Consumers' Disputes
Redressal Commission, Bangalore.

# ಈ ಸಂಕಲನ ಕುರಿತು

ಮೂಲ ಉರ್ದು ಮತ್ತು ಪಾರ್ಸಿ (ಮಿಶ್ರಿತ) ಭಾಷೆಯಲ್ಲಿರುವ ಈ ಪತ್ರಗಳನ್ನು (೧೯೫೫-೧೯೮೦) ಕನ್ನಡದಲ್ಲಿ ತರಬೇಕೆಂಬುದು ಅಭ್ಯಾಸಿಗಳ ಅನೇಕ ದಿನಗಳ ಕೋರಿಕೆಯಾಗಿತ್ತು. ಉರ್ದು ಮತ್ತು ಕನ್ನಡ ಭಾಷಾ ತಜ್ಞರ ಸಹಾಯವಿಲ್ಲದೇ ಈ ಕೆಲಸ ಕಷ್ಟಸಾಧ್ಯ. ಕೊನೆಗೂ, ಮಾನವ ವ್ಯಕ್ತಿತ್ವದ ಆ ಮಹಾಶಿಲ್ಪಿಯ ಈ ಪತ್ರಗಳು ಯಾರ ಜೀವನವನ್ನು ಉದಾತ್ತವಾಗಿ ಪರಿವರ್ತಿತಗೊಳಿಸಿದವೋ ಆ ವ್ಯಕ್ತಿಯಿಂದಲೇ ಈ ಕೆಲಸ ಪೂರ್ಣಗೊಳಿಸಲಾಯಿತು.

ಎರಡನೆಯ ಸಂಪುಟದ ಈ ತೊಂಬತ್ತೇಳು ಪತ್ರಗಳ (ಫೆಬ್ರುವರಿ ೧೯೬೧ ರಿಂದ ಸೆಪ್ಟೆಂಬರ್ ೧೯೮೦ರ ವರೆಗೆ) ಅನುವಾದ ಮತ್ತು ಬರವಣಿಗೆಯನ್ನು ನವೆಂಬರ ೧೯೯೦ ರಿಂದ ಎಪ್ರಿಲ್ ೧೯೯೨ರ ಅವಧಿಯಲ್ಲಿ, ರಾಯಚೂರ ಮತ್ತು ಧಾರವಾಡದಲ್ಲಿ ಮಾಡಲಾಯಿತು. ಅನುವಾದ ಮಾಡುವ ಕಾಲಕ್ಕೆ ಸೂಕ್ತ ಸಲಹೆ ಸೂಚನೆಗಳನ್ನಿತ್ತು ಈ ದೈವೀ ಕೆಲಸದಲ್ಲಿ ಭಾಗಿಯಾದವರು ಹಲವಾರು ಬಂಧು ಭಗಿನಿಯರು. ವಿಶೇಷವಾಗಿ, ಬಂಧು, ಶ್ರೀ ಎಮ್.ಡಿ.ಜಹಗೀರದಾರ ಬೆಂಗಳೂರು, ಇವರ ಪಾತ್ರವನ್ನು ಮರೆಯುವಂತಿಲ್ಲ.

ಅನುವಾದದ ಸಂಪೂರ್ಣ ಸಂಕಲನದ ಕರಡು ಪ್ರತಿಯನ್ನು ಆಮೂಲಾಗ್ರವಾಗಿ ಪರೀಶೀಲಿಸಿ ಸೂಕ್ತ ತಿದ್ದುಪಡಿಗಳನ್ನು ಮಾಡಿದ ಬಂಧು ಶ್ರೀ ಎಸ್.ಎ. ಸರ್ನಾಡಜಿ ಎಮ್.ಎ., ಎಮ್.ಎಡ್., ಗುಲ್ಬರ್ಗಾ ಇವರ ಕೊಡುಗೆಯೂ ಅಪಾರ.

ನಿಜಾರ್ಥಲುಪ್ತವಾಗಬಾರದೆನ್ನುವ ದೃಷ್ಟಿಯಿಂದ ಅನುವಾದವನ್ನು ಶಾಬ್ದಿಕವಾಗಿಯೇ ಮಾಡಲಾಗಿದೆ. ಮತ್ತು ಅನುವಾದ ಶಾಬ್ದಿಕವಾಗಿರುವುದೇ ಯೋಗ್ಯವೆಂದು ಪೂಜ್ಯ ಬಾಬೂಜಿಯವರೂ ಮೊದಲನೇಯ ಸಂಪುಟದ ಪತ್ರವೊಂದರಲ್ಲಿ ಹೇಳಿದ್ದಾರೆ. ಎಲ್ಲಿಯಾದರೂ ಅಸ್ಪಷ್ಟತೆ, ದೂರಾನ್ವಯ ಮುಂತಾದವು ಕಂಡುಬಂದಲ್ಲಿ ಓದುಗರು ಉರ್ದು ಮೂಲವನ್ನೇ ಅವಲಂಬಿಸಬೇಕು.

ಈ ಸಂಪುಟವು ಫೆಬ್ರುವರಿ ೧೯೬೧ ರಿಂದ ಸೆಪ್ಟೆಂಬರ್ ೧೯೮೦ರ ವರೆಗಿನ ತೊಂಬತ್ತೇಳು ಪತ್ರಗಳ ಅನುವಾದವನ್ನು ಒಳಗೊಂಡಿದೆ. ಸಾಧಕರು ಈ ಪತ್ರಗಳನ್ನು ಓದಿ ಲಾಭ ಪಡೆಯಲೆಂಬುದೇ ಈ ಪ್ರಯತ್ನದ ಉದ್ದೇಶ. ಈ ಪತ್ರಗಳು ವೈಯಕ್ತಿಕವಾಗಿ ಬರೆದಿದ್ದರಿಂದ ಅದರಲ್ಲಿಯ ಎಷ್ಟೋ ಸೂಚನೆ ಸಲಹೆಗಳು ಕೇವಲ ಈ ಪತ್ರಗಳನ್ನು ಸ್ವೀಕರಿಸಿದವರಿಗೆ ಮಾತ್ರ ಅನ್ವಯಿಸುತ್ತವೆ. ಪೂರ್ವ ಪರವಾನಿಗಿ ಇಲ್ಲದೇ ಯಾರೂ ರೂಢಿಯಲ್ಲಿ ತರಬಾರದಾಗಿ ಕೋರಲಾಗಿದೆ.

ಈ ಸಂಪುಟವನ್ನು ಅಕ್ಷರದೋಷ ರಹಿತವಾಗಿಸಲು ಸಕಲ ಪ್ರಯತ್ನ ಮಾಡಲಾಗಿದೆ. ಆದಾಗ್ಯೂ, ಕೆಲವೊಂದು ದೋಷಗಳು ಉಳಿದುಕೊಂಡಿರಲಿಕ್ಕೆ ಸಾಕು. ಸಹೃದಯಿಗಳ ಸಲಹೆ ಸೂಚನೆಗಳಿಗೆ ಸ್ವಾಗತವಿದೆ.

ಈ ಸಂಪುಟವನ್ನು ತಯಾರಿಸಲು ಅಖಿಲ್ ಗ್ರಾಫಿಕ್ಸ್‌ನ ವಾಲಿಯವರು, ವಿಜಯ ಝೂಮ್ ಝೆರಾಕ್ಸನವರು ಹಾಗೂ ಆಕಳವಾಡಿ ಪ್ರಿಂಟಿಂಗ್ ಪ್ರೆಸ್‌ನವರು ವಿಶೇಷ ಶ್ರಮ ವಹಿಸಿದ್ದಾರೆ.

"ಓಂ ತತ್‌ಸತ್"

ನಂ. ೧೦೧ ಷಾಹಜಹಾನ್‌ಪೂರ್
ನಂ. ಎಫ್ - ೧೩೧/ ಎಸ್.ಆರ್.ಸಿ.ಎಮ್. ದಿ. ೧೦-೩-೧೯೬೧.

ನನ್ನ . . . . . ಜೀ,

ನಿಮ್ಮ ಎರಡೂ ಪತ್ರಗಳು ತಲುಪಿದವು. ಸೊಸೆಯ ಅನಾರೋಗ್ಯದ ಬಗ್ಗೆ ಕೇಳಿ ಚಿಂತೆಯುಂಟಾಯಿತು. ದೇವರು ಆರೋಗ್ಯ ಅನುಗ್ರಹಿಸಲಿ. ಮಾನಸಿಕ ಸ್ವಾಸ್ಥ್ಯ ಕೊಡುವುದಕ್ಕೆ ನೀವು ಸಾಕು. ಆದರೂ ಏನಾದರು ಜಾಡ್ಯ ಇರಲೇಬೇಕು. ಕಣ್ಮಣಿ ಮೀರಾಬಾಯಿಯ ಚಿಂತೆ ಬಹಳಷ್ಟು ಇದ್ದೇ ಇರುತ್ತದೆ. ಏಕೆಂದರೆ, ಅವಳಿಗೆ ಎರಡನೆಯ ಮನೆಗೆ ಹೋಗುವುದಿದೆ. ಅಂಗಮರ್ದನವನ್ನು - ವಿಶೇಷವಾಗಿ ಸೊಂಟದ ಹಿಂದೆ ಮತ್ತು ಕೆಳಗೆ ಮುಂದುವರಿಸಿರಿ. ನಿಮಗೆ ನಾರಾಯಣ ತೈಲ ಕಳಿಸಿಕೊಡಲು ಮೈಸೂರಿನ ಶ್ರೀ 'ಮ' ನನ್ನು ಕೇಳಿಕೊಂಡಿದ್ದೆ. ಏಕೆಂದರೆ, ಆತನು ನನಗೆ ಕಳುಹಿಸುವುದಾಗಿ ಬರೆದಿದ್ದನು. ನನಗೆ ಅದರ ಆವಶ್ಯಕತೆಯಿಲ್ಲ, ಏಕೆಂದರೆ ನನ್ನ ನೋವಂತೂ ಹೊಟ್ಟೆಯ ಒಳಗಡೆಯಿದೆ. ತೈಲವು ಬಂದ ನಂತರ ಅವಳ ಕಾಲು ಮತ್ತು ಕೈಯ ಮೇಲೆ ಚೆನ್ನಾಗಿ ತಿಕ್ಕಿರಿ.

ಪ್ರೀತಿಯ ಚಿ| 'ಮಾ' ಕಾಲೇಜಿಗೆ ಹೋಗತೊಡಗಿರುವರೆಂದು ತಿಳಿದು ನನಗೆ ಬಹಳ ಸಂತೋಷವಾಯಿತು. ಈಗಲೂ ಅವರಿಗಾಗಿ ಸ್ವಲ್ಪ ಸ್ವಲ್ಪ ಏನಾದರೂ ಮಾಡುತ್ತಿರುತ್ತೇನೆ. ಈಗ ನೀವು ನಿಮ್ಮ ಅತ್ತಿಗೆಯಿಂದ ಸಿಹಿತಿಂಡಿಯನ್ನು ಪಡೆಯಲು ಅಧಿಕಾರ ಪಡೆದಿರುವಿರಿ.

ಶ್ರೀ 'ಸ' ಶ್ರೀ ರಾಮದಾಸಜಿಯ ಚರಣಸ್ಪರ್ಶ ಮಾಡಿಕೊಂಡಿದ್ದು ಬಹಳ ಒಳ್ಳೆಯದಾಯಿತು. ಅವರು ನಿಜವಾಗಿಯೂ ಬಹಳ ಉತ್ತಮರು. ಮತ್ತು ನಾನು ಅವರನ್ನು ಆರಾಧಿಸುತ್ತೇನೆ. ಆದರೆ ನನ್ನ ಗುರುಮಹಾರಾಜರ ಚರಣಸ್ಪರ್ಶ ಮಾಡಿದ ನನ್ನ ದೃಷ್ಟಿಗೆ ನಾನೇನು ಮಾಡಲಿ? ಅವರು (ರಾಮದಾಸರು) ಬಿಂದುವನ್ನು ಸಿಂಧುವೆಂದು ತಿಳಿದಿರುವರು. ಮತ್ತು ಮುಂದುವರಿಯಲೊಲ್ಲರು. ಅದರಲ್ಲಿ ಅವರ ತಪ್ಪಾದರು ಏನೂ ಇಲ್ಲ. ಆದರೆ ದಿಲ್ಲಿ (ಗಮ್ಯಸ್ಥಾನ) ಇನ್ನೂ ದೂರವಿದೆ. ಕೇವಲ ಉಸುಕಿನ ತಂಪಿನಿಂದ ಪ್ರೇಮದ ಬೇಗುದಿಯನ್ನು ಶಾಂತಗೊಳಿಸಿರುವಿರೆಂದು ಅವರಿಗೆ ಹೇಳುವ ನಾಲಿಗೆಯನ್ನು ನಾನೆಲ್ಲಿಂದ ತರಲಿ? (ಚಿಕ್ಕ ಬಾಯಿ ದೊಡ್ಡ ಮಾತು ಎಂದಂತಾಗುವುದು)

ನೀವು ಇದೆಂಥದನ್ನು ಯೋಚಿಸುತ್ತಿರುವಿರಿ? ನೀವಂತೂ ಹುಚ್ಚನನ್ನು ಗುಣಪಡಿಸಬಸಲ್ಲಿರಷ್ಟೇ ಹೊರತು, ನೀವೇ ಹುಚ್ಚರಾಗುವ ಬಯಕೆಯನ್ನು ನಿಮಗೆ ಕೊಡಲಾರೆ. ಯಾವುದನ್ನು ನೀವು 'ಹುಚ್ಚು' ಎಂದು ತಿಳಿಯುತ್ತಿರುವಿರೋ ಅದು, ಪ್ರೇಮದ ಒಂದು ಸ್ಥಿತಿ. ಅದನ್ನು ನೀವು 'ಅಂಧಪ್ರಜ್ಞೆ' ಎನ್ನಬಹುದು. ಅಥವಾ ತಿಳುವಳಿಕೆಗೋಸ್ಕರ 'ಸುಸಂಸ್ಕೃತ ಹುಚ್ಚು' ಎಂದೆನ್ನಬಹುದು. ಅಂತೂ ಇದು ಒಂದು ಆಶ್ಚರ್ಯಕರವಾದ ವಸ್ತು ಸರಿ.

ಹಾಗಾದರೆ ನೀವು "ತ್ಯಾ"ನನ್ನು ಗುಣಪಡಿಸಿರಿ. ಅದರ ವಿಧಾನ ಅದೇ. ಹುಚ್ಚನ್ನು ಶರೀರದಿಂದ ತೆಗೆದು ಹೊರಗಡೆ ಎಸೆದುಬಿಟ್ಟು ಬುದ್ಧಿ ಶಕ್ತಿಯನ್ನು ಬೆಳೆಸಿರಿ.

ಒಳ್ಳೆಯದು. ಈಗಂತೂ ನಾನು ಹೇಳುವುದಿಲ್ಲ, ಏಕೆಂದರೆ ಸಂಕಲ್ಪ ಶಕ್ತಿಯನ್ನು ಸಂಶಯರಹಿತಗೊಳಿಸಿ ಬಹಳ ಬಲವಾಗಿ ನಿರ್ಮಿಸದಿದ್ದರೆ ರೋಗವು ಕರ್ತೃವಿನ ಮೇಲೆ ಸ್ವಲ್ಪ ಪರಿಣಾಮ ಮಾಡಿಬಿಡುವುದು.

ನೀವು ಸತ್ಸಂಗಿಗಳ ಶುದ್ಧೀಕರಣಕ್ಕಾಗಿ ಹೆಚ್ಚು ಪ್ರಯತ್ನ ಮಾಡಿರಿ. ಪ್ರಾಣಾಹುತಿಯಾದರೂ, ಒಂದು ರೀತಿಯ ಆಧ್ಯಾತ್ಮಿಕ ಅಮಲು. ಅದು ಇತರ ಅಮಲುಗಳಿಗಿಂತ ಹೆಚ್ಚು ಲಾಭದಾಯಕವಾದದ್ದು. ಚಕ್ರಗಳ ಮತ್ತು ಸೂಕ್ಷ್ಮಶರೀರದ ಶುದ್ಧೀಕರಣ ಮಾಡಿದಾಗ ಕ್ಷೇತ್ರವು ಉತ್ತಮವಾಗುವುದು.

ಸೇಡಂ ನ 'ಆ' ತಮ್ಮ ಮನೆಯ ಮೇಲೆ ಈ ಕೆಳಗೆ ಬರೆದಿರುವ ಒಂದು ಫಲಕವನ್ನು ಹಚ್ಚಲು ಬಯಸುವರು. ಯಾವುದು ಸರಿಯಾಗಿದೆಯೋ ಅದನ್ನು ಅವರಿಗೆ ಬರೆದು ಬಿಡಿರಿ. ಅವರು ನಿಮಗೂ ಬರೆದಿರಬಹುದು. ನಾನು ನನ್ನ ಸೂಚನೆ ಕೊಟ್ಟಿರುವೆನು. ನೀವು ಯೋಗ್ಯವೆಂದು ತಿಳಿದುದನ್ನು ಅವರಿಗೆ ಬರೆಯಿರಿ. ಬ್ರ್ಯಾಂಚ, ವಾಸ್ತವದಲ್ಲಿ ಗುಲ್ಬರ್ಗ ಇದೆ. ಅದು ಸೇಡಂ ನಲ್ಲಿ ಕೆಲಸ ಮಾಡುತ್ತಿರುವುದು.

1) Sri Ram Chandra Mission
   Branch - Sedam, Gulbarga.
2) Sri Ram Chandra mission
   Branch - Gulbarga, Sedam.

ಮಿ. ರಾಬರ್ಟ ಕಾಕ ನೀವು ಬಯಸಿದ ಹಾಗೆ ಹೆಚ್ಚು - ಕಡಿಮೆ ಆರಂಭ ಮಾಡಿರುವನು. ಆತನ ಪತ್ರದ ಪ್ರತಿ, ಮತ್ತು ನನ್ನ ಉತ್ತರದ ಪ್ರತಿಯನ್ನು ನಿಮ್ಮ ಅವಲೋಕನಕ್ಕಾಗಿ ಕಳುಹಿಸುತ್ತಿರುವೆನು. ನಿಮ್ಮ ಕಡತದಲ್ಲಿಟ್ಟುಕೊಳ್ಳಿರಿ. ನಾನು ಉತ್ತರ ಸರಿಯಾಗಿ ಬರೆಯುತ್ತೇನೆಯೋ ಏನೋ ದೇವರಿಗೇ ಗೊತ್ತು! ಇಲ್ಲಿ ಸಹಾಯ ಮಾಡುವವನು ಯಾವನೂ ಇಲ್ಲ, ನೀವು ಹೈದ್ರಾಬಾದಿನ ಬಾಬು 'ಶಿ'ಕಡೆ ವಿಶೇಷ ಗಮನವಿಡಿರಿ. ಅವರು ಮಾರ್ಗದಲ್ಲಿ ಮುನ್ನಡೆಯುವಂತೆ ಅವರ ಆಂತರಿಕ ಶುದ್ಧಿಯನ್ನು ಸಹ ಮಾಡುತ್ತಿರಿ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ. ೧೦೨
ನಂ. ಎಫ್-೧೯೬/ಎಸ್.ಆರ್.ಸಿ.ಎಮ್.

ಶಾಹಜಹಾನ್‌ಪೂರ್
ದಿ. ೨೪.೪.೧೯೬೧

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಸಂತೋಷದ ಪತ್ರಗಳೆಲ್ಲ ತಲುಪಿದವು. ೧೦-೧೨ ದಿನಗಳು ಹೊಟ್ಟೆ ಶೂಲೆಯ ತೀವ್ರತೆ ಬಹಳ ತೊಂದರೆ ಕೊಟ್ಟಿತು. ಈಗ ನೋವು ಮಾಮೂಲಿನ ಸ್ಥಿತಿಗೆ, ಎಂದರೆ ನಾನು ಸಹಿಸಿಕೊಳ್ಳುವ ಎಲ್ಲೆಯೊಳಗೆ ಬಂದಿದೆ. ಸೊಸೆಯು ಆರೋಗ್ಯವಂತಳಾಗುತ್ತಿರುವುದು ಬಹಳ ಸಂತೋಷದ ಮಾತು. ಆಕೆಯ ಹೃದಯದ ಶಕ್ತಿಯಂತೂ ಬೆಳೆಯಲೇ ಬೇಕು. ಹುಡುಗಿಯರನ್ನು ನಿಮ್ಮ ತಂದೆಯವರು ಮನೆಗೆ ಕರೆದು ಕೊಂಡೊಯ್ದಿರುವುದರಿಂದ ಗಾಳಿ ಮತ್ತು ನೀರು ಬದಲಾಗುವುದಲ್ಲದೆ ಹಳ್ಳಿಯಲ್ಲಿ ಉಣ್ಣಲು ಹಾಲು ತುಪ್ಪ ಚೆನ್ನಾಗಿ ಸಿಗುವುದು. ಆದುದರಿಂದ ಒಂದು ದೃಷ್ಟಿಯಿಂದ ಒಳ್ಳೆಯದಾಯಿತು. ಆದರೆ ಅವರ ತಾಯಿಗೆ ಅವರ ನೆನಪು ಬರುತ್ತಿರಬಹುದು.

ಮನೆಯನ್ನು ಕೊಂಡವನು, ಬಂಧು 'ದ' ನನ್ನು ಕಾನೂನಿನ ಪ್ರಕಾರ ಮನೆ ಬಿಡಿಸಲಾರ, ಇಲ್ಲಂತೂ ಬಾಡಿಗೆದಾರರು ಒಂದೊಂದು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಮನೆ ಬಿಡುವರು. ಬಂಧು, 'ಮಾ' ತಾವು ಇನ್ನೂ ಅಸ್ವಸ್ಥರಿರುವರೆಂದು ತಿಳಿದುಕೊಳ್ಳುವುದು ಕೇವಲ ಭ್ರಮೆ. ನೂರರ ಒಂದು ಭಾಗದಷ್ಟು ಸ್ವಲ್ಪ ಉಳಿದಿದೆ. ನಾನು ಅದರ ಕಡೆಗೆ ಆಗಾಗ ಗಮನ ಕೊಡುತ್ತೇನೆ. ಸ್ವಲ್ಪ ಉಳಿದಿದೆ. ಈಶ್ವರನು ಇಚ್ಛಿಸಿದರೆ ಇದು ಕೂಡ ಇರುವುದಿಲ್ಲ. ಡಾ||ಕೆ.ಸಿ.ವಿ'ಯ ದೊಡ್ಡ ಹುಡುಗಿಯ ಮದುವೆ ಮೇ ೨೬ ಕ್ಕಿದೆ ಆದುದರಿಂದ ಅವರನ್ನು ಭೇಟಿಯಾಗಿ ಸಾವಧಾನ ಚಿತ್ತದಿಂದ ಮೀರಾಬಾಯಿಯ ಸಮಾಚಾರವನ್ನು ಅವರಿಗೆ ಹೇಳಬೇಕಾದರೆ, ಮದುವೆಗೆ ಮುಂಚೆ ಅಥವಾ ಅದರ ಅನಂತರ ಹೋಗಬಹುದು.

ಬಂಧು 'ಸ' ಹಲ್ಲುಗಳನ್ನು ಕೀಳಿಸುವುದರಲ್ಲಿ ಆತುರಪಡಕೂಡದು. ನಾನು ಅವರಿಗೆ ಕೊಂಚ ಮುಂಜಾಗ್ರತೆಯ ವಿಧಾನವನ್ನು ತೋರಿಸಿಕೊಡುವೆ. ಜನರು, ಪಯೋರಿಯಾದ ಕಾರಣ ಹಲ್ಲುಗಳನ್ನೇನೋ ಕೀಳಿಸಿಬಿಡುವರು. ಆದರೆ ಹಲ್ಲುಗಳೂ ಹೋದುವು. ಮತ್ತು ಆರೋಗ್ಯವೂ ಉಂಟಾಗಲಿಲ್ಲ, ಎಂಬುದು ಅನುಭವಕ್ಕೆ ಬಂದಿದೆ.

ನಾನು ಎಪ್ರಿಲ್‌ನಿಂದ ಜೂನ್‌ದ ವರೆಗೆ ಹೊರಗೆ ಹೋಗುವುದಿಲ್ಲ. ಏಕೆಂದರೆ ಈ ದಿನಗಳಲ್ಲಿ ನನ್ನ ಹತ್ತಿರ ಬೇಸಿಗೆ ರಜೆಯ ಜನರು ಬರುವರು, ಆದೇನಿದ್ದರೂ ನಾನಂತೂ ಮನೆಯಿಂದ ಬೇಗ ಹೊರಡುವುದಿಲ್ಲ.

ಬಾಬು 'ಶಿ' ಸಾಹೇಬರು ಚತುರ್ಭುಜ ಸಹಾಯ್‌ರ ಬಗ್ಗೆ ವಿಚಾರಿಸಿದ್ದರು. ಅವರ ಪತ್ರದ ಪ್ರತಿ ಮತ್ತು ಅದರ ಉತ್ತರದ ಪ್ರತಿ ಎರಡನ್ನೂ ಈ ಪತ್ರದ ಜೊತೆಯಲ್ಲಿ ಕಳಿಸಿರುವೆನು. ಚತುರ್ಭುಜ ಸಹಾಯ್ ಅವರು ತಮ್ಮ ಮರಣಕ್ಕೆ ಬಹಳ ಮುಂಚೆಯೇ ಆಧ್ಯಾತ್ಮಿಕತೆಯನ್ನು ಕಳೆದುಕೊಂಡಿದ್ದರು. ಯಾರು ಯಾರು ನನ್ನನ್ನು ಪ್ರತಿನಿಧಿಯೆಂದು ಒಪ್ಪಲಿಲ್ಲವೊ, ಮತ್ತು ಈ ಸ್ಥಿತಿ ನನ್ನಲ್ಲಿದೆ ಎನ್ನುವುದನ್ನು ಪರೀಕ್ಷಿಸಲಿಲ್ಲವೋ, ಅವರ ಎಲ್ಲ ಶಕ್ತಿಯನ್ನು ಗುರುಮಹಾರಾಜರು ಕಡಿದು ಹಾಕಿದರು. ಅವರು (ಚ) ಯಾರೂ ನಿರೀಕ್ಷಿಸದಷ್ಟು ಕೆಲಸವನ್ನು ಕೆಡಿಸಿಬಿಟ್ಟರು. ಲಾಲಾಜಿಯವರ ಜೀವನ ಚರಿತ್ರೆಯಲ್ಲಿ 'ಚ' ಅವರು ತಪ್ಪಾಗಿ ತಮ್ಮನ್ನು ತಾವು ದೊಡ್ಡವರನ್ನಾಗಿ ಮಾಡಿತೋರಿಸಿದ್ದಾರೆ. ಯಾವ ಶಬ್ದವನ್ನು ಶ್ರೀ ಗುರುಮಹಾರಾಜರು ನನ್ನ ಬಗ್ಗೆ ಹೇಳಿದ್ದರೋ, ಅದು ಅವರಿಗೆ (ಚ) ತಿಳಿದ ಮೇಲೆ ಅದೆಲ್ಲ ತನ್ನ ಬಗೆಗೆಂದು ಇತರರ ಮುಂದೆ ಬಹಿರಂಗ ಪಡಿಸಿದರು. ನನ್ನ ಬಳಿ ಅದರ ಪ್ರಮಾಣವೂ ಇದೆ.

ಬಂಧು, ಈ 'ವಿ' ಒಬ್ಬ ಒಳ್ಳೆಯ ವ್ಯಕ್ತಿ ಸಿಕ್ಕಿದ. ನಾನು ಆತನಿಂದ ಕೆಲಸ ತೆಗೆದುಕೊಳ್ಳಲು ಬಯಸುತ್ತಿದ್ದೆ. ಏಕೆಂದರೆ ಅವನೊಬ್ಬ ಉತ್ತಮ ಮತ್ತು ಪ್ರಭಾವಶಾಲಿ ಮನುಷ್ಯ. ತಾನು ನನಗೆ ಸಂಪೂರ್ಣ ಸಮರ್ಪಿತನಾಗಿರುವುದಾಗಿ ಮೊದಲ ಪತ್ರದಲ್ಲಿಯೇ ನನಗೆ ಬರೆದಿದ್ದ. ಆತನ ಹೆಂಡತಿಯು ಆತನನ್ನು ಒತ್ತಾಯ ಪಡಿಸಿರಬಹುದೆಂದು ನನಗನಿಸುತ್ತದೆ. ನಾನು ಆತನ ಹೆಂಡತಿಯಲ್ಲಿ ಒಂದು ವಿಧವಾದ ಹುಚ್ಚು ಇದೆಯೆಂದು ಕೂಡ ಆತನಿಗೆ ಹೇಳಿದ್ದೆ. ಇದನ್ನು ಸಹ ಆತನು ತನ್ನ ಹೆಂಡತಿಗೆ ಹೇಳಿಬಿಟ್ಟ. ಮತ್ತು ಇದರಿಂದ ಆಕೆಗೆ ಕೆಡುಕೆನಿಸಿರಬಹುದು. ನಾನು ಸ್ವಲ್ಪ ಸರಳ ಮತ್ತು ಸಾಧುಪ್ರಾಣಿ. ನನ್ನ ಸರಳತೆಯ ಕಾರಣದಿಂದ ಜನರು ನಾನು ಏನೂ ಬೆಲೆಯುಳ್ಳವನಲ್ಲವೆಂದು ತಿಳಿಯುವರು. ಮತ್ತು ಇದೆಲ್ಲ ಸರಿಯೂ ಇದೆ. ಇರಲಿ, ನಾನು ಆತನಿಗೆ ಒಂದು ಪತ್ರ ಬರೆದಿರುವೆನು. ಅದರ ಪ್ರತಿಯನ್ನು ಈ ಪತ್ರದ ಜೊತೆಯಲ್ಲಿಟ್ಟಿರುವೆನು.

ಧಾರವಾಡದಲ್ಲಿ ಸದ್ಯದಲ್ಲಂತೂ ಕೇಂದ್ರ ತೆರೆಯಲಾಗುವುದಿಲ್ಲ. ಕೆಲಸವನ್ನು ನೀವು ಸ್ವತಃ ಮಾಡಬೇಕಾಗುವುದು. ನಿಮ್ಮ ಮೂಲಕ ಅಭ್ಯಾಸಿಗಳಾದವರು ಉತ್ತಮರಾಗಿರುವರು. ಉದಾಹರಣೆಗೆ 'ಅ'ಮತ್ತು 'ಸ'. ನಿಮಗೆ ಕೆಲಸ ಮಾಡುವ ಕ್ಷೇತ್ರವು ದೊರತಿಲ್ಲವೆನ್ನುವುದೇನೊ ನಿಜ. ಆದರೆ ಕ್ಷೇತ್ರವನ್ನು ನೀವು ನಿರ್ಮಿಸುತ್ತಿರುವಿರಿ. ಮದ್ರಾಸಿನಲ್ಲಿ ಸಾಯಿಬಾಬಾ ಅವರು ಒಂದು ಮಂದಿರವನ್ನು ಉತ್ತಮವಾಗಿ ಮಾಡಿಸಿರುವರು. ಮತ್ತು ಒಬ್ಬ ಮದ್ರಾಸಿಯು ಅವರಿಗೆ ದೊರೆತ, ಆತನು ಶ್ರದ್ಧಾಪೂರ್ವಕ ಚಂದಾ ಸಂಗ್ರಹಿಸಿದ, ಉತ್ತರ ಪ್ರದೇಶದ ಗವರ್ನರರಾದ ಶ್ರೀ ಕೆ. ಎಮ್ ಮುನ್ಷಿಯವರು ಬಾಬಾರ ಶಿಷ್ಯರೇ ಆಗಿರುವರು. ಮೂರ್ತಿಗಳನ್ನು ತರಿಸುವುದು ಏನಾದರೂ ಸಿದ್ಧಿಯೋ ಹೇಗೆಂದು ನನ್ನ ತಿಳುವಳಿಕೆಗೆ ಬಾರದು. ನಾನು ಅವರನ್ನು

ನೋಡಿದ್ದಾದರೆ ಮೂರ್ತಿಗಳನ್ನು ಹೇಗೆ ತರಿಸುವರೆಂದು ಹೇಳುತ್ತಿದ್ದೆ. ಆ ಜನರು ಜನಸಾಮಾನ್ಯರನ್ನು ವಾಸ್ತವವಾಗಿ ಕೆಡಿಸಿರುವರು.

ಮಕ್ಕಳಿಗೆ ಆಶೀರ್ವಾದಗಳು.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ.ಸೂ.: ಶ್ರೀ 'ರಾ' ೨೫ ಎಪ್ರಿಲ್‌ದಂದು ತಮ್ಮ ಸಹಚರರ ಜೊತೆಯಲ್ಲಿ ಬರುವೆನೆಂದು ಬರೆದಿರುವರು.

◆ ◆ ◆

"ಓಂ ತ್‌ತ್ ಸತ್"

ನಂ.೧೦೩ — ಷಾಹಜಹಾನಪೂರ್

ನಂ. ಎಫ್ - ೨೪೨ / ಎಸ್.ಆರ್.ಸಿ.ಎಮ್. — ದಿ. ೨೩ -೫-೧೯೬೧.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ, ನಿಮ್ಮ ಎರಡೂ ಪತ್ರಗಳು ತಲುಪಿದವು. ಶ್ರೀ 'ರಾ', ಶ್ರೀ 'ಭೀ' ಮತ್ತು 'ಶಾ' ೨೬ ಎಪ್ರಿಲ್‌ಕ್ಕೆ ಬಂದರು. ಈ 'ಶಾ' ನನಗೆ ಸೇಡಂನಲ್ಲಿ ಭೆಟ್ಟಿಯಾಗಿದ್ದರು. ಒಂದು ಕಣ್ಣಿನ ದೃಷ್ಟಿ ಕಡಿಮೆ ಇರುವುದು ಅದೇ ಹುಡುಗನದು. ಈಗ ಅವನು ಚೆನ್ನಾಗಿರುವನು. ಶ್ರೀ 'ಗು' ಶ್ರೀ'ಶ' ಮತ್ತು ನಿಮ್ಮ ಜೊತೆಯಲ್ಲಿ ಹೈದ್ರಾಬಾದಿನಲ್ಲಿ ಓದಿರುವ 'ಗೋ' ಮತ್ತು ಆತನ ಧರ್ಮಪತ್ನಿ ಮತ್ತು ಮಕ್ಕಳು ಸಹ ಮೇ ೪ ಕ್ಕೆ ಬಂದಿದ್ದರು. ಮೇ ೧೯ ಕ್ಕೆ ಎಲ್ಲರೂ ಹೊರಟು ಹೋದರು.

'ವಿ' ಅವರ ಪತ್ರದ ಪ್ರತಿಯನ್ನು ನಾನು ನಿಮಗೆ ಕಳುಹಿಸಿದ್ದೆ. ತಲುಪಿರಬಹುದು. ಅದಕ್ಕೆ ಅವರು ಕೊಟ್ಟಿರುವ ಉತ್ತರದ ಪ್ರತಿಯನ್ನು ಮತ್ತು ಅದಕ್ಕೆ ನಾನು ಬರೆದಿರುವ. ಪ್ರತ್ಯುತ್ತರದ ಪ್ರತಿಯನ್ನು ನಿಮ್ಮ ಅವಗಾಹನೆಗಾಗಿ ಕಳುಹಿಸುತ್ತಿರುವೆನು. ಮೊದಲನೆಯದಾಗಿ, ಇವು ನಿಮ್ಮ ಕೇಂದ್ರಕ್ಕೆ ಸಂಬಂಧಪಟ್ಟಿರುವುದರಿಂದ ಎಲ್ಲ ವಿಷಯಗಳನ್ನು ನೀವು ತಿಳಿದಿರಬೇಕು. ಎರಡನೆಯದಾಗಿ. ಇದರಿಂದ ನಿಮ್ಮ ಅನುಭವವೂ ಬೆಳೆಯುತ್ತದೆ. ಅದು ಮುಂದಿನ ಕಾರ್ಯವಿಧಾನವನ್ನು ರೂಪಿಸುವುದರಲ್ಲಿ ಸಹಾಯ ಮಾಡುವುದೆಂದು ಈ ಪ್ರತಿಗಳನ್ನು ಕಳುಹಿಸುತ್ತಿರುವೆನು. 'ವಿ'ಯ ಹೆಂಡತಿಗೆ ಸಾಯಿಬಾಬಾ ಹೆಚ್ಚು ಉತ್ತಮರೆನಿಸಿದ್ದರಿಂದ 'ವಿ'ಗೆ ಸಹ ನಿರ್ವಾಹವಿಲ್ಲದೇ ಅವರಿಂದ ಉಪದೇಶ ತೆಗೆದುಕೊಳ್ಳಬೇಕಾಯಿತೆಂದು ನನಗೆ 'ಸ' ಬರೆದಿರುವರು. ಮತ್ತು ಸಾಯಿಬಾಬಾ ದೇವರಿದ್ದಾನೆಂದು ಅವರಿಗೆ ನಂಬಿಕೆಯುಂಟಾದ ಮೇಲಂತೂ ಅವರ ಹೊಗಳಿಕೆಯ ಸೇತುವೆಯನ್ನು 'ಪ್ರದೀಪ' ಪತ್ರಿಕೆಯಲ್ಲಿ ಕಟ್ಟ ಬಯಸಿದರು.

ಡಾ.ವರದಾಚಾರ್ಯರು ಒಂದು ವಿಮರ್ಶೆ ಮಾಡಿದ್ದರು. ಅದರಲ್ಲಿ ಅವರು ತಮ್ಮ ಅಭಿಪ್ರಾಯವನ್ನು ನೀವು ಹಿಂದಿನ ಪತ್ರದಲ್ಲಿ ಬರೆದಿರುವ ಎರಡು ಶಬ್ದಗಳಲ್ಲಿ ವ್ಯಕ್ತಗೊಳಿಸಿರುವರು. 'ವಿ' ನನಗೂ ಸಹ ಅವರು (ಸಾಯಿಬಾಬಾ) ಅನಂತವಾಗಿ ದೊಡ್ಡವರಿರುವುದನ್ನು ಪರೀಕ್ಷೆ ಮಾಡಲು ಬರೆದಿದ್ದರು. ಮತ್ತು ಪುನಃ ನನ್ನಿಂದ ಪರೀಕ್ಷೆಯನ್ನು ಬಯಸುತ್ತಿರುವರು. ವಾಸ್ತವದಲ್ಲಿ 'ವಿ'ತಮ್ಮ ಹೃದಯ ಮಂದಿರವನ್ನು ಧರ್ಮಛತ್ರವನ್ನಾಗಿ ಮಾಡಿಟ್ಟಿರಿರುವರು. ಅಲ್ಲಿ ಪ್ರತಿಯೊಬ್ಬ ದಾರಿಹೋಕನು ತಂಗಿಬಿಡುವನು. ಅವರು ಬರೆದ ಹಾಗೆ, ಅವರು ಧ್ಯಾನವನ್ನಂತೂ ಮಿಷನ್ನಿನದೇ ಮಾಡುತ್ತಿರುವರು, ನಾನು ತಿನ್ನುವ ರೊಟ್ಟಿಗಳೇನೊ ನಿನ್ನವು, ಆದರೆ ಉಪ್ಪಿನ ಋಣ ಮಾತ್ರ ಇತರರದೆಂಬ ಹಾಗೆ ಇದನ್ನು ತಿಳಿಯಬಹುದು. ಸರಿ ಏನಾದರಾಗಲಿ.

ಮಿ.'ಫ' ಕೆಲವು ಶಬ್ದಗಳನ್ನು ಕಠಿಣವಾಗಿ ಬರೆದಿರುವನು. ಮತ್ತು ಸೋಜಿಗವೇನೆಂದರೆ ನಮ್ಮದೇನೂ ತಪ್ಪಿಲ್ಲ. ಆದರೆ ಜನರು ಈ ನಡತೆಯನ್ನು ಮನ್ನಿಸಿರುವರು. ಹಾಗೆ ನೋಡಿದರೆ ಖಾಸಗಿ ಆಗಿ ನಿಮಗೆ ಹೇಳುವೆ, 'ಫ'ಗೆ ರಕ್ತದ ರೋಗಗಳಿವೆ. ಅದು ನನಗೆ ಮೊದಲೇ ಗೊತ್ತಿರಲಿಲ್ಲ. ನಮ್ಮ ಮನಸ್ಸು ಆತನನ್ನು ಸೇರಿಸಿಕೊಳ್ಳಲು ವಿವಶವಾಗದ ಹೊರತು, ಆತನನ್ನು ಮೊದಲಿನಿಂದಲೇ ತೆಗೆದುಕೊಳ್ಳಬಾರದಿತ್ತು. 'ಶೇ' ಪ್ರಾಣಾಹುತಿ ನೀಡಲು ಆತನ ಮನೆಗೆ ಹೋಗುತ್ತಿದ್ದ. ಆದರೆ ಆತನು ಇವರ ಮನೆಗೆ ಬರುತ್ತಿರಲಿಲ್ಲ. ತನ್ನ ಬಳಿ ಬರುತ್ತಿರಬೇಕೆಂದು ಆತನಿಗೆ ಹೇಳುವಂತೆ 'ಶ' ನನಗೆ ಬರೆದಿದ್ದ. ಏನೆಂದರೆ, ಒಮ್ಮೆ ನೀನು ಹೋಗು ಮತ್ತು ಒಮ್ಮೆ ಅವನು ಬರಲಿಯೆಂದು ನಾನು ಬರೆದು ಬಿಟ್ಟಿದ್ದೆ. ಎರಡನೆಯದಾಗಿ, ಆತನಿಗೆ ಕೊಂಚ ಕಾಮೋದ್ರೇಕ ಉಂಟಾಗುತ್ತಿದ್ದಿತು. ಅಂಥ ಸ್ಥಿತಿಯಲ್ಲಿ ನಿರಂತರ ಸ್ಮರಣೆಯನ್ನು ಮಾಡಲಾರಂಭಿಸುವಂತೆಯೂ ಅಲ್ಪ ಸ್ವಲ್ಪವಾದರೂ ನಿಗ್ರಹವನ್ನು ಮಾಡಲೇಬೇಕಾಗುವುದೆಂದೂ ನಾನು ಆತನಿಗೆ ಬರೆದಿದ್ದೆ. ಇದು ಸಹ ಆತನಿಗೆ ಕೆಡುಕೆನಿಸಿತು. ಮತ್ತು 'ರಾ' ಅವರೂ ಸಹ ಆತನಿಗೆ ಇದೇ ವಿಷಯದ ಬಗ್ಗೆ ಗದರಿಸಿದ್ದರು. ಅದಕ್ಕೇ ಆತನು ಅವರನ್ನು ಬಿಟ್ಟು ಕುಳಿತನು. ನಾನು ಜನರ ಮುಖಸ್ತುತಿ ಮಾಡುವುದರಲ್ಲಿ ಏಕೆ ತೊಡಗಿರುತ್ತಿರುವೆನೆಂದು ನನಗೆ ತಿಳಿಯಲೊಲ್ಲದು. ಆತನು ಪತ್ರದಲ್ಲಿ ಸಿಟ್ಟಿನಿಂದ ಬರೆದಿರುವ ಕೆಲವು ಪಂಕ್ತಿಗಳನ್ನು ನಿಮ್ಮ ಮುಂದಿಡುತ್ತೇನೆ. "ಬೇರೆ ವಿಷಯಗಳ ಕುರಿತು ನಾನು ನಿಮ್ಮ ಜೊತೆಯಲ್ಲಿ ಚರ್ಚೆಗಿಳಿಯಲು ಸುತಾರಾಂ ಬಯಸುವುದಿಲ್ಲ. ಇನ್ನೊಂದು ಸಲ ನೀವು ಇಲ್ಲಿ ಇದ್ದಾಗ ಪೂರ್ಣ ಮತ್ತು ಬಿಚ್ಚು ಮನಸ್ಸಿನ ಚರ್ಚೆಗಾಗಿ ಅವನ್ನು ಬಿಟ್ಟು ಬಿಡುವುದು ಒಳಿತು. ಅಲ್ಲಿಯವರೆಗೆ ಕಾಯೋಣ."

ನಿಮ್ಮ ಅಣ್ಣ 'ಹ' ಈಗ ಗುಣವಾಗಿರುವುದು ಬಹಳ ಒಳ್ಳೆಯದಾಯಿತು. ಕ್ಯಾಪ್ಟನ್ ಎಲ್.ಎನ್.ಶ್ರೀ ಬಗ್ಗೆ ನೀವು ಕೇಳಿರುವಿರಿ. ನೀವು ಫೋಟೋದಲ್ಲಿ ನೋಡಿರುವಷ್ಟೇ ಆತನ ಗಡ್ಡ ಬೆಳೆದಿದೆ. ಪ್ರೊಫೆಸರ್ 'ಶಿ'ಯು 'ಚ' ಬಗ್ಗೆ ಏನು ವಿಚಾರಿಸಿದ್ದರೋ ಅದನ್ನು ನಾನು ಅವರಿಗೆ ಕಳುಹಿಸಿರುವೆ. ಮತ್ತು ಅದರ ಪ್ರತಿಯನ್ನು ನಿಮಗೂ ಕಳುಹಿಸಿದ್ದೆ. ಅಂದಿನಿಂದ 'ಶಿ'ಯ ಯಾವ ಉತ್ತರವೂ ಬರಲಿಲ್ಲ. ಅವರ ಪತ್ರಗಳು ಎಂದೂ ಇಷ್ಟು ತಡಮಾಡಿ

ಬರುತ್ತಿದ್ದಿಲ್ಲ. ಶ್ರೀ 'ಮಿ.' ಮೇ ೨೧ರ ಬೆಳಿಗ್ಗೆ ಸರಕಾರಿ ಕೆಲಸಕ್ಕಾಗಿ ಹೈದ್ರಾಬಾದ ತಲುಪಿರುವರು. ಅವರ ಜೊತೆಯಲ್ಲಿ ಸತ್ಸಂಗ ಮಾಡಲು ನಾನು ಎಲ್ಲರಿಗೂ ಪತ್ರ ಬರೆದಿರುವೆ. ಅವರು ೨೫ನೇ ದಿನಾಂಕ ದೆಹಲಿಗೆ ಮರಳಿ ಬರುವರು.

ಬಂಧು 'ನಾ'ಗೆ ರಾಯಚೂರಿಗೆ ವರ್ಗವಾಗಿ ನಿಮ್ಮಿಂದ ಅಗಲಿದ್ದಕ್ಕಾಗಿ ದುಃಖವಾಯಿತು. ಆದರೆ ಅಲ್ಲಿಯೂ (ರಾಯಚೂರಿನಲ್ಲೂ) ಸತ್ಸಂಗ ಬೆಳೆದರೆ ಒಳ್ಳೆಯದಾಗುವುದು. ಕೆಲವು ಉಚಿತ ಹಸ್ತಪ್ರತಿಗಳನ್ನು ಪ್ರಚಾರಕ್ಕಾಗಿ ಅವರಿಗೆ ಕೊಟ್ಟಿರಬೇಕು. ಸೊಸೆಯ ಆರೋಗ್ಯದ ಬಗೆಗೆ ನನಗೆ ಚಿಂತೆಯಿರುತ್ತದೆ. ಈಶ್ವರನು ಆಕೆಯನ್ನು ಆರೋಗ್ಯದಿಂದ ಇಡಲಿ.

ಪ್ರೊಫೆಸರ್ ಸಾಹೇಬರು ಸಾಕ್ಷಾತ್ಕರದ ನಂತರ ಶ್ರದ್ಧೆಯುಂಟಾಗುವುದೋ ಹೇಗೆಂಬ ಪ್ರಶ್ನೆಯನ್ನು ಕೇಳಿರುವರು. ಇದು ಮೊದಲು ಮಗು ಹುಟ್ಟಬೇಕು, ಆಮೇಲೆ ಮದುವೆ ಮಾಡಿಕೊಳ್ಳಬೇಕು ಎಂದಂತಾಯಿತು. ನೀವು ಪ್ರೊಫೆಸರ್ ಸಾಹೇಬರಿಂದ ಕಿಂಚಿತ್ತಾದರೂ ಹೆದರಬೇಡಿರಿ. ಅವರು ಅವಶ್ಯವಾಗಿ ತತ್ವಶಾಸ್ತ್ರದಲ್ಲಿ ಪಂಡಿತರಿರುವರು. ಅದರ ಅಡಿಗಲ್ಲು 'ಸಂಶಯ'ವಾಗಿದೆ. ಮತ್ತು ಯಾವುದರ ಮೇಲೆ ದೀರ್ಘಕಾಲ ಬಾಳುವ ಕಟ್ಟಡ ನಿರ್ಮಾಣವಾಗಬಹುದೋ ಅದು ನಿಮ್ಮ ತತ್ತ್ವದ ಅಡಿಪಾಯವಾಗಿದೆ. ಶ್ರದ್ಧೆಯ ಬಗ್ಗೆ ನಾನು ಸಹ ಪತ್ರಗಳಲ್ಲಿ ಬರೆದಿರುವೆನು. ಅದು ಜ್ಞಾಪಕವಿಲ್ಲದ ಕಾರಣ ವಿಧವಿಧವಾದ ನೂತನ ವಿವರಗಳನ್ನು ಕೊಡುತ್ತಿರುತ್ತೇನೆ. ಈಗ ನಾನೇನು ಬರೆದಿರುವೆನೋ ದೇವರೇ ಬಲ್ಲ. ಒಳ್ಳೆಯದು. ಪುನರುಕ್ತಿಯಾದರೂ ಸರಿ, ಶ್ರದ್ಧೆ ಅಡಿಪಾಯ. ಇದರ ಮೇಲೆ ಸಾಕ್ಷಾತ್ಕಾರದ ಸ್ಥಿತಿ ಪ್ರಾರಂಭವಾಗುತ್ತದೆ. (Introduction of Indian 'Philosophy') 'ಇಂಟ್ರೋಡಕ್ಷನ್ ಆಫ್ ಇಂಡಿಯನ್ ಫಿಲಾಸಫಿ'ಯಲ್ಲಿ, ವೇದಾಂತದ ವಿವರಣೆಯಲ್ಲಿ ೪೧೬ನೇ ಪುಟದಲ್ಲಿ ಹೀಗೆ ಬರೆದಿದೆ: (ಇಂಗ್ಲೀಷಿನ ಲೇಖನ) ''ವೇದಾಂತದ ಪ್ರಕಾರ ಕೂಡ ಧಾರ್ಮಿಕ ಜೀವನ ಮತ್ತು ವಿಚಾರಕ್ಕೆ ಒಂದು ಪೂರ್ವಭಾವಿ ವಿಶ್ವಾಸದ ಆವಶ್ಯಕತೆಯಿದೆ.'' 'ರಿಯಾಲಿಟಿ ಎಟ್ ಡಾನ್'ನಲ್ಲಿ ಸಹ ನಾನು ಶ್ರದ್ಧೆಯ ಬಗ್ಗೆ ಹೇಳಿರುವೆನು. ಶ್ರದ್ಧೆಯು ಒಮ್ಮೆ ಕೂಡಿದ ನಂತರ ಎಂದೂ ಬೇರೆಯಾಗಲೊಲ್ಲದ ಅವಿಚ್ಛೇದ ಕೊಂಡಿ. ಯಾವ ಅಭ್ಯಾಸಿಯು ಶ್ರದ್ಧೆಯನ್ನು ತೆಗೆದುಕೊಂಡಿಲ್ಲವೊ, ಆತನು ಪ್ರಗತಿ ಹೊಂದಲು ಸಾಧ್ಯವೇ ಆಗಿಲ್ಲ. ಆತನು ಇನ್ನೊಮ್ಮೆ ಏನಾದರೂ ಪ್ರಶ್ನೆಗಳನ್ನು ಮಾಡಿದರೆ ನನ್ನ ಹತ್ತಿರ ಕಳುಹಿಸಿರಿ. ನಾನು ನನ್ನ ವಿಚಾರಗಳನ್ನು ನಿಮಗೆ ಬರೆಯುವೆ. ಮತ್ತು ಪ್ರಶ್ನೆಗಳಿಲ್ಲದೆಯೇ ನಾನು ಏನನ್ನೂ ಹೇಳುವುದು ಕಷ್ಟ. ಏಕೆಂದರೆ ನಾನು ವಿದ್ಯೆಯನ್ನು ಕಪಾಟಿನೊಳಗಿಟ್ಟು ಗುರುಮಹಾರಾಜರ ಕೃಪೆಯಿಂದ ಸಾಕ್ಷಾತ್ಕಾರ ಪಡೆದಿರುವೆನು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ

◆ ◆ ◆

"ಓಂ ತತ್‌ಸತ್"

ನಂ.೧೦೪ | ಷಾಹಜಹಾನ್‌ಪೂರ
ನಂ. ಎಫ್-೩೩.೨/ಎಸ್.ಆರ್.ಸಿ.ಎಮ್. | ದಿ. ೧೬/೧೮ ಜುಲೈ ೧೯೬೧

ಪ್ರಿಯ ಬಂಧು,

ಆಶೀರ್ವಾದ. ನಿಮ್ಮ ಎಲ್ಲ ಪತ್ರಗಳು ತಲುಪಿದವು. ಇಂದು ನಾಳೆ ಎನ್ನುತ್ತೆನ್ನುತ್ತ ಉತ್ತರದಲ್ಲಿ ಇಷ್ಟು ತಡವಾಯಿತು. ನೀವು ಪ್ರಾಯಶಃ ಬೆಂಗಳೂರಿಗೆ ಹೋಗಿ ಬಂದಿರಬಹುದು. ನಾನು ಈ ವಾರ್ತೆ ಕೇಳಿ ನೀವು 'ಶೇ' ಬಳಿ ಹೋಗಿ ದುಡ್ಡು ವ್ಯರ್ಥ ಮಾಡಬಾರದೆಂದು ನಿಮಗೆ ಒಂದು ತಂತಿ ಸಂದೇಶ ಕಳಿಸಿದ್ದೆ. 'ಶೇ' ೨ ಜುಲೈಗೆ ಇಲ್ಲಿಗೆ ಬಂದಿರುವರು ಮತ್ತು ಈಗ ೧೭ ಜುಲೈಗೆ ಹೊರಟು ಒಂದು ದಿನ ದೆಹಲಿಯಲ್ಲಿ ತಂಗಿ, ಬೆಂಗಳೂರಿಗೆ ಮರಳುವರು. ಶ್ರೀ 'ಫ' ಅಂತೂ ಮಿಷನ್ ಬಿಟ್ಟೇ ಬಿಟ್ಟರು. ಕಾರಣವನ್ನು ಬರೆದಿರುವರು. ಈಗ ಅವರು ಇಂದ್ರಿಯಗಳ ಭೋಗದಲ್ಲಿ ಸಡಿಲು ಬಿಟ್ಟು ಆಧ್ಯಾತ್ಮಿಕ ಶಿಕ್ಷಣವನ್ನು ಕೊಡುವಂಥ ಮಹಾತ್ಮನ ಅನ್ವೇಷಣೆಯಲ್ಲಿರುವರು. 'ವಿ'ಗೆ ಹಾಗು 'ಫ'ಗೆ ಪ್ರೇಮವಿದೆಯೆಂದು ನೀವು ಬರೆದಿರುವಿರಿ. 'ಫ'ರಂತೂ ನನ್ನ ವಿರುದ್ಧವಾಗಿರುವರು. ಆದರೆ 'ವಿ' ಅವಶ್ಯವಾಗಿ ಸ್ವಲ್ಪ ಆದರ ಇಟ್ಟಿರುವರು. ಆದಾಗ್ಯೂ ನಿಸ್ಸಹಾಯಕರಾಗಿರುವರು. ಒರೆಯ ಹೊರಗಿನ ಖಡ್ಗದ ಪ್ರಶಂಸೆ ಯಾವಾಗಲೂ ಮಾಡಲ್ಪಟ್ಟಿದೆ. ಅದರ ಕೆಲಸ ಕಡಿಯುವದೇ ಆಗಿದ್ದರೂ ಅದನ್ನು ಉಪಯೋಗಿಸಲಿಕ್ಕೆ ಬುದ್ಧಿ ಬೇಕು. ಏಕೆಂದರೆ, ಅದರ ಏಟು ವೈರಿಯ ಮೇಲೆ ಬೀಳಬೇಕೇ ಹೊರತು ಸ್ನೇಹಿತನ ಮೇಲೆ ಅಥವಾ ತನ್ನ ಮೇಲೆಯೇ ಬೀಳಕೂಡದು. ಇಲ್ಲಿ ಖಡ್ಗದ ಉಪಯೋಗ ತನ್ನ ಮೇಲೆಯೇ ಆಗುತ್ತಿದೆ. ತನ್ನ ಇಚ್ಛಾಶಕ್ತಿಯನ್ನು ತನ್ನದೇ ನಾಶಕ್ಕಾಗಿ ಉಪಯೋಗಿಸಲಾಗುತ್ತಿದೆ.

ಭೂತಪೂರ್ ನಿವಾಸಿ ಬಂಧು 'ರಾ' ಸಾಯಿಬಾಬಾನ ಬಳಿ ಹೋದರೆಂದು ನಾನು ಕೇಳಿರುವೆನು. ಮತ್ತು ಇದರಲ್ಲಿ ಏನೂ ಅಭ್ಯಂತರವಿಲ್ಲ. ನನಗೂ ಏನೂ ಆಕ್ಷೇಪವಿಲ್ಲ. ಯಾರು ಅಪಕ್ವರಾಗಿರುವರೋ, ಅವರು ಮಾಯಾವಿ ವಸ್ತುಗಳ ಮೇಲೆ ಬೇಗ ಉರುಳಿ ಬೀಳುವುದು ಅನಿವಾರ್ಯ. ಅವರು ಅಲ್ಲಿ ಹೋಗುವ ಉದ್ದೇಶವಾದರೂ ಇದೇ ಆಗಿರಬಹುದು. ಅವರಿಗೆ ಮಕ್ಕಳಿಲ್ಲ. ಈ ವಿಷಯವನ್ನು ಅವರೊಮ್ಮೆ ನನಗೂ ಹೇಳಿದರು. ಅವರ ಧರ್ಮಪತ್ನಿಯ ಗರ್ಭಾಶಯದ ಮೇಲೆ ಧ್ಯಾನ ಮಾಡಿದರೆ ಈ ಇಚ್ಛೆ ಪೂರ್ಣವಾಗುವುದೆಂದು, ನೀವು ಇಚ್ಛಿಸಿದರೆ, ನಿಮ್ಮ ಕಡೆಯಿಂದ ಬರೆದುಬಿಡಿರಿ. ಮತ್ತು ನಾವು ಮಾಡುವ ಸಾಯಂಕಾಲದ ಧ್ಯಾನವನ್ನು ಯಾವ ವಿಧದಲ್ಲಿ ಮಾಡಬೇಕೆಂದರೆ, ಗರ್ಭಾಶಯದಲ್ಲಿರುವ ಕೆಡುಕುಗಳೆಲ್ಲ ಹೊಗೆಯ ರೂಪದಲ್ಲಿ ಹೊರಟು ಹೋಗುತ್ತಿರುವುದಾಗಿ ಭಾವಿಸಬೇಕು. ಆಕೆಯು ತನ್ನ ವಿಚಾರಶಕ್ತಿಯಿಂದ ಹೊಗೆಯಾಗುವ ಹಾಗೆ ಹೊರಗಡೆ ಎಸೆಯಬೇಕು. ಗರ್ಭಾಶಯದ ಮೇಲೆ ಧ್ಯಾನ ಮಾಡುವಾಗ ಸಂತಾನೋತ್ಪತ್ತಿಯು ಉದ್ದೇಶವಾಗಿರಬೇಕು. ಆದರೆ ಇದು ಆಧ್ಯಾತ್ಮಿಕತೆಗೆ ಗಾವುದಗಟ್ಟಲೆ ದೂರವಿದೆ.

ಇಚ್ಛಾಪೂರ್ತಿಯಾದ ಮೇಲೆ ಅವರನ್ನು ಆಧ್ಯಾತ್ಮ ಪಥದ ಮೇಲೆ ತರುವುದು ನನಗೆ ಕಬ್ಬಿಣದ ಕಡಲೆಯಾಗುವುದು. ನಾನು ಈ ವಿಧಾನವನ್ನು ಪ್ರಯೋಗಿಸಿದ್ದೇನೆ. ಮತ್ತು ಅದು ಸರಿಯಾಗಿ ಕೂಡಿ ಬಂದಿತು. ಯಾವನ ಉದ್ದೇಶ ಈಡೇರಿತೋ, ಆತನು ತಿರುಗಿ ನನಗೆ ನಮಸ್ಕಾರವನ್ನು ಸಹ ಮಾಡಲಿಲ್ಲ. ನಮಸ್ಕಾರಕ್ಕೆ ನಾನೇನು ಹಸಿದುಕೊಂಡಿರಲಿಲ್ಲ. ಆದರೆ ಸೌಜನ್ಯತೆಯನ್ನು ಅಪೇಕ್ಷಿಸುತ್ತೇನೆ.

ನೀವು ಪ್ರತಿಯೊಬ್ಬರಿಗೆ ಕೊಡಬೇಕೆಂದು ಅಭಿಪ್ರಾಯ ಪಟ್ಟಿರುವ ಹರಳಿನ ಬಗ್ಗೆ ಬಹಳ ವಿಚಾರ ಮಾಡಿದೆ. 'ಶೇ' ಹಾಗೂ ಮಾಸ್ಟರ ಸಾಹೇಬರ ಮುಂದೆ ಈ ವಿಷಯವನ್ನು ಇಡಲಾಯಿತು. ಅದನ್ನು ಉಂಗುರ ಅಥವಾ ಲಾಕೇಟಿನಲ್ಲಿ ಜೋಡಿಸದಿರುವುದೇ ಒಳಿತೆಂದು ತೀರ್ಮಾನಿಸಲಾಯಿತು. ಜನಗಳು ನನ್ನ ಮೇಲೆ ಆಕ್ಷೇಪಣೆ ಮಾಡಬಹುದು. ಮತ್ತು ಈ ವಸ್ತುವು ಹೀಗೂ ಕೀಳೆನಿಸುವುದು. ಏಕೆಂದರೆ, ಅದರಿಂದ ಇತರರಿಗೆ ಸ್ಥೂಲತೆಯ ಪಾಠವೇ ದೊರೆಯುವುದು. ಅಂತೂ ನೀವು ಇಲ್ಲಿಗೆ ಬರುವಾಗ ನಾಲ್ಕಾರು ತೆಗೆದುಕೊಂಡು ಬನ್ನಿರಿ. ಶ್ರೀ 'ನಾ' ಅವರ ಸಂತೋಷಕ್ಕಾಗಿ ಕೆಲವು ಹರಳುಗಳು ಬಿದ್ದಿರಲಿ. ನಿಮ್ಮ ಹೇಳಿಕೆಯ ಮೇರೆಗೆ ಶ್ರೀ 'ಗೋ' ಕೂಡ ನನ್ನಿಂದ ಅಪ್ಪಣೆ ಕೇಳಿರುವರು. ಅವರಿಗೂ ಕೂಡ ಮೇಲಿನ ಉತ್ತರವೇ ಇದೆ. ಸಾಧ್ಯವಿದ್ದಷ್ಟು ನಾವು ಅನಾವಶ್ಯಕ ಪ್ರದರ್ಶನ ಮಾಡಕೂಡದು.

ಎರಡು ವಾರಗಳಲ್ಲಿ ಮೈಸೂರಿಗೆ 'ಸ'ನ ವರ್ಗಾವಣೆಯಾಗುವುದು. ನಾನು ಸತ್ಯೋದಯದ ತಿದ್ದು-ಪಡಿಯನ್ನು ಅಲ್ಲಿಗೆ ಕಳುಹಿಸಿಕೊಡುವೆನು. ನಾನು ಅವರಿಗೆ ಕೂಡ ಹೀಗೆಯೇ ಬರೆದಿರುವೆನು. ನೀವು ಮೊದಲನೆಯ ಸೆಪ್ಟೆಂಬರಿಗೆ ಬರುತ್ತಿರುವಿರೆಂದು ನನಗೆ ಬಹಳ ಸಂತೋಷವಾಗಿದೆ. ರಾಯಚೂರಿನ ಜನರು ಸತ್ಸಂಗವನ್ನು ಬೆಳೆಸಲು ಪ್ರಯತ್ನವನ್ನಾರಂಭಿಸಿರುವರು. ಮತ್ತು ಈಗ ಶ್ರೀ 'ನಾ' ಅಲ್ಲಿ ತಲುಪಿದ ಕಾರಣ ಕಾರ್ಯವು ಇನ್ನೂ ಬೇಗ ಆಗುವುದು. ಬಂಧು ಶ್ರೀ 'ಆ' ಸಾಹೇಬರು ಓಡಾಡಿ ಜನಗಳಿಗೆ ಲಾಭ ಒದಗಿಸುತ್ತಿರುವರೆಂದು ಅವರ ಪ್ರಶಂಸೆ ನಾನಾಕಡೆಯಿಂದ ಬರುತ್ತಿದೆ. ಬಂಧು 'ಶೇ' ಅವರ ಪ್ರವಾಸವು ಬಿಜಾಪೂರದಲ್ಲಿಯೂ ಆಗುವುದು. ಡಾ.'ಕು' ಅವರ ವಿಳಾಸ ತಿಳಿಯದು. ನನ್ನಲ್ಲಿದ್ದರೆ ನಾನು ಅವರಿಗೆ ತಿಳಿಸುತ್ತಿದ್ದೆ. ಅವರ ಪ್ರವಾಸವು ಮೈಸೂರು ರಾಜ್ಯದಲ್ಲಿಯೂ ಇರುತ್ತದೆ. ಆದುದರಿಂದ ಎಲ್ಲೆಲ್ಲಿ ಸತ್ಸಂಗಿಗಳಿರುವರೊ, ಅವರಿಗೆ ಲಾಭ ಸಿಗಬಹುದು. ನೀವು ಅವರ ವಿಳಾಸವನ್ನು ನನಗೆ ಬರೆದು ತಿಳಿಸಿರಿ. ನಾನು 'ಶೇ' ಹಾಗೂ 'ಕು' ಇಬ್ಬರಿಗೂ ಬರೆಯುವೆ. ನಿಮ್ಮ ಜೊತೆಯಲ್ಲಿ ರಾಮಕೃಷ್ಣನು ಕೂಡ ಬಂದರೆ ಬಹಳ ಒಳ್ಳೆಯದಾಗುವುದು. ಮತ್ತು ಶ್ರೀ 'ನಾ' ಕೂಡ ಬರುವುದಕ್ಕೆ ಧೈರ್ಯ ಮಾಡಿದರೆ ಇನ್ನೂ ಒಳಿತು.

ನೀವು ನಿಮ್ಮ ಸ್ಥಿತಿಯನ್ನು ಚೆನ್ನಾಗಿ ಬರೆದಿರುವಿರಿ. ನೀವು ಜ್ಯೋತಿರ್ಮಯದ ಮೊದಲನೇ ವೃತ್ತದೊಳಗೆ ನುಗ್ಗಲು ಪ್ರಯತ್ನ ಮಾಡುತ್ತಿರುವಿರಿ. ಆದರೆ ನಿಮಗೆ ಸಾಧ್ಯವಾಗಲಾರದಾಗಿದೆ. ನಾನು ನಿಮ್ಮನ್ನು ಆ ಸ್ಥಾನಕ್ಕೆ ಏಕೆ ಕೊಂಡೊಯ್ಯಲೊಲ್ಲೆನೊ ತಿಳಿಯದು. ವಿಚಾರ ಮಾಡಿದಾಗ ಹೊಳೆಯುವುದೇನೆಂದರೆ ನೀವು ಸ್ವತಃ ಅಲ್ಲಿಗೆ ತಲುಪಬೇಕು.

ಅಥವಾ ನಿಮ್ಮೊಳಗೆ ಅಂಥ ಶಕ್ತಿಯುಂಟಾಗಬೇಕು. ಅಲ್ಲದೆ ಎಷ್ಟೋ ಆಂತರಿಕ ವಿಷಯಗಳು ಹೇಗಾಗಿಬಿಡಬೇಕೆಂದರೆ ಅವುಗಳ ಕಡೆಗೆ ಪುನಃ ಲಕ್ಷ್ಯಕೊಡುವ ಅಗತ್ಯ ಉಂಟಾಗಬಾರದು. ಅದರ ಅನಂತರ ನೀವು ಮುಂದುವರೆಯಬೇಕು. ಹೇಗೂ ನೀವು ಇಲ್ಲಿಗೆ ಬರುತ್ತಿರುವಿರಿ. ಇದು ಬಹಳ ಒಳ್ಳೆಯದಾಯಿತು.

ಡಾ.ವರದಾಚಾರ್ಯರು ವೇದಗಳ ಆಧಾರದ ಮೇಲೆ ಬಹಳ ಉತ್ತಮವಾದ ಲೇಖನ ಬರೆದಿರುವರು. ಮತ್ತು ಅದರಲ್ಲಿ ದ್ವೈವೀಕರಣದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿರುವರು. ಮತ್ತು ಇದರ ಬಗ್ಗೆ ನನ್ನಿಂದಲೂ ಅಭಿಪ್ರಾಯ ಬಯಸಿದ್ದರು. ನಾನು ಅವರ ಲೇಖನ ಮತ್ತು ಅದರಲ್ಲಿದ್ದ ದ್ವೈವೀಕರಣ ಎರಡನ್ನೂ ಲಕ್ಷ್ಯದಲ್ಲಿಟ್ಟು ನನ್ನ ನಿವೇದನೆಯನ್ನು ಮಂಡಿಸಿರುವೆನು. ಈಗ ನಾನು ಅದನ್ನು ಜರ್ಮನಿಯಲ್ಲಿ ಮಿ.ರಾಬರ್ಟಕಾಕ್ ಬಳಿ ಕಳುಹಿಸುತ್ತಿರುವೆನು. ಅವರು ಯೋಗ್ಯವೆನಿಸಿದರೆ ಜರ್ಮನ್ ಭಾಷೆಯಲ್ಲಿ ಅನುವಾದಿಸಿ, ಅಲ್ಲಿಯೇ ಯಾವುದಾದರೂ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸಲಿ. ಅದರ ಒಂದು ಪ್ರತಿಯನ್ನು ನಿಮ್ಮ ಬಳಿ ಕಳುಹಿಸುತ್ತಿರುವೆನು. ಡಾ.ವರದಾಚಾರ್ಯರಲ್ಲಿ ಮೊದಲೇ ಕಳುಹಿಸಿರುವೆನು. ಆದರೆ ಈಗ ವೃತ್ತಪತ್ರಿಕೆಯಲ್ಲಿ ಪ್ರಕಟಿಸುವ ಇಚ್ಛೆ ಇದೆ. ಆದುದರಿಂದ ಅದನ್ನು ಇನ್ನೂ ಬೆಳೆಸಿರುವೆನು. ನೀವು ಸಾಧಕರು ಮತ್ತು ದಾರ್ಶನಿಕರು ಆಗಿರುವಿರಿ. ಆದುದರಿಂದ ವಿಚಾರ ವಿನಿಮಯಕ್ಕಾಗಿ ಕಳುಹಿಸುತ್ತಿರುವೆನು. ಇದನ್ನು ನಿಮ್ಮ ಹತ್ತಿರವೇ ಇಟ್ಟುಕೊಳ್ಳಿರಿ.

ಮೀರಾಬಾಯಿಯು ಹೇಗಾದರೂ ಗುಣವಾಗಬೇಕು ಎಂಬ ಚಿಂತೆ ನನಗೆ ಇರುತ್ತದೆ. ಮಾಸ್ಟರ್ ಸಾಹೇಬ, ಕಸ್ತೂರಿ ಮತ್ತು ಆಕೆಯ ತಾಯಿಯು ಬಂದಿರುವರು. ಲಖನೌವಿನ ಕೆಲವು ಸತ್ಸಂಗಿಗಳು ಸಹ ಬಂದಿದ್ದರು. ಈಗ ಹೊರಟು ಹೋದರು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ.ಸೂ.: ಪುನಶ್ಚ (ಮತ್ತೇನೆಂದರೆ), ನೀವು 'ಹಾಯಲಂ ಶ್ಯಾಡೋ'ಕ್ಕೆ 'ದಹರ' ಎಂದು ಸರಿಯಾದ ಅನುವಾದ ಕೊಟ್ಟಿರುವಿರಿ. 'ದಹರ'ದ ಮುಂದೆ ಬ್ರ್ಯಾಕೇಟಲ್ಲಿ ಹಾಯಲಂ ಶ್ಯಾಡೊ ಎಂಬ ಶಬ್ದವನ್ನು ಸಹ ಬರೆದರೆ ಒಳಿತಾಗುವುದು.

'ಗ' ನು ಮಿಷನ್ನಿನಲ್ಲಿ ಮತ್ತೆ ಬರಲು ಬಯಸಿ ತಿರುಚಿಯಿಂದ ಪತ್ರ ಕಳಿಸಿರುವನು. ಆ ಪತ್ರವಲ್ಲಿ ತನ್ನ ತಪ್ಪಿನ ಬಗ್ಗೆ ಖೇದ ಮತ್ತು ತಪ್ಪಿಗೆ ಕ್ಷಮಾಯಾಚನೆಯ ಉಲ್ಲೇಖವು ಎಲ್ಲಿಯೂ ಇಲ್ಲ. ಆ ಪತ್ರವನ್ನು ನಿಮ್ಮ ಬಳಿ ಕಳುಹಿಸುತ್ತಿರುವೆನು. ಓದಿ ನಿಮ್ಮ ಕಡತದಲ್ಲಿ ಇಟ್ಟುಕೊಳ್ಳಿರಿ. ಅದರ ಉತ್ತರವನ್ನು ನಾನು ಕೊಡುವುದಿಲ್ಲ. ಮತ್ತು ಆತನನ್ನು ಸೇರಿಸಿಕೊಳ್ಳುವುದು ಕೂಡ ಒಳ್ಳೆಯದಲ್ಲ. ಈಗ ಆತನಲ್ಲಿ ಗ್ರಹಣ ಶಕ್ತಿಯಿಲ್ಲ. ನನ್ನ ಒಲವು ಆಗಲಾರದು.

'ಶೇ' ನಿನ್ನೆ ರಾತ್ರಿ ತಮ್ಮೂರಿಗೆ ಹೋಗಲು ದೆಹಲಿಯಿಂದ ಪ್ರಯಾಣಿಸಿದರು. ಅವರು ಜುಲೈ ೨೪ರಂದು ತಮ್ಮ ಕೆಲಸಕ್ಕೆ ಪುನಃ ಸೇರಿಕೊಳ್ಳುವರು. ಬಹಳ ಪ್ರೇಮದ ಮನುಷ್ಯರು.

ನಮ್ಮ ಪತ್ರಗಳನ್ನು ಒಂದು ಕಡೆ ಕೂಡಿಸುವುದು ಮತ್ತು ಪ್ರತಿಯನ್ನು ಮಾಡುವುದು ಒಳಿತು. ಆಗ ನೀವು ಯಾರಿಗೆ ಬೇಕಾದರೂ ಸುಲಭವಾಗಿ ತೋರಿಸಬಲ್ಲಿರಿ. ಕಳೆದು ಹೋದರೂ ಸಹ ಮೂಲ ಪ್ರತಿ ನಿಮ್ಮಲ್ಲಿ ಇರುವುದು. ಶ್ರೀ 'ಶಿ' ನನ್ನ ವಿಚಾರಗಳನ್ನು ಬಹಳ ಮೆಚ್ಚುತ್ತಾರೆ.

◆ ◆ ◆

"ಓಂ ತತ್‌ಸತ್"

ನಂ.೧೦೫
ಎಫ್-೩೭೧/ಎಸ್.ಆರ್.ಸಿ.ಎಮ್.

ಷಾಹಜಹಾನಪೂರ್
ದಿ. ೯.೮.೧೯೬೧.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಇಲ್ಲಿ ಈಶ್ವರಾನುಗ್ರಹದಿಂದ ಎಲ್ಲವೂ ಕ್ಷೇಮ. ಈ ದಿನಗಳಲ್ಲಿ ನನ್ನ ರಕ್ತದ ಒತ್ತಡವು ಬಹಳ ಕಡಿಮೆಯಾಗಿತ್ತು. ಈಗ ಬರಬರುತ್ತಾ ಗುಣಹೊಂದುತ್ತಿರುವೆನು. ನಿಮ್ಮ ಎರಡೂ ಪತ್ರಗಳು ತಲುಪಿದವು. ಜನ್ಮಾಷ್ಟಮಿಯ ವ್ರತ ಸೆಪ್ಟೆಂಬರ್ ೧ರಂದು ಇದೆ. ನಾನು ಶ್ರೀ 'ಆ' ಶ್ರೀ 'ಕಿ' ಮತ್ತು ಶ್ರೀ 'ಛ'ರಿಗೆ ಸೂಚನೆಕೊಟ್ಟಿರುವೆನು. ನಿಮ್ಮ ಪತ್ರದ ಉತ್ತರ ಕೊಡುವುದಕ್ಕೆ ಮುಂಚೆ ನಾನು ನನ್ನ ಉದ್ದೇಶದ ಮಾತು ಹೇಳುವೆನು. ಅದೇನೆಂದರೆ ನನಗೆ ಒಂದು ಗುಂಡಪಂಗಲು ಪಾತ್ರೆ ಬೇಕಾಗಿದೆ. ಬಳ್ಳಾರಿಯಲ್ಲಿ ಉತ್ತಮ ಕಲ್ಲಿನದು ದೊರೆಯುವುದೆಂದು ಕೇಳಿರುವೆನು. ಒಂದನ್ನು ನಾನು ಶ್ರೀ 'ರಾ' ಬಳಿಯಿಂದ ನನ್ನ ಜೊತೆಯಲ್ಲಿ ತಂದಿದ್ದೆ. ಅದನ್ನು ನಾನು ದೊಡ್ಡ ಮಗಳಿಗೆ ಕೊಟ್ಟುಬಿಟ್ಟೆ. ಎರಡನೆಯದನ್ನು ಚಿಕ್ಕ ಮಗಳ ಮದುವೆಯಲ್ಲಿ ಕೊಡಬಯಸಿರುವೆನು. ಮದುವೆಯು ಈ ವರ್ಷ ಬಹುಶಃ ಚಳಿಗಾಲದಲ್ಲಿ ಆಗುವುದು. ಒಂದು ಕಡೆ ಮಾತುಕತೆ ನಡೆಯುತ್ತಿರುವುದು ಮತ್ತು ಒಂದೆರಡು ವಾರಗಳಲ್ಲಿ ನಿಶ್ಚಯವಾಗುವುದೆಂದು ಬಲವಾದ ಆಶೆಯಿದೆ. ದೂರದ ಪ್ರಯಾಣವಿರುವುದರಿಂದ ಕಲ್ಲಿನ ಪಾತ್ರೆಯನ್ನು ತರಲು ತೊಂದರೆಯಾಗುತ್ತಿದ್ದರೆ ಮತ್ತೊಮ್ಮೆ ನೋಡೋಣ.

ಈಶ್ವರಾನುಗ್ರಹದಿಂದ ನಾನು ನಿಮ್ಮನ್ನು ೬ ಆಗಸ್ಟಿನ ರಾತ್ರಿ ೧೧.೩೦ಕ್ಕೆ ಮೊದಲನೇ ಜ್ಯೋತಿರ್ಮಯ ವೃತ್ತದ ಮೇಲೆ ಇಟ್ಟುಬಿಟ್ಟೆ. ನಿಮಗೆ ಗಾಬರಿ ಮತ್ತು ಕಳವಳ ಕೇವಲ ಏತಕ್ಕೆದ್ದಿತೆಂದರೆ ನೀವು ಮುಂದುವರಿಯಲು ಬಯಸುತ್ತಿದ್ದರೂ ಸ್ವ ಸಾಮರ್ಥ್ಯದಿಂದ ಹೋಗಲು ಅಸಮರ್ಥರಾಗಿದ್ದಿರಿ. ಇಲ್ಲಿ ಮಾತ್ರ ಗುರುವಿನ ಅವಶ್ಯಕತೆ

ಅನಿವಾರ್ಯವಾಗುತ್ತದೆ. ಮತ್ತು ಉನ್ನತ ವಲಯದಲ್ಲಿ ಇನ್ನೂ ಹೆಚ್ಚಿನ ಒಂದು ಲಕ್ಷಣವೇನೆಂದರೆ, ಮುಂದುವರಿಯದ ಕಾರಣ ಗಾಬರಿ ಮತ್ತು ಕಳವಳ ಉಂಟಾಗುವುದು. ಅಭ್ಯಾಸಿಯ ಪ್ರವೃತ್ತಿಯು ಒತ್ತಾಯಪಡಿಸುತ್ತದೆ. ಆದರೆ ಉನ್ನತ ಮಂಡಲದ ಮೇಲೆ ಪ್ರಭುತ್ವ ಪಡೆದಿರುವ ವ್ಯಕ್ತಿಯು ದೊರಕುವವರೆಗೆ ಅವನು ಯಾವ ವಿಧದಿಂದಲೂ ಮೇಲಕ್ಕೆ ಹೋಗಲಾರ.

ಗುರುವಿನಲ್ಲಿ ಶಿಷ್ಯನು ಸಾಕಷ್ಟು ಲಯ ಹೊಂದಿದಾಗ ಶಿಷ್ಯನು ಮುಂದುವರಿಯಲು ಬಯಸುವನು. ಆದರೆ ಹೋಗಲಾರದವನಾದಾಗ, ಗುರುವು ಅವನನ್ನು ಮುಂದೆ ತಲುಪಿಸಲು ಚಡಪಡಿಸುತ್ತಾನೆ. ಪ್ರತಿಯೊಬ್ಬನ ಹೃದಯದಲ್ಲಿ ಹುಟ್ಟಬಹುದಾದ ಒಂದು ಪ್ರಶ್ನೆಗೆ ಉತ್ತರವನ್ನು ಕೂಡ ಕೊಡುವೆ. ಅದೇನೆಂದರೆ, ಗುರುವು ಅಮರಲೋಕದ ಪ್ರಯಾಣಿಕನಾಗಿದ್ದರೆ ಶಿಷ್ಯನನ್ನು ಉನ್ನತ ಮಂಡಲದಲ್ಲಿ ಆವಶ್ಯಕತಾನುಸಾರ ಹೇಗೆ ಮುಂದೂಡುವನು? ಗುರುವಿನದು ಮುಕ್ತಿಯ ಸ್ಥಿತಿಯಿದ್ದರೆ ಸಹಾಯವು ಅವಶ್ಯ ದೊರಕುವುದು. ತನ್ನ ಧ್ವನಿಯು ಗುರುವಿನವರೆಗೆ ತಲುಪುವುವಂತೆ ಶಿಷ್ಯನು ತನ್ನ ಸ್ಥಿತಿಯನ್ನು ಮಾಡಿಕೊಂಡಿದ್ದರೆ ಸಹಾಯ ಸಿಕ್ಕಲಾಗುವುದು. ಮತ್ತು ಯಾರು ಗುರುವಿನಿಂದ ದೀಕ್ಷೆ ಪಡೆದಿರುವರೋ ಅವರ ಧ್ವನಿಯು ಗುರುವಿನವರೆಗೆ ಬೇಗ ತಲುಪುತ್ತದೆ. ಇದಲ್ಲದೆ ಪ್ರತಿನಿಧಿ ಮತ್ತು ಪ್ರಶಿಕ್ಷಕರು ಅಭ್ಯಾಸಿಯ ಆವಶ್ಯಕತೆಯನ್ನು ಪೂರ್ಣಗೊಳಿಸುತ್ತಿರುತ್ತಾರೆ.

ನಿಮ್ಮ ಜೊತೆಯಲ್ಲಿ ಶ್ರೀ 'ವಾ' ಮತ್ತು ಇತರ ಜನರು ಬಂದರೆ, ನನಗೆ ಬಹಳ ಸಂತೋಷವಾಗುವುದು. ನಿಮಗೆ ಹೆಚ್ಚು ಸಮಯ ಸಿಕ್ಕರೆ ಅಷ್ಟೂ ಸಮಯ, ಸಂತೋಷದಿಂದ ಇಲ್ಲಿ ತಂಗಬಹುದು. ಮತ್ತು ಲಾಭವನ್ನಂತೂ ನೀವು ನಿಮ್ಮ ಜೊತೆಯಲ್ಲಿಯೇ ತರುವಿರಿ.

ತನ್ನ ಪಾಪಗಳಿಗಾಗಿ ಪಶ್ಚಾತ್ತಾಪ ಪಟ್ಟು ಯಾವ ವ್ಯಕ್ತಿಯಾದರೂ ಬಂದರೆ, ಅವನ ಪ್ರವೃತ್ತಿಯು ಆಧ್ಯಾತ್ಮದ ಕಡೆಗೆಯಿದ್ದರೆ, ಆತನನ್ನು ಸೇರಿಸಿಕೊಳ್ಳಬೇಕು. ಆದರೆ, ಆತನು ಮತ್ತೆ ಪಾಪವನ್ನು ಮಾಡಕೂಡದು. ಕೆಲವು ದಿನಗಳವರೆಗೆ ತನ್ನ ಪಾಪಗಳಿಗಾಗಿ ಕ್ಷಮೆ ಬೇಡುವ ಧ್ಯಾನವನ್ನು ಮಾಡಿದರೆ ಬೇಗ ಪರಿಶುದ್ಧನಾಗುವನು. ಅದರಲ್ಲಿ ಪಾಪಗಳಿಗಾಗಿ, ಕ್ಷಮಾಯಾಚನೆ ಹಾಗೂ ಅಳುವುದು, ವ್ಯಥೆಪಡುವುದು ಕೂಡ ಸೇರಿದೆ. ''ಯಾವಾಗ ಭಕ್ತನು ತನ್ನ ಪಾಪಗಳ ಕ್ಷಮೆಗಾಗಿ ಪ್ರಾರ್ಥನೆ ಮಾಡಿ ಅತ್ತರೆ ನನಗೆ ನಾಚಿಕೆ ಬಂದು ನಾನು ಅವನನ್ನು ಪುನಃ ನನ್ನವನಾಗಿಸಿಕೊಳ್ಳುವೆನು'' ಎಂದು ಕುರಾನ್ ಶರೀಫ್‌ದಲ್ಲಿ ಬರೆದಿದೆ.

ಸಾಯಿಬಾಬಾನ ಪಟವನ್ನು ಒಬ್ಬರು ನನಗೆ ಕಳಿಸಿದ್ದರು. ಅದರಲ್ಲಿ ಅವರ ಆರೋಗ್ಯ ಸೌಂದರ್ಯ ಮತ್ತು ನಗುವು ಅವಶ್ಯವಾಗಿ ಮೋಹಕವಾಗಿದ್ದಿತು. ಸ್ವಭಾವವೂ ಸಹ ಮೃದುವೆನಿಸುತ್ತಿತ್ತು. ಈ ವಿಷಯಗಳನ್ನು ನೋಡಿ ಪ್ರತಿಯೊಬ್ಬ ವ್ಯಕ್ತಿಗೆ ಅವರನ್ನು ಪ್ರೇಮಿಸಲು ಮನಸ್ಸಾಗುವುದು. ಆದರೆ ಆಧ್ಯಾತ್ಮಿಕತೆಯ ಬಗ್ಗೆ ನಿಮ್ಮ ಅಭಿಪ್ರಾಯವು ಸರಿಯಾದದ್ದಿದೆ. ''ಮನೆಯೊಳಗೆಲ್ಲರು ಕುರುಡರು. ನಾನು ಯಾರಿಗೆ ತಿಳಿಸಲಿ'' ಎಂದು ಕಬೀರನು ಹೇಳುವನು. ನಮ್ಮ ದೃಷ್ಟಿಯು ಒಂದನ್ನೇ ಮೆಚ್ಚುವ ಹಾಗೆ ಉಳಿಯಲಿಲ್ಲ. ವಾತಾವರಣವು ಸ್ವಲ್ಪ

ಪರಿಣಾಮ ಮಾಡಿತು. ಮತ್ತು ಸಹವಾಸವು ಕೊಂಚ ಕೆಡಿಸಿತು. ಪಾಶ್ಚಾತ್ಯ ಸಂಸ್ಕೃತಿಯು ಸ್ವಲ್ಪ ಪ್ರಭಾವ ಬೀರಿತು. ಈ ವಿಷಯಗಳಿಂದ ಸ್ವಲ್ಪ ಮೇಲೆದ್ದರೂ ಸಹ ಆಧ್ಯಾತ್ಮಿಕತೆಯ ಅವಾಸ್ತವ ಶಿಕ್ಷಣ ನಮ್ಮನ್ನು ಹಾಳು ಮಾಡಿಬಿಟ್ಟಿತು. ಪರಿಣಾಮವೇನಾಯಿತೆಂದರೆ ನಾವು ಆಧ್ಯಾತ್ಮಿಕತೆಯಿಂದ ನೂರಾರು ಗಾವುದ ಹಿಂದೆ ಹೋಗಿ ಬಿದ್ದೆವು.

ಈಗ ಒಂದು ತಪ್ಪಿಗೆ ನಾಲ್ಕು ಶಿಕ್ಷೆಗಳು ಹೇಗೆಂಬ ನಿಮ್ಮ ಪ್ರಶ್ನೆಯು ಉಳಿದುಕೊಂಡಿತು. ಇದಕ್ಕೆ ತತ್ತ್ವಶಾಸ್ತ್ರಾನುಸಾರವಾಗಿ ಉತ್ತರ ಕೊಡಲು ಬಯಸಿದೆ. ಆದರೆ ಬರೆಯುವವರಾರೂ ಸಿಗಲಿಲ್ಲ. ಆದುದರಿಂದ ಸರಳ ಶೈಲಿಯಲ್ಲಿ ಬರೆದು ಬಿಡುವೆ.

ಮನುಷ್ಯನು ಒಂದು ಮಿಶ್ರಣಗೊಂಡ ವಸ್ತು. ಯಾವುದಾದರೂ ಒಳ್ಳೆಯ ಅಥವಾ ಕೆಟ್ಟ ಕೆಲಸ ಮಾಡಿದಾಗ, ಮೆದುಳು ವಿಚಾರ ಮಾಡುತ್ತದೆ. ಹೃದಯವು ನಿರ್ಣಯ ತೆಗೆದುಕೊಳ್ಳುತ್ತದೆ. ಮತ್ತು ಮಾನವೀಯ ಉಪಕರಣಗಳು ತಮತಮಗೆ ಸಂಬಂಧ ಪಟ್ಟ ಕಾರ್ಯಗಳನ್ನು ಮಾಡಲಾರಂಭಿಸುವವು. ಇವೆರಡರಲ್ಲಿ ಹೃದಯ ಮತ್ತು ಮೆದುಳಿನ ಸಹಕಾರವಿದ್ದಿತು. ಯಾವ ಉಪಕರಣವು ಕಾರ್ಯಮಾಡಿತೋ ಅದು ಸಹ ತಪ್ಪಿತಸ್ಥವಾಯಿತು. ಮತ್ತು ಇದು ಶರೀರದ ಒಂದು ಭಾಗವಿದ್ದ ಕಾರಣ ಶರೀರವೂ ಹೊಣೆಗಾರಿಕೆಯಾಯಿತು. ಕೆಟ್ಟ ವಿಚಾರವನ್ನು ಮಾಡಿದ, ಎಂದರೆ ವಾಯು ಮಂಡಲವಲ್ಲಿ ಆ ವಿಚಾರವನ್ನು ಮೂಡಿಸಿದ್ದಕ್ಕಾಗಿ ಪ್ರಕೃತಿಯು ಅದರ ಶಿಕ್ಷೆಯನ್ನು ಬೇರೆಯಾಗಿ ಕೊಡುವುದು. ಅಪರಾಧಾನುಸಾರವಾಗಿ ಅವನಿಗೆ ಕೆಟ್ಟ ಯೋನಿ ಅಥವಾ ನರಕ ಪ್ರಾಪ್ತವಾಗುತ್ತದೆ. ನರಕದಲ್ಲಿ ಎಷ್ಟರ ಮಟ್ಟಿಗೆ ಶಿಕ್ಷೆ ಅನುಭವಿಸಬೇಕೋ ಅಷ್ಟು ದೊರಕಿತು. ಮಿಕ್ಕಿದ್ದನ್ನು ಪ್ರಪಂಚದಲ್ಲಿ ಹುಟ್ಟಿ ಭೋಗಿಸುವನು. ಮೆದುಳಿಗೆ ಯಾವ ಕಾರ್ಯವು ಕೆಟ್ಟದ್ದೆನಿಸಿತೋ ಅದಕ್ಕಾಗಿ ಖೇದವೆನಿಸಿ ಮೆದುಳಿಗೆ ಶಿಕ್ಷೆಯಾಯಿತು. ಅದರ ಪರಿಣಾಮ ಕೆಟ್ಟದಾಯಿತು. ಹೀಗೆ ಹೃದಯಕ್ಕೆ ಶಿಕ್ಷೆ ಸಿಕ್ಕಿತು. ಮತ್ತು ಸಮಾಜವು ಸಹ ಕೆಟ್ಟಿಂದಿತು. ನರಕಪ್ರಾಪ್ತಿ ಮೊದಲನೆಯ ಶಿಕ್ಷೆ, ವಾಯುಮಂಡಲವನ್ನು ಕೆಡಿಸಿದಕ್ಕಾಗಿ ಪ್ರಕೃತಿಯ ಶಿಕ್ಷೆ ಎರಡನೆಯದು, ಶರೀರ ಮತ್ತು ಅದಕ್ಕೆ ಸಂಬಂಧಿಸಿದವುಗಳಿಗೆ ದೊರಕಿದ್ದು ಮೂರನೆಯ ಶಿಕ್ಷೆ. ಒಟ್ಟಿಗೆ ಯಾವ ಜನರು ಅಥವಾ ಯಾವ ಇಂದ್ರಿಯಗಳು ಅಪರಾಧವೆಸಗುವುದರಲ್ಲಿ ಸಹಕಾರಿಯಾಗಿದ್ದರೊ; ಎಲ್ಲರಿಗೂ ಶಿಕ್ಷೆ ದೊರಕಿತು. ಪತ್ರವನ್ನು ಸ್ವಯಂ ನಾನೇ ಬರೆಯುತ್ತಿದ್ದೇನೆ. ಹೆಚ್ಚು ವಿಶದವಾಗಲೊಲ್ಲದು. ಪುನಃ ಯಾವನಾದರೂ ಬರೆಯುವವನು ದೊರೆತಾಗ ಬರೆಯುವೆ.

ಉರ್ದು ಕವಿತೆ: "ಪ್ರಿಯನ ಸೌಂದರ್ಯವನ್ನು ನೋಡಿ ಹೃದಯ ಉದ್ರೇಕಗೊಂಡಿತು. ತಪ್ಪು ಕಣ್ಣುಗಳದಿತ್ತು, ಬಾಕು ಹೃದಯದಲ್ಲಿ ನಟ್ಟಿತು"

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

ವಿ.ಸೂ: ಡಾ. ಕೆ. ಸಿ. ವಿ. ಯವರ ಪತ್ರ ಬಂದಿತು. ಬಹಳ ದಿನಗಳಿಂದ ನಿಮ್ಮ ಪತ್ರವು ಅಲ್ಲಿ ತಲುಪಿಲ್ಲ. ಆದುದರಿಂದ ಅವರು ನಿಮ್ಮ ಮತ್ತು ಮಕ್ಕಳ ಕುಶಲವಾರ್ತೆ ತಿಳಿಯಲು ಚಿಂತಿತರಾಗಿರುವರು. ಅವರಿಗೆ ಬರೆದು ಬಿಡಿರಿ.

◆ ◆ ◆

"ಓಂ ತತ್‌ಸತ್"

ನಂ.೧೦೬ ಷಾಹಜಹಾನ್‌ಪೂರ್
ನಂ. ಎಫ್-೪೬೫/ಎಸ್.ಆರ್.ಸಿ.ಎಮ್. ದಿ. ೨೨. ೯.೧೯೬೧

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಎರಡೂ ಪತ್ರಗಳು ತಲುಪಿದವು. ನೀವು 'ನ'ಗಾಗಿ 'ಆ'ಗೆ ಏನು ಬರೆದಿದ್ದಿರೋ ಸರಿಯಾಗಿ ಬರೆದಿರುವಿರಿ. 'ಶೇ' ಇಲ್ಲಿ ಬಂದಾಗ ಅವರ ವರ್ಗಾವಣೆ ಮಧುರೈಗೆ ಆಗುವುದೆಂದು ನನಗೆ ಹೇಳುತ್ತಿದ್ದರು. 'ಸ'ನ ವರ್ಗಾವಣೆ ಬೆಂಗಳೂರಿಗೆ ಆಗಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು. ನನಗೆ 'ಸ'ನ ಪತ್ರಕ್ಕೆ ಉತ್ತರವನ್ನು ಇನ್ನೂ ಕೊಡಲಾಗಲಿಲ್ಲ, ಈಗ ಒಂದೆರೆಡು ದಿನಗಳಲ್ಲಿ ಕೊಡುವೆನು. ಉತ್ತರ ಕೊಡದಿದ್ದುದಕ್ಕೆ ಕಾರಣ ಆಲಸ್ಯ ಮತ್ತು ನಿಶ್ಶಕ್ತತೆಯಾಗಿದೆ. ಶ್ರೀ 'ಅ' ನಿಮಗೆ ಬರೆದಿರುವ ಪತ್ರದ ಪ್ರತಿಯನ್ನು ನನಗೆ ಕಳಿಸಿದ್ದರು. ಅವರಿಗೆ ಕೊಟ್ಟ ಉತ್ತರದ ಪ್ರತಿಯನ್ನು ಆಳವಾಗಿ ಓದಿ ನಿಮ್ಮ ಕಡತದಲ್ಲಿ ಇಟ್ಟುಕೊಳ್ಳಿರಿ. ಈ ದಿನ ಡಾ. ವರದಾಚಾರಿಯವರ ಪತ್ರ ಬಂತು. ಅವರು ಬಹಳ ಅಸ್ವಸ್ಥರಾಗಿರುವರು. ಈಶ್ವರನು ಅವರಿಗೆ ಬೇಗ ಸ್ವಾಸ್ಥ್ಯ ದಯಪಾಲಿಸಲಿ.

ಪ್ರಪಂಚವನ್ನು ಆಕರ್ಷಿಸುವದಕ್ಕೆ ನಾನು ನಿಮಗೇನು ಹೇಳಿದ್ದೆನೋ, ಅದಕ್ಕಾಗಿ ಇಷ್ಟು ತೀಕ್ಷ್ಣವಾದ ವಿಧಾನವನ್ನು ನೀವು ಉಪಯೋಗಿಸಬೇಡಿರಿ. ಪರಂತು ಪೂರ್ತಿ ಪ್ರಪಂಚವು ಈ ಮಿಷನ್ನಿನ ಕಡೆಗೆ ಆಕರ್ಷಿತವಾಗುತ್ತಲಿದೆಯೆನ್ನುವ ಒಂದು ಲಘುವಾದ ಕಲ್ಪನೆಯನ್ನು ಕಟ್ಟಿರಿ. ಅದರಲ್ಲಿಯೇ ಪ್ರಾಣಾಹುತಿಯ ಆವಶ್ಯಕತೆಯಾದರೆ ಕಾರ್ಯವು ತನ್ನಷ್ಟಕ್ಕೆ ತಾನೇ ಆಗುತ್ತಲಿರುವುದು. ಹೃದಯವು ಗಾಬರಿಗೊಳ್ಳುವಷ್ಟು ಶ್ರಮ ವಹಿಸಬೇಡಿರಿ. ಹೃದಯದಲ್ಲಿ ನೋವು ಇರುವವರೆಗೆ ನಿಮಗೆ ನೀವು ವಿಶ್ರಾಮವನ್ನು ಕೊಟ್ಟು ಈ ಕೆಲಸವನ್ನು ಸ್ಥಗಿತವಾಗಿರಿಸಿರಿ. ನಿಮಗೆ ವಾಯುವಿನ ನೋವು ಇದೆಯೆಂದು ನನಗೆನಿಸುತ್ತದೆ. ಎಂದರೆ ವಾಯುವಿಕಾರವಿದೆ. ಇದು ಯಾವುದೇ ಆಧ್ಯಾತ್ಮಿಕ ಸ್ಥಿತಿಯಿಂದಾದುದಲ್ಲ. ನೀವು ಇದರ ಚಿಕಿತ್ಸೆ ಮಾಡಿಸಿರಿ. ಕೆಲವು ದಿನ ಅಕ್ಕಿಯ ಅನ್ನ ತಿನ್ನುವುದನ್ನು ಬಿಟ್ಟರೆ ಈ ನೋವು ತನ್ನಷ್ಟಕ್ಕೆ ತಾನೇ ಸರಿಯಾಗಿಬಿಡುವುದು. ಅಕ್ಕಿಯ ಅನ್ನವನ್ನು ಬಿಡಲಾಗದ ಪಕ್ಷದಲ್ಲಿ ಕೆಲವು ದಿನಗಳವರೆಗೆ ಹೆಸರಿನ ಹುಗ್ಗಿಯನ್ನು ಮಜ್ಜಿಗೆಯ ಜೊತೆಯಲ್ಲಿ ಉಣ್ಣಿರಿ. ಚಿಕಿತ್ಸೆಯ ಬಗ್ಗೆ ಅನಾದರ

ಮಾಡಕೂಡದು. ಸ್ವಾಸ್ಥ್ಯವನ್ನು ಚೆನ್ನಾಗಿಟ್ಟುಕೊಳ್ಳಲು ಯಾವಾಗಲೂ ಪ್ರಯತ್ನಮಾಡಬೇಕು. ಏಕೆಂದರೆ ನಿಮಗಿನ್ನೂ ಬಹಳ ಕೆಲಸ ಮಾಡುವುದಿದೆ. ಆದಕ್ಕಾಗಿ ಉತ್ತಮವಾದ ಆರೋಗ್ಯವಿರುವುದು ಆವಶ್ಯಕ.

ಪ್ರಭುವಿನ ಸ್ಥಿತಿ ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗುವುದು.? ಎಂದು ನೀವು ಮಾಡಿರುವ ಪ್ರಶ್ನೆಗೆ, ಪೂರ್ಣ ಪರಿಣಾಮಕಾರಿಯಾಗುವುದೆಂದು ಉತ್ತರ ಕೊಡಬಯಸುತ್ತೇನೆ. ಮತ್ತು ಪ್ರಭುವಿನ ಸ್ಥಿತಿಯನ್ನು ಸ್ವೀಕರಿಸುವುದರಿಂದಲೇ ಈ ಪರಿಣಾಮವಾಗುವುದು. ಅರ್ಥಾತ್ ಪ್ರಭುವೇ ಕೆಲಸ ಮಾಡುತ್ತಿರುವನು ಹೊರತು ರಾಘವೇಂದ್ರರಾವ್ ಕೆಲಸ ಮಾಡುತ್ತಿಲ್ಲ. ಇದು ನಿಜವೂ ಹೌದು. ವಿಲೋಮದ ಸಿದ್ಧಾಂತವನ್ನು ಅನ್ವಯಿಸಿದರೆ, ಪ್ರಭುವು ಸೇವಕನೂ, ಸೇವಕನು ಪ್ರಭುವೂ ಆಗಿಹೋಗುವನು. ಅರ್ಥವೇನೆಂದರೆ, ಇಬ್ಬರೂ ತಮ್ಮ ಸ್ಥಿತಿಯನ್ನು ಕಳೆದುಕೊಂಡು ಕೂಡುವರು. ಆಮೇಲೆ ಏನಾಗುವುದೋ ದೇವರೇ ಬಲ್ಲ. ನೀವು ಪ್ರಾರ್ಥನೆ ಮಾಡಿದರೂ ಸಹ ಅದೇ ಮಾತಾಗುವುದು. ಪ್ರಾಣಾಹುತಿಯು ಪ್ರವಹಿಸುವುದು. ಅದನ್ನು ನೀವು ತಡೆಯಲಾರಿರಿ. ಆದುದರಿಂದ ಪ್ರಾರ್ಥನೆ ಮಾಡುವುದು ನಿಮಗೆ ಸುಲಭ. ಮಾತು ಅದೇ ಆಗುವುದು. ಬಂಧು, ನೀವು ಕಾರ್ಯವನ್ನು ಮಾಡಿರಿ. ಆದರೆ ವಿಚಾರದ ತೀವ್ರತೆಯಲ್ಲಿ ಮನಸ್ಸು ಗಾಬರಿ ಪಡುವಷ್ಟು ನಿಮ್ಮ ಹೃದಯವನ್ನು ತೊಡಗಿಸಬೇಡಿರಿ. ಲಘುವಾದ ಸಂಕಲ್ಪ ಹೆಚ್ಚು ಪರಿಣಾಮವುಳ್ಳದ್ದಾಗುವುದು. ನಮಗೆ ಈಶ್ವರನು ಹೃದಯ ಮತ್ತು ಮೆದುಳುಗಳನ್ನು ಕೊಟ್ಟಿರುವನು ನಿಜ. ಆದರೆ ಅವನ್ನು ಕೂಲಿಕಾರರ ಹಾಗೆ ದುಡಿಸುವುದಕ್ಕಾಗಿ ಕೊಟ್ಟಿಲ್ಲ. ಒಂದು ರಾಷ್ಟ್ರವನ್ನೇ ಬುಡಮೇಲು ಮಾಡಬೇಕಾದ ಸಂದರ್ಭದಲ್ಲಿ ಅಥವಾ ಯಾವುದಾದರೊಂದು ಖಂಡವನ್ನೇ ಈಶ್ವರನ ಆಜ್ಞಾನುಸಾರ ಧ್ವಂಸ ಮಾಡಬೇಕಾದಾಗ ವಿಚಾರದ ತೀವ್ರತೆಯಲ್ಲಿ ಸತತವಾಗಿ ನಿರತನಾಗುವ ಆವಶ್ಯಕತೆಯುಂಟಾಗುವುದು. ನೀವು ಒಂದು ಕಡೆ ಟಿಪ್ಪಣಿ ಮಾಡಿ ಇಟ್ಟುಕೊಳ್ಳಿರಿ. ನನಗೆ ಜ್ಞಾಪಕದಲ್ಲಿರುವುದಿಲ್ಲ, ನಾನು ಭೇಟಿಯಾದಾಗ ಈ ಕಾರ್ಯದಲ್ಲಿ ಶಕ್ತಿಯ ಉಪಯೋಗ ಎಷ್ಟರ ಮಟ್ಟಿಗೆ ಎಲ್ಲೆಲ್ಲಿ ಮತ್ತು ಹೇಗೆ ಮಾಡಬೇಕೆನ್ನುವುದನ್ನು ನನಗೆ ಕೇಳಿ ತಿಳಿದುಕೊಳ್ಳಿರಿ. ಅಲ್ಲದೆ ಕೇಳುವ ಆವಶ್ಯಕತೆಯಾದರೂ ಇಲ್ಲ. ನೀವು ಮಾಡಬೇಕಾದ ಕಾರ್ಯದಲ್ಲಿ ಮೆಲ್ಲಮೆಲ್ಲಗೆ ಪ್ರವೃತ್ತರಾದಾಗ ಅದರ ಪರಿಣಾಮವನ್ನು ಅವಲೋಕಿಸಿದ್ದಾದರೆ ಸ್ವತಃ ಅನುಭವಕ್ಕೆ ಬರುವದು.

ನನಗೆ ಹೊಟ್ಟೆಯ ನೋವು ಹೆಚ್ಚಾದಾಗ ಹೃದಯದಲ್ಲಿ ಸಹ ನೋವು ಬೆಳೆದು ಹೋಗುವುದು, ಆ ವಾಯು ಹೃದಯದ ಕಡೆ ಹರಿಯ ತೊಡಗುವುದು. ನಾನು ನಿಮಗೆ ಎರಡು ಔಷಧಿಗಳನ್ನು ಬರೆಯುವೆ. ಅವು ವಾಸ್ತವವಾಗಿ ಔಷಧಿಗಳಾಗಿರದೆ ಆಹಾರವಾಗಿವೆ. ಒಂದು ಬಟ್ಟಲು ನೀರನ್ನು ಕಾಯಿಸಿ, ಅದರಲ್ಲಿ ಒಂದು ನಿಂಬೆ ಹಣ್ಣಿನ ರಸವನ್ನು ಹಿಂಡಿಕೊಳ್ಳಿರಿ. ನೀರು ಚಹದ ಹಾಗೆ ಬಿಸಿಯಾಗಿರಬೇಕು. ಆಮೇಲೆ ಕುಡಿದುಬಿಡಿರಿ. ಈ ರೀತಿ ದಿನಕ್ಕೆ ಒಂದೆರೆಡು ಸಲ ಮಾಡಿರಿ. ಎರಡನೆಯ ಔಷಧಿಯನ್ನು ಊಟ ಮಾಡಿದ ನಂತರ ಸುಮಾರು ಒಂದು ತೊಲೆಯಷ್ಟು ಕುಡಿಯಬೇಕು. ಇದನ್ನು ಕಾಶೀರಾಮರು ನಿಸರ್ಗೋಪಚಾರದಲ್ಲಿ ಹೃದಯ ಮತ್ತು ಜೀವಕೋಶದ ಶಕ್ತಿಯನ್ನು ಬೆಳೆಸುವುದಕ್ಕೆ ಕೊಡುತ್ತಾರೆ. ಒಂದು ನಿಂಬೆಯ

ಹಣ್ಣಿನ ರಸದಷ್ಟು ಹಸಿ ಶುಂಠಿಯ ರಸ ಮತ್ತು ಅಷ್ಟೇ ಶುದ್ಧ ಜೇನು ತುಪ್ಪವನ್ನು ಕಲೆಸಿ ಇಟ್ಟುಕೊಳ್ಳಿರಿ. ಅಲ್ಲಿ ಬಹಳ ಸೆಕೆ ಇರುತ್ತದೆ. ಆದುದರಿಂದ ನಾಲ್ಕೈದು ದಿನಗಳಿಗಾಗಿ ಸಿದ್ಧಮಾಡಿಕೊಂಡು ಉಪಯೋಗಿಸಿರಿ. ಬೆಳಗು ಮುಂಜಾನೆ ಚಹ ಮತ್ತು ತಿಂಡಿ ತೆಗೆದು ಕೊಳ್ಳದೆಯೇ ಸುಮಾರು ಒಂದು ಮೈಲಿಯಷ್ಟು ತಪ್ಪದೆ ಲಘುವಾಗಿ ವಿಹರಿಸಿರಿ. ವಿಹರಿಸುವಲ್ಲಿ ನಿಮ್ಮ ಮನ ಒಲಿಯದಿದ್ದರೆ ಗುಲಾಬಿಯನ್ನು ಜೊತೆಯಲ್ಲಿ ಕರೆದುಕೊಳ್ಳಿರಿ. ಮೀರಾ ಅಂತೂ ಅಷ್ಟು ನಡೆಯಲಾರಳು.

ನನಗೆ ನಿಮ್ಮ ಹೊಟ್ಟೆನೋವಿನ ಚಿಂತೆ ಬಹಳವಾಗಹತ್ತಿದೆ. ಈ ಪತ್ರ ತಲುಪುವುದರೊಳಗೆ ನಿಮಗೆ ಗುಣವಾಗಲೆಂದು ಈಶ್ವರನನ್ನು ಕೋರುತ್ತೇನೆ. ಈ ಪತ್ರ ತಲುಪಿದಾಕ್ಷಣ ನಿಮ್ಮ ಸ್ಥಿತಿಯನ್ನು ಕುರಿತು ಒಂದು ಪೋಸ್ಟ ಕಾರ್ಡಿನಲ್ಲಿ ಬರೆದು ಹಾಕಿರಿ. ಮಾಸ್ಟರ ಸಾಹೇಬರ ಜೊತೆಯಲ್ಲಿ, ಅವರ ಹೆಂಡತಿಯನ್ನು, ಚಿಕಿತ್ಸೆ ಮಾಡಿಸುವುದಕ್ಕಾಗಿ ಕರೆಯಿಸಿಕೊಂಡಿರುವೆವು. ಆಕೆಗೆ ರಕ್ತದ ಅತಿ ಒತ್ತಡ ಮತ್ತು ರಕ್ತಹೀನತೆಯ ತೊಂದರೆಯಿತ್ತು. ಮೆಲ್ಲ ಮೆಲ್ಲಗೆ ಸ್ವಾಸ್ಥ್ಯ ಲಭಿಸುತ್ತಿದೆ. ಆಕೆ ಒಂದು ತಿಂಗಳಿಗಿಂತ ಸ್ವಲ್ಪಹೆಚ್ಚೇ ಇರಬೇಕಾಗುವುದು. ಪಿತೃ ಪಕ್ಷದಲ್ಲಿ ಶ್ರಾದ್ಧ ಮಾಡುವುದಕ್ಕಾಗಿ ಅವರು ನಾಲ್ಕೈದು ದಿನಗಳವರೆಗೆ ಹೋಗುವರು. ಶ್ರೀ ಎಮ್.ಎಲ್. ಚತುರ್ವೇದಿ ೩ ಅಕ್ಟೋಬರದಿಂದ ೫ ಅಕ್ಟೋಬರದವರೆಗೆ ಸರಕಾರದ ಕೆಲಸದ ನಿಮಿತ್ತವಾಗಿ ಮದ್ರಾಸಿನಲ್ಲಿರುವರು. ಅವರ ಮುಂಬಯಿ ಪ್ರವಾಸ ಮುಗಿದಿದ್ದು ನಾಳೆ ಕಲಕತ್ತೆಯಿಂದ ದೆಹಲಿಗೆ ಮರಳಿ ಬರುವರು. ವಿಮಾನದ ಪ್ರವಾಸ. ಹಾರುತ್ತ ಕೆಲವು ಗಂಟೆಗಳಲ್ಲಿ ಮದ್ರಾಸ್ ತಲುಪುವರು. ನಾನು ಮದ್ರಾಸಿನಲ್ಲಿ ಕೆಲವು ಜನರಿಗೆ ಅವರನ್ನು ಭೇಟಿಯಾಗಿ ಅವರ ಜೊತೆಯಲ್ಲಿ ಸತ್ಸಂಗ ಮಾಡಲು ಬರೆದಿರುವೆನು.

ಈಶ್ವರ ಸಹಾಯ್‌ರು ನಿಮಗೆ ನಮಸ್ಕಾರ ಹೇಳಿರುವರು. ಶ್ರೀ 'ಭೀ' ಅವರು ತಾವು ಮತ್ತು ಬೇರೆ ಕೆಲವರು ಸೇಡಂ ಮತ್ತು ಬೀದರದಿಂದ ದಸರೆಯ ರಜೆಯಲ್ಲಿ ಈ ಬಡವನ ಮನೆಗೆ ಬರುವುದಾಗಿ ಬರೆದಿರುವರು. ಬಹಳ ಸಂತೋಷದ ಮಾತು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೦೭ ಷಾಹಜಹಾನ್‌ಪೂರ್
ಎಫ್ - ೪೯೦/ಎಸ್.ಆರ್.ಸಿ.ಎಮ್. ದಿ. ೨೮. ೯. ೧೯೬೧.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಆಶೀರ್ವಾದದ ನಂತರ ತಿಳಿಯ ಪಡಿಸುವದೇನೆಂದರೆ 'ಆ'ಗೆ ನಾನು ಉತ್ತರಿಸಿದ ಪತ್ರದ ಪ್ರತಿ ಮಾಡಿ ನಿಮ್ಮ ಪತ್ರದ ಜೊತೆಯಲ್ಲಿಯೆ ಕಳಿಸಿದ್ದುದು ತಲುಪಿರಬಹುದು. ಡಾ. ವರದಾಚಾರಿಯವರು ಬಹಳ ಅಸ್ವಸ್ಥರಾಗಿರುವರು. ೧೦-೧೨ ದಿನಗಳಿಂದ ಊಟ ಮಾಡಿಲ್ಲ. ತಲೆಯಲ್ಲಿ ವಿಪರೀತ ನೋವಿದೆ. ಡಾಕ್ಟರರು ಬಲಗಣ್ಣಿನಲ್ಲಿ ಗ್ಲಾಕೋಮಾ ಇದೆಯೆಂದು ಹೇಳಿರುವರು. ಅವರು ಪತ್ರ ಬರೆಯಲು ಅಸಮರ್ಥರಾಗಿರುವರು. ಅವರ ಹುಡುಗ ಚಿ। ನಾರಾಯಣನು ಬರೆದಿರುವನು. ಈಶ್ವರನು ಅವರಿಗೆ ಸ್ವಾಸ್ಥ್ಯವನ್ನು ಕರುಣಿಸಲಿ. ನೀವು ಸಹ ಅವರ ಸ್ವಾಸ್ಥ್ಯಕ್ಕಾಗಿ ತಪ್ಪದೆ ಪ್ರಾರ್ಥನೆ ಮಾಡುತ್ತಿರಿ.

ಒಂದು ಮಹತ್ವದ ಸಮಾಚಾರ: ಒಬ್ಬ ಸತ್ಸಂಗಿ, ಶ್ರೀ ಎಸ್. ಆರ್ ಮುಖರ್ಜಿ ಅತ್ಯುತ್ತಮ ಹೋಮಿಯೋಪಥಿಕ್ ಡಾಕ್ಟರರಿದ್ದು ರೇಲ್ವೆ ಇಲಾಖೆಯಲ್ಲಿ ಸೇವೆಯಲ್ಲಿದ್ದರು. ತಮ್ಮ ಅತ್ತೆಯ ಮನೆಯಲ್ಲಿ ಮಕ್ಕಳ ಜೊತೆಯಲ್ಲಿ 'ಪುರ್ಣಿಯಾ' ಪಶ್ಚಿಮ ಬಂಗಾಳದಲ್ಲಿ ರಜೆಯ ಮೇಲಿದ್ದರು. ಅಲ್ಲಿ ೧೨ ಸೆಪ್ಟೆಂಬರ ೬೧ ರ ಬೆಳಿಗ್ಗೆ ೭ ಗಂಟೆಗೆ ಅವರ ಹೃದಯ ಕ್ರಿಯೆ ನಿಂತುಹೋಯಿತು. ಆದರಿಂದ ನಮ್ಮೆಲ್ಲರಿಗೆ ಆಘಾತವಾಗಿದೆ. ಅವರಿಗೆ ನಾಲ್ಕೈದು ಜನ ಮಕ್ಕಳಿರುವರು. ದೊಡ್ಡ ಹುಡುಗನು ೮ ನೇ ಕ್ಲಾಸಿನಲ್ಲಿ ಓದುತ್ತಿರುವನು. ಅವರ ಉದರ ಪೋಷಣೆಗೆ ಯಾವ ಸಾಧನವೂ ಇಲ್ಲ. ಅವರ ಭಾವ ಮೈದುನ ಕಲೆಯನ್ನು ಕಲೆಯುತ್ತಿರುವನು. ನೌಕರಿ ದೊರೆತ ನಂತರ ಆತನಿಂದ ಸಾಧಾರಣ ಸಹಾಯ ದೊರೆಯುವ ಆಶೆಯಿದೆ. ಈಶ್ವರನು ಅವರೆಲ್ಲರ ಮೇಲೆ ತನ್ನ ಅನುಗ್ರಹವಿರಿಸಿ ಉಪಜೀವನದ ಉಪಾಯ ಕಲ್ಪಿಸಿಕೊಡಲಿ.

ಮಕ್ಕಳಿಗೆ ಆಶೀರ್ವಾದ

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೦೮
ನಂ. ಎಫ್ -೫೦೦/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ. ೨೦. ೯. ೧೯೬೧.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಪತ್ರ ಬಂತು. ನೀವು ಈಗ ಗುಣಹೊಂದಿರುವುದು ಬಹಳ ಸಂತೋಷದ ವಿಷಯ. ನೀವು ಪೂರ್ಣ ಆರೋಗ್ಯವಂತರಾದ ಮೇಲೆ ನನಗೆ ತಿಳಿಸಿರಿ. ಏಕೆಂದರೆ ಆಗ ನಾನು ನಿಮ್ಮ ಮೇಲೆ ಸ್ವಲ್ಪ ಸ್ವಲ್ಪ ಕೆಲಸ ಮಾಡಲಾರಂಭಿಸುವೆನು. ನನ್ನ ಪ್ರಾರ್ಥನೆಯು ಕೆಲಸ ಮಾಡಿದ್ದಕ್ಕೆ ದೇವರಿಗೆ ಧನ್ಯವಾದಗಳು. ಅದರ ವೃತ್ತಾಂತವನ್ನು ಸಹ ನೀವು ಹಾಗೆಯೆ ಬರೆದಿರುವಿರಿ. ಕಣ್ಮಣಿ ಮೀರ ಗುಣವಾಗಲೆಂದು ನನ್ನ ಹಾರ್ದಿಕ ಅಪೇಕ್ಷೆ. ನಾನಂತೂ ಆವಳಿಗೋಸ್ಕರ ನಿಷ್ಪ್ರಯೋಜಕನೆನಿಸಿದ್ದು, ಅದರ ಕಾರಣವನ್ನು ಹೇಳಿರುವೆನು. ಆದರೆ ಅವಳಿಗೆ ಖಂಡಿತ ಲಾಭವಾಗುವುದು. ಶ್ರೀ. 'ವಾ' ಅವರ ಪತ್ರ ನನ್ನ ಬಳಿಯೂ ಬಂದಿತ್ತು. ಉತ್ತರ ಕೊಟ್ಟಿರುವೆ. ಅವರು ಬಹಳ ಒಳ್ಳೆಯ ಮನುಷ್ಯರು. ಮಿಷನ್ನನ್ನು ಮಹಾರಾಷ್ಟ್ರದಲ್ಲಿ ಹಬ್ಬಿಸಲು ನೀವು ಬರೆದಿರುವುದು ಒಳ್ಳೆಯದಾಯಿತು. 'ಸ' ಧಾರವಾಡಕ್ಕೆ ಬಂದು ಬಿಟ್ಟರು. ಅವರಿಗೂ ಸಹ ಪತ್ರ ಬರೆಯುತ್ತಿರುವೆನು. 'ಆ' ನ ಪತ್ರ ನಿಮ್ಮ ಕಡತದಲ್ಲಿ ಜಾಗೂರಕತೆಯಿಂದ ಇಟ್ಟು ಕೊಳ್ಳಿರಿ. ಈಗ ಪ್ರಾಯಶಃ ಅವರು ಸರಿಯಾಗಿ ಇರುವರು. ಅವರಿಂದ ಪತ್ರ ಬಂದ ನಂತರ, ನಾನು ಅವರಿಗೆ ಇನ್ನೊಂದು ಪತ್ರ ಬರೆಯುವೆ. ಅದರ ಪರಿಣಾಮವಾಗಿ ಇಂಥ ಮಾತನ್ನು ಅವರು ಮುಂದೆಂದೂ ಆಲೋಚಿಸಲೇಬಾರದು.

ನಿನ್ನೆ ನಾನು ನಿಮಗೆ ಒಂದು ಪತ್ರವನ್ನು ಕಳಿಸಿರುವೆನು. ಡಾ.ವರದಾಚಾರಿಗೆ ಗ್ಲಾಕೋಮಾ ಆಗಿರಬಹುದೆಂಬ ಅನುಮಾನವಿದೆ. ನಾನು 'ವಿ. ಮೋ' ಅವರಿಗೆ ತಂತಿ ಸಂದೇಶ ಕೊಟ್ಟು ತಿರುಪತಿಗೆ ಕಳುಹಿಸಿದ್ದೆ. ಅವರು ಕಣ್ಣಿನ ಡಾಕ್ಟರ ಇರುವರು. ಅವರು ತಪಾಸಣೆ ಮಾಡಿ ಉತ್ತರ ರೂಪದಲ್ಲಿ ತಂತಿ ಕಳಿಸಿರುವರು. ಅದು ಇದೀಗ ತಲುಪಿತು. ವರದಾಚಾರ್ಯರಿಗೆ ಗ್ಲಾಕೋಮಾ ಇಲ್ಲ, ಆದರೆ 'ನ್ಯೂರಾಲ್ಜಿಯಾ' ಇದೆ. ನೀವು ಪ್ರಾರ್ಥನೆ ಮಾಡಿರಿ. ಅವರು ಗುಣ ಹೊಂದುವರು. ದಸರೆಯ ರಜೆಯಲ್ಲಿ 'ಭೀ' ಹಾಗೂ ಬೀದರ ಮತ್ತು ಸೇಡಂನ ಕೆಲವು ಜನರು ಇಲ್ಲಿ ಬರುವರು. ಮಾಸ್ತರ ಸಾಹೇಬರ ಮನೆಯಾಕೆಗೆ ಇಲ್ಲಿ ಚಿಕಿತ್ಸೆ ನಡೆಯುತ್ತಿದ್ದು ಕ್ರಮಕ್ರಮವಾಗಿ ಸ್ವಾಸ್ಥ್ಯ ಉಂಟಾಗುತ್ತಲಿದೆ. 'ವಾ'ನ ದೇಹದೊಳಗೆ ಕೆಲವು ಕಲ್ಪನೆಗಳು ಬಲೆಗಳ ಹಾಗೆ ಬಿದ್ದಿರುವುವು. ಅವರ ಶುದ್ಧೀಕರಣದ ಅವಶ್ಯಕತೆಯಿದೆ. ನೀವು ಆಕಡೆ ಸ್ವಲ್ಪ ಲಕ್ಷ್ಯ ಕೊಡಿರಿ. 'ನ' ನಿಂದ ಒಂದು ಪತ್ರ ಬಂದಿದೆ. ಆತನ ಕೈ ಕೆಳಗೆ ಕೆಲಸಮಾಡುವವರು ಆತನ ಮೇಲಾಧಿಕಾರಿಗೆ ಆತನ ಬಗ್ಗೆ ಅಸಂತೋಷ ಉಂಟಾಗುವಂತೆ ಮಾಡಿದ್ದಾರೆ. ಈ ಕೆಲಸ ಮಾಡುವ ಜನರ ಬಗೆಗೆ 'ನ' ಹೆಚ್ಚು ಕಾಳಜಿ ವಹಿಸುತ್ತಿದ್ದ. ಇದು ಈ ಕಾಲದ ಸ್ಥಿತಿ. ಇದು

ನಿಜವಿದ್ದಲ್ಲಿ ಇಂಥ ಪಾಪಕ್ಕೆ ಪ್ರಾಯಶ್ಚಿತ್ತ ಸಹ ಇಲ್ಲ. 'ನ'ಗೆ ಮೂರು ತಿಂಗಳಿಂದ ವೇತನವೂ ಸಿಕ್ಕಿಲ್ಲ. ಮತ್ತು ಮಾಸಿಕ ವೇತನ ಕೊಡಲಾರದ ಸರ್ಕಾರದ ಇಲಾಖೆ ಎಂಥದೆಂಬುದು ಆಶ್ಚರ್ಯ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆◆◆

"ಓಂ ತತ್‌ಸತ್"

ನಂ.೧೯೪
ನಂ. ಎಫ್-೫೨೪/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ. ೯. ೧೦. ೧೯೬೧.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನೀವು ಬರೆದ ೩ ನೇ ಅಕ್ಟೋಬರಿನ ಪತ್ರ ದೊರೆಯಿತು. ಮತ್ತು ೩೦ ರೂ.ಗಳ ಮನಿಯಾರ್ಡರ ಕೂಡ. ನಾನು ೫ ರೂ.ಗಳನ್ನು ಕುಮಾರಸ್ವಾಮಿಯವರಿಗಾಗಿ ಮತ್ತು ೨೫ ರೂ. ಗಳನ್ನು ಶ್ರೀಮತಿ ಮುಖರ್ಜೀ ಸಲುವಾಗಿ ಇಟ್ಟುಕೊಂಡೆ. ಇಂಥ ಸಮಯದಲ್ಲಿ ಅವರಿಗೆ ಸಹಾಯ ಒದಗಿಸಿ, ನೀವು ಒಳ್ಳೆಯದೇ ಮಾಡಿದಿರಿ. ಇದರಲ್ಲಿ ತಿರುಗಿ ಕೊಡುವ ಪ್ರಶ್ನೆಯೇ ಇಲ್ಲ. ಆದರೆ ನಿಮ್ಮ ವೇತನವು ಎಷ್ಟು ಕಡಿಮೆಯಿದೆ ಎಂದರೆ, ಈಶ್ವರನ ಕೃಪೆಯಿಂದ ಮಾತ್ರ, ಮಕ್ಕಳ ಜೀವನೋಪಾಯ ಚೆನ್ನಾಗಿ ಆಗಿಹೋಗುತ್ತದೆ ಎಂಬ ವಿಚಾರ ಅವಶ್ಯವಾಗಿ ನನಗುಂಟಾಗುತ್ತದೆ. ಇಲ್ಲಿಯ ಮಿಷನ್ನಿನ ಕಡೆಯಿಂದ ೫೦ ರೂ.ಗಳನ್ನು ನಾನು ಕಳಿಸಿರುವೆನು. ಮತ್ತು ಲಖೀಮಪುರದಿಂದ ಮಿಷನ್ ಕಡೆಯಿಂದ ೫೦ ರೂ.ಗಳು ಹೋಗಿರಬಹುದು. ನಾಳಿನವರೆಗೆ ನಿಮ್ಮ ೨೫ ರೂ. ಗಳನ್ನು ಕೂಡ ಕಳಿಸಿಕೊಡುವೆನು. ಮದ್ರಾಸಿನಿಂದ ಡಾ.ವರದಾಚಾರ್ಯರ ಪತ್ರ ಬಂದಿತ್ತು. ಅದು ಬೇರೆ ಯಾರ ಕೈಯಿಂದಲೋ ಬರೆಸಲ್ಪಟ್ಟಿತ್ತು. ಅಲ್ಲಿಯ ತಪಾಸಣೆಯಿಂದ ಕೂಡ ಅವರಿಗೆ "ಗ್ಲಾಕೋಮಾ" ಇಲ್ಲವೆಂದು ತಿಳಿಯಿತು. ಆದರೆ ನೋವು ನಿರ್ದಿಷ್ಟ ವೇಳೆಗಳಲ್ಲಿ ಹೆಚ್ಚು ಆಗಿರುತ್ತದೆ. ವಿಶೇಷವಾಗಿ ರಾತ್ರಿ ೧೧-೩೦ ರಿಂದ ೧ ಗಂಟೆಯವರೆಗೆ. ಚತುರ್ವೇದಿಜಿಯವರು ಸರಕಾರದ ಯಾವುದೋ ಕೆಲಸದ ನಿಮಿತ್ತ ಮದ್ರಾಸಿಗೆ ಹೋಗಿದ್ದರು. ನಾನು ಕೆಲವು ಸತ್ಸಂಗಿಗಳಿಗೆ ಅವರನ್ನು ಭೇಟಿಯಾಗುವುದಕ್ಕೆ ಬರೆದಿದ್ದೆನು. ತತ್ಪರಿಣಾಮವಾಗಿ ಆ ಜನರು ಭೇಟಿಯಾದರು. ಮತ್ತು ಡಾ.ವರದಾಚಾರ್ಯರು ಸಹ ಅವರ ಜೊತೆಯಲ್ಲಿದ್ದರು. ಅಲ್ಲಿ ಸತ್ಸಂಗ ಕೂಡ ಆಯಿತು. ಶ್ರೀ ಈಶ್ವರ ಸಹಾಯ್ ನಾಲ್ಕೈದು ದಿನ ಲಖೀಮಪೂರ್‌ದಲ್ಲಿದ್ದು ನಿನ್ನೆ ಮರಳಿ

ಬಂದರು. ಅವರ ಮನೆಯಾಕೆಯು ಚಿಕಿತ್ಸೆ ಪಡೆಯಲು ಇನ್ನೂ ಇಲ್ಲಿಯೇ ಇರುವರು. ಮೊದಲಿಗಿಂತ ಗುಣವಿದೆ. ಶ್ರೀ 'ಶೀ' ಮತ್ತು ಮೂರು ಜನರು ೮ ನೇ ದಿನಾಂಕ ಸೇಡಂದಿಂದ ಇಲ್ಲಿಗಾಗಿ ಹೊರಟಿರುವರು. ಜನರು ನನ್ನಿಂದ ದಕ್ಷಿಣ ಭಾರತದ ಪ್ರವಾಸದ ಕಾರ್ಯಕ್ರಮವನ್ನು ಕೇಳುತ್ತಿರುವರು. ಆದರೆ ಇನ್ನೂ ನಾನೇನೂ ಹೇಳಲು ಶಕ್ಯವಿಲ್ಲದಂತಾಗಿದೆ. ಏಕೆಂದರೆ, ಛಾಯಾಳ ಮದುವೆಯ ಬಗ್ಗೆ ಇಲ್ಲಿ ಮಾತುಕತೆ ನಡೆಯುತ್ತಿದೆ. ಅವರು ದಸರೆಯವರೆಗೆ ಅಂತಿಮ ಉತ್ತರ ಕೊಡುವುದಾಗಿ ಹೇಳಿರುವರು. ಅದರ ಅನಂತರ ಸ್ಥಿತಿಗತಿಗಳು ಹೇಗಿರುವುವೊ, ಅವುಗಳ ಮೇಲೆ ವಿಚಾರ ಮಾಡಿ ಪ್ರವಾಸದ ಬಗ್ಗೆ ನಿರ್ಣಯಿಸಲಾಗುವುದು.

ಬಂಧು. 'ಥ' ಅವರ ಪತ್ರಗಳು ಬರುತ್ತಿರುವವು. ಪ್ರೇಮದಿಂದ ತಮ್ಮನ್ನು ತಾವು ಉತ್ತಮಗೊಳಿಸುವಲ್ಲಿ ಮತ್ತು ಉತ್ತಮ ಪ್ರಗತಿ ಪಡೆಯುವುದರಲ್ಲಿ ತೊಡಗಿರುವರೆಂದು ಅವುಗಳಿಂದ ವಿದಿತವಾಗುತ್ತದೆ. ನಾನು ಅವರ ಪತ್ರಗಳಿಗೆ ಉತ್ತರ ಕೊಟ್ಟಿದ್ದು ಅವುಗಳ ಪ್ರತಿಗಳನ್ನು ಕಳುಹಿಸುತ್ತಿರುವೆನು. ಕಡತದಲ್ಲಿ ಇಟ್ಟುಕೊಳ್ಳಿರಿ. ಶ್ರೀ ರಾಬರ್ಟಕಾರ್‌ರು ಜರ್ಮನ್ ಭಾಷೆಯಲ್ಲಿ 'ರಿಯಾಲಿಟಿ ಎಟ್ ಡಾನ್'ದ ಅನುವಾದನ್ನು ಚಳಿಗಾಲದಿಂದ ಆರಂಭ ಮಾಡುವರು.

ಇಲ್ಲಿಯವರೆಗಂತೂ, ರೈಟರನ ವಾರ್ತೆಗಳಾದವು. ಈಗ ನಾನು ಕೊಂಚ ನನ್ನ ಹೃದಯದ ಸಮಾಚಾರವನ್ನು ತೆಗೆದುಕೊಳ್ಳಬಯಸುತ್ತೇನೆ. ಈಗ ಅದು ಎಲ್ಲಿದೆ, ಎಂದು ಹುಡುಕುವುದು ನಿಮ್ಮ ಕೆಲಸ. ನಾನು ಸ್ವಲ್ಪ ದಣಿದಿದ್ದು ಎಷ್ಟು ಮಟ್ಟಿಗೆ ಸಂಕ್ಷಿಪ್ತ ಪ್ರಿಯನಾಗಿ ಹೋಗಿರುವೆನೆಂದರೆ ಮಹಾತ್ಮರ ಸ್ಥಿತಿಯ ನಿರ್ದೇಶನ ಮಾಡುವುದಕ್ಕೆ ಒಂದೇ ಶಬ್ದದಿಂದ ಎರಡು ಶಬ್ದಗಳನ್ನು ಮಾಡಿಕೊಂಡಿರುವೆನು. ನಾವು ನಿಜಾರ್ಥದಲ್ಲಿ ಮಹಾತ್ಮನಾಗಿರುವವನನ್ನು ನೋಡಲು ಹೋಗುವುದಕ್ಕೆ 'ದರ್ಶನ' ಶಬ್ದ ಸರಿಯಾಗಿರುವುದು. ಮತ್ತು ಅಂತಿಂತಹ 'ಪಂಚಕಲ್ಯಾಣಿ' ಮಹಾತ್ಮರ ವಿಷಯದಲ್ಲಿ 'ದರ್ಸನ' ಶಬ್ಧ ಸರಿ ಹೊಂದುತ್ತದೆ. ಯಾವನಲ್ಲಿ ಪ್ರತಿಯೊಂದು ಬಣ್ಣವೂ ಉಂಟೋ ಅವನೇ 'ಪಂಚಕಲ್ಯಾಣಿ' ಮಹಾತ್ಮ. ಆದರೆ ಶಿಷ್ಟ ಭಾಷೆಯಲ್ಲಿ 'ಪಂಚಕಲ್ಯಾಣಿ' ಶಬ್ಧವನ್ನು ಬಳಸಲಾಗುವುದಿಲ್ಲ. ನಿಜವಾದ ಮಹಾತ್ಮನ ಬಗೆಗಂತೂ ನಿಮಗೆ ತಿಳಿದಿದೆ. ಆತನಲ್ಲಿ ಯಾವ ಬಣ್ಣವೂ ಇರುವುದಿಲ್ಲ. ಹೀಗೆ ಪಂಚಕಲ್ಯಾಣಿ ಮಹಾತ್ಮರಿಗಾಗಿ 'ದರ್ಸನ' ಶಬ್ದವು ಸರಿಯಾಗಿದೆ. ಆದುದರಿಂದ ನಾನು ಇವೆರಡೂ ಶಬ್ದಗಳಲ್ಲಿ (ದರ್ಶನ, ದರ್ಸನ) ಯಾವುದು ಯಾರಿಗೆ ಸರಿಯಾಗುತ್ತದೋ ಅದನ್ನು ಉಪಯೋಗಿಸುತ್ತಿರುತ್ತೇನೆ. ಈ ಶಬ್ದದ ಶಕ್ತಿಯನ್ನು (ಅಣಕವಾಗಿ) 'ಗಂಡಸು' ಮತ್ತು 'ಗಂಡ್ಸ್ಯಾ' ದಂತೆ ಎಂದು ತಿಳಿಯಬಹುದು. ನೀವು ಕಳಿಸಿರುವ ಲೇಖನ ಚೆನ್ನಾಗಿದೆ. ಎಲ್ಲಕ್ಕೂ ವಿಶೇಷವಾದ ಮಾತೇನೆಂದರೆ, ನಿಮ್ಮ ಶಬ್ದಗಳಲ್ಲಿ ಜೀವಂತ ಸ್ಥಿತಿಯುಂಟಾಗಿದೆ. ಈಶ್ವರ ಸಹಾಯ ನಿಮ್ಮ ಲೇಖನವನ್ನು ನೋಡಿಕೊಳ್ಳುವರು.ಮತ್ತು ಅದು ಸರಿಯಾಗಿಯೇ ಇದೆ. ನಿಮ್ಮ ಆರೋಗ್ಯದ ಕಡೆ ಲಕ್ಷ್ಯವಿಡಿರಿ. ಮತ್ತು ಬದಾಮಿಯ ೫ ಅಥವಾ ೭ ಬೀಜಗಳನ್ನು ಈ

ಮುಂದೆ ಹೇಳಿ ಕೊಟ್ಟ ಹಾಗೆ ದಿನಾಲು ತೆಗೆದುಕೊಳ್ಳುತ್ತಿರುವಿರಾದರೆ ಮೆದುಳು ಸುಸ್ಥಿತಿಯಲ್ಲಿರಲು ಅವಶ್ಯವಾದ ಬಹಳ ವಸ್ತುಗಳು ಇದರಿಂದ ಸಿಗುವುವು.

೫ ಬಾದಾಮಿಕಾಯಿಗಳನ್ನು ಒಡೆದು ಬೀಜಗಳನ್ನು ತೋಯಿಸಬೇಕು. ಮತ್ತು ಕೆಂಪು ಸಿಪ್ಪೆಯನ್ನು ತೆಗೆದು ಅವನ್ನು ನುಣ್ಣಗೆ ಅರಿಯಬೇಕು. ಅದರಲ್ಲಿ ೫ ಅಥವಾ ೭ ಕರಿಮೆಣಸು ಕಲೆಸಬೇಕು. ಮತ್ತು ಬಾಳೆ ಎಲೆಯಲ್ಲಿ ತುಪ್ಪ ಹಾಕಿ ಬಾದಮಿಯಲ್ಲಿ ಎರಡು ಅಥವಾ ಮೂರು ಔಂಸ ನೀರನ್ನು ಕಲೆಸಿ ಬೆಂಕಿಯ ಮೇಲೆ ಕುದಿಸಿಕೊಳ್ಳಬೇಕು. ಸಕ್ಕರೆ ಅಥವಾ ಕಲ್ಲುಸಕ್ಕರೆಯನ್ನು ಬೆರೆಸಿ ಬೆಳಗು ಮುಂಜಾನೆ ಉಪಯೋಗ ಮಾಡಬೇಕು. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ.ಸೂ: ಪುನಶ್ಚ: 'ಜ'ನದು ಕೂಡ ಪತ್ರ ಬಂದಿದೆ. ನಾನು ಕೆಲವು ವಾಕ್ಯಗಳನ್ನು ಬರೆದೇ ಬಿಟ್ಟೆ. ಅವನ್ನು ಮುಂದೆ ಪ್ರತಿಮಾಡಿ ಕೊಡುವೆನು. ಯಾವ ಪತ್ರಗಳಲ್ಲಿ ಉತ್ತರಿಸಲು ಯೋಗ್ಯವಾದ ಯಾವ ಮಾತು ಇರುವುದಿಲ್ಲವೋ, ಅಂಥದಕ್ಕೆ ಉತ್ತರ ಬರೆಯಲು ಕಷ್ಟವಾಗುವುದು. ಹೆದರಿಕೆಯಿಂದ ಏನನ್ನಾದರೂ ಆ ಕಡೆ ಈ ಕಡೆಯಿಂದ ತಂದು, ಸುಮ್ಮ-ಸುಮ್ಮನೆ ಉತ್ತರ ಬರೆಯಬೇಕಾಗುತ್ತದೆ. ಏಕೆಂದರೆ ಉತ್ತರ ಸಿಗದಿದ್ದಾಗ ಜನರು ಪೀಡಿಸುವರು.

ನಿಮ್ಮ ಪತ್ರ ಬರುವ ಮುಂಚೆಯೇ, ನಾನು ಶ್ರೀ 'ವಿ'ಗೆ ಉತ್ತರ ಬರೆದಿದ್ದೆ. ಅವರಲ್ಲಿ ಕೂಡ, ಬರೆಯಲು ಯೋಗ್ಯವಾದ ಯಾವ ಮಾತೂ ಇರಲಿಲ್ಲ. ಆದರೂ ಬರೆದುಬಿಟ್ಟೆ.

◆ ◆ ◆

"ಓಂ ತತ್‌ಸತ್"

ನಂ.೧೧೦
ಎಫ್ -೫೫೪/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ. ೩೧. ೧೦. ೧೯೬೧.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಎರಡು ಪ್ರೀತಿಯ ಪತ್ರಗಳು ತಲುಪಿದವು, ಒಂದು ಕಾರ್ಡ ಮತ್ತೊಂದು ಲಕೋಟೆ ಇತ್ತು. 'ಜ' 'ಶ' 'ರಾ' 'ಆ ' ಮತ್ತು 'ಶಿ' ಒಂದು ವಾರ ಬಂದಿದ್ದರು. ಅದರ ನಂತರ 'ಭ' ಮತ್ತು 'ಶ'. ಈಗ ಎಲ್ಲರೂ ಹೋಗಿಬಿಟ್ಟರು. 'ಸಿ', 'ರಾ' ಭೂತಪುರ ಮತ್ತು ಕೆಲವು ಇತರ ಸಜ್ಜನರು ಮೇ ತಿಂಗಳ ೨೭ ಅಥವಾ ೨೯ ದಿನಾಂಕದವರೆಗೆ ಷಾಹಜಹಾನ್‌ಪೂರ್‌ಕ್ಕೆ ಹೊರಡುವರೆಂದು ಇಂದು 'ಆ' ನ ಪತ್ರದಿಂದ ತಿಳಿಯಿತು. ಶ್ರೀ 'ಆ'

ರಾಯಚೂರಿಗೆ ಹೋಗುವರು. ನಾನು 'ಆ' ಜೊತೆ ಹಿಂದಿನ ಕಥೆಯನ್ನು ಕೇಳಲಿಲ್ಲ. ರಾಘವೇಂದ್ರರಾವ್‌ಜಿಯನ್ನು ನಿಮ್ಮ ಅಣ್ಣನೆಂದೂ, ಅವರ ಆಜ್ಞೆ ನನ್ನ ಆಜ್ಞೆಯೆಂದೂ ತಿಳಿಯಬೇಕೆಂದಿಷ್ಟೆ ಹೇಳಿದೆ. ಮಿಕ್ಕದನ್ನು ಯಾವ ಸ್ಥಿತಿಯಲ್ಲಿ, ತರಬೇಕೊ ಅದನ್ನು ಪತ್ರಗಳ ಮೂಲಕ ತರುತ್ತಾ ಇರಿ. ಇವರು ಸತ್ಸಂಗವನ್ನು ಬೆಳಿಸಲು ಒಳ್ಳೆಯ ಶ್ರಮ ಪಡುತ್ತಿರುವರು. ರಾಯಕೋಡಿನ 'ಪ' ರಿಯಾಲಿಟಿ ಎಟ್ ಡಾನ್ ದ ಕನ್ನಡ ಅನುವಾದದ ಮುದ್ರಣಕ್ಕಾಗಿ ರೂಪಾಯಿಗಳನ್ನು ಕೊಡಲು ಸಿದ್ಧರಿರುವರು. 'ರಿಯಾಲಿಟಿ ಎಟ್ ಡಾನ್' ದ ಎರಡನೆಯ ಮುದ್ರಣಕ್ಕಾಗಿ ಬೀದರಿನ, ಇಬ್ಬರು ವರ್ತಕರು ಪ್ರಾಯಶಃ ಸಿದ್ಧರಾಗುವರೆಂದು 'ಆ' ಹೇಳುತ್ತಿದ್ದರು. 'My vision' ದ ಅನುವಾದ ಕನ್ನಡ ಭಾಷೆಯಲ್ಲಿ ಸರಿಯಾಗಿ ಆಗಬೇಕು. 'ರಿಯಾಲಿಟಿ ಎಟ್ ಡಾನ್' ದ ಅನುವಾದವೂ ಕೂಡ ಪೂರ್ಣ ಅರ್ಥ ಕೊಡುವ ಹಾಗೆ ಆಗಬೇಕು. ಮತ್ತು ಸ್ಪಷ್ಟೀಕರಣಕ್ಕಾಗಿ ಆಗಾಗ ನನ್ನನ್ನು ಕೇಳಿ ತಿಳಿದುಕೊಳ್ಳಬೇಕು. 'ಸ' ಆ ಪುಸ್ತಕದಲ್ಲಿಯ ವಿಚಾರ ಸರಣಿಯ ಬಗ್ಗೆ ಕೆಲವು ಮಾತುಗಳನ್ನು ನನಗೆ ಕೇಳಿದ್ದಾರೆ. ನಾನು ಅದರ ಉತ್ತರ ಕೊಟ್ಟಿದ್ದೆ. ಅವರಿಗೆ ಸ್ವಲ್ಪ ಭಿನ್ನಾಭಿಪ್ರಾಯವಿತ್ತು. ಅದರ ಉತ್ತರ ಇನ್ನೂ ಬಂದಿಲ್ಲ. ಉತ್ತರ ಬಂದ ನಂತರ ಅವರಿಗೆ ಎಲ್ಲೆಲ್ಲಿ ನಾನು ಹೆಚ್ಚುವರಿ ಮಾಡಿರುವೆನೊ ಅದನ್ನು ಬರೆದು ಕಳಿಸಬೇಕೆಂದಿದ್ದೇನೆ. ಈ ವಿಷಯಗಳನ್ನು ಬೇಗ ಸಮಾಧಾನ ಪಡಿಸಿಕೊಳ್ಳಲು ನೀವು ಅವರಿಗೆ ಬರೆದು ಬಿಡಿರಿ. ಏಕೆಂದರೆ ಮುದ್ರಣಕ್ಕಾಗಿ ಪ್ರತಿಯು ಸಿದ್ಧವಾಗಬೇಕು.

ನೀವು ಡಾ. ವರದಾಚಾರ್ಯರಿಗೆ, "ಎಲ್ಲಿ ನಾನಿಲ್ಲವೊ ಅಲ್ಲಿ ನನ್ನನ್ನು ಕಾಣುತ್ತಿರುವೆನು" ಎಂದು ವರ್ಣಿಸಿ ಬರೆದಿರುವಿರಿ. ಇದರ ಅರ್ಥವೇನೆಂದರೆ, ಅಹಂಕಾರವು ಬಹಳ ಮಟ್ಟಿಗೆ ಸತ್ತುಹೋಗಿದೆ.

ನಾನು ಈ ವರ್ಷ ದ. ಭಾರತದ ಪ್ರವಾಸ ಮಾಡಲಾರೆ. ಕಾರಣವೇನೆಂದರೆ ಛಾಯಾಳ ಮದುವೆಯ ಬಗ್ಗೆ ಎಲ್ಲಿ ಮಾತಾಗುತ್ತಿರುವುದೋ, ಅವರು ನವ್ಹೆಂಬರ ೩೦ ಕೊನೆಯ ವಾರದಲ್ಲಿ, ಹುಡುಗಿಯನ್ನು ನೋಡಿ ಉತ್ತರ ಕೊಡುವೆನೆಂದಿರುವರು. ಹುಡುಗನ ಸ್ವಂತ ತಂದೆಗೆ ನಾನು ಹುಡುಗಿಯನ್ನು ನೋಡಲು ಅವಕಾಶ ಕೊಟ್ಟಿದ್ದೆ. ಆತನು ಹುಡುಗಿಯನ್ನು ಮೆಚ್ಚಿರುವವನು. ಆದರೆ ಈಗ, ಆತನ ಹೆಂಡತಿಯು ಸಹ ಹುಡುಗಿಯನ್ನು ನೋಡಬೇಕೆಂಬ ಹಟ ಹಿಡಿದಿರುವಳು. ಆದುದರಿಂದ ನವ್ಹೆಂಬರಿನ ಕೊನೆಯ ವಾರದಲ್ಲಿ ಬರುವರು. ಆತನ ಹೆಂಡತಿಯು ಕೂಡ ಹುಡುಗಿಯನ್ನು ಮೆಚ್ಚಿಕೊಳ್ಳುವರು. ಆಗ ಡಿಸೆಂಬರಿನಲ್ಲಿ, ನನ್ನ ಕಡೆಯಿಂದ ಮೊದಲನೆಯ ಶಾಸ್ತ್ರೋಕ್ತ ವಿಧಿಯನ್ನು ಆಚರಿಸಲಾಗುವುದು. ಮತ್ತು ಅವರು ಜನವರಿ ಅಥವಾ ಫೆಬ್ರುವರಿಯಲ್ಲಿ ಮದುವೆ ಮಾಡುವರು. ಹುಡುಗನು ಬಹಳ ಉತ್ತಮನಾಗಿದ್ದಾನೆ. ಮತ್ತು ತಂದೆಯು ಸಹ ಡಿ. ಎಸ್.ಪಿ. ಗ್ರೇಡಿನ ಮನುಷ್ಯರಿರುವರು. ಮದುವೆ ನಿಶ್ಚಯವಾಗಲೆಂದು ನೀವು ಪ್ರಾರ್ಥನೆ ಮಾಡಿರಿ. ಹುಡುಗಿಗೆ ಮದುವೆಯ ವಯಸ್ಸು ಮೀರಿದೆ. ಈ ಮದುವೆಯ ನಂತರ, ನಾನು ಎಲ್ಲ ಚಿಂತೆಗಳಿಂದ ಬಿಡುಗಡೆ ಪಡೆದು ಬಿಡುವೆ. ಇಬ್ಬರು ಹುಡುಗರ ವಿದ್ಯಾಭ್ಯಾಸ ಉಳಿದುಕೊಂಡಿದ್ದು ಅದು ನಡೆಯುತ್ತಿರುವುದು.

ಶ್ರೀ 'ದ' ಆಧ್ಯಾತ್ಮಿಕತೆಯಲ್ಲಿ ಒಳ್ಳೆಯ ಅಭಿರುಚಿಹೊಂದಿರುವರು. ಅವರು ಮಿಷನ್ ಬೆಳೆಸಲು ಕಿರಿಸ್ತಾನರನ್ನು ಮತ್ತು ಮುಸಲ್ಮಾನರನ್ನು ಮಿಷನ್‌ನಲ್ಲಿ ಸೇರಿಸಿಕೊಳ್ಳಬಹುದೇನೆಂದು

ನನ್ನನ್ನು ವಿಚಾರಿಸಿದ್ದರು. ಮತ್ತು ಮಿಷನ್ನಿನಲ್ಲಿ ಬರುವವರು ಮಾಂಸಾಹಾರ ಬಿಟ್ಟು ಬಿಡುವುದು ಆವಶ್ಯಕವೇನೆಂದೂ, ಒಂದು ಪಕ್ಷ ಇದು ಆವಶ್ಯಕವಾಗಿದ್ದರೆ ತಮ್ಮ ಒಬ್ಬ ಹರಿಜನ ಸ್ನೇಹಿತನನ್ನು ಮಾಂಸ ಬಿಡಿಸಿ ಮಿಷನ್ನಿನಲ್ಲಿ ಸೇರಿಸಿಕೊಳ್ಳಲೇ? ಎಂದು ಕೇಳಿರುವರು. ನಾನು ಅದರ ಉತ್ತರವನ್ನು ಕೊಟ್ಟಿದ್ದು, ಅದರ ಪ್ರತಿಯನ್ನು ಪ್ರಶಿಕ್ಷಕರ ಮಾರ್ಗದರ್ಶನಕ್ಕಾಗಿ ಕಳುಹಿಸುತ್ತಿರುವೆನು. ನೀವು ಇದರ ಒಂದು ಪ್ರತಿಯನ್ನು ಶ್ರೀ 'ಅ' ಬಳಿ, ಮತ್ತೊಂದನ್ನು 'ಸ' ಬಳಿ ಕಳುಹಿಸಿರಿ. ಇದರ ಪ್ರತಿಯನ್ನು ಪ್ರಶಿಕ್ಷಕರ ಹೊರತು ಬೇರೆಯಾರಿಗೂ ಕೊಡಕೂಡದೆಂದು ನನ್ನ ಅಪೇಕ್ಷೆ. ಶ್ರೀ 'ಭೀ' ಅದರ ಪ್ರತಿಯನ್ನು ಬೇಡಿದರು. ನಾನು ಬೇಡ ಎಂದೆನು. ಮತ್ತು ಬೇರೆ ಸತ್ಸಂಗಿಗಳು ಇದರ ಅರ್ಥ-ವಿವರಣೆ ಹೇಗೆ ಮಾಡುವರೊ, ಮತ್ತು ಇದನ್ನು ಹೇಗೆ ಮುಂದಿಡುವರೊ ತಿಳಿಯದು.

ನಿಮ್ಮ ನಿವಾಸ-ಸ್ಥಾನವು ಕೇಂದ್ರ ಮಂಡಲದ ಮೊದಲನೆಯ ವೃತ್ತದ ಮೇಲಿದೆ. ನೀವು ಅಲ್ಲಿಯ ಶಕ್ತಿಯೊಡನೆ ಒಂದುಗೂಡಿರುವಿರಿ. ಆದರೆ ಎರಡನೆಯ ವೃತ್ತದ ಮೇಲೆ ಹೋಗುವ ಪ್ರವೃತ್ತಿ ಕಂಡುಬಂದಲ್ಲಿ ಈಶ್ವರ ಕೃಪೆಯಿಂದ ಎರಡನೆಯ ವೃತ್ತದ ಮೇಲೆ ಕಳುಹಿಸಿಬಿಡುವೆ. ಮುಂದೆ ಹೋಗುವ ಪ್ರವೃತ್ತಿ ಬೆಳೆದಾಗ, ಸ್ವಲ್ಪ ಅಶಾಂತತೆ ಮತ್ತು ಸಿಡುಕುತನ ಬೆಳೆಯುತ್ತದೆ. ನೀವು ವೃತ್ತದ ಮೇಲೆ ಬರುವುದಕ್ಕೆ ಮುಂಚೆ, ಇದರ ಅನುಭವ ಹೊಂದಿರುವಿರಿ. ಶಿಷ್ಯನಲ್ಲಿ ಚಡಪಡಿಕೆ ಬಹಳ ಬೆಳೆದು ಗುರುವು ಅವನನ್ನು ಮುಂದಕ್ಕೆ ಕೊಂಡೊಯ್ಯದಿದ್ದಲ್ಲಿ ಗುರುವಿನಲ್ಲಿಯೂ ಕೂಡ ಎಷ್ಟು ಅಶಾಂತತೆ ಬೆಳೆಯತೊಡಗುವುದೆಂದರೆ, ಆತನು ಶಿಷ್ಯನನ್ನು ಎರಡನೆಯ ಮೆಟ್ಟಿಲ ಮೇಲೆ ತಲುಪಿಸದಿರಲು ಶಕ್ಯವಿಲ್ಲ. ಆದರೆ ಇದನ್ನು ತೋರಿಸುವ ಉದ್ದೇಶ, ನೀವು ಅಶಾಂತತೆಯ ಕಲ್ಪನೆಯನ್ನು ಕಟ್ಟಿ ಬೇಕೆಂದಾಗಲಿ, ಸಿಡುಕುತನ ಹುಟ್ಟಿಸಿಕೊಳ್ಳಬೇಕೆಂದಾಗಲಿ ಅಲ್ಲ. ಈ ದಿನಗಳಲ್ಲಿ ಋತು ಬದಲಾಗಿರುವುದರಿಂದ ನನಗೆ ಹೊಟ್ಟೆಯ ನೋವು ಬಹಳ ಹೆಚ್ಚಾಗಿದ್ದು ನೋವಿನ ಸ್ಥಿತಿಯಲ್ಲಿಯೇ ಪತ್ರವನ್ನು ಬರೆಯುತ್ತಿರುವೆನು. ನೋವನ್ನು ತಾಳಲಾರದಂತಾದಾಗ ಅಡ್ಡಾಗಿ ಬಿಡುವೆನು. ಮತ್ತು ಪುನಃ ಪತ್ರವನ್ನು ಬರೆಯಲಾರಂಭಿಸುವೆನು. ಆದುದರಿಂದ ಪ್ರಾಯಶಃ ಶಬ್ದಗಳ ಜೋಡಣೆಯನ್ನು ಸರಿಯಾಗಿ ಮಾಡಿರಲಿಕ್ಕಿಲ್ಲ. ಅರ್ಥವಂತೂ ಆಗಿಯೆ ಆಗುವುದು.

ಬಿಜಾಪೂರಕ್ಕೆ ಹೋಗಿದ್ದು ಒಳ್ಳೆಯದಾಯಿತು. ಡಾ.ಸಾಹೇಬರ ಪ್ರಭಾವದಿಂದ ಕೆಲವು ಸತ್ಸಂಗಿಗಳು ಬೆಳೆಯುವರು. ಆದರೆ ನಿಮಗೆ ಸ್ವಾಮೀಜಿಯ ದರ್ಶನವಾಗಲಿಲ್ಲ. ಇದು ಭಾಗ್ಯದ ಮಾತು. ಅಸಹಾಯಕ ಸ್ವಾಮೀಜಿಯಾದರೂ ಏನು ಮಾಡುವನು? ಅವರ ಶಿಷ್ಯರು ಅವರನ್ನು ನೊಣಗಳ ಹಾಗೆ ಮುತ್ತಿರುತ್ತಾರೆ. ಸಾರ್ವಜನಿಕರು ಹೇಗಿರುವರೊ, ಅವರಿಗೆ, ಅಂಥವರೇ ಸಂತರು ದೊರೆತು ಬಿಡುವರು. ಅವರ ಜೊತೆ ಜನರು ಬಹು ಸಂಖ್ಯೆಯಲ್ಲಿರುವುದಾದ ಕಾರಣ ಅವರ ಬೆಲೆ ಬೆಳೆದು ಹೋಗುವುದು. ಅಕ್ಬರನೆಂಬ ಕವಿಯು ಬಹಳ ಚೆನ್ನಾಗಿ ಹೇಳಿರುವನು. (ಉರ್ದು ಕವಿತೆ) "ಇಂದು ಗುಣಗ್ರಾಹಿಗಳ ಮನಸ್ಸಿನ ಬಣ್ಣವೇ ವಿಚಿತ್ರವಾಗಿದೆ, ಬುಲ್ ಬುಲ್ ಪಕ್ಷಿಗಳಿಗೆ ತಾವು ಗೂಬೆಯಾಗಲಿಲ್ಲವಲ್ಲ" ಎಂದು ವ್ಯಥೆಯುಂಟಾಗಿದೆ.

ಷಾಹಜಹಾನ್‌ಪೂರ್‌ದಲ್ಲಿ ಮಹಾಪೂರವು ಬಹಳ ಅಲ್ಪವಾಗಿತ್ತು. ಪಾಟ್ನಾ ಮತ್ತು ಲಖನೌದಲ್ಲಿ ಬಹಳ ಹೆಚ್ಚಿದ್ದಿತು.

ಮಾಸ್ಟರ ಸಾಹೇಬರು ತಮ್ಮ ಹೆಂಡತಿಯ ಜೊತೆಯಲ್ಲಿ ಒಂದೂವರೆ ತಿಂಗಳು ಇಲ್ಲಿದ್ದರು. ವೈದ್ಯರ ಚಿಕಿತ್ಸೆಯಿಂದ ಲಾಭವಾಯಿತು. ಆದರೆ ಮನೆತನದ ಅನಿವಾರ್ಯ ಕಾರಣಗಳಿಂದ ಲಖೀಮಪೂರಕ್ಕೆ ಹೋಗಬೇಕಾಯಿತು. ಹೆಂಗಸರನ್ನು ಮಮತೆಯು ಬಿಡುವುದಿಲ್ಲ. ಆದುದರಿಂದ ಆಧ್ಯಾತ್ಮಿಕತೆಯಲ್ಲಿ ಗಂಡಸರಿಗಿಂತ ಅವರಿಗೆ ಅಧಿಕಾರವು ಗರಿಮೆಯಿದೆ. ಮಾಸ್ಟರ ಸಾಹೇಬರು ಈ ದಿನಗಳಲ್ಲಿ ತಮ್ಮ ಮಗನ ಹತ್ತಿರ ಇರುತ್ತಿದ್ದು ಇನ್ನೂ ಕೆಲವು ದಿನ ಇಲ್ಲಿಯೆ ಇರುವರು. ಈಶ್ವರಾನುಗ್ರಹದಿಂದ ಮೀರಾ ಈಗ ಗುಣಮುಖಿಳಾಗುತ್ತಿರಬಹುದು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೧೧ ಷಾಹಜಹಾನ್‌ಪೂರ್
ನಂ. ಎಫ್-೫೯೮/ಎಸ್.ಆರ್.ಸಿ.ಎಮ್. ದಿ. ೨೭. ೧೧. ೧೯೬೧

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಎರಡೂ ಪತ್ರಗಳು ದೊರೆತವು. ನಾನು ೨೩ ನೆಯ ನವ್ವೆಂಬರ ೬೧ ರಂದು ಸೀತಾಪೂರಕ್ಕೆ ಹೋಗಿ, ಲಖನೌಗೆ ಹೋಗಿದ್ದೆ. ಅಲ್ಲಿಂದ ೨೬ ನೆಯ ನವ್ವೆಂಬರ ೬೧ ಕ್ಕೆ ಮರಳಿದೆ. ನವ್ವೆಂಬರ ೨೪ ಕ್ಕೆ ಬಂದಿದ್ದ ತಂತಿ ಸಮಾಚಾರ ದೊರಕಿತು. ಅದನ್ನು ಡಾ. ಕೆ. ಸಿ.ವಿಯವರು ಕಳುಹಿಸಿದ್ದರು. ಮೊನ್ನೆ ಮೊನ್ನೆ ಮದುವೆಯಾಗಿದ್ದ ಅವರ ಮಗಳು ಪದ್ಮಿನಿ ೨೧ ನೆಯ ನವ್ವೆಂಬರಿನ ರಾತ್ರಿ ವೈಕುಂಠವಾಸಿಯಾದಳು. ಈಶ್ವರನು ಆಕೆಯ ಆತ್ಮಕ್ಕೆ ಶಾಂತಿ ನೀಡಲಿ. ಈ ವಾರ್ತೆಯನ್ನು ಕೇಳಿ ತೀವ್ರ ಆಘಾತವಾಯಿತು. ನೀವೂ ಒಂದು ಶೋಕ ಸಂದೇಶ ಪತ್ರ ಕಳುಹಿಸಿಕೊಡಿರಿ.

ನಾನು ನಿಮ್ಮ ಪತ್ರಗಳ ಉತ್ತರವನ್ನು ಕೊಡುತ್ತಿರುವೆನು. ಮತ್ತು ಸರ್ನಾಡಜಿಯ ಪತ್ರದ ಉತ್ತರವನ್ನೂ ಸಹ. ಅದು ಈ ಪತ್ರದ ಒಂದು ಅಥವಾ ಎರಡು ದಿನದ ನಂತರ ಸಿಗುವುದು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೧೨ — ಷಾಹಜಹಾನ್‌ಪೂರ್
ನಂ. ಎಫ್-೬೦೨/ಎಸ್.ಆರ್.ಸಿ.ಎಮ್. — ೩೦.೧೧.೧೯೬೧

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಎರಡೂ ಪತ್ರಗಳು ತಲುಪಿದವು. ನಾನು ಒಂದು ರಾತ್ರಿಗಾಗಿ ಸೀತಾಪೂರಕ್ಕೆ ಹೋಗಿದ್ದೆ. ಮರುದಿನ ಪ್ರಕಾಶನ ಭಾವಮೈದುನನ ಮದುವೆಗೆ ಲಖನೌಕ್ಕೆ ಹೋಗಿದ್ದೆನು. ಡಾ. ಮಹೇಂದ್ರ ಅವರು ನಮ್ಮ ಸತ್ಸಂಗಿಗಳಾಗಿದ್ದು ಅತ್ಯುತ್ತಮ ನೇತ್ರ ತಜ್ಞರಾಗಿದ್ದಾರೆ. ನಾನು ಕಣ್ಮಣಿ ಮೀರಾಳ ಮೆಳ್ಳೆಯ ಬಗ್ಗೆ ಅವರಿಂದ ಸಲಹೆ ಪಡೆದೆ. ಅವರು ಹೇಳಿದ್ದೇನೆಂದರೆ ಮೊದಲು ಕಣ್ಣಿನ ವ್ಯಾಯಾಮ ಮಾಡಿಸುವುದು ಆವಶ್ಯಕವಿದೆ, ಇಲ್ಲದಿದ್ದರೆ ಶಸ್ತ್ರ ಚಿಕಿತ್ಸೆ ವ್ಯರ್ಥವಾಗಿ ಪುನಃ ಮೆಳ್ಳೆಯಾಗುವುದು. ತಾವು ಔಷಧಿಯಿಂದ ಒಂದು ತಿಂಗಳಲ್ಲಿ ಸರಿಪಡಿಸಬಹುದಾದರೂ, ಔಷಧಿಯ ಜೊತೆಯಲ್ಲಿ ವ್ಯಾಯಮ ಅಗತ್ಯ. ಶಸ್ತ್ರಚಿಕಿತ್ಸೆಗಳನ್ನು ಸಹ ಅವರು ಯಶಸ್ವಿಯಾಗಿ ಮಾಡಿರುವರು. ಅಲ್ಲಿ ನಿಮಗೆ ಒಂದು ಕಾಸು ಸಹ ಖರ್ಚಾಗುವುದಿಲ್ಲ. ಶ್ರೀ ಸುರೇಶಚಂದ್ರರು ಈಗ ಅಲ್ಲೇ ಸೀತಾಪೂರ ಕಾಲೇಜಿನಲ್ಲಿ ಪ್ರೊಫೆಸರ ಆಗಿರುವರು. ಅಲ್ಲಿ ನೀವು ಎಷ್ಟು ದಿನಗಳು ಬೇಕಾದರೂ ಇರಬಹುದು.

ಶ್ರೀ 'ಜ'ರ ಒಂದು ಪತ್ರ ಬಂದಿದೆ. ಅವರು ಬಹಳ ಪ್ರೇಮದ ಮನುಷ್ಯರಾಗಿ ಕಾಣುವರು. "ಇಂದು, ೨೫.೧೧.೧೯೬೧ ರಂದು ನಿಮ್ಮ ಪಾದಗಳ ಆಣೆ ತಿಂದು ನಾನು ನನ್ನ ಜೀವಿತವನ್ನು ನಿಮಗೆ ಅರ್ಪಣೆ ಮಾಡಿರುವೆನು. ಇಂದಿನಿಂದ ಈ ದೇಹ ಮತ್ತು ಆತ್ಮವು ನಿಮ್ಮದಾಗಿದೆ. ನೀವು ಬಯಸಿದ ಹಾಗೆ ಉಪಯೋಗ ಮಾಡಬಹುದು." ಎಂದು ಬರೆದಿದ್ದಾರೆ. ಅವರ ವರ್ಗಾವಣೆ ಧಾರವಾಡಕ್ಕೆ ಆಗುವುದಿದೆ. ನಾನು ಇಲ್ಲಿ ಬರುವವರ ಪೈಕಿ ಯಾರ ಹೆಸರುಗಳನ್ನು ಬರೆದಿದ್ದೆನೊ, ಆ ಹೆಸರುಗಳಲ್ಲಿ ಅವಶ್ಯ ಗೊಂದಲವಾಗಿದೆ. ನನ್ನ ಸ್ಮೃತಿ ಶಕ್ತಿಯ ಬಗ್ಗೆ ನನಗೆ ಒಂದು ಕಾಲದಲ್ಲಿ ಬಹಳ ಅಭಿಮಾನವಿತ್ತು. ಆ ಸ್ಮೃತಿಶಕ್ತಿಯು ಕ್ಲೋರೋಫಾರ್ಮಿನ ಪರಿಣಾಮದಿಂದ ಬಹಳ ದುರ್ಬಲವಾಗಿ ಹೋಗಿದೆ. ಹೆಸರುಗಳಂತೂ ನೆನಪಿನಲ್ಲಿ ಇರುವುದೇ ಇಲ್ಲ. ಆದರೆ ನನ್ನ ಹೆಸರನ್ನು ಮರೆಯುವದಿಲ್ಲ. ಇದು ಒಳ್ಳೆಯದೆ. ಇದಕ್ಕಾಗಿ ದೇವರಿಗೆ ಧನ್ಯವಾದಗಳು.

'ಸ'ನ ಪತ್ರ ಬಂದಿತ್ತು. ಅದನ್ನು ಇದ್ದ ಹಾಗೆಯೇ ನನ್ನ ಉತ್ತರದ ಜೊತೆಯಲ್ಲಿ (ನಿಮಗೆ) ಕಳುಹಿಸಲಾಗುತ್ತಿದೆ. ಏಕೆಂದರೆ 'ಸ' ನಿಮಗೆ ಸಿಕ್ಕಾಗ, ನೀವು ಒಪ್ಪುವ ಹಾಗೆ ತಿಳಿಸಬಹುದು. ಅವರ ಪತ್ರ ದೊರೆತಾಗ, ಮೊದಲನೆಯ ವಿಚಾರ ನನಗೂ ಸಹ ಇದೇ ಬಂದಿತ್ತು. ಏನೆಂದರೆ 'ಸ' ಸಾಯಿಬಾಬಾನ ಕಡೆ ವಾಲಿ ಹೋಗುವಂತಾಗಕೂಡದು. ವಾಸ್ತವವಾಗಿ ಹೇಳಬೇಕಾದರೆ ಅವರು 'ಎ'ಯ ಮನೆಯಲ್ಲಿರುವುದು ನನಗೆ ಇಷ್ಟವಾಗಲಿಲ್ಲ. ಅಲ್ಲಿ ಅವರು ಮಿಷನ್ನಿನ ಕೆಲಸವನ್ನು ಸ್ವಾತಂತ್ರ್ಯವಹಿಸಿ ಮಾಡಲಾರರು. ಆವರ ಮನೆ

ಸಿಗದಿದ್ದಾಗ ನಿರ್ವಾಹವಿದ್ದಿಲ್ಲ. ಈಗ ಸರಿಯಾದ ಮನೆ ಅವರಿಗೆ ದೊರೆತಾಗ ಬದಲಾಯಿಸಬೇಕು. 'ವಿ'ಯು ಮಿಷನ್ನಿನಲ್ಲಿ ಪುನಃ ಸೇರುವಂತೆ ಮಾಡವುದರಲ್ಲಿಯೆ 'ಸ'ನ ಬುದ್ಧಿವಂತಿಕೆಯಿದೆ. ಇವರು ಮಿಷನ್ನಿನ ಬೋಧನೆಗಳನ್ನೂ ಜೀವನದ ಧ್ಯೇಯವನ್ನು ಪಡೆದು ಕೊಳ್ಳುವ ವಿಧಾನವನ್ನೂ ಪುನಃ ಪುನಃ 'ವಿ'ಯ ಮುಂದಿಡಬೇಕು.

ಬಂಧು, ನಾನು ಸಿದ್ಧಿ-ಪವಾಡಗಳನ್ನು ಎಲ್ಲಿಂದ ತರಲಿ? ಆ ಕಡೆ ಲಕ್ಷ್ಯವೇ ಉಳಿದುಕೊಂಡಿಲ್ಲ. ನೀವು ಬಯಸಿದಾಗ, ಯಾವುದಾದರೂ ಅಂಥ ಮಾತು ಆಗಿಬಿಡುತ್ತದೆ. ನನ್ನ ಗುರುಮಹಾರಾಜರಂತೂ ನನ್ನಲ್ಲಿ ಸಿದ್ಧಿ ಪವಾಡಗಳನ್ನು ಮಾಡುವ ಶಕ್ತಿಯಿದೆ ಎಂದೇ ಹೇಳಿರುವರು, ಅವರ ಮಾತುಗಳ ಮೇಲೆ ನನಗೆ ಸಂಪೂರ್ಣ ವಿಶ್ವಾಸವಿದೆ. ಆದರೆ ಆ ಕಡೆ ಮನಸ್ಸೇ ಇಲ್ಲ, ಎರಡನೆಯದಾಗಿ ಯಾವಾಗಲೂ ಭೋಧನೆಗಳೇ ಜನರನ್ನು ಆಕರ್ಷಿಸಬಲ್ಲವು. ಏಸುಕ್ರಿಸ್ತರು ಜೀವನಾವಧಿ ಸಿದ್ಧಿ ಚಮತ್ಕಾರಗಳನ್ನು ತೋರಿಸುತ್ತಲಿದ್ದರು, ಆದರೆ ತನ್ನ ಜೀವಮಾನದಲ್ಲಿ ಒಟ್ಟಿಗೆ ೧೨ ಜನ ಶಿಷ್ಯರನ್ನು ಮಾಡಲು ಶಕ್ತರಾದರು. ಅವರಲ್ಲಿ ಒಬ್ಬನು ಎಂಥ ಸ್ವಾಮಿ ನಿಷ್ಠ ಹೊರಟನೆಂದರೆ, ಆತನು ಅವರನ್ನು ಶಿಲುಬೆಗೆ ಏರಿಸಲು ಕಾರಣನಾದನು. ಆವರ ಜೀವಿತದ ನಂತರ ಅವರ ಬೋಧನೆಗಳು ಸಮಸ್ತ ಪ್ರಪಂಚವನ್ನು ಆಕರ್ಷಿಸಿದವು. ಆ ಕಾಲದಲ್ಲಿ ಹಿಂದೂಗಳು ಸಮುದ್ರಯಾನವನ್ನು ಧರ್ಮವಿರುದ್ಧವೆಂದು ತಿಳಿಯುತ್ತಿದ್ದರು. ಇದು ಏಸುವಿಗೆ ಅಗತ್ಯವಾಗಿ ಸಹಾಯವಾಯಿತು.

ಒಂದು ಮಾತಂತೂ ಹೇಳಿಯೇ ಬಿಡುವೆನು. ಏನೆಂದರೆ, ನಾನು ಗುರುಮಹಾರಾಜರ ಕೃಪೆ ಮತ್ತು ಅನುಗ್ರಹದಿಂದ ಯಾವ ಸಿದ್ಧಿ ಚಮತ್ಕಾರಗಳನ್ನು ಮಾಡಿರುವೆನೋ, ಅದನ್ನು ವರ್ತಮಾನಕಾಲದಲ್ಲಿ ಬೇರೆ ಯಾರೂ ಮಾಡಿಲ್ಲ. ಆದರೆ ಅದನ್ನು ಯಾರು ತಿಳಿಯಬಲ್ಲರು? (ಯಾವನಿಗೆ ಕಣ್ಣಿವೆಯೋ ಅವನು ಮಾತ್ರ ತಿಳಿಯಬಲ್ಲನು.) ಬಂಧು, ನಿಸರ್ಗದ ಕಾರ್ಯಕ್ಕಾಗಿ ನಾನು ಹೀಗೆ ಮಾಡಲು ವಿವಶನಾಗುತ್ತೇನೆ. ಸಾಯಿಬಾಬಾನ ಬೋಧನೆಯು ನಿಸರ್ಗದ ಕಾರ್ಯದಲ್ಲಿ ಅಡ್ಡಿಯಾದರೆ ಮೂರು ನಿಮಿಷಗಳಲ್ಲಿ ಸಿದ್ಧಿ-ಚಮತ್ಕಾರಗಳನ್ನು ಮಾಡುವ ಆತನ ಶಕ್ತಿಯೆಲ್ಲ ಇಲ್ಲದಾಗುವುದೆಂಬುದನ್ನು ನಂಬಿರಿ. ಅಲ್ಲದೆ ಇದು ಎಷ್ಟು ಸುಲಭವಾದುದೆಂದರೆ, ನೀವು ಸಹ ಒಂದು ಗಳಿಗೆಯಲ್ಲಿ ಮಾಡಬಲ್ಲಿರಿ. ನಾನು ಕೂಡ ಆತನ ದರ್ಶನ ಮಾಡಬಯಸುತ್ತೇನೆ. ಆದರೆ ಈ ಪುಟ್ಟಪರ್ತಿಯು ನನ್ನ ನಿಲ್ದಾಣಗಳಿಂದ ಎಷ್ಟು ದೂರ ಉಳಿದುಕೊಂಡಿರುವುದೊ ದೇವರೇ ಬಲ್ಲ. ಸರಿ, ಇದೆಲ್ಲ ಸಮಯದ ಮಾತು.

ಸತ್ಸಂಗಿ ಬಾಂಧವರು, ನಾನು ದಕ್ಷಿಣಭಾರತದ ಪ್ರವಾಸವನ್ನು ಅವಶ್ಯವಾಗಿ ಮಾಡಬೇಕೆಂದು ನನ್ನನ್ನು ಪ್ರಾರ್ಥಿಸಿರುವರು. ನಾನು ಅವರ ಸಮಾಧಾನಕ್ಕಾಗಿ ವಸಂತಪಂಚಮಿಯ ಉತ್ಸವದ ನಂತರ ಆಲೋಚಿಸಿ ಬರೆಯುವದಾಗಿ ತಿಳಿಸಿರುವೆ. ಶ್ರೀ 'ದ' ಬಗ್ಗೆ ಡಾ. ಕುಲ್ಕರ್ಣಿಯ ಅಭಿಪ್ರಾಯವು ಸರಿಯೆನಿಸುತ್ತದೆ. ಆದರೆ ಹೀಗೆ ಮಾಡುತ್ತ ಮಾಡುತ್ತ ಹೃದಯವಲ್ಲಿ ಅಂಟಿಕೊಂಡು ಬಿಟ್ಟರೆ ದಾರಿಯ ಮೇಲೆ ಬರುವರು.

ನನ್ನ ತಿಳುವಳಿಕೆಯ ಪ್ರಕಾರ 'ರಿಯಾಲಿಟಿ ಎಟ್ ಡಾನದ ಹೆಸರು 'ಸತ್ಯೋದಯವೆಂದು ಇಡುವುದೇ ಯೋಗ್ಯವಾದುದು, ಒಂದು ಭಾಷೆಯಲ್ಲಿ ಉತ್ತಮವಾಗಿ

ಅನುವಾದಗೊಂಡಿರುವ ಪುಸ್ತಕದ ಹೆಸರನ್ನೇ ಬೇರೆ ಬೇರೆ ಭಾಷೆಗಳ ಅನುವಾದಗಳಲ್ಲಿ ಉಪಯೋಗಿಸಬಹುದು. ''ಮೈ ವಿಜನ್''ದ ಅನುವಾದವು 'ಭವಿಷ್ಯವಾಣಿ' ಚೆನ್ನಾಗಿ ಕಾಣುತ್ತದೆ. ಮತ್ತು ಉದ್ದೇಶವೂ ಇದೇ. ಒಬ್ಬ ಸತ್ಸಂಗಿಯು ಅದರ ಅನುವಾದವನ್ನು 'ಅಂತರ್‌ದೃಷ್ಟಿ'ಯೆಂದು ಸಹ ಸೂಚಿಸಿರುವನು. ಆದರೆ ಇದು ಅಷ್ಟು ಒಳ್ಳೆಯ ಅರ್ಥಕೊಡುವುದಿಲ್ಲ. ನೀವು 'ಸ' ಹತ್ತಿರ ಚರ್ಚಿಸಿ ಉತ್ತಮವೆನಿಸುವ ಅನುವಾದವನ್ನು ಇಟ್ಟುಕೊಳ್ಳಿರಿ. ನಾನು 'ಸ' ಮಾಡಿರುವ ಅನುವಾದವನ್ನು 'ವಿ'ಯ ಅನುವಾದಕ್ಕಿಂತ ಮಿಗಿಲಾದುದೆಂದು ಭಾವಿಸುತ್ತೇನೆ. ನೀವು ಎರಡೂ ಅನುವಾದಗಳನ್ನು ನೋಡಿಕೊಳ್ಳಿರಿ.

'ವಿ'ಯಿಂದ ಅನುಮತಿಯ ಆವಶ್ಯಕತೆಯೆನಿಸುವುದಿಲ್ಲ. ಏಕೆಂದರೆ ಅವರು ನನ್ನ ಅನುಮತಿಯಿಂದ ಕನ್ನಡ ಭಾಷಾನುವಾದವನ್ನು ತಮ್ಮ 'ಪ್ರದೀಪ'ದಲ್ಲಿ ಮುದ್ರಿಸಿರುವರು. ಮತ್ತು ಈ ಅನುವಾದವನ್ನು 'ಸ'ಮಾಡಿ ಕಳಿಸುತ್ತಿದ್ದರು. ಸ್ವತಃ ನಾನೇ ಅನುವಾದ ಮಾಡಲು ಅನುಮತಿಯನ್ನು ನೀಡಿದ್ದೆ. ಈಗ 'ಪ್ರದೀಪ' ಪತ್ರಿಕೆಯ ಸಂಪಾದಕರು ಬಹಳ ಸಂತೋಷದಿಂದ ತಮ್ಮ ಅನುವಾದವನ್ನು ಮುದ್ರಿಸುತ್ತಿದ್ದರೆಂಬ ರೀತಿಯಲ್ಲಿ 'ಸ' ಆತನಿಗೆ ಧನ್ಯವಾದಗಳನ್ನು ಅರ್ಪಿಸಬಹುದು. ಈ ವಿಷಯವನ್ನು ನಿಮ್ಮಲ್ಲಿಯೆ ಚರ್ಚಿಸಿಕೊಳ್ಳಿರಿ. ಅದರ ನಂತರ ಏನು ನಿರ್ಣಯವಾಗುವುದೊ, ಇಲ್ಲಿಯೂ ಸಹ ಆ ಬಗ್ಗೆ ಚರ್ಚೆಯಾಗುವುದು.

ನಿಮ್ಮ ಸ್ಥಿತಿಯ ಬಗ್ಗೆ, ನಿಮ್ಮ ಅನಿಸಿಕೆ ಸರಿಯಾದದ್ದಿದೆ. ಶ್ರೀ 'ವಾ' ನಿರಂತರ ಸ್ಮರಣೆಯ ಬಗ್ಗೆ ಕೇಳಿರುವರು. ನಿಮ್ಮಿಂದ ಈ ವಿಷಯವನ್ನು ತಿಳಿದು ಕೊಳ್ಳಬೇಕೆಂದೇ ನಾನು ಅವರಿಗೆ ಬರೆಯುವುದು ಸಮಂಜಸವೆಂದು ತಿಳಿದೆ.

ನೀವು ನಿಮ್ಮ ದೃಷ್ಟಿಶಕ್ತಿಯನ್ನು ಬೆಳೆಸಲು 'ಮುಂಡಿ'ಯ ಕಷಾಯವನ್ನು ಜೇನುತುಪ್ಪದ ಜೊತೆಗೆ ಉಪಯೋಗಿಸಿದರೆ ಬಹಳ ಲಾಭವಾಗುವುದು. ಇದು ಹೈದ್ರಾಬಾದಿನಲ್ಲಿ ಸಿಗುವುದು. ಪ್ರಥಮ ಶ್ರೇಣಿಯದು ಮೊದಲನೆಯ ಶೀಷೆ ಸಿಕ್ಕರೆ ಅರ್ಧ ಚಟಾಕಿನಷ್ಟು ಒಂದು ತೊಲೆ ಶುದ್ಧ ಜೇನುತುಪ್ಪದ ಜೊತೆಯಲ್ಲಿ ಬೆಳಗುಮುಂಜಾನೆ ಸಾಕಾಗುವುದು. ಈ ಕಷಾಯ ಸ್ವಲ್ಪ ಶೀತವಾದುದು. ಆದುದರಿಂದ ಇಲ್ಲಿ ಬೇಸಿಗೆಯಲ್ಲಿ ಉಪಯೋಗಿಸಲಾಗುತ್ತದೆ. ಇದು ಹೃದಯ ಮತ್ತು ಮೆದುಳಿಗೂ ಕೂಡ ತಂಪು ನೀಡುವುದು.

ಡಾ. ವರದಾಚಾರಿಯವರ ಪತ್ರ ಇದೇ ಈಗ ತಲುಪಿತು. ಆತನ ಮಗಳು ಪದ್ಮಿನಿಯು ಮರಣವು ಚೇಳು ಕಡಿತದಿಂದ ಆಯಿತು. ಮನೆಯಲ್ಲಿ ಪ್ರಲಾಪವು ತಾಂಡವಾಡುತ್ತಿದೆ. ಯಾರಿಗೂ ಸ್ಮೈರಣೆಯಾಗಲೊಲ್ಲದು. ಈಶ್ವರನು ಎಲ್ಲರಿಗೂ ಸ್ಮೈರಣೆಯನ್ನು ದಯಪಾಲಿಸಲಿ. ಇದು ನಿಜವಾಗಿಯೂ ಒಂದು ದೊಡ್ಡ ಆಘಾತದ ಮಾತು. ನಾನು ನಿಮಗೆ ಪೋಸ್ಟ್‌ಕಾರ್ಡಿನಿಂದ ಇವರ ಸಮಾಚಾರ ತಲುಪಿಸಿದ್ದೆ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆◆◆

"ಓಂ ತತ್‌ಸತ್"

ನಂ.೧೧೩
ನಂ. ಜಿ-೫/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ. ೪.೧.೧೯೬೨.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಎಲ್ಲ ಪತ್ರಗಳು ತಲುಪಿದವು. ಆದರೆ ನೀವು ಶಸ್ತ್ರ ಚಿಕಿತ್ಸೆಗೊಳಗಾಗಿ ಪ್ರಾಯಶಃ ಪತ್ರವನ್ನೋದಲು ಶಕ್ಯವಾಗದೆ ಓದುವ ಕಾತರತೆ ಮಾತ್ರ ಬೆಳೆಯುವುದೆಂದು ಭಾವಿಸಿ ನಾನು ಉತ್ತರ ಕೊಡಲಿಲ್ಲ. ಶ್ರೀ'ದ' ಅವರ ಆರೋಗ್ಯ ಬಹಳ ಕೆಟ್ಟಿದೆ. ಮತ್ತು ಆದರ ಕಾರಣದಿಂದ ಬಹಳ ಕಳವಳವಿರುತ್ತದೆ ಎಂದು ಅವರು ಬರೆದಿದ್ದಾರೆ. ನಾನು ಕೂಡ ಹೀಗೆ ಬರೆದೆ: ನನ್ನ ಆರೋಗ್ಯವೂ ಬಹಳ ಕೆಟ್ಟಿದೆ. ಆದರೆ ನಿಮ್ಮೆಲ್ಲರಿಗೆ ನನ್ನ ಆರೋಗ್ಯದ ಬಗ್ಗೆ ಕಾಳಜಿ ಇರುವುದಾದ್ದರಿಂದ ನನಗೆ ಕಳವಳವಿರುವುದಿಲ್ಲ. ಅವರು ತಮ್ಮನ್ನು ತಾವು ಸಮರ್ಪಿಸಿ ಕೊಂಡಿರುವುದಾಗಿ ಬರೆದಿದ್ದರು. ಆದುದರಿಂದ ನಾನು ಹಾಗೆ ಬರೆದೆ. ಅದರ ಅರ್ಥವನ್ನು ಅವರು ತಿಳಿದಿರಲಿಕ್ಕಿಲ್ಲ. ಈ ವಾಕ್ಯವು ಅರ್ಥ ಪೂರ್ಣವಾಗಿದೆ. ಶ್ರಿ 'ಚ' ಇಲ್ಲಿಯವರೆಗೆ ಬರಲಿಲ್ಲ ಪ್ರಾಯಶಃ ಅವರು ಮರಳಿ ಹೋಗಿರಬಹುದು.

ಕಣ್ಣಿನ ವ್ಯಾಯಾಮ ಅವಶ್ಯವಾಗಿದೆಯೆಂದು ನಾನು ಡಾಕ್ಟರರನ್ನು ವಿಚಾರಿಸಿಯೇ ಬರೆದಿದ್ದೆ. ಅದರ ನಂತರ ಶಸ್ತ್ರ ಚಿಕಿತ್ಸೆ. ಅಲ್ಲಿಯ ಡಾಕ್ಟರರು ನಿಮಗೆ ಇದನ್ನು ಹೇಳಿರುವರೊ ಇಲ್ಲವೊ ತಿಳಿಯದು. ಮೀರಾಬಾಯಿ ಇನ್ನೂ ಮಗು. ಕಣ್ಣಿನ ವ್ಯಾಯಾಮವನ್ನು ಮಾಡಲು ಸಾಧ್ಯವಾಗುತ್ತಿದ್ದರೆ, ಈಗಲೇ ಕೇವಲ ಅದರಿಂದಲೇ ಸರಿಹೋಗಬಹುದು.

ನೀವು 'ಸ'ಗೆ ತಿಳಿಸಿ ಹೇಳಿದುದು ಒಳ್ಳೆಯದಾಯಿತು. ನೀವು ತಿಳಿಸಿದುದರ ಪರಿಣಾಮವು ಕೂಡ ಆಗಿದೆಯೆಂದು ಅವರ ಪತ್ರದಿಂದ ಸಿದ್ಧವಾಗುತ್ತದೆ. ಅವರು ಸಾಕ್ಷಾತ್ಕಾರದ ಸ್ಥಿತಿ, ಮತ್ತು ಸಹಜಮಾರ್ಗದ ಪದ್ಧತಿ ಮೇಲೆ, ಕನ್ನಡದಲ್ಲಿ ಯಾವುದೊ ಪತ್ರಿಕೆಯಲ್ಲಿ ಲೇಖನ ಕೊಡಬೇಕೆಂದು ಬಯಸಿ ನನಗೆ ಇಂಗ್ಲಿಷಿನಲ್ಲಿ ಬರೆದು ಕಳಿಸಲು ಹೇಳಿರುವರು. ನನ್ನ ಇಂಗ್ಲಿಷ್ ಜ್ಞಾನವು ಅತಿ ಅಲ್ಪ. ಗುರುಮಹಾರಾಜರು ನನ್ನ ಮರ್ಯಾದೆಯನ್ನುಳಿಸುವಷ್ಟೇನೊ ಅವಶ್ಯವಾಗಿ ಉಂಟು. ಆದುದರಿಂದ ಅವರು ಹೇಳಿದುದನ್ನು ಮಾಡಲೇ ಬೇಕಾಯಿತು. ನಾನು ಅವರಿಗೆ ಬರೆದು ಕಳುಹಿಸಿದ್ದೇನೆ. ಅದರ ಪ್ರತಿಯನ್ನು ನಿಮ್ಮ ಅವಗಾಹನೆಗಾಗಿ ಕಳಿಸುತ್ತಿರುವೆನು. ಓದಿ ನಿಮ್ಮ ಕಡತದಲ್ಲಿ ಇಟ್ಟುಕೊಳ್ಳಿರಿ. ಪ್ರಾಯಶಃ ನಿಮ್ಮ ಭಾಷಣಕ್ಕೂ ಕೊಂಚ ವಸ್ತು ಸಿಗಬಹುದು. ಸ್ವಲ್ಪ ಅವಲೋಕಿಸಿ ನಿಷ್ಪಕ್ಷಪಾತವಾಗಿ ನಿಮ್ಮ ಅಭಿಪ್ರಾಯವನ್ನು ತಿಳಿಸಿರಿ. ನಿಮ್ಮ ಅಭಿಪ್ರಾಯದಲ್ಲಿ ಅದು ಸರಿಯಾಗಿದ್ದರೆ. ಅದನ್ನು, ಯಾರಿಗೆ ಬೇಕಾದರೂ ನೀವು ತೋರಿಸಬಹುದು.

**ಬಹಳ ಸಂತೋಷದ ವಿಷಯವೇನೆಂದರೆ, ನೀವು ಮೊದಲನೆಯ ಜನವರಿ ೬೨ ರಂದು ರಾತ್ರಿಯ ಸುಮಾರು ೧೧ ಘಂಟೆಗೆ ಗುರುಮಹಾರಾಜರ ಕೃಪೆಯಿಂದ ಎರಡನೆಯ ವೃತ್ತದ ಮೇಲೆ ತಲುಪಿ ಬಿಟ್ಟಿರುವಿರಿ. ಎರಡನೆಯ ವೃತ್ತದ ಮೇಲೆ ಹೋಗಲು ನಿಮ್ಮಲ್ಲಿ ಒಲವು ಉಂಟಾಗತೊಡಗಿತ್ತು. ಅಭಿನಂದನೆಗಳು.**

ಈ ವರ್ಷ ಬಸಂತ ಪಂಚಮಿಯ ಉತ್ಸವವು , ೯ ಫೆಬ್ರುವರಿ ೬೨ ರಂದು ಇದೆ. ಮುದ್ರಿತ ಫಾರ್ಮಗಳನ್ನು ಆಮೇಲೆ ಕಳಿಸಲಾಗುವವು. 'ಆ' ಬಳಿ ಸುಮಾರು ಒಂದು ನೂರು ಸಾಕಾಗಬಹುದು. ನಿಮ್ಮ ಶುಭಾಶಯದ ಪ್ರಭಾವದಿಂದ ಕಣ್ಮಣಿ ಛಾಯಾಳ ಮದುವೆ ನಿಶ್ಚಯವಾಗಿಬಿಟ್ಟಿದೆ. ದಿನಾಂಕವು ಇನ್ನೂ ನಿರ್ಣಯವಾಗಿಲ್ಲ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೧೪<br>
ನಂ. ಜಿ-೧೮/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್<br>
ದಿ. ೭.೧೧.೧೯೬೨.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಬಸಂತ ಪಂಚಮಿಯು ಈ ವರ್ಷ ೯ ಫೆಬ್ರುವರಿ ೬೨ ಕ್ಕೆ ಇದೆ. ಉತ್ಸವವು ೮ ಫೆಬ್ರುವರಿ ೬೨ ರ ಬೆಳಗ್ಗೆ ೭.೩೦ ರಿಂದ ೧೦ ಫೆಬ್ರುವರಿ ೬೨ ರ ಬೆಳಗಿನ ೭.೩೦ ರವರೆಗೆ ಇರುವುದು. ಭಾಗವಹಿಸಲು ಶಕ್ತರಾಗದ ಬಾಂಧವರು ನಿಮ್ಮ ಬಳಿ ನಿಶ್ಚಿತವೇಳೆಯಲ್ಲಿ ಕುಳಿತು ಕೊಳ್ಳಲಿ. ನಾನು ಬುಕ್ ಪೋಸ್ಟಿನಿಂದ ೨೫ ಆಹ್ವಾನ ಪತ್ರಿಕೆಗಳನ್ನು ಕಳಿಸುತ್ತಿರುವೆನು. ನೀವು ಕೇವಲ ಬಳ್ಳಾರಿ ಮತ್ತು ಹೈದ್ರಾಬಾದಿನ ಸತ್ಸಂಗಿಗಳಿಗೆ ಕೊಡಿರಿ. ಇದಲ್ಲದೆ ನಾನು ಒಂದು ನೂರನ್ನು 'ಆ'ನ ಬಳಿ ಕಳುಹಿಸಿರುವೆನು. ಆವರು ಎಲ್ಲ ಸ್ಥಳಗಳಿಗೆ ಕೊಡುವರು. 'ಸ' ಬಳಿ ಅವರು ಸ್ವತಃ ಮತ್ತು 'ಜ' ಬಳಿ ನಾನು ಕಳಿಸಿಕೊಡುವೆ. ಮುಂಜಾಗ್ರತೆಯಾಗಿ ನಾನು 'ಏ' ಬಳಿ ಕೂಡ ಕಳಿಸಿ ಕೊಡುವೆನು. ಶ್ರೀ 'ವಾ'ಗೆ ನೀವು ಕಳಿಸಿರಿ. ಮತ್ತು 'ರಾ'ಗೆ ಮತ್ತು ನಿಮ್ಮ ತಂದೆಗೂ ಸಹ ನೀವೇ ಕಳುಹಿಸಿರಿ. ಯಾರಿಗೆ ಕೊಡುವುದು ಸರಿಯೆಂದು ತಿಳಿಯುವಿರೊ ಅವರಿಗೆ ನೀವು ಕೊಡಬಹುದು. ಅವರು ಸತ್ಸಂಗಿಯಾಗಿರಲಿ, ಇಲ್ಲದಿರಲಿ. ಇಲ್ಲಿ ಚಳಿಯು ವಿಪರೀತವಾಗಿತ್ತು. ಕಾನಪೂರ ಮತ್ತು ಅಲಹಾಬಾದಿನಲ್ಲಿ ಉಷ್ಣಾಂಶವು ಮಂಜುಗಟ್ಟುವ ಬಿಂದುವಿಗಿಂತ ಕೆಳಗೆ ಹೋಗುತ್ತಿತ್ತು. ಈಗ ಆ ತೀಕ್ಷ್ಣತೆ ಇಲ್ಲವಾದರೂ ಚಳಿಯು ಬಹಳವಿದೆ. ಡಾ. ಕೆ.ಸಿ.ವಿ. ಯವರು ೧೭ ಜನವರಿಯಂದು

ಜಯಪುರಕ್ಕೆ ಹೋಗುತ್ತಿರುವರು. ಮತ್ತು ಒಂದು ದಿನಕ್ಕಾಗಿ ಇಲ್ಲಿಯೂ ಬರುವರು. ಅನಿವಾರ್ಯವಿಲ್ಲದಿದ್ದರೆ ಚಳಿಗಾಲದಲ್ಲಿ ಪ್ರವಾಸ ಮಾಡಬೇಡಿರೆಂದು ನಾನು ಅವರಿಗೆ ಪತ್ರ ಬರೆದಿರುವೆನು. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೧೫
ನಂ. ಜಿ-೨೮/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ. ೮. ೧. ೧೯೬೨.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನನ್ನ ಪ್ರಾರ್ಥನೆಯನ್ನು 'ಅವನು' ಸ್ವೀಕರಿಸಿದ್ದಕ್ಕಾಗಿ ಈಶ್ವರನಿಗೆ ಧನ್ಯವಾದಗಳು. ನೀವು ಇಲ್ಲಿಯವರೆಗೆ ಗಂಡುಸಂತಾನದಿಂದ ಲಾಭಾನ್ವಿತರಾಗಲಿಲ್ಲವೆಂದು ನಾನು ಕಳವಳಗೊಂಡಿದ್ದೆ. ಮಗುವು ದೀರ್ಘಾಯುಷಿಯಾಗಲಿ. ತಾಯಿ ಹಾಗೂ ಮಗು ಕ್ಷೇಮವಾಗಿರಲಿ. ಈಶ್ವರನು ಅನುಗ್ರಹಿಸಲಿ.

ನಾನು ನಿನ್ನೆಯೇ ಒಂದು ಪತ್ರವನ್ನು ಹಾಗೂ ೨೫ ನಿಮಂತ್ರಣ ಪತ್ರಗಳನ್ನು ಬುಕ್‌ಪೋಸ್ಟನಿಂದ ಹೈದ್ರಾಬಾದ, ಬಳ್ಳಾರಿ ಅವರಿಗೆ ಮತ್ತು 'ವಾ'ಗೆ ಕಳುಹಿಸಲು ನಿಮಗೆ ಕಳಿಸಿರುವೆನು. ಸಿಕ್ಕಿರಬಹುದು. ಉತ್ಸವವು ದಿನಾಂಕ ೮ ಫೆಬ್ರುವರಿಯಿಂದ ೧೦ ಫೆಬ್ರುವರಿ ೬೨ ವರೆಗೆ ಇರುವುದು. 'ಕು' ಕೂಡ ಬರುತ್ತಿರುವರು. ಅವರ ಹೆಂಡತಿಯು ಅನಾರೋಗ್ಯದಿಂದ ಇರುವಳು, ಈಗ ಕೊಂಚ ಸುಧಾರಿಸುತ್ತಿರುವಳು, ನಾನು ಒಂದು ನೂರು ಪ್ರತಿಗಳನ್ನು ನಿಮ್ಮ ಬ್ರಾಂಚಿನಲ್ಲಿ ಎಲ್ಲ ಕಡೆಗೂ ತಲುಪಿಸಲು 'ಅ' ಗೆ ಕಳುಹಿಸಿರುವೆನು. ಏನಾದರೂ ಅವಶ್ಯವಾದ ಸೂಚನೆಯನ್ನು ನೀವು ಕೊಡಲು ಇಚ್ಛಿಸಿದರೆ ಅವರಿಗೆ ಕಳುಹಿಸಬಹುದು. ಶ್ರೀ 'ಸ' ಗಾಗಿ ಲೇಖನವನ್ನು ಕಳಿಹಿಸಿರುವ ಪತ್ರವೂ ಸಹ ನಿಮಗೆ ತಲುಪಿರಬಹುದು. ತನಗೆ ತಮ್ಮನು ಹುಟ್ಟಿದ ವಾರ್ತೆಯನ್ನು ಕೇಳಿ ಗುಲಾಬಿಗೆ ಬಹಳ ಸಂತೋಷವಾಗಿರಬಹುದು. ಅವಳಿಗೆ ಸಿಹಿ ತಿನಿಸನ್ನು ತಿನ್ನಿಸಬೇಕು. ಮೀರಾಳಂತೂ ಇನ್ನೂ ಮಗು. ಈಶ್ವರನು ಎಲ್ಲರನ್ನು ಸಂತೋಷದಿಂದ ಇಡಲಿ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೧೬
ನಂ. ಜಿ-೯೫/ಎಸ್.ಆರ್.ಸಿ.ಎಮ್.

ಶಾಹಜಹಾನ್‌ಪೂರ್
ದಿ. ೨೩. ೧. ೧೯೬೨.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ದಿನಾಂಕ ೧೫ ಜನವರಿ ೬೨ ರಂದು ಬರೆದ ಪ್ರೀತಿಯ ಪತ್ರವು ತಲುಪಿತು. ಕಣ್ಮಣಿ ಛಾಯಾಳ ಮದುವೆಯ ದಿನಾಂಕ ೮ ಮಾರ್ಚ್ ೬೨ ನಿಶ್ಚಿತವಾಗಿದೆ. ಈಗ ಇಡೀ ಸಮಯ, ಕೆಲಸ ಕಾರ್ಯಗಳಿಂದಾಗಿ ವಿಶ್ರಾಂತಿಯಿಲ್ಲದಂತಾಗಿದೆ. ಈ ಮದುವೆಯ ದೆಸೆಯಿಂದ ಸ್ವಲ್ಪ ಅಳಕುಗೊಂಡವನಂತಾಗುತ್ತೇನೆ. ಕಾರಣವೇನಂದರೆ, ಹುಡುಗನ ತಂದೆ ಸ್ವಲ್ಪ ಇಂಗ್ಲೀಷ ಮಾದರಿಯ ಮನುಷ್ಯರು. ಸಮಯದ ಕಟ್ಟು ಪಾಡು, ಮತ್ತು ಅದೇ ಪ್ರಕಾರ ಆದರೋಪಚಾರವನ್ನು ಬಯಸುವರು. ಆದಾಗ್ಯೂ ಅವರು ಸ್ವತಃ ವಿವೇಚನೆಯುಳ್ಳ ವ್ಯಕ್ತಿ. ಅಂತೂ ಆತನ ದ್ವಾರಕ್ಕೆ ಬಂದಾಕ್ಷಣ ಈ ಮಾತು ಉಳಿಯಲಿಕ್ಕಿಲ್ಲವೆಂದೂ, ಆ ಪ್ರಭು ಪರಮಾತ್ಮನಿಂದ ಈ ಶುಭಕಾರ್ಯವು ಕುಶಲವಾಗಿ ನೆರವೇರಲೆಂದು ನೀವೂ ಹಾರೈಸಿರಿ.

ನನಗೆ ತೋರಿಕೆಯ ದೌರ್ಬಲ್ಯಾನುಭವವೇನಾದರೂ ಇದ್ದರೆ, ಅದು ಕಡಿಮೆ ವಿದ್ಯಾವಂತನಾಗಿರುವುದು. ಆದುದರಿಂದಲೇ ನಾನು ಜಾಣ ಜೊತೆಗಾರರಿಂದ ಲೇಖನವು ಸರಿಯಾಗಿದೆಯೋ ಇಲ್ಲವೋ ಎಂದು ಸಲಹೆ ಪಡೆಯುತ್ತೇನೆ. ಏಕೆಂದರೆ ಇತರ ಜನರು ಅದನ್ನೋದಿದಾಗ ಕೆಟ್ಟ ಅಭಿಪ್ರಾಯವನ್ನು ತಳೆಯಬಾರದು. ಅಂತೂ ಇಷ್ಟು ಮಾತ್ರ ನಿಜ; ಈಶ್ವರ ಕೃಪೆಯಿಂದ ನಾನು ಬರೆದುದರ ಸತ್ಯತೆಯಲ್ಲಿ ಸಂದೇಹವಿರುವುದಿಲ್ಲ. ನನ್ನ ಬಳಿ ಉದ್ಧರಣೆಗಳು ಅವಶ್ಯವಾಗಿ ಇಲ್ಲ. ಆದುದರಿಂದ ನನ್ನ ಲೇಖನವನ್ನು ಬೆಳೆಸಲಾರೆ. ಈಗ ನೀವು ಅದನ್ನು ಮೆಚ್ಚಿರುವಿರೆಂದ ಮೇಲೆ ಅದು ಚೆನ್ನಾಗಿಯೇ ಇರಬೇಕು. ಒಂದು ವಿಷಯ ಹೀಗೂ ಇದೆ: ಲೇಖನಿಯಿಂದ ಎಷ್ಟು ಉತ್ತಮ ಲೇಖನವಾದರೂ ಮೂಡಿ ಬರಲಿ, ಅದು ನನಗೆ ಸಾಮಾನ್ಯ ಗುಣಮಟ್ಟದ್ದಾಗಿ ಕಾಣುವುದು. ಏಕೆಂದರೆ ನನ್ನ ಕಣ್ಣುಗಳು ಈಗ ನಿಮ್ಮನ್ನು, ಡಾ. ವರದಾಚಾರಿ, ಬಾಬು 'ಸೂ' ಬಾಬು 'ಶೀ', 'ಸ' ಮುಂತಾದವರನ್ನು ನೋಡಿ ಬಿಟ್ಟಿರುವುದರಿಂದ ನಾನು ಬಹಳ ಭಾಗ್ಯಶಾಲಿ, ಏಕೆಂದರೆ ಇಂಥ ಜನರು ಸತ್ಸಂಗದಲ್ಲಿರುವರು. ಆದರೆ ಬಂದು, ಗುರುಮಹಾರಾಜರಿಗೆ ಧನ್ಯವಾದಗಳು. ಅವರು ನನ್ನಲ್ಲಿ ಪ್ರಾಯೋಗಿಕ ಜ್ಞಾನದ ಸ್ವಲ್ಪವೂ ಕೊರತೆಯನ್ನು ಉಳಿಸಿಲ್ಲ. ಇದೆಲ್ಲವೂ ಅವರದೇ ಪ್ರಸಂಶೆ. ನನ್ನ ಪ್ರಸಂಶೆ ಯಾವುದೆಂದರೆ, ಮೇಲೆ ಹೇಳಿದ ಹಾಗೆ ವಿದ್ಯಾವಂತರ ಮುಂದೆ ಹಸ್ತಾಕ್ಷರವನ್ನು ಮಾತ್ರ ಮಾಡಿಕೊಳ್ಳುವೆನು. ಶ್ರೀ 'ಸ'ಗೆ ಸಹ ಲೇಖನವು ಮೆಚ್ಚಿಗೆಯಾಗಿರಬಹುದು. ನಾನು 'ವಿ'ಗೆ ಕೂಡ ಆಮಂತ್ರಣವನ್ನು ಕಳುಹಿಸಿದ್ದೆ.

ಕೆಲವು ಗ್ರಹಗಳ ಅಥವಾ ನಕ್ಷತ್ರಗಳ ಯೋಗ ಕೂಟದಿಂದ ಜನರು ಇಲ್ಲಿ ಮತ್ತು ದಕ್ಷಿಣದಲ್ಲಿ ಬಹಳ ಹೆದರಿರುವರು. ಯಾವನಾದರೂ ಮುಸಲ್ಮಾನನನ್ನು ಕೇಳಿದರೆ ದೇವರ ಇಚ್ಛೆಯಂತೆಯೆ ಆಗುವುದೆಂದು ಹೇಳುವನು. ಇದು ನಮ್ಮ ಶ್ರದ್ಧೆ. ಅದು ಮುಸಲ್ಮಾನರ

ಶ್ರದ್ಧೆ. ವಾಸ್ತವದಲ್ಲಿ ನಾವು ಬಹಳ ಪತನ ಹೊಂದಿರುವೆವು. ಯಾವ ಜನಾಂಗದಲ್ಲಿ ಶ್ರದ್ಧೆ ವಿಶ್ವಾಸ ಹೊರಟು ಹೋಗಿ ಹೆದರಿಕೆ ಹುಟ್ಟಿಕೊಂಡಿತೋ ಆ ಜನಾಂಗದ ಪತನ ಆರಂಭವಾಯಿತು. ಸಮರ್ಪಣೆ ಮಾಡಿರುವುದಾಗಿ (ಎಷ್ಟು ಹಾಸ್ಯಾಸ್ಪದವಾದ ಮಾತು) ಬರೆದಿದ್ದ, 'ದ' ಅವರು ಈ ಗ್ರಹಗಳ ಪರಿಣಾಮದಿಂದ ರಕ್ಷಿಸಬೇಕೆಂದು ನನ್ನನ್ನು ಕೇಳಿಕೊಂಡಿದ್ದಾರೆ. ನಾನು ನನ್ನದೇ ರಕ್ಷಣೆಯನ್ನು ಮಾಡಲು ಬಯಸದಿರುವಾಗ ಬೇರೆ ಯಾರದನ್ನು ಮಾಡಬಲ್ಲೆ?. ಎಷ್ಟು ಹೆದರಿಕೆ ಹಬ್ಬಿದೆಯೊ, ಆ ಮಟ್ಟಿಗೆ ಗ್ರಹಗಳು ಕೂಡಿಲ್ಲ ಸಹ. ಅಯ್ಯೋ ! ಇವೆಲ್ಲ ಚೆನ್ನಾಗಿ ಕೂಡಿದ್ದರೆ ಒಂದು ತೀಕ್ಷ್ಣವಾದ ಶಸ್ತ್ರಚಿಕಿತ್ಸೆಯಾದರೂ ಆಗುತ್ತಿತ್ತು. ಯಾವಾಗಲಾದರೂ ಬಿಲವಾದಾಗ ಇದರ ಬಗ್ಗೆ ನಾನು ಬರೆಯುವೆ. ಇಲ್ಲಿ ಮಹಾತ್ಮ ಜನರು ಗ್ರಹಶಾಂತಿಗಾಗಿ ಹೋಮ ಮತ್ತು ಯಜ್ಞ ಮಾಡಿಸುತ್ತಿರುವರು. ನನ್ನ ಅಭಿಪ್ರಾಯದಲ್ಲಿ ಗ್ರಹಗಳ ಪರಿಣಾಮಗಳನ್ನು ಶಾಂತ ಮಾಡುವುದರ ಬದಲು, ಅವರು ಸ್ವತಃ ಅದನ್ನು ನಮ್ಮ ಮೇಲೆ ಹೇರುತ್ತಿರುವರು. ಏಕೆಂದರೆ ಹೀಪಾಯಿಗಟ್ಟಲೇ ತುಪ್ಪ ಬೆಂಕಿಯ ಪಾಲಾಗುತ್ತಿದೆ. ಅದು ನಮ್ಮ ಮಕ್ಕಳಿಗೆ ಉಪಯೋಗಕ್ಕೆ ಬರುತ್ತಿತ್ತು. ಇದು ಕೇವಲ ಪ್ರಸಿದ್ಧಿ ಪ್ರಶಂಸಾ ಪ್ರಿಯತೆ. ನಮ್ಮ ಕಡೆ ಯಾವ ಮಹಾತ್ಮನು ಏಳಿಗೆಯನ್ನು ಹೊಂದ ಬಯಸುತ್ತಾನೋ, ಅವನು ಮಾಡುವ ಮೊದಲನೆಯ ಕೆಲಸವೇನೆಂದರೆ, ಒಂದು ತಿಂಗಳವರೆಗೆ ೨೪ ಗಂಟೆಗಳೂ ಹೋಮ ಮಾಡಿಸುವುದು. ಅವರಲ್ಲಿ ವಿದ್ಯೆಯ ಕೊರತೆಯಿದ್ದುದರಿಂದ, ಮತ್ತು ಸ್ವಾರ್ಥದ ಕಾರಣದಿಂದ ಅವರು ಹಿಂದೂಸ್ಥಾನದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಬದಲು ಕೆಡಿಸುತ್ತಿದ್ದಾರೆ. ಮತ್ತು ನಮ್ಮಲ್ಲಿಯ ಸಾರ್ವಜನಿಕರು ಸಹ ಎಂಥವರಿರುವರೆಂದರೆ, ಈ ಮಾತುಗಳಿಂದ ಅವರ ಕೀರ್ತಿಗೆ ಕಲಶವಿಟ್ಟಿತೆಂಬಂತೆ ತಿಳಿದು ಬಿಡುತ್ತಾರೆ.

ಎಸ್.ಆರ್. ಮುಖರ್ಜಿಯವರ ಕುಟುಂಬವನ್ನು ನಾನು ಇಲ್ಲಿಯೆ ಉಳಿಸಿಕೊಂಡಿರುವೆನು. ಇಬ್ಬರು ಮಕ್ಕಳು ಮತ್ತು ಅವರ ಭಾವ ಮೈದುನ ಇಲ್ಲೇ ಇರುವರು. ಇಬ್ಬರು ಮಕ್ಕಳನ್ನು ಬಸಂತ ಪಂಚಮಿಯ ನಂತರ ಕರೆಯಿಸಿಕೊಳ್ಳುವರು. ಹುಡುಗರಿಗೆ ಬಂಗಾಲಿ ಭಾಷೆ ಬರುವುದಿಲ್ಲ. ಆದುದರಿಂದ ಇಲ್ಲಿಯೇ ಎಲ್ಲಾದರೂ ಅವರಿಗೆ ಓದಿಸುವ ವ್ಯವಸ್ಥೆ ಮಾಡಬೇಕಾಗಿದೆ. ಭಾವ ಮೈದುನನಿಗೆ ನೌಕರಿ ದೊರೆತುಬಿಡುವುದು. ಬಸ್ ಸೇವೆಯ ಸಂದರ್ಶನದಲ್ಲಿ ಬಹಳ ಕಷ್ಟದಿಂದ ಉತ್ತೀರ್ಣನಾಗಿರುವನು. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ.ಸೂ: ಶ್ರೀ 'ಶಿ' ಅವರ ಪತ್ರ ಬಂದಿದೆ. ಅವರಿಗೆ ಇಸಬಿನ ವ್ಯಾಧಿ ಬಹಳ ಬೆಳೆದುಕೊಂಡಿದೆ. ಹೊಟ್ಟೆಯಲ್ಲಿ ನೋವು ಕೂಡಾ ಇರುತ್ತದೆ.

ಈ ಸಲ ಬಹಳ ಇಬ್ಬನಿ ಬಿದ್ದುದರಿಂದ ನಾನು ಬಿತ್ತಿದ್ದ ೧೦ ಎಕರೆ

ಆಲೂಗಡ್ಡೆಯೆಲ್ಲವೂ ಕೆಟ್ಟು ಹೋಯಿತು. ಎಲೆ ಟೊಂಗೆಗಳೆಲ್ಲ ಮುದುಡಿ ಹೋಗಿವೆ. ಎಲ್ಲರದೂ ಇದೇ ಸ್ಥಿತಿ. ಬದನೆ ಮತ್ತು ಮೆಣಸಿನಕಾಯಿ ಎಲ್ಲವೂ ಹೋಗಿ ಬಿಟ್ಟು ಅತಿಶಯ ಹಾನಿಯಾಗಿದೆ.

◆◆◆

"ಓಂ ತತ್‌ಸತ್"

ನಂ.೧೧೭
ನಂ. ಜಿ -೧೩೯/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ. ೨. ೩. ೧೯೬೨.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಪತ್ರ ತಲುಪಿತು. ಮಗುವಿನ ಹೆಸರು, ಹಿರಿಯರ ಅಭಿಪ್ರಾಯ ಹೇಗಿದೆಯೋ ಅದು ಸರಿಯಾದದ್ದೆ. ಈಗ ಮದುವೆಯ ದಿನಗಳು ಸಮೀಪ ಇವೆ. ಏಕೆಂದರೆ ೮ ಮಾರ್ಚ ದಿನಾಂಕ ನಿಶ್ಚಿತವಾಗಿದೆ. ಮಾಸ್ಟರ ಸಾಹೇಬರು ಕೆಲಸವನ್ನು ನೋಡಿಕೊಳ್ಳುತ್ತಿದ್ದು ಸುಮಾರು ೧೦ ದಿನಗಳಿಂದ ಇಲ್ಲಿಯೇ ತಂಗಿರುವರು. ನಮ್ಮ ಕೈಕಾಲುಗಳಂತೂ ನಡೆಯುವುದಿಲ್ಲ. ಆದರೆ ಮನಸ್ಸು ಅವಶ್ಯವಾಗಿ ಕೆಲಸಮಾಡುತ್ತಿದೆ.

ಈ ಕಾರ್ಯವು ಸುಲಲಿತವಾಗಿ ಪೂರ್ಣಗೊಳ್ಳಲೆಂದು ನೀವು ಹಾರೈಸಿರಿ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆◆◆

'ಓಂ ತತ್‌ಸತ್'

ನಂ. ೧೧೮
ನಂ. ಜಿ. ೧೫೪/ಎಸ್.ಆರ್.ಸಿ.ಎಮ್

ಷಾಹಜಹಾನ್‌ಪೂರ
ದಿ. ೨೧.೩.೧೯೬೨.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಎರಡೂ ಸಂತೋಷದ ಓಲೆಗಳು ತಲುಪಿದವು. ಒಂದು ಸೀರೆ ಮತ್ತು ೨೦ ರೂಪಾಯಿಗಳುಳ್ಳ ಪಾರ್ಸಲ್ ಕೂಡ ತಲುಪಿತು ರೂಪಾಯಿಗಳನ್ನು ಯಾವ ಲೆಕ್ಕದಲ್ಲಿ ಕಳಿಸಿದ್ದಿರೋ ಅದನ್ನೇ ಅದರಲ್ಲಿಯೆ ಕೊಳ್ಳಲಾಯಿತು.

ನಿಮ್ಮೆಲ್ಲರ ಹಾರೈಕೆಯಿಂದ ಮದುವೆಯು ಸುಲಲಿತವಾಗಿ ನೆರವೇರಿತು. ಹುಡುಗ ಮತ್ತು ಹುಡುಗಿಯು ಸುಖಸಂತೋಷದಿಂದ ಇರುವಂತೆ ಈಶ್ವರನು ದಯಪಾಲಿಸಲಿ. ಶ್ರೀ 'ಆ' ಮತ್ತು 'ಗೊ' ಮದುವೆಯಲ್ಲಿ ಉಪಸ್ಥಿತರಿದ್ದು ಕೆಲಸಗಳಲ್ಲಿ ಬಹಳ ಸಹಾಯ ನೀಡಿದರು. ಶ್ರೀ 'ರಾ' ಕೂಡ ದೆಹಲಿಯಿಂದ ಬಂದು ಭಾಗವಹಿಸಿದರು. ಶ್ರೀ 'ಗೋ' ಬಂದಾಗಿನಿಂದ ದೀಕ್ಷೆಯ ವಿಚಾರಗಳು ಹೃದಯದಲ್ಲಿ ಮಾರ್ದನಿಗೊಡುತ್ತಿದ್ದವು. ಅಂತೂ ಕೊನೆಗೆ ಶ್ರೀ'ಗೋ' ಈ ವಿಷಯವನ್ನು ಎತ್ತಿಯೇ ಬಿಟ್ಟರು. ಅವರು ದೀಕ್ಷೆಗೆ ಯೋಗ್ಯರೂ ಇದ್ದರು. ಆದರೆ ನನಗೊಂದು ತೊಂದರೆಯ ವಿಷಯ ಏನಾಯಿತೆಂದರೆ, ಒಬ್ಬನಿಗೆ ದೀಕ್ಷೆ ಕೊಟ್ಟು, ಇನ್ನೊಬ್ಬನಿಗೆ ಕೊಡದಿರುವುದು ಹೇಗೆ? ನಿರ್ವಾಹವಿಲ್ಲದೆ ಇಬ್ಬರಿಗೂ ದೀಕ್ಷೆ ಕೊಡಬೇಕಾಯಿತು. ನಾನು ಇವರಿಬ್ಬರ ಬಗ್ಗೆ, ಮತ್ತು ವಿಶೇಷವಾಗಿ 'ಆ' ಬಗ್ಗೆ ನಿಮ್ಮನ್ನು ವಿಚಾರಿಸಬೇಕಾಗಿತ್ತು. ಏಕೆಂದರೆ ಪ್ರತಿಯೊಂದು ಕೆಲಸವನ್ನು ನಿಮ್ಮ ಸಲಹೆಯ ಮೇರೆಗೆ ಮಾಡಲಾಗಿತ್ತು. ಆದರೆ ಸಮಯವಿರಲಿಲ್ಲ. ಹೀಗೆ ಇಬ್ಬರಿಗೂ ಮಾರ್ಚ್ ೧೫ರಂದು ದೀಕ್ಷೆ ಕೊಡಲಾಯಿತು. 'ಆ' ಅವರ ಆಂತರಿಕ ರಚನೆಯು ಇನ್ನೂ ದೀಕ್ಷೆಗೆ ಯೋಗ್ಯವಾಗಿರಲಿಲ್ಲ. ಆದರೆ ಶ್ರದ್ಧೆಯು ಸ್ಥಿರವಾಗಿದ್ದರೆ ಸರಿಯಾಗಿಯೇ ಆಗುವುದು. 'ಆ'ಆ ಪುಸ್ತಕಗಳ ಮುದ್ರಣಕ್ಕಾಗಿ ೭೦೦ ರೂಗಳನ್ನು ಕೊಟ್ಟಿರುವರು. ಇನ್ನೂ ೧೫೦ ರೂ.ಗಳು ಅವರ ಬಳಿ ಕೂಡಿವೆ. ಇದರಿಂದ ಈಗ ಸಿದ್ಧವಿರುವ ಈಶ್ವರ ಸಹಾಯ್ ಅವರ ಪುಸ್ತಕವನ್ನು ಮುದ್ರಿಸಲಾಗುವುದು. ಅನಂತರ 'ರಿಯಾಲಿಟಿ ಎಟ್ ಡಾನ್' ಮುಗಿದು ಹೋದುದರ ಬಗ್ಗೆ ವಿಚಾರ ಮಾಡಲಾಗುವುದು. ಹಣ ಬಂದ ನಂತರ ಮುದ್ರಿಸಲಾಗುವುದು.

ನಿಮ್ಮ ತಂದೆಯವರು ನಿಜವಾಗಿಯೂ ನನ್ನನ್ನು ಪ್ರೀತಿಸುತ್ತಾರೆ. ಈ ನೆನಪಿಗಾಗಿ ಅವರಿಗೆ ಧನ್ಯವಾದಗಳು. ಯಾವ ಮುದ್ರಣಾಲಯದಲ್ಲಿ ಕಡಿಮೆ ವೆಚ್ಚವಾಗುವುದೊ, ಅಲ್ಲಿ ಪುಸ್ತಕದ ಅನುವಾದವನ್ನು ಮುದ್ರಣಕ್ಕೆ ಕೊಡಬೇಕು. ಆದರೆ ಮುದ್ರಣವು ಚೆನ್ನಾಗಿರಬೇಕು. ಕರಡನ್ನು ತಿದ್ದಲು ಎರಡು ಸಲ ಪ್ರತಿಯನ್ನು ತೆಗೆದುಕೊಳ್ಳಬೇಕಲ್ಲದೆ ತಪ್ಪುಗಳನ್ನು ಬಹಳ ಆಳವಾಗಿ ಶೋಧಿಸಬೇಕು. ಪೂರ್ಣ ಶುದ್ಧ ಪ್ರತಿ ದೊರಕಿದಾಗಲೇ ಮುದ್ರಿಸಲು ಅನುಮತಿ ಕೊಡಬೇಕು. ಚಿತ್ರಗಳ ಪಡಿಯಚ್ಚುಗಳನ್ನು ಅಲ್ಲಿಯೆ ಮಾಡಿಸಿಕೊಳ್ಳಬೇಕು. ಪುಸ್ತಕದಲ್ಲಿ ನನ್ನ ವರ್ಣ ಚಿತ್ರವನ್ನಿಡಲು ನಾನು ಇಚ್ಛಿಸುವುದಿಲ್ಲ. ಪಟೇಲ ಸಾಹೇಬರ ಹತ್ತಿರ ಹಣ ತೆಗೆದುಕೊಳ್ಳಬಹುದು. ಅದು ಯಾವಾಗ ಬೇಕಾದರೂ ಸಿಗುವುದು. ನೀವು 'ಆ'ಗೆ ಬರೆದುಬಿಡಿರಿ. ಆದರೆ ಅವರಿಂದ ಪುಸ್ತಕಕ್ಕೆ ಬೇಕಾಗಿರುವಷ್ಟೇ ಹಣವನ್ನು ತೆಗೆದುಕೊಳ್ಳಬೇಕು.

ಶ್ರೀ 'ಸ'ರ ಪತ್ರ ಬಂದಿದೆ. ನಾನು ಇನ್ನೂ ಉತ್ತರವನ್ನು ಬರೆದಿಲ್ಲ. ಅವರಲ್ಲಿ ಸ್ಥೂಲತೆ ಬೆಳೆದುಕೊಂಡಿದೆ. ನೀವು ನಿಮ್ಮ ಸ್ವಲ್ಪ ಸಮಯವನ್ನು ಕೊಟ್ಟು ಶುದ್ಧಗೊಳಿಸಿರಿ. ಅವರಿಂದ ಅವರ ಸ್ಥಿತಿಯ ಸಮಾಚಾರವನ್ನು ತರಿಸುತ್ತಿರಿ. ಅವರ ಪತ್ರದ ಒಕ್ಕಣೆ ಹೀಗಿದೆ. "ದುಷ್ಟ ವಿಚಾರಗಳ ಆಕ್ರಮಣವು ಬಹಳ ಅಸಹ್ಯವಾಗುತ್ತಿದೆ. ಆಧ್ಯಾತ್ಮಿಕತೆಯಲ್ಲಿಯ ನನ್ನ ಶ್ರದ್ಧೆಯು, ಗಾಢವಾದ ಅನುಭವದ ಅಭಾವದಿಂದ ತಾನೇ ಕುಂದಿ ಹೋಗುತ್ತಿದೆ."

ಈಶ್ವರಾನುಗ್ರಹದಿಂದ ಎರಡೂ ಹುಡುಗಿಯರ ಮದುವೆಯಾಗಿ ಚಿಂತೆ ದೂರವಾಯಿತು. ಈಗ ಮಿಷನ್ನಿನ ಕೆಲಸವನ್ನು ಹೆಚ್ಚು ಮಾಡಬಯಸುತ್ತೇನೆ. ಆದರೆ ಆಲಸ್ಯವು ಅಡ್ಡಿಯಾಗಿದೆ. ನಾನು ಚುರುಕುಗೊಳ್ಳುವಂತೆ ಪ್ರಾರ್ಥನೆ ಮಾಡಿರಿ. ಶ್ರೀ 'ರಾ' ಸೇಲಂ ಅವರು ಸಹಜಮಾರ್ಗದ ತತ್ವ ಜ್ಞಾನ ಕುರಿತು ದಕ್ಷಿಣ ಭಾರತದ ಕೆಲವೆಡೆಗಳಲ್ಲಿ ಉಪನ್ಯಾಸ ಕೊಡಲಿಚ್ಛಿಸುವರು. ನಾನು ಆಯಾ ಜನರಿಗೆ ಇದರ ಸೂಚನೆ ಕೊಡಬೇಕೆಂದು ಬರೆದಿರುವರು. ನೀವೂ ಕೂಡ ನಿರ್ದಿಷ್ಟ ಸ್ಥಳಗಳಿಗೆ ಬರೆದು ಬಿಡಿರಿ. ಅವರ ವಿಳಾಸ ಈ ಕೆಳಗಿನಂತಿದೆ. ನೀವೇನಾದರೂ ಬರೆಯಲಿಚ್ಛಿಸಿದರೆ ಅವರಿಗೆ ಬರೆಯಬಹುದು.

ವಿಳಾಸ:- ಶ್ರೀ ರಾಜಗೋಪಾಲ ಎಂ.ಎ. ಕಾರ್ಖಾನಾ ರೋಡ, ಸೇಲಂ ಜಂಕ್ಷನ್

ಸೇಲಂ. ಮಕ್ಕಳಿಗೆ ಆಶೀರ್ವಾದ

ಆಶೀರ್ವಾದಗಳೊಂದಿಗೆ

ರಾಮಚಂದ್ರ

◆ ◆ ◆

'ಓಂ ತತ್‌ಸತ್'

ನಂ. ೧೧೯
ಸಂ. ಜಿ.೧೮೪/ಎಸ್.ಆರ್.ಸಿ.ಎಮ್

ಶಾಹಜಹಾನಪೂರ
ದಿ. ೧೧.೪.೧೯೬೨

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಸಂತೋಷದ ಪತ್ರ ತಲುಪಿತು. 'ಮಾ' ರಂತು ನಮ್ಮವರೇ ಇದ್ದಾರೆ. ಮತ್ತೆ ನಮ್ಮವರನ್ನಾಗಿ ಮಾಡಿಕೊಳ್ಳುವ ಪ್ರಶ್ನೆಯೆಲ್ಲಿ? ಅವರ ಪತ್ರವನ್ನು ನೀವು ಕಳುಹಿಸಿ ಕೊಟ್ಟಿದ್ದು ಒಳ್ಳೆಯದಾಯಿತು. ಅವರಿಂದ ತಿಳಿದು ಬರುವುದೇನೆಂದರೆ, ಅವರು ಬಹಳ ಭಾವನಾವಶರಾಗಿರುವರು. ಭಾವನಾವಶರಾಗುವದು ಕೆಟ್ಟದ್ದೇನು ಅಲ್ಲ. ಆದರೆ ಹೃದಯದಿಂದ ಕಡಿವಾಣವು ಕಳಚದಿರುವದು ಆವಶ್ಯಕ. ಇನ್ನು ಅವರ ಬಗ್ಗೆ ಹೇಳುವಾದಾದರೆ, ಭಾವನೆಗಳನ್ನು ಕೊಂಚ ಸಮಸ್ಥಿತಿಗೆ ತರುವುದು ಆವಶ್ಯಕವಾಗಿದೆ. ಆದುದರಿಂದ ನೀವು ಅವರ ವಿಚಾರಗಳನ್ನು ಮತ್ತು ಅಗತ್ಯಕ್ಕಿಂತ ಹೆಚ್ಚಾಗಿರುವ ಉಲ್ಬಣವನ್ನು, ಕ್ರಮ ಕ್ರಮವಾಗಿ ತೆಗೆದು ಹಾಕುತ್ತಿರಿ. ನನಗೆ ನೆನಪಾದಾಗ ನಾನು ಕೂಡ ಇದನ್ನೇ ಮಾಡುತ್ತಿರುತ್ತೇನೆ. ಅವರು ಬಹಳ ಒಳ್ಳೆಯ ಮತ್ತು ಪ್ರೇಮಲ ಮನುಷ್ಯರಿರುವರು.

ನೀವು ವರ್ಣಚಿತ್ರವನ್ನು ಬಿಟ್ಟು ನನ್ನ ಯಾವ ಚಿತ್ರದ ಪಡಿಯಚ್ಚನ್ನಾದರೂ ಮಾಡಿಸಿಕೊಳ್ಳಿರಿ. ಆದರೆ ಯಾವ ಚಿತ್ರದ ಪಡಿಯಚ್ಚನ್ನು ಮಾಡಿಸಲಾಗುವುದೋ, ಆ ಚಿತ್ರದಲ್ಲಿ ಕೊರಳಲ್ಲಿ ಹಾರವಿರಕೂಡದೆಂದು ಸಹ ನನ್ನ ಇಚ್ಛೆ. 'ಸ'ರ ಒಂದು ಪತ್ರ ನನ್ನ ಬಳಿ ಬಂದಿತ್ತು.

ಅದು ಗೀತೆಯ ಒಂದು ಶ್ಲೋಕದ ಬಗ್ಗೆ ಇತ್ತು. ಅವರು ಅದರ ಅರ್ಥವನ್ನು ಗ್ರಹಿಸಿಲ್ಲವೆಂಬ ಕಾರಣದಿಂದ ನನ್ನನ್ನು ಕೇಳಿದ್ದರು. ಆ ಪತ್ರದಲ್ಲಿ ಬರೆದಿದ್ದನೇನೆಂದರೆ, (ಒಕ್ಕಣೆ ಇಂಗ್ಲೀಷಿನಲ್ಲಿದೆ) ''ನನಗೆ ಭಗವತ್‌ಗೀತೆಯಲ್ಲಿ, ಒಂದು ಶಂಕೆ ಉಂಟಾಗಿದೆ. ೭ನೆಯ ಅಧ್ಯಾಯದ ೧೧ನೇ ಶ್ಲೋಕದಲ್ಲಿ ಶ್ರೀ ಕೃಷ್ಣನು ಹೇಳಿರುವುದೇನೆಂದರೆ, ಆತನು ಪ್ರಾಣಿಗಳಲ್ಲಿ, ಧರ್ಮಕ್ಕೆ ವಿರೋಧವಾಗದ ಕಾಮ ಅಥವಾ ಲೈಂಗಿಕ ಪ್ರವೃತ್ತಿಯಾಗಿರುವನು. ದಯಮಾಡಿ ಕಾಮವನ್ನು ಧಾರ್ಮಿಕವಾಗಿ (ಅಥವಾ ಧರ್ಮಕ್ಕೆ ವಿರೋಧವಾಗದಂತೆ) ಹೇಗೆ ಮಾಡಬಹುದೆಂಬುದನ್ನು ವ್ಯಾಖ್ಯಾನಿಸಿರಿ. ಭಾಷ್ಯಕಾರರು ವ್ಯಾಖ್ಯಾನಿಸಿರುವಂತೆ ಲೈಂಗಿಕ ಪ್ರವೃತ್ತಿ ಅಥವಾ ಕಾಮವನ್ನು, ತನ್ನ ಹೆಂಡತಿಯಲ್ಲಿ ಆದೂ ಸಂತಾನ ಪ್ರಾಪ್ತಿಯ ಉದ್ದೇಶದಿಂದ ಮಾತ್ರ ತೃಪ್ತಿ ಪಡಿಸಿಕೊಳ್ಳುವುದೇ ಧಾರ್ಮಿಕವೆನಿಸುವುದು. ಈ ಸಂತಾನಪ್ರಾಪ್ತಿಯ ಉದ್ದೇಶವಿಲ್ಲದಿದ್ದರೆ ಸಂಭೋಗವು ಒಂದು ಪಾಪದ ಕ್ರಿಯೆಯಾಗುತ್ತದೆ. ನಾನು ಅಂತಹ ಪಾಪವನ್ನು ಮಾಡಿರುವೆನೆಂದು ಒಪ್ಪಿಕೊಳ್ಳಲು ನಾಚಿಕೆಯಾಗುತ್ತದೆ. ಮತ್ತು ಅದು ನನಗೆ ಬಹಳ ಚುಚ್ಚುತ್ತಿದೆ.'' ನಾನು ಈ ಕೊನೆಯ ವಾಕ್ಯಕ್ಕೆ ಉತ್ತರವೇನು ಕೊಡಲಿಲ್ಲ. ಆದರೆ ಗೀತೆಯಲ್ಲಿ ಕೃಷ್ಣಭಗವಾನರ ಹೇಳಿಕೆಯ ಅರ್ಥವೇನಿದ್ದಿತೋ ನನ್ನ ತಿಳುವಳಿಕೆಯಲ್ಲಿ ಬಂದಂತೆ ಅದನ್ನು ಬರೆದೆ. ಅದರ ಪ್ರತಿಯನ್ನು ನಿಮ್ಮ ಬಳಿ ಕಡತದಲ್ಲಿಟ್ಟುಕೊಳ್ಳಲು ಕಳಿಸುತ್ತಿರುವೆ. ಪ್ರಾಯಶಃ ಯಾವಾಗಲಾದರೂ ಕೆಲಸಕ್ಕೆ ಬರಬಹುದು. ಡಾ. ವರದಾಚಾರಿಯವರು ಜಯಪುರಕ್ಕೆ ಬಂದಿರುವರು. ಬಹುಶಃ ೧೨ ಅಥವಾ ೧೩ನೇ ದಿನಾಂಕದಂದು ಎರಡು ದಿನಗಳ ಸಲುವಾಗಿ ಇಲ್ಲಿಗೂ ಬರಬಹುದು. ನೀವು ನಿಮ್ಮ ಪ್ರವಾಸದಿಂದ ಮರಳಿ ಬಂದಿರಬಹುದು. ನಾನು ಮೇ ತಿಂಗಳಲ್ಲಿ ಆಸಾಂಗೆ ಹೋಗುವ ಸಂಕಲ್ಪ ಮಾಡುತ್ತಿದ್ದೆ. ಆದರೆ ಈಗ ಅದು ಸಾಧ್ಯವೆನಿಸುವುದಿಲ್ಲ. ಏಕೆಂದರೆ ಅಲ್ಲಿಯ ಮುಖ್ಯ ವ್ಯಕ್ತಿಗಳಾದ ಶ್ರೀ 'ರಾ' ಅವರು 'ಬಕ್ಸರ್'ನಲ್ಲಿ ತನ್ನದೊಂದು ಗಿರಣಿಯನ್ನು ಸ್ಥಾಪಿಸುತ್ತಿರುವರು. ಅದರಲ್ಲಿ ಎರಡು ಎರಡೂವರೆ ತಿಂಗಳಿಗಿಂತ ಕಡಿಮೆ ಸಮಯ ಹಿಡಿಯುವುದಿಲ್ಲ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ

◆ ◆ ◆

'ಓಂ ತತ್‌ಸತ್'

ನಂ. ೧೨೦ ಷಾಹಜಹಾನಪೂರ್
ನಂ. ಜಿ.೨೧೮/ಎಸ್.ಆರ್.ಸಿ.ಎಮ್. ದಿ. ೩.೫.೧೯೬೨

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಸಂತೋಷದ ಪತ್ರ ತಲುಪಿತು. 'ಸಿ' ಅವರು ಕನ್ನಡದಲ್ಲಿ ಅನುವಾದ ಮಾಡಲು ಹೇಳಿ ಅದರ ಮುದ್ರಣದ ವೆಚ್ಚವನ್ನೆಲ್ಲ ಕೊಡುವೆನೆಂದು ವಚನ

ಕೊಟ್ಟಿದ್ದರು. ಆ ಪ್ರಕಾರ ಅವರು ಸಿದ್ಧರಾಗಿಯೂ ಇರುವರು. ಈ ಸ್ಥಿತಿಯಲ್ಲಿ ಅವರ ಬಳಿ ಹಣ ತೆಗೆದುಕೊಳ್ಳಲು ಏನೂ ಅಡ್ಡಿಯಿಲ್ಲ. ಪುಸ್ತಕದ ಮುಖಪುಟದ ಮೇಲೆ ಮಿಷನ್ನಿನ ಲಾಂಛನದ ಮುದ್ರೆ ಆವಶ್ಯವಾಗಿರಬೇಕು. ನಾನು ಸರ್ನಾಡಜಿಗೆ ಸಹ ಬರೆದಿರುವೆನು. ನಿಮ್ಮ ಬಳಿ ಪತ್ರಿಕೆಗಾಗಿ ಕೂಡಿರುವ ೨೨ರೂಗಳನ್ನು ನಿಮ್ಮ ಬಳಿಯಲ್ಲಿಯೇ ಇಟ್ಟುಕೊಳ್ಳಿರಿ. ಅವಶ್ಯವಾದಾಗ ತರಿಸಿಕೊಳ್ಳಲಾಗುವುದು.

ಡಾ. ವರದಾಚಾರಿಯವರು ಎರಡು ದಿನಗಳಿಗಾಗಿ ಬಂದಿದ್ದರು. ಒಂದು ತಿಂಗಳ ನಂತರ ಅವರು ಪುನಃ ಬರಬಹುದು. ಅವರನ್ನು ಸರಕಾರದ ವತಿಯಿಂದ ಕರೆಸಲಾಗಿದ್ದಿತು. ಶ್ರೀ 'ಭ', 'ರಾ' ಮತ್ತು 'ಮ' ಮೇ ಒಂದಕ್ಕೆ ಬಂದಿರುವರು. ಮೇ ೬ಕ್ಕೆ ಮರಳಿ ಹೋಗುವರು. ಈ ಸಲ ಅವರು ಹೆಚ್ಚು ಕಾಲ ನಿಲ್ಲಲಿಲ್ಲ. ಏಕೆಂದರೆ 'ಭ' ಅವರ ಮಗನ ಮದುವೆ ಮೇ ೧೮ಕ್ಕೆ ಇದೆ. ನೀವು ಕೆಲವು ತಾಣಗಳ ಪ್ರವಾಸ ಮಾಡಿ ಬಂದುದು ಒಳ್ಳೆಯದಾಯಿತು. ಅದು ಸತ್ಸಂಗಿಗಳು ಚುರುಕುಗೊಳ್ಳುವುದಕ್ಕೆ ಒಂದು ವಿಧದ ಚುಚ್ಚುಮದ್ದಾಯಿತು. ಛಾಯ ನಾಳೆ ತನ್ನ ಅತ್ತೆಯ ಮನೆಗೆ ಹೋಗುತ್ತಿರುವಳು. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್ ಸತ್"

ನಂ. ೧೨೧<br>
ನಂ. ಜಿ. ೨೩೪/ಎಸ್.ಆರ್.ಸಿ.ಎಮ್

ಷಾಹಜಹಾನಪೂರ್<br>
ದಿ. ೨೩.೫.೧೯೬೨.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ೧ನೆಯ ಮೇ, ೬೨ರ ಒಂದು ಲಕೋಟೆ ಮತ್ತು ೧೮ನೆಯ ಮೇ, ೬೨ರ ಒಂದು ಪೋಸ್ಟ್‌ಕಾರ್ಡ್ ತಲುಪಿತು. ಡಾ. ವರದಾಚಾರ್ಯರು ಪುನಃ ಮೇ ೨೧ರಂದು ಇಲ್ಲಿಗೆ ಬಂದರು. ನಾಳೆ ಹೊರಟುಹೋಗುವರು. ಅವರ ಬಳಿ ಪೂಜ್ಯ ಲಾಲಾಜಿ ಸಾಹೇಬರ ಚಿತ್ರದ ಪಡಿಯಚ್ಚು ಇದೆ. ಅವರಿಗೆ 'ಸ' ಅವರ ವಿಳಾಸ ಕೊಟ್ಟಿರುವೆನು. ೨೮ ಮೇಗೆ ತಿರುಪತಿ ತಲುಪಿದ ನಂತರ ಪಡಿಯಚ್ಚನ್ನು ಅಲ್ಲಿಂದ ಕಳುಹಿಸುವರು. ನಾನು 'ಸ'ಗೆ ಕೂಡ ಸೂಚನೆ ಕೊಟ್ಟಿರುವೆನು.

ನನಗೆ ಬಂಧು 'ರಾ'ನ ತಂದೆ ಸ್ವರ್ಗವಾಸಿಯಾದುದು ಕೇಳಿ ದುಃಖವಾಯಿತು. ಈಶ್ವರನು ಅವರ ಆತ್ಮಕ್ಕೆ ಶಾಂತಿ ನೀಡಲಿ.

'ಅನಂತ ಕೀ ಓರ್'ದ ಅನುವಾದವು ಇಂಗ್ಲಿಷಿನಲ್ಲಿ ಆಗಿದೆ. ಆದರೆ ಇನ್ನೂ ಮುದ್ರಿತವಾಗಿಲ್ಲ. ಆಗಿದ್ದರೆ, ನಾನು ಕಳುಹಿಸುತ್ತಿದ್ದೆ. ನೀವು ಆಗಸ್ಟನಲ್ಲಿ ಬರುತ್ತಿರುವುದು ಬಹಳ ಸಂತೋಷದ ಮಾತು. ಹವಾಮಾನವು ಆಸಾಂನ ಪ್ರವಾಸಕ್ಕೆ ಅನುಕೂಲವಾದರೆ ನಾನು ಸೆಪ್ಟೆಂಬರನಲ್ಲಿ ಆಸಾಂಗೆ ಹೋಗುವ ಸಂಕಲ್ಪ ಮಾಡುತ್ತಿರುವೆನು. ಏಕೆಂದರೆ ಎಪ್ರಿಲ್‌ದಿಂದ ಜುಲೈವರೆಗೆ ಅಲ್ಲಿ ಚಹದ ತೋಟಗಾರಿಕೆಯ ಕೆಲಸ ಆರಂಭವಾಗುತ್ತವೆ. ಮತ್ತು ಇವರೆಲ್ಲರೂ ತಮ್ಮ ವ್ಯಾಪಾರದಲ್ಲಿ ನಿರತರಾಗಿ ಬಿಡುವರು. ನೀವು ಸಹಜಮಾರ್ಗಕ್ಕಾಗಿ ಕಳಿಸಿರುವ ಇಂಗ್ಲಿಷ್ ಲೇಖನ ಬಹಳ ಚೆನ್ನಾಗಿದೆ. ಅದರ ಬಗ್ಗೆ ನಾನು ಬಳ್ಳಾರಿಯಲ್ಲಿ ನಿಮಗೆ ಬಹಳಷ್ಟು ತಿಳಿಸಿ ಹೇಳಿರುವೆನು. ಏಕಾಗ್ರತೆಯೆಂಬ ಶಬ್ದವು ಲೇಖನದಲ್ಲಿ ಸ್ವಲ್ಪ ಗೊಂದಲವನ್ನುಂಟು ಮಾಡಿದೆ. ಅದನ್ನು ಜನಗಳು ತಿಳಿಮಕೊಳ್ಳುವ ಹಾಗೆ ಸಂದರ್ಭೋಚಿತವಾಗಿ ತರಬೇಕಾಗಿತ್ತು. ನಾನು ಅದನ್ನು ತಿದ್ದಿ ನಿಮ್ಮ ಬಳಿ ಕಳಿಸುವೆ. ಅನಂತರ ಅದನ್ನು ನಿಮ್ಮ ಲೇಖನದಲ್ಲಿ ಹೇಗೆ ಬೇಕಾದರೂ ಅಳವಡಿಸಿಕೊಳ್ಳಬಹುದು. ಶ್ರೀ ಈಶ್ವರ ಸಹಾಯ್ ಇಲ್ಲಿಯೆ ಇರುವರು. 'ಕ' ಕೂಡ ವರದಾಚಾರ್ಯರನ್ನು ನೋಡಲು ಬಂದಿರುವಳು. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ

◆◆◆

"ಓಂ ತತ್‌ಸತ್"

ನಂ.೧೨೨
ನಂ. ಬಿ-೨೯೧/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ. ೭. ೭. ೧೯೬೨.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಎಲ್ಲ ಪತ್ರಗಳೂ ತಲುಪಿದವು. ಈ ಸರಕಾರದ್ದು ವಿಚಿತ್ರ ಸ್ಥಿತಿಯಿದೆ. ಏಕೆಂದರೆ, ಗುಮಾಸ್ತರ ಕೈ ಹೇಗಿದೆಯೆಂದರೆ, ನಿಮ್ಮ ವೇತನ ಶ್ರೇಣಿಗಳು ನಿಂತು ಹೋಗಿವೆ. ನನಗೆ ನೆನಪಿರುವಂತೆ ಒಂದು ಸಲ ಬ್ರಿಟಿಷ್ ಸರಕಾರದ ಕಾಲದಲ್ಲಿ ಕೆಲವು ಜನರ ನಿವೃತ್ತಿ ವೇತನದ ಕಾಗದಗಳು ಒಂದು ವರ್ಷದವರೆಗೆ ಬರಲಿಲ್ಲ. ನಿವೃತ್ತರಾದ ಜನ ಅರ್ಜಿ ಕೊಡುತ್ತಲೇ ಇದ್ದರು. ಪರಿಣಾಮವೇನಾಯಿತೆಂದರೆ, ಇದರ ತನಿಖೆ ಮಾಡುವುದಕ್ಕಾಗಿ ಒಬ್ಬ ಅಧಿಕಾರಿ ನೇಮಿಸಲ್ಪಟ್ಟನು. ಮತ್ತು ಷಾಹಜಹಾನ್‌ಪೂರಿನವು ಕೂಡ ಒಂದೆರಡು ಇಂಥ ವ್ಯಾಜ್ಯಗಳಿದ್ದವು. ಆದುದರಿಂದ ಅವನು ಇಲ್ಲಿಯೂ ಬಂದ. ತತ್‌ಪರಿಣಾಮವಾಗಿ ಎರಡೇ ತಿಂಗಳುಗಳಲ್ಲಿ ಕಾಗದಗಳು ಮಂಜೂರಾಗಿ ಬಂದವು. ಮತ್ತು ಪ್ರಾಯಶಃ ಗುಮಾಸ್ತರಿಗೆ ಛೀಮಾರಿ ಹಾಕಲಾಯಿತು. ನೀವು ನಿಮ್ಮ ಸಂಘದ ವತಿಯಿಂದ ನಿಮ್ಮ ಇಲಾಖೆಯನ್ನು

ಅಲ್ಲಾಡಿಸುತ್ತಿರಿ. ನಿಯಮಗಳು ಅನುಮತಿ ನೀಡಿದರೆ ಮೇಲಧಿಕಾರಿಗಳಿಗೆ ಕೂಡ ಬರೆದು ಹಾಕಿರಿ. ಇದರಿಂದ ಸಂಭವತಃ ತ್ವರೆಯುಂಟಾಗಬಹುದು.

ಚಿ. ಉಮೇಶನು ಈ ವರ್ಷ ಎಫ್-ಎ ದಲ್ಲಿ IIನೇ ಶ್ರೇಣಿಯಲ್ಲಿ ಉತ್ತೀರ್ಣನಾಗಿರುವನು. ಅವನ ವಿಷಯ ಕಾಮರ್ಸ (ವಾಣಿಜ್ಯ)ಇದೆ. ಶಾಹಜಹಾನಪೂರದಲ್ಲಿ, ಕಾಮರ್ಸ ಎಫ್.ಎ.ವರೆಗೆ ಮಾತ್ರ ಇದೆ. ಆದುದರಿಂದ ಬಿ.ಎ. ಗಾಗಿ ಬೇರೆಯ ಸ್ಥಳಕ್ಕೆ ಕಳಿಸುವುದು ಅನಿವಾರ್ಯ. ಇದು ನನಗೆ ಕಷ್ಟಸಾಧ್ಯವಾದ ಕೆಲಸವಾದ್ದರಿಂದ ನಾನು ಕಳುಹಿಸಿಕೊಡಲಾರೆ. ಲಖೀಮಪೂರದಲ್ಲಿ ಬಿ. ಕಾಂ ಇದೆ. ಅಲ್ಲಿ ಓದಿನ ಶುಲ್ಕ ಮತ್ತು ಕೈ ಖರ್ಚಿನ ಹಣದ ಹೊರತು ಮತ್ತೇನೂ ಖರ್ಚು ಮಾಡಬೇಕಾಗುವುದಿಲ್ಲ. ಆದರೆ ಅಲ್ಲಿ ಕಾಮರ್ಸಿನ ಫಲಿತಾಂಶ ಬಹಳ ಕೆಟ್ಟುದಾಗಿರುತ್ತದೆ. ಈ ವರ್ಷ ೧೦ ವಿದ್ಯಾರ್ಥಿಗಳಲ್ಲಿ ಕೇವಲ ಒಬ್ಬನು IIIನೇ ಶ್ರೇಣಿಯಲ್ಲಿ ಉತ್ತೀರ್ಣನಾಗಿರುವನು. ಉಮೇಶನಿಗೆ ಲಖನೌಗೆ ಹೋಗಲು ಮನಸ್ಸಿದೆ. ಆದರೆ ಇದು ಅಸಾಧ್ಯವಾದ ಕೆಲಸ. ಈಶ್ವರನ ಮೇಲೆ ಭರವಸೆಯಿಟ್ಟು ಲಖೀಮಪೂರಕ್ಕೆ ಕಳುಹಿಸುವುದನ್ನು ಬಿಟ್ಟರೆ ಮತ್ತೆ ಯಾವ ಉಪಾಯವೂ ಇಲ್ಲ. ಅದೃಷ್ಟವಶಾತ್ ಬೇರೆ ಯಾವುದಾದರೂ ರೂಪವು ಒದಗಿ ಬಂದುದಾದರೆ, ಅದು ಬೇರೆ ಮಾತು. ನಿಮ್ಮ ವರ್ಗಾವಣೆಯ ವದಂತಿ ಎಂದು ನಿಜವಾಗುತ್ತದೋ ನೋಡೋಣ. ಬಳ್ಳಾರಿಯಲ್ಲಿ ನೀವು ಇಷ್ಟೊಂದು ಪರಿಶ್ರಮ ಮಾಡಿರುವಿರಿ. ನೂರಾರು ಭಾಷಣಗಳನ್ನು ಕೊಟ್ಟಿರುವಿರಿ. ಆದರೆ ನಿಮ್ಮ ಶ್ರಮಕ್ಕನುಗುಣವಾಗಿ ಅಷ್ಟು ಲಾಭವಾಗಲಿಲ್ಲ. ಪ್ರಾಯಶಃ ನೀವು ಬೆಂಗಳೂರಿಗೆ ಹೋಗಬೇಕಾದೀತು. ಮತ್ತು ಬಳ್ಳಾರಿಗಿಂತ ಬೆಂಗಳೂರು ಒಳ್ಳೆಯದೆಂದು ನಾನು ಭಾವಿಸುತ್ತೇನೆ. ಅಲ್ಲಿ ನಿಮ್ಮ ಭಾಷಣಗಳ ಪರಿಣಾಮ ಒಳ್ಳೆಯದಾಗಬಲ್ಲುದು. ನೀವು ಬಳ್ಳಾರಿ ಬಿಟ್ಟ ನಂತರ ಮಿಷನ್ನಿನ ಒಂದು ಕೇಂದ್ರವನ್ನು ಒಬ್ಬರ ಅಧೀನದಲ್ಲಿ ತೆರೆಯಬಹುದಾದಂತಹ ಯಾವ ವ್ಯಕ್ತಿಯು ಇಲ್ಲಿಯವರೆಗೆ ಬಳ್ಳಾರಿಯಲ್ಲಿ ಆಗಲಿಲ್ಲ.

ಕನ್ನಡ ಭಾಷೆಯಲ್ಲಿ 'ರಿಯಾಲಿಟಿ ಎಟ್ ಡಾನ್' ಮುದ್ರಿತಗೊಂಡಿರುವುದು ಬಹಳ ಸಂತೋಷದ ಮಾತು. ೫ ಪ್ರತಿಗಳನ್ನು ಡಾ. ವರದಾಚಾರ್ಯರ ಬಳಿ ಕಳಿಸಿ ಕೊಡಬೇಕು. ಮತ್ತು ೫ ಪ್ರತಿಗಳನ್ನು, ಇದನ್ನು ಮುದ್ರಿಸಿದ ಪಟೇಲ ಸಾಹೇಬರಿಗೆ ಉಚಿತವಾಗಿ ಕೊಡಬೇಕೆಂದು ನನ್ನ ಇಚ್ಛೆ. ಅವರು ಇದಕ್ಕಿಂತ ಹೆಚ್ಚು ಬಯಸಿದರೆ ನಿರಾಕರಿಸಕೂಡದು. ನನ್ನ ಬಳಿ ೧೦ ಪ್ರತಿಗಳು ಸಾಕಾಗುವುವು. ಏಕೆಂದರೆ, ಯಾರಾದರೂ ನೇರವಾಗಿ ನನ್ನನ್ನೇ ಕೇಳಬಹುದು. ತಮಿಳು ಪುಸ್ತಕದ ವಿಷಯದಲ್ಲಿ ಆದ ಹಾಗೆ 'ಸ' ಎಷ್ಟು ಪ್ರತಿಗಳನ್ನು ಇಚ್ಛಿಸಿದರೂ ಮಾರುವುದಕ್ಕಾಗಿ ಇಟ್ಟುಕೊಳ್ಳಲಿ. 'ಸ' ಮತ್ತು ನೀವು ಪತ್ರಿಕೆಗಳಲ್ಲಿ ಇವರ ವಿಮರ್ಶೆಯನ್ನು ಅವಶ್ಯವಾಗಿ ಕಳುಹಿಸಿರಿ. ಇದರಿಂದ ಜನರಿಗೆ ತಿಳಿಯಲಿ. ನೀವು ಆಗಸ್ಟದಲ್ಲಿ ಬರುತ್ತಿರುವದು ಬಹಳ ಸಂತೋಷದ ಮಾತು. ಇನ್ನೂ ಹೆಚ್ಚಿನ ಸಂತೋಷದ ಮಾತೆಂದರೆ, ನಿಮ್ಮ ಜೊತೆಯಲ್ಲಿ ಪ್ರಿಯ 'ಮೂ' ಕೂಡ ಇರುವರು. ಶ್ರೀ 'ಗು' ರ ಪತ್ರ ಬಂದಿದೆ. ಜನ್ಮಾಷ್ಟಮಿಯಲ್ಲಿ ಅವರು ಕೂಡ ಬರುವರೆಂದು ಅವರಲ್ಲಿ ಬರೆದಿದೆ. ಕಣ್ಮಣಿ ಛಾಯಾ ತನ್ನ ಅತ್ತೆಯ ಮನೆಯಲ್ಲಿರುವಳು. ಪ್ರಾಯಶಃ ನೀವು ಬರುವವರೆಗೆ ಆಕೆಯೂ ಬರಬಹುದು. ಶ್ರೀ

ಈಶ್ವರ ಸಹಾಯ್ ಅವರ ಪುಸ್ತಕವು ಈಗ ಪೂರ್ಣ ಸಿದ್ಧವಾಗಿದೆ. ಅದನ್ನು ನೀವು ನೋಡಿಯೂ ಇರುವಿರಿ. ಈಗ ಮುದ್ರಣಕ್ಕಾಗಿ ಬೇಗ ಕಳುಹಿಸಲಾಗುವುದು. ಅದರ ಹಣದ ವ್ಯವಸ್ಥೆ ನಿಮ್ಮ ಕೇಂದ್ರದಿಂದ ಆಗಿದೆ.

ನಾನು ಅಂತರ್ಮುಖನಾದಾಗ ಅನೇಕತ್ವವು ಶೂನ್ಯಗೊಂಡ ಪ್ರಕರಣದಂತೆ ಕಾಣುವುದು. ಮತ್ತು ಬಾಹ್ಯದಲ್ಲಿ ದೃಷ್ಟಿ ಹಾಯಿಸಿದಾಗ ಅದೇ ಆಂತರಿಕ ಪ್ರಭಾವವು ಬಾಹ್ಯದಲ್ಲಿ ಅರಳಿದ್ದು ಕಾಣುವುದು. ಮತ್ತು ನಾನು ದಿಙ್ಮೂಢನಾದಾಗ ಎಲ್ಲೆಡೆಯಲ್ಲಯೂ ಈಶ್ವರನೇ ಬಹುವಾಗಿರುವ ಹಾಗೆ ತಿಳಿಯುವುದು. ಆದರೆ ಬಂಧು, ನಾನು ಅದರ ಎಡ-ಬಲಗಳ ಕಡೆಗೆ ನೋಡಿದಾಗ ಸೃಷ್ಟಿಯ ಎಲ್ಲಾ ವರ್ಣರಂಜನೆ ಮತ್ತು ಚಟುವಟಿಕೆಗಳು ಎದುರಿಗೆ ಬರುತ್ತವೆ. ಈ ಪತನದ ಕಾರಣವೇನೆಂದು ಒಮ್ಮೆ ಯೋಚಿಸುತ್ತೇನೆ. ಯಾವ ಬಣ್ಣವು ಆ ಬಣ್ಣದಲ್ಲಿ ಬೆರೆತು ಆ ಸೊಬಗನ್ನುಂಟು ಮಾಡಿದೆ? ಮನಸ್ಸುಗಳಲ್ಲಿ ಚಂಚಲತೆಯುಂಟಾಯಿತು. ದೃಷ್ಟಿಗಳು ಬೇರೆ ಕಡೆ ಓಡಿ ಓಡಿ ಕಾಲುವೆಗಳನ್ನು ಮತ್ತು ದೋಣಿಗಳನ್ನು ನಿರ್ಮಿಸಿ ಬಿಟ್ಟವು. ಇವೆಲ್ಲ ಏನು? ಇದರ ಹೊಣೆ ಯಾರ ಮೇಲಿದೆ ? ಇಂಥ ವಾತಾವರಣ ಯಾರು ಉಂಟು ಮಾಡಿದರು ? ದೇವರೋ ಅಥವಾ ಸ್ವತಃ ನೀವೋ?. ಮತ್ತು ಇವನ್ನೇ ಮೆರಗುಗೊಳಿಸುತ್ತಾ ಹೋದವರು ಯಾರು? ಇದಕ್ಕೆ ಸಿಗುವ ಉತ್ತರವೇನೆಂದರೆ, ನಾವು ಎಲ್ಲಾ ವಿಷಯಗಳಿಂದ ನಿರ್ಲಿಪ್ತರಿದ್ದು ನಮ್ಮ ಮೂಲ ಸ್ವಾತಂತ್ರದೆಡೆಗೆ ನಿರತರಾಗಲು ಈಶ್ವರನು ನಮ್ಮ ಸ್ವಾತಂತ್ರವನ್ನು ಮೂಲಸ್ಥಿತಿಯಲ್ಲಿಯೇ ನಿರ್ಮಿಸಿರುವನು. ಆದರೆ ಕಾಲದ (ಗತಿ) ಅವಘಡಗಳು ಅದರ ದಿಕ್ಕನ್ನು ಬೇರೆ ಕಡೆಗೆ ತಿರುಗಿಸಿ ಬಿಟ್ಟವು. ನಮ್ಮ ಮನಸ್ಸು ಮೂಲ ಸ್ವಾತಂತ್ರದಿಂದ ಹೊರಳಿ ಇಂದ್ರಿಯಗಳ ಕಡೆಗೆ ನೋಡತೊಡಗಿ ಅವುಗಳಲ್ಲಿ ಪೂರ್ತಿ ಮುಳುಗಿತು. ಮತ್ತು ಮೇಲೆದ್ದರೂ ಸಹ ತತ್ಕ್ಷಣದಲ್ಲಿ ಇಂದ್ರಿಯಗಳನ್ನು ಬಲಪಡಿಸುವ ವಸ್ತುಗಳನ್ನೇ ನಿರ್ಮಿಸಿಕೊಂಡುದರಿಂದ ಅಲ್ಲಿಂದ ಮೇಲಕ್ಕೇಳಲು ಸಾಧ್ಯವಾಗಲಿಲ್ಲ. ಮತ್ತು ಅವಕ್ಕೆ ಸಿಕ್ಕಿದವುಗಳು ಸಹ ಅಂಥವೆ. ಅವುಗಳಿಗೆ ತೋರಿಸಲಾದ ಮಾತುಗಳಾದರೂ ಎಂಥವುಗಳೆಂದರೆ, ಅವನ್ನು ಮೆಚ್ಚಿಕೊಂಡವು ಸಹ. ಏಕೆಂದರೆ, ಅವು ನಿರ್ಮಿಸಿಕೊಂಡಿದ್ದ ಕೇಂದ್ರಗಳಿಗೆ ಶಕ್ತಿಯನ್ನು ನೀಡುವಂತಿದ್ದವು. ಇದು ಹೇಗಾಯಿತು? ಇಂದ್ರಿಯಗಳ ಸ್ಥರದಲ್ಲಿಯೇ ಇರುತ್ತಿದ್ದರೂ, ಆಕಾಶದ ಕಡೆ ನೋಡುತ್ತಿರುವಂತೆ ತಮ್ಮನ್ನು ತಾವು ತೋರಿಸಿಕೊಳ್ಳುತ್ತಿದ್ದ ಜನರ ಸಹವಾಸದಿಂದ. ಅವರು ನಮ್ಮಲ್ಲಿಯ ಮಹಾತ್ಮರು. ಜನರು ತಾವು ನಿರ್ಮಿಸಿಕೊಂಡಿರುವ ಕೇಂದ್ರವನ್ನು ಬಿಟ್ಟು ಬಿಡಬೇಕೆಂದು ನಾನು, ನೀವು ಬಯಸುವೆವು. ಆದರೆ ಅವರು ದೈವೀಕೇಂದ್ರದಲ್ಲಿಯೂ ಕೂಡ ತಾವು ಮಾಡಿಕೊಂಡಿರುವ ಕೇಂದ್ರವಿದ್ದರೆ ಮಾತ್ರ, ಅದನ್ನು ಬಿಡಲು ಸಿದ್ಧರಾಗಬಹುದು. ಶಬ್ದಗಳು ಕಟುವಾದರೂ ಬರೆಯಲೇ ಬೇಕಾಗುವುದು. ಕುರಿಗಳ ಕಡಿವಾಣವು ತೋಳದ ಹತ್ತಿರ ಇದ್ದಂತಾಯಿತು. ಮತ್ತು ಎಲ್ಲ ವ್ಯವಸ್ಥೆಯೂ ಅಸ್ತವ್ಯಸ್ತವಾಯಿತು. ಈಗ ಬಂಧು, ನಮ್ಮಲ್ಲಿ ಬಹಳಷ್ಟು ಹೊಣೆಯನ್ನು ಹೊರಲಾಗದ ಸಜ್ಜನರು ಎಷ್ಟು ವಿಧದವರು ಎಂಬ ಬಗ್ಗೆ ಸ್ವಲ್ಪ ಯೋಚನೆಯನ್ನಾದರೂ ಮಾಡಿರಿ. ಮತ್ತು ಅವರೊಳಗಿಂದಲೇ ನಾವು ಯಾರನ್ನಾದರೂ ಗುರುವೆಂದು

ಭಾವಿಸಿಕೊಳ್ಳುವೆವು. ಅಂಥವರ ಪ್ರಕಾರ ಹೀಗಿರಬಹುದು: ೧) ಕ್ಷುದ್ರ ವಿದ್ಯಾಗುರು. ೨) ಗ್ರಂಥಗುರು, ೩) ಮೂಲಗುರು, ೪) ಅನುಗ್ರಹಗುರು, ೫) ಮೂಲಾನುಗ್ರಹ ಗುರು.

ಕ್ಷುದ್ರ ವಿದ್ಯಾಗುರುಗಳು ಯಾರೆಂದರೆ, ಭೂತ ಪ್ರೇತಗಳ ಪೂಜೆ ತೋರಿಸುವವರು ಮತ್ತು ಭೂ. ಭಾ. ಮಾಡುವವರು (ಮಾಟ ಮಂತ್ರ ಮಾಡುವವರು). ಗ್ರಂಥಗುರು ಯಾರೆಂದರೆ, ಗ್ರಂಥಗಳನ್ನು ಓದಿ ಇತರರಿಗೆ ಅವುಗಳಲ್ಲಿಯ ಕ್ರಿಯೆಗಳನ್ನೇ ತೋರಿಸುವವರು. ಈ ಕ್ರಿಯೆಗಳು ಯಾರಿಗಾಗಿ ಮತ್ತು ಯಾತಕ್ಕಾಗಿವೆ? ಮತ್ತು ಯಾವ ಸ್ಥಿತಿಗಳಲ್ಲಿ ಲಾಭದಾಯಕವಾಗಬಹುದು? ಎಂಬುದರ ಬಗ್ಗೆ ಅವರಿಗೆ ಏನೂ ತಿಳುವಳಿಕೆಯಿರುವುದಿಲ್ಲ.

ಮೂಲಗುರುಗಳು ಯಾರೆಂದರೆ, ಅವರು ನಿಮಗೆ, ನೀವೂ ಕೂಡ-ಮಾರ್ಗ-ಮಧ್ಯದ ಸುಳಿಯಲ್ಲಿ, ಅಭ್ಯಾಸಿಯು ಸಿಕ್ಕಿಕೊಳ್ಳದಿದ್ದರೆ-ಅದೇ ವಲಯದಲ್ಲಿ ಪೂರ್ಣತ್ವವನ್ನು ಹೊಂದಲು ಸಾಧನೆಯನ್ನು ತೋರಿಸುತ್ತ ಹೋಗುವರು. ಆ ಸುಳಿಯಿಂದ ಮೇಲೆತ್ತುವುದು ಅವರ ಶಕ್ತಿಗೆ ಮೀರಿದುದಾಗಿದೆ. ಮೂಲವೆಂಬ ಶಬ್ದವನ್ನು ಏಕೆ ನಾನು ಬರೆದಿರುವೆನೆಂದರೆ ಅವರಿಗೆ ಅಲ್ಪ-ಸ್ವಲ್ಪವಾದರೂ ಮೂಲಸ್ಥಿತಿಯ ಗಾಳಿಯು ಸೋಂಕಿಯೇ ಇರುತ್ತದೆ.

ಅನುಗ್ರಹ ಗುರು ಯಾರೆಂದರೆ, ಅವರ ಕಡೆ ಈಶ್ವರನ ಅನುಗ್ರಹ ಮತ್ತು ಕೃಪೆಯು ಯಾವಾಗಲೂ ತಿರುಗಿಕೊಂಡಿರುತ್ತದೆ. ಅವರು ಈ ಕೃಪೆಯನ್ನು ಇತರರ ಸುಧಾರಣೆಗಾಗಿ ಇಚ್ಛಿಸಿದಾಗಲೆಲ್ಲ ಹೊರಳಿಸಬಹುದು. ಗುರುಗಳ ಬಗೆಯು ಇನ್ನೊಂದು ಕೂಡ ಆಗಬಹುದು. ಆದರೆ ಈ ಬಗೆಯ ಮನುಷ್ಯನು ದೊರೆಯುವುದು ದುಸ್ತರ. ಆತನನ್ನು ಮೂಲಾನುಗ್ರಹಕರ್ತ ಎನ್ನುತ್ತಾರೆ. ಆತನು ಮೂಲಸ್ಥಿತಿಯನ್ನು ತಲುಪಿ ಪರಮಾತ್ಮನನ್ನು ಬಿಗಿಯಾಗಿ ಹಿಡಿದುಕೊಂಡಿರುವವನು. ಹೀಗಿರಲು, ಬಂಧು, ನಾವು ಈ ಬಗೆಯ ಗುರುವನ್ನು ಹುಡುಕಿಕೊಳ್ಳಬೇಕು. ಈತನು ಸಿಗದಿದ್ದಾಗ, ಅನುಗ್ರಹ ಗುರುವಿನಿಂದಲೇ ಸಂತುಷ್ಟರಾಗಬೇಕು. ಗ್ರಂಥ ಗುರುವಿನಲ್ಲಿ ಪ್ರತಿಯೊಂದು ರೀತಿಯ ಸಂಶಯಗಳು ಹುಟ್ಟಬಹುದು. ಆತನ ಆಚರಣವು ಸರಿಯಿರಲಿಕ್ಕಿಲ್ಲ, ಆದರೆ ಅನುಗ್ರಹ ಮತ್ತು ಮೂಲಗುರುಗಳಲ್ಲಿ ಇದರ ಸಾಧ್ಯತೆಯಿಲ್ಲ, ಇದನ್ನು ನೀವು ಹೇಳುತ್ತಲೇ ಇದ್ದರೂ ಕೇಳಲಾರದವರು ಬಹಳ ಜನ ಸಿಗುವರು, . . . . . . . . .

ಮಕ್ಕಳಿಗೆ ಆಶೀರ್ವಾದಗಳು.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೨೩                                                            ಷಾಹಜಹಾನ್‌ಪೂರ್
ನಂ. ಜಿ-೩೨೭/ಎಸ್.ಆರ್.ಸಿ.ಎಮ್.                                    ದಿ. ೩೦. ೭. ೧೯೭೨

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಸಂತೋಷದ ಪತ್ರ ಬಂದಿತು. ಕೆಲವು ಸತ್ಸಂಗಿಗಳು ನಿಮ್ಮ ಜೊತೆಯಲ್ಲಿ ಬರುತ್ತಿರುವುದು ಬಹಳ ಸಂತೋಷದ ಮಾತು. ಅವರು ನನಗೆ ವೈಯಕ್ತಿಕವಾಗಿಯೂ ಬರೆದಿರುವರು. ಕನ್ನಡ ಭಾಷೆಯ ೧೦ ಪುಸ್ತಕಗಳು ನನಗೆ ದೊರೆತವು. ಎಷ್ಟು ಹೆಚ್ಚಿನ ಸಂಖ್ಯೆಯ ವೃತ್ತ ಪತ್ರಿಕೆಗಳಲ್ಲಿ ಅದರ ಸಮೀಕ್ಷೆಯಾಗುವುದೋ ಅಷ್ಟು ಒಳ್ಳೆಯದು. ಲಖನೌನಲ್ಲಿರುವ 'ಸ' ನ ವರ್ಗಾವಣೆ ಪಠಾಣಕೋಟಕ್ಕೆ ಆಗಿವೆ. ಆತನು ಜನ್ಮಾಷ್ಟಮಿಗೆ ಬರುವೆನೆಂದು ಬರೆದಿರುವನು. ನೀವು ಲಖನೌ ತಲುಪುವ ವೇಳೆಯನ್ನು ಶ್ರೀ 'ನ' ಗೆ ಬರೆದು ತಿಳಿಸಿರಿ. ಅವರ ವಿಳಾಸ ಕೆಳಗೆ ಕೊಟ್ಟಿರುವೆನು. ಅಲ್ಲಿಯ ಸತ್ಸಂಗಿಗಳು ಬಂದು ನಿಮ್ಮನ್ನು ಭೇಟಿಯಾಗಿ ಪ್ರವಾಸದಿಂದ ಆಯಾಸಗೊಂಡ ನಿಮಗೆ ವಿಶ್ರಾಂತಿಯನ್ನೊದಗಿಸುವ ಪ್ರಯತ್ನ ಮಾಡುವರು. ವಿಳಾಸ ಮನೆ ನಂ. II, ೧೫-ಎಫ್, ಬರಾಹ ರೇಲ್ವೆ ಕಾಲನಿ, ಲಖನೌ.

ನಾನು ಕೂಡ ೪ ನೇ ದಿನಾಂಕದಂದು ಲಖನೌಗೆ ಹೋಗುತ್ತಿರುವೆನು. ಮತ್ತು ಅಲಹಾಬಾದಕ್ಕೆ ಹೋಗಿ, ೩-೪ ದಿನಗಳಲ್ಲಿ ಮರಳಿ ಬರುವೆನು. ನಿಮಗೆ ಪುನಃ ಒಂದು ತೊಂದರೆ ಕೊಡಲಿಚ್ಛಿಸುವೆ. ಹೋದ ವರ್ಷ ನೀವು ಕಲ್ಲಿನಿಂದ ಮಾಡಿದ ಒಂದು ಗುಂಡುಪೊಂಗಲ ಪಾತ್ರೆಯನ್ನೂ, ಹೂಗಳನ್ನೂ ಕೆತ್ತಿರುವ ಮತ್ತೊಂದು ಶಿಲೆಯ ಫಲಕವನ್ನು ಕೊಟ್ಟಿದ್ದಿರಿ. ಅದನ್ನು ನಾನು ಹಿರಿಯ ಮಗಳಿಗೆ ಕೊಟ್ಟು ಬಿಟ್ಟೆ. ಈಗ ನಾನು ಇವೇ ಎರಡು ವಸ್ತುಗಳನ್ನು ಚಿಕ್ಕಮಗಳಿಗೂ ಕೊಡಲಿಚ್ಛಿಸುವೆ. ನೀವು ಸುಲಭವಾಗಿ ತರಲು ಸಾಧ್ಯವಾದರೆ ತೆಗೆದುಕೊಂಡು ಬನ್ನಿರಿ. ನಾನು ಕೂಡಾ ನನ್ನ ಜೊತೆಯಲ್ಲಿ ತೆಗೆದುಕೊಂಡು ಬರಬಹುದಾಗಿತ್ತು. ಆದರೆ ನನ್ನ ಜೊತೆಯಲ್ಲಿ ಸಾಮಾನುಗಳು ಬಹಳ ಇರುತ್ತವೆ.

ಪತ್ರವನ್ನು ಬರೆಸುತ್ತ ಬರೆಸುತ್ತ ಒಂದು ವಿಚಾರ ಬಂದಿತು. ನನ್ನ ಅಶಕ್ತತೆ ಮತ್ತು ಆಲಸ್ಯದ ಸ್ಥಿತಿ ಹೇಗಿದೆಯೆಂದರೆ, ಊಟವು ಹೊಟ್ಟೆಯೊಳಗೆ ಬಾಯಿಯಾಡಿಸದೆಯೆ ತಲುಪುತ್ತಿದ್ದರೆ ನಾನು ಬಹಳ ಸಂತೋಷಗೊಳ್ಳುತ್ತಿದ್ದೆ. ಉದಾಹರಣೆಗೆ, ನಾನು ಯಾವಾಗಲಾದರೂ ಹೊರಗೆ ಹೋಗಲಿಚ್ಛಿಸಿದರೆ ಅಶಕ್ತತೆ ಮತ್ತು ಆಲಸ್ಯ ಅಡ್ಡಿಯಾಗಿ ನಾನು ವಿಳಂಬ ಮಾಡುತ್ತಲೇ ಇರುತ್ತೇನೆ. ಕೊನೆಗಂತೂ ಹೋಗುವುದೇ ಇಲ್ಲ. ಅಲಹಾಬಾದಕ್ಕೆ ಹೋಗಲು ಎರಡು ವರ್ಷದಿಂದ ಒಬ್ಬ ಸಜ್ಜನರು ಕರೆಯುತ್ತಿರುವರು. ಅಲ್ಲಿ ಕೆಲವು ಜನರು ಅಭ್ಯಾಸವನ್ನಾರಂಭಿಸಲಿಚ್ಛಿಸುವರು. ಆದರೆ ನಿಶಕ್ತಿಯು ಅನುಮತಿ ಕೊಡುತ್ತಿಲ್ಲ. ಈಗ ಇದೇ ಕ್ಷಣ, ೪ ನೇ ದಿನಾಂಕಕ್ಕೆ ಹೋಗಲು ನಿರ್ಧರಿಸಿದೆ. ಈಗ ನಿಶ್ಶಕ್ತತೆಯೂ ಇಲ್ಲ, ಆಲಸ್ಯವೂ

ಇಲ್ಲ, ಬೇರೆ ಇನ್ನಾವ ತಡೆ ಕೂಡಾ ಇಲ್ಲ. ಈ ಮಾತನ್ನು ನಾನು ಏಕೆ ಬರೆದೆನೆಂದರೆ ಈಶ್ವರ ಪ್ರಾಪ್ತಿಗಾಗಿ ಇಂಥದೇ ದೃಢ ನಿರ್ಧಾರವನ್ನು ಮಾಡಿದ್ದಾದರೆ, ಮನುಷ್ಯನು ಹೊರಟೇ ಬಿಡುವನು.

ಹಿಂದಿನ ಪತ್ರದಲ್ಲಿ ನಾನು ಗುರುಗಳ ಪ್ರಕಾರಗಳನ್ನು ಬರೆದಿದ್ದೆ. ಅವರಲ್ಲಿ ಇನ್ನೂ ಕೆಲವು ಪ್ರಕಾರಗಳಾಗಬಹುದಾಗಿದ್ದರೂ ಬರೆಯಲಿಲ್ಲ. ಏಕೆಂದರೆ ಮತ್ತೆ ಶ್ರೀ ಅರವಿಂದಜೀಯವರ ಚೇತನಶೆಯ ಹಾಗೆ, ಹಲವಾರು ಭಾಗಗಳಾಗುವವು. (ಮತ್ತು . . . . . ) (ಇಲ್ಲಿ ಇಂಗ್ಲಿಷಿನ ಪದ ಪುಂಜದ ವಿಡಂಬನೆ ಇದೆ) ನಾನು ಮೂಲಗುರು ಎಂದು ಬರೆದಿದ್ದೆ, ಅದರಲ್ಲಿ ಒಂದು ಮಾತು ಬರೆಯಲು ಬಿಟ್ಟು ಹೋಗಿತ್ತು. ಏನೆಂದರೆ ಅವರದು ಏರಿಳಿತವಿಲ್ಲದಂತಹ ಮೂಲ ಸ್ಥಿತಿ ಅವಶ್ಯವಾಗಿ ಇರುವುದು. ಆದರೆ ಇನ್ನೊಬ್ಬರಿಗೆ ತಮ್ಮ ಆಂತರಿಕ ಸ್ಥಿತಿಯಿಂದ ಕಾವುಕೊಡಬಲ್ಲ ಸಾಮರ್ಥ್ಯವಿರುವುದಿಲ್ಲ. ಅನುಗ್ರಹ ಗುರುವಿನಲ್ಲಿ ಇದು ಇರುತ್ತದೆ. ಅವರು ಈಶ್ವರನ ಕೃಪೆಯನ್ನು ಅಭ್ಯಾಸಿಯಲ್ಲಿ ಸಂಚರಣಗೊಳಿಸಬಲ್ಲರು. ಅವರಲ್ಲಿ ಮತ್ತೆ ಎರಡು ವಿಧಗಳಾಗಬಹುದು. ಸ್ವತಂತ್ರರು, ಪರತಂತ್ರರು. ಭಗವತ್ ಕೃಪೆಯು ಅನುಗ್ರಹ ಗುರುವಿನ ಮೇಲೆ ಯಾವಾಗ ಉಂಟಾಗುತ್ತದೆಯೋ ಅದರ ಸ್ವಲ್ಪ ಭಾಗವನ್ನು ಅವರು ಇನ್ನೊಬ್ಬರಲ್ಲಿ ಸಂಚಾರಗೊಳಿಸಬಲ್ಲರು. ಅದಕ್ಕೆ ಮುಂಚೆ ಅವರು ಹಾಗೆ ಮಾಡಲಾರರು. ಆದರೆ ಯಾರು ಸ್ವತಂತ್ರರಿರುವರೊ, ಅವರು ತಮ್ಮ ಇಚ್ಛಾನುಸಾರ ದೈವೀಕೃಪೆಯನ್ನು ಎಳೆದು ತಂದು ಇತರರಿಗೆ ನೀಡಬಲ್ಲರು. ನಮ್ಮ ಸಹಜಮಾರ್ಗದಲ್ಲಿ ಪ್ರತಿಯೊಬ್ಬ ಅಭ್ಯಾಸಿಯೂ ಸ್ವತಂತ್ರನಾಗಿರುವನು. ಏಕೆಂದರೆ ತರಬೇತಿಯ ಪದ್ಧತಿ ಹೀಗಿದೆ. ಮತ್ತು ಮೂಲಾನುಗ್ರಹ ಗುರುವಿನ ಬಗೆಗಂತೂ ಹೇಳುವುದೇನಿದೆ? ಆತನಂತೂ ತಾನು ಇಚ್ಛಿಸಿದಾಗಲೆಲ್ಲ ಇದನ್ನು ಕ್ಷಣಮಾತ್ರದಲ್ಲಿ ಮಾಡಬಲ್ಲನು. ಮತ್ತು ಈ ಬಗೆಯ ಸಂತನು ಅತ್ಯಂತ ವಿರಳ.

ಈಗ ಶಿಷ್ಯರ ಪ್ರಕಾರಗಳನ್ನು ಸಹ ಕೇಳಿರಿ. ಸ್ವಾರ್ಥಿ, ಲಪರಿಯವ, ಅರ್ಹ ವಿದ್ಯಾರ್ಥಿ ಅಥವಾ(ಶಿಷ್ಯ), ಅರ್ಥಿ(ಅಥವಾ ಗುರು ಅರ್ಥಿ).

ಸ್ವಾರ್ಥಿ ಶಿಷ್ಯರು ಯಾರೆಂದರೆ, ಅವರಿಗೆ ಹೇಗೊ, ಶ್ರೀ ರಾಘವೇಂದ್ರರಾವ್ ಎಂಬುವವರು ಮಹಾತ್ಮರು ಮತ್ತು ದೇವ ಪೂಜಕರಿರುವರೆಂದು ತಿಳಿದಾಗ ಆತನ ಸತ್ಸಂಗದಲ್ಲಿ ಸೇರಿಕೊಂಡರೆ ತಮ್ಮ ಕೆಲಸ ಚೆನ್ನಾಗಿ ನೆರವೇರುವದೆಂದು ಭಾವಿಸುವರು. ಅಂತೂ ಈ ಪ್ರಾಪಂಚಿಕ ಇಚ್ಛೆಗಳೊಂದಿಗೆ ಸಂಬಂಧವಿಟ್ಟುಕೊಂಡು ಕೆಲಸವನ್ನು ಮಾಡದೆ ಕೇವಲ ಕಾರ್ಯ ಸಾಧನೆಯ ಉದ್ದೇಶದಿಂದ ಮಾತ್ರ ಸತ್ಸಂಗದಲ್ಲಿ ಸೇರಿಕೊಂಡು ಮುಖಸ್ತುತಿ ಮುಂತಾದುವುಗಳಿಂದ ಕಾರ್ಯ ಸಾಧಿಸಿಕೊಳ್ಳುವರು. ಕೆಲಸ ನೆರವೇರಿತೆಂದರೆ ಜಾರಿಕೊಳ್ಳುವರು. ಮತ್ತು ಆಗದಿದ್ದರಂತೂ ಮುಖವನ್ನು ತಿರುವಿಕೊಂಡು ಹೊರಟು ಹೋಗುವರು. ಅವರಿಗೆ ಸಾಧನೆ ಮತ್ತು ಅನುರಾಗದೊಂದಿಗೆ ಸಂಬಂಧವಿಲ್ಲ.

ಲಹರಿಯವರು ಯಾರೆಂದರೆ, ಯಾವಾಗಲಾದರೂ ಸುಸಮಯದ ರಮಣೀಯತೆಯಿಂದ ಹೃದಯದಲ್ಲಿ ಕೊಂಚ ಉದ್ವೇಗ ಉಂಟಾದಾಗ ಬಂದು ಬಿಡುವರು. ಅಥವಾ ಯಾವಾಗಲಾದರೊಮ್ಮೆ ಪೂಜೆಯಲ್ಲಿ ಕುಳಿತುಕೊಳ್ಳುವರು. ಹಾರ್ದಿಕ ಆಸಕ್ತಿ ಕಿಂಚಿತ್ತಾದರೂ ಇರುವುದಿಲ್ಲ. ಯಾರಲ್ಲಿ ಉತ್ತಮವಾದ ಪೂಜೆಯ ಸಂಸ್ಕಾರವಿದ್ದು ಪೂಜೆ ಮಾಡಲು ಇಚ್ಛಿಸಿ ಮುಂದುವರಿಸಬಯಸುವರೋ ಅವರೇ ಅರ್ಹರು. ಇವರು ಆದರಲ್ಲಿಯೇ ಪ್ರಗತಿ ಸಾಧಿಸಿ ವಿದ್ಯಾರ್ಥಿ ಅಥವಾ ಶಿಷ್ಯರ ಸ್ಥಿತಿಗೆ ಬರುವರು. ಕೆಲವರು ಮೊದಲಿನಿಂದಲೇ ವಿದ್ಯಾರ್ಥಿ ಅಥವಾ ಶಿಷ್ಯನ ಸ್ಥಿತಿ ಹೊಂದಿ ಮುಂದುವರಿಯುವರು. ಯಾವನಿಗೆ ಗುರುವಿನ ಮೇಲೆ ಅತ್ಯಂತ ಪ್ರೇಮವಿದೆಯೋ ಅವನೇ ನಿಜವಾದ ಶಿಷ್ಯನೆನಿಸಿ ಗುರುವಿನೊಂದಿಗೆ ಸಂಬಂಧವುಳ್ಳವನಾಗಿರುವನು. ಶಿಷ್ಯನಲ್ಲಿರಬೇಕಾದ ಪ್ರತಿಯೊಂದು ಗುಣವೂ ಆತನಲ್ಲಿರುವುದು. ಈಗ ಶಿಷ್ಯರಲ್ಲಿ ಯಾವನಾದರೊಬ್ಬ ಧೀರನು ''ಗುರು ಅರ್ಥಿಯ'' ಸ್ಥಾನ ಪಡೆದುಕೊಳ್ಳುವನು. ಈತನು ಗುರುವಿನ ಪ್ರೇಮಕ್ಕೆ ಪಾತ್ರನಾಗುವನು. ಎಂದರೆ ಗುರುವಿನ ದೃಷ್ಟಿ ಆತನ ಮೇಲಿರುತ್ತದೆ. ಬೇರೆ ಅರ್ಥದಲ್ಲಿ ಹೇಳುವುದಾದರೆ, ಯಾವ ರೀತಿ ಮನುಷ್ಯನ ದೃಷ್ಟಿಯು ಧ್ಯೇಯದ ಮೇಲೆ ಇರುತ್ತದೆಯೋ, ಅದೇ ರೀತಿ ಗುರುವಿನ ದೃಷ್ಟಿ ಆತನ ಮೇಲೆ ಇರುತ್ತದೆ. ಆತನನ್ನು 'ಪ್ರಿಯತಮ' ಅಥವಾ 'ಇಷ್ಟ' ಎಂದು ಕೂಡ ಹೇಳಬಹುದು. ಮತ್ತು ಇಂಥ ಜನರು ಅತ್ಯಂತ ವಿರಳವಾಗಿ ಸಿಗುವರು.

ಈ ಕಾಲದಲ್ಲಿ ಶಿಷ್ಯರು ಬಹಳ ಕಷ್ಟದಿಂದ ಸಿಗುವರು. ಮತ್ತು ಇದೇ ರೀತಿ ಗುರುವೂ ಸಹ ಕಷ್ಟದಿಂದ ದೊರೆಯುವನು. ಪೂಜ್ಯ ಲಾಲಾಜಿ ಸಾಹೇಬರು ''ಈ ಕಾಲದಲ್ಲಿ ಶಿಷ್ಯರು ಅಲ್ಪ-ಸ್ವಲ್ಪ ಕಾಣುವರು. ಮತ್ತು 'ಗುರು ಅರ್ಥಿಗಳು' ಅತ್ಯಂತ ವಿರಳ'' ಎಂದು ನನಗೊಂದು ಪತ್ರದಲ್ಲಿ ಬರೆದಿದ್ದರು.

ನಾನು ಗುರು ಮತ್ತು ಶಿಷ್ಯರ ಕೆಲವು ಬಗೆಗಳನ್ನು ಮಾಡಿ ಪ್ರತಿಯೊಂದು ಮಾತನ್ನು ವಿಶದೀಕರಿಸಿರುವೆನು. ಜನಗಳಿಗೆ ತಿಳಿಸುವುದಕ್ಕೆ ಮತ್ತು ಭಾಷಣ ಮುಂತಾದುವುಗಳನ್ನು ಕೊಡುವುದಕ್ಕೆ ಪ್ರಾಯಶಃ ಸಹಾಯವಾಗಬಹುದು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೨೪
ನಂ. ಜಿ-೩೪೧/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ. ೧. ೮. ೧೯೬೨.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಆಶೀರ್ವಾದದ ನಂತರ ವಿದಿತ ಪಡಿಸುವುದೇನೆಂದರೆ, ನನ್ನ ಲಕೋಟೆ ತಲುಪಿರಬಹುದು. ಈಗ ನಿಮ್ಮೆಲ್ಲರ ಆಗಮನದ ಪ್ರತೀಕ್ಷೆ ಮಾಡುತ್ತಿರುವೆನು. ಬಾಬೂ 'ಶಿ' ದೀರ್ಘಕಾಲದಿಂದ ಅಸ್ವಸ್ಥರಿರುವರು. ಅವರ ಮಂಡೆಯಲ್ಲಿ ನೀರು ಇಳಿದು ಬಂದಿದೆ. ಒಮ್ಮೆ ತೆಗೆಯಲಾಗಿತ್ತು ಕೂಡ. ಅವರಿಗೆ ಪ್ಲಾಸ್ಟರ ಪಟ್ಟಿ ಕಟ್ಟಲಾಗಿದೆ. ಮತ್ತು ಮಂಚದಮೇಲೆ ಮಲಗಿರುತ್ತಾರೆ. ನೀವು ಹೈದ್ರಾಬಾದಿಗೆ ಹೋದಾಗ, ಸಮಯವಿದ್ದರೆ, ಅವರನ್ನು ನೋಡಿ ಬನ್ನಿರಿ. ಎರಡನೆ ಮಾತೆಂದರೆ ಚಾರಮಿನಾರ ಸಿಗರೇಟಿನ ೨೦ ಅಥವಾ ೨೫ ಡಬ್ಬಿಗಳನ್ನು ತೆಗೆದುಕೊಂಡು ಬರಬೇಕು. ಇಲ್ಲಿ ಬಹಳ ಕಷ್ಟದಿಂದ ದೊರಕುತ್ತವೆ. ಜನ್ಮಾಷ್ಟಮಿಯ ವ್ರತವು ಆಗಸ್ಟ ೨೧ ರಂದು ಇದೆ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೨೫

ಲಖನೌ
ದಿ. ೨೪. ೧೦. ೧೯೬೨.

ನನ್ನ . . . . . ಜೀ,

ನಿಮ್ಮ ಪತ್ರಗಳೆಲ್ಲ ತಲುಪಿದವು. ಅವುಗಳಲ್ಲಿ ಉತ್ತರಕ್ಕೆ ಯೋಗ್ಯವಾದ ಮಾತುಗಳಿಗೆ ಅವಶ್ಯವಾಗಿ ಉತ್ತರಕೊಡುವೆನು.

ನಾನು ಸೆಪ್ಟೆಂಬರ ೨೮ ರಂದು ಆಸ್ಸಾಂದಿಂದ ಮರಳಿದೆನು. ೫ ನೆ ಅಕ್ಟೋಬರದಂದು ಹಲ್ಲುಗಳನ್ನು ಮಾಡಿಸಲು ಲಖನೌಕ್ಕೆ ಬರಬೇಕಾಯಿತು. ಅಂದಿನಿಂದ ಇಲ್ಲೇ ಇರುವೆನು. ೩೧ನೇ ಅಕ್ಟೋಬರಕ್ಕೆ ಬಿಡುಗಡೆ ದೊರಕುವ ಸಂಭವವಿದೆ. ೧೦ ದಿನಗಳ ನಂತರ ಪ್ರತಿ ನಾಲ್ಕು ದಿನಗಳಿಗೊಮ್ಮೆ ನನಗೆ ಬರಲು ಹೇಳಿರುವರು. ಅದು ನನ್ನಿಂದ ಸಾಧ್ಯವಾಗದು. ಇದೇ ಕಾರಣದಿಂದ ದಕ್ಷಿಣಭಾರತದ ಪ್ರವಾಸ ಕಾರ್ಯಕ್ರಮ ಮಾಡಲಾರದಾದೆ. ಆಲೂಗಡ್ಡೆಯ ಬಿತ್ತನೆಯ ಕೆಲಸ ಇನ್ನೂ ಹಾಗೆಯೇ ಉಳಿದಿದ್ದು ಅದರಲ್ಲಿ ತಡವಾಗುತ್ತಿದೆ.

ಊರಿಗೆ ಹೋಗಿ ಆಲೂಗಡ್ಡೆಯ ಬಿತ್ತನೆಯ ಲೆಕ್ಕ ಹಚ್ಚಿ ಪ್ರವಾಸ ಕಾರ್ಯಕ್ರಮವನ್ನು ನಿಶ್ಚಯಿಸುವೆನು. ದೆಹಲಿಯಿಂದ ೧೬ ಅಥವಾ ೧೭ ನವ್ಹೆಂಬರಿಗೆ ಹೊರಡಬಹುದು. ಬಿಜಾಪೂರಕ್ಕೆ ಹೋಗಲು ಸತ್ಸಂಗಿಗಳು ನನ್ನನ್ನು ಬಲವಂತ ಪಡಿಸುತ್ತಿದ್ದಾರೆ. ನಾನು ಸಾಧ್ಯವಿದ್ದಷ್ಟು ಪ್ರಯತ್ನ ಮಾಡುವೆನು. ಆದರೆ ನಾನು ಬಿಜಾಪೂರಕ್ಕೆ ಹೋಗುವುದು ಅವಶ್ಯವೋ ಹೇಗೆಂಬುದನ್ನು ನೀವು ಬರೆದು ತಿಳಿಸಿರಿ. ಒಂದು ವಿಧದ ಪ್ರೇಮ ಮತ್ತು ಆಸಕ್ತಿ ಇದ್ದುದರಿಂದ ಇಷ್ಟು ದೂರದ ಪ್ರವಾಸವನ್ನು ಕೈಕೊಳ್ಳುತ್ತೇನೆ. ಇಲ್ಲದಿದ್ದರೆ ದೇಹದ ದುರ್ಬಲತೆಯಿಂದಾಗಿ ಪ್ರವಾಸ ಮಾಡಬಲ್ಲಷ್ಟು ಶಕ್ತನಲ್ಲ.

ಮಕ್ಕಳಿಗೆ ಆಶೀರ್ವಾದಗಳು.

ಆಶೀರ್ವಾದಗಳೊಂದಿಗೆ,

ರಾಮಚಂದ್ರ.

ವಿ.ಸೂ.: ನೀವು ತಲುಪಿದ ಸ್ಥಳವೀಗ ಎರಡನೇಯ ವೃತ್ತದ ಮೇಲಿದೆ.

◆ ◆ ◆

"ಓಂ ತತ್‌ಸತ್"

ನಂ.೧೨೬
ನಂ. ಜಿ-೫೫೬/ಎಸ್.ಆರ್.ಸಿ.ಎಮ್.

ಶಾಹಜಹಾನ್‌ಪೂರ್
ದಿ. ೧೨. ೧೨. ೧೯೬೨

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಎಲ್ಲ ಪತ್ರಗಳು ತಲುಪಿದವು. ಎಲ್ಲಕ್ಕೂ ಮುಂಚಿತವಾಗಿ, ನಾನು ನಿಮ್ಮ ಕೊನೆಯ ಪತ್ರದ ಉತ್ತರ ಕೊಡುತ್ತೇನೆ. ಇದು ಅವಶ್ಯವಾಗಿದೆ. ನಿಮ್ಮ ವೇತನವು ನಿರ್ಧಾರಿತವಾಗುವುದಕ್ಕಾಗಿ ನೀವು ಯಾವ ಪ್ರಯತ್ನವನ್ನು ಮಾಡಲು ಬಯಸುತ್ತೀರೋ, ಅದನ್ನು ಮಾಡಬಹುದು. ಸರಿಯಾದ ಮಾತಿಗಾಗಿ ಸಹಜ ಮಾರ್ಗವು ಅಡ್ಡಿ ಬರುವುದಿಲ್ಲ. ಅವಶ್ಯ ಕಂಡಂತೆ ಮಾಡಲು ನಿಮಗೆ ಅಪ್ಪಣೆಯಿದೆ. ನಾನು, ದಕ್ಷಿಣಭಾರತಕ್ಕೆ ಬರುವ ನನ್ನ ನಿರ್ಧಾರವನ್ನು ಸ್ಥಿರವಾಗಿಟ್ಟಿರುವೆನು. ಫೆಬ್ರುವರಿ ಅಥವಾ ಮಾರ್ಚವರೆಗೆ ಬರುಬಹುದಾಗಿ ಆಶಿಸುವೆ. ಆದುದರಿಂದ ನಾನು ಅಲ್ಲಿಗೆ ಬರಲಿಕ್ಕಿಲ್ಲವೆಂಬ ಕಾರಣದಿಂದ ಯಾವ ಜನರು ಇಲ್ಲಿಗೆ ಬರುತ್ತಿರುವರೋ ಅವರಿಗೆ ನಾನು ಖಂಡಿತ ಬರುತ್ತಿರುವುದಾಗಿ ತಿಳಿಸಿರಿ. ಇಲ್ಲಿ ಅವರಿಗೆ ಯಾವಾಗಲೂ ಸ್ವಾಗತವಿದೆ. ಈ ಗುಡಿಸಲು ನಿಮಗಾಗಿ ಯಾವಾಗಲೂ ತೆರೆದಿದೆ. ಆದರೆ ಕಾಲವು ಬಹಳ ಕಷ್ಟಕರವಾಗಿದೆ. ನನ್ನ ಭೇಟಿಯು ಸಮೀಪದಲ್ಲಿಯೆ ಆಗುತ್ತಿರುವಾಗ ಅವರು ಇಷ್ಟು ಹಣವನ್ನು ಪ್ರವಾಸಕ್ಕಾಗಿ ಏಕೆ ವ್ಯಯ ಮಾಡಬೇಕು? ಅದರಿಂದ ಕಷ್ಟವಾಗುವುದೆಂಬ ವಿಚಾರ ಬರುತ್ತಿದೆ. ವ್ಯಾಖ್ಯಗಳ ದಿನಾಂಕವು ಪ್ರಾಯಶಃ

ಜನವರಿಯಲ್ಲಿ ಬೀಳುವುದು. ನನಗೆ ಹೆದರಿಕೆ ಏನಿದೆಯೆಂದರೆ, ಉತ್ಸವದ ದಿನಗಳಲ್ಲಿ ಈ ದಿನಾಂಕ ಬೀಳಬಾರದು. ಈಶ್ವರನು ರಕ್ಷಿಸುವನು.

ಸರ್ನಾಡಜೀ, ಕೂಡ ಈಗ ಮಿಷನ್ನಿನ ಸೇವೆ ಮಾಡಲು ನಿರ್ಧರಿಸಿರುವರೆಂದು ತಿಳಿದು ನನಗೆ ಸಂತೋಷವಾಯಿತು. ''ಲ'' ನಿಮ್ಮ ಬಳಿಗೆ ಬಂದು ಪೂಜೆ ಮಾಡುವ ವಚನವಿತ್ತುದು ಬಹಳ ಸಂತೋಷ. ನಿಜ ಹೇಳಬೇಕಾದರೆ ಶ್ರೀ 'ಫ' ಅವರು ಸತ್ಸಂಗದೊಳಗೆ ಇರಲು ಯೋಗ್ಯರಲ್ಲ. ಅವರ ಒಳಗಡೆ ಅತ್ಯಂತ ಸ್ಥೂಲತೆ ತುಂಬಿದೆ. ಮತ್ತು ಅವರ ವಿಚಾರಗಳು ಸಹ ಶುದ್ಧವಿಲ್ಲ. ಈ ವಿಷಯವು ಅವರನ್ನು ಭೇಟಿಯಾದ ನಂತರ ತಿಳಿಯಿತು. ''ನಾನು- ನೀವು ವಿಷಯ ಚರ್ಚಿಸದವರೆಗೆ ಪೂಜೆಯೊಂದಿಗೆ ನಮ್ಮ ಸಂಬಂಧ ವಿರುವುದಿಲ್ಲವೆಂದು ಅವರು ನನಗೆ ಕಠೋರವಾಗಿಯೆ ಬರೆದಿದ್ದಾರೆ. (ಅಥವಾ ಈ ರೀತಿಯಾಗಿ ಏನೋ ಬರೆದಿದ್ದರು). ಆದರೆ ಬಂಧು, (ಉರ್ದುಕವಿತೆ) ''ಓ ನಾಸ್ತಿಕನೇ ನನಗೆ ನರಕವು ಒಪ್ಪಿಗೆ ಇದೆ, ಆದರೆ ಪ್ರಶ್ನೋತ್ತರಕ್ಕೆ ಮೆದುಳು (ತಾಳ್ಮೆ) ಇಲ್ಲ'' ಎಂಬಂತಿದೆ. ಸಹಜಮಾರ್ಗ ಪತ್ರಿಕೆಯು ಅವರ ಬಳಿ ಹೋಗುವುದು ನಿಂತು ಹೋಯಿತು. ಏಕೆಂದು ಜ್ಞಾಪಕದಲ್ಲಿಲ್ಲ. ಅವರು ಆ ಬಗ್ಗೆ ನೆನಪೂ ಸಹ ಮಾಡಲಿಲ್ಲ. ಮತ್ತು ಚಂದಾ ಹಣವನ್ನು ಪ್ರಾಯಶಃ ಕಳುಹಿಸಿರಲಿಕ್ಕಿಲ್ಲ. ಆದುದರಿಂದ ನಾನು ಈ ಸಲ ಬೆಂಗಳೂರಿಗೆ ಹೋಗುವುದಂತೂ ಸಾಧ್ಯವಿಲ್ಲ. ಅವರು ನನ್ನನ್ನು ಭೇಟಿಯಾಗಲು ಪ್ರಯತ್ನ ಮಾಡದಿರುವುದೇ ಒಳ್ಳೆಯದು. ಮತ್ತು ನಾನು ಬಯಸುವದೂ ಇದನ್ನೇ. ನನ್ನ ಭೇಟಿಯ ನಂತರ ಅವರು ಗುರುವಿನ ಅನ್ವೇಷಣೆಯಲ್ಲಿ, ಅಲ್ಲಿ-ಇಲ್ಲಿ ಹೋಗಿದ್ದರೆಂದು ಕೂಡ ನನಗೆ ತಿಳಿದು ಬಂದಿದೆ. ಪ್ರಾಯಶಃ ನನ್ನಂಥ ಬೋಳೆ ಸಿಕ್ಕಿರಲಿಕ್ಕಿಲ್ಲ.

ಶ್ರೀ 'ಆ' ಇತರರ ನಿಜವಾದ ಶೀಲದ ಪತ್ತೆ ಹಚ್ಚ ಬಯಸುತ್ತಿರುವುದು ಒಳ್ಳೆಯದೆ. ಶಕ್ತಿಯಂತೂ ಇದ್ದೇ ಇದೆ. ಆದರೆ ಅದನ್ನು ಉಪಯೋಗ ಮಾಡುವುದಿಲ್ಲ. ಅಥವಾ ಮಾಡಲರಿಯರು. ಅಂತರ್ಯದಲ್ಲಿ ನೋಡಬೇಕು, ಮತ್ತು ಯೋಚಿಸಬೇಕು. ಸ್ವಲ್ಪ ಅಭ್ಯಾಸದ ನಂತರ ಹೃದಯವು ದಾರಿ ತೋರಿಸತೊಡಗುವುದು. ನನಗೂ ಸಹ ಬಹು ಪ್ರಯಾಸದಿಂದ ಶೀಲದ ಪತ್ತೆಯಾಗುವುದು. ಅದಾದರೂ ಬಹಳ ದಿನಗಳ ನಂತರ, ಅದೂ ಅಕಸ್ಮಾತ್ತಾಗಿ - ಏಕೆಂದರೆ ನಾನು ಆ ನಿಟ್ಟಿನಲ್ಲಿ ಸಾಧನೆಮಾಡಲಿಲ್ಲ, ಅಲ್ಲದೆ ಆ ಯೋಚನೆಯೂ ಉಂಟಾಗಲಿಲ್ಲ. ನನ್ನ ಶ್ರೀ ಗುರುಮಹಾರಾಜರಲ್ಲಿ ಈ ನೈಪುಣ್ಯವಿತ್ತು. ಅವರೆದುರಿಗೆ ಒಂದು ದೃಷ್ಟಿ ಮಾತ್ರದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಒಂದು ತೆರೆದ ಪುಸ್ತಕದಂತಿರುತ್ತಿದ್ದ. ಒಮ್ಮೊಮ್ಮೆ ಸ್ಥೂಲತೆಯು ಹಾಸು ಬಂಡೆಯ ಹಾಗೆ ಇರುತ್ತದೆಂದು ಅನುಭವವು ತೋರಿಸಿಕೊಡುವುದು ಮತ್ತು ಇದನ್ನು ಸುಲಭವಾಗಿ ತಿಳಿದು ಕೊಳ್ಳಬಹುದು. ಇದರ ಅರ್ಥವೇನೆಂದರೆ, ಅದನ್ನು ಒಡೆಯುವುದು ಕಷ್ಟ. ಇಷ್ಟು ಶ್ರಮವನ್ನು ಆತನ ಮೇಲೆ ಮಾಡುವುದಾದರೂ ಏತಕ್ಕಾಗಿ? ನೀವು ಆತನನ್ನು ತೆಗೆದುಕೊಂಡರೂ ಕೂಡ ಆತನು ನಿಮ್ಮನ್ನು ಬಿಟ್ಟು ಬಿಡುವನು. ಅಂತೂ ಒಂದು ವೇಳೆ ಭಕ್ತಿಯ ಅಗ್ನಿಯು ಯಾವುದಾದರೂ ರೀತಿಯಿಂದ ಪ್ರಜ್ವಲಿಸಿಕೊಂಡರೆ -ಬಹುತೇಕ ಯಾವುದಾದರೂ ಆಕಸ್ಮಿಕದಿಂದ ಹೀಗಾಗುತ್ತದೆ - ಎಲ್ಲವೂ ಸಾಧ್ಯವಾಗಬಹುದು. ನಾನು ಬಿಜಾಪೂರಕ್ಕೆ ಹೋಗಲು ಸಾಧ್ಯವಾದ ಮಟ್ಟಿಗೆ ಪ್ರಯತ್ನಿಸುವೆನು. ಅನಾರೋಗ್ಯದ

ನಿಮಿತ್ತವಾಗಿ ಉತ್ಸಾಹದಲ್ಲಿ ಕ್ಷೀಣತೆಯಿದೆ. ಮತ್ತು ಹೊರಟು ಬಿಟ್ಟೆನೆಂದರೆ ಉತ್ಸಾಹವೇ ಉತ್ಸಾಹವಿರುವುದು. ಇದರ ಕಾರಣವೇನೆಂದು ತಿಳಿದಿದೆ ಏನು? ನಾನು ಆಲಸ್ಯದ ಕಾರಣದಿಂದ ನನ್ನ ಶರೀರವು ನಿಶ್ಶಕ್ತವಾಗಿದೆಯೆಂದು ನಿರ್ಣಯಿಸಿ ಈ ಸ್ವಭಾವವನ್ನು ಬೆಳೆಸಿಕೊಂಡಿರುವೆನು. ಈ ದುರ್ಬಲ ವಿಚಾರದ ಪ್ರಭಾವ ಇಷ್ಟಿದೆ. ದೇವರು ನಿಮ್ಮೆಲ್ಲರನ್ನು ಈ ವಿಚಾರದಿಂದ ರಕ್ಷಿಸಲಿ!

ನಿಮಗೆ ನಾನು ತೋರಿಸಿಕೊಟ್ಟಿದ್ದ ಮಾಲೀಸು ಪದ್ಧತಿಯಿಂದ ದೃಷ್ಟಿಯಲ್ಲಿ ಕಿಂಚಿತ್ತಾದರೂ ಲಾಭವಾಗಿದೆಯೋ ಹೇಗೆ ? ಲಾಭವಾಗಿರದಿದ್ದರೆ ಅದನ್ನು ಬಿಟ್ಟು ಬಿಡುವುದೇ ಒಳ್ಳೆಯದು. "ತ್ಯಾ" ಪತ್ರದ ದ್ವಾರ ನಿಮಗೆ ತಿಳಿಸಿರುವ ತನ್ನ ಸ್ಥಿತಿಯಲ್ಲಿ ಯಾವ ಸತ್ಯಾಂಶವೂ ಕಂಡು ಬರುವುದಿಲ್ಲ. ಅದು ಕೇವಲ ಆತನ ಕಲ್ಪನೆಯಾಗಿದೆ. ಮತ್ತು ಅದಾದರೂ ತಾನು ಬಹಳ ಪ್ರಗತಿ ಹೊಂದಿರುವೆನೆಂಬ ವಿಚಾರದಿಂದ, ತನ್ನ ಮೊದಲಿನ ಸ್ಥಿತಿಯನ್ನು ಸಹ ಆತನು ಉಳಿಸಿಕೊಂಡಿಲ್ಲ. ಪ್ರವಾದಿ ಮೊಸೆಸ್ ತಿರುಚನಾಪಲ್ಲಿಯಲ್ಲಿ ಜನಿಸಿಬಿಟ್ಟಿರುವರೆಂದು ನನಗನಿಸುವುದಿಲ್ಲ. ಆತನಿಗೆ ಬೇರೆ ಯಾವ ಸ್ಥಳವೂ ಸಿಕ್ಕಿರಲಿಕ್ಕಿಲ್ಲ! ಆದುದರಿಂದ ನಿರ್ವಾಹವಿಲ್ಲದೆ ತಿರುಚನಾಪಲ್ಲಿಯಲ್ಲಿ ಪ್ರಾಯಶಃ ಕಾಲಿಡಬೇಕಾಯಿತೇನೋ ?

ಮದ್ರಾಸಿನ ಶ್ರೀ 'ಆರ್. ಶೇ' ಯ ತಂದೆಯ ನಿಧನವಾಗಿತ್ತು. ಅವರ ಉತ್ತರ ಕ್ರಿಯೆಗಳಿಂದ ಬಿಡುಗಡೆ ಹೊಂದಿದ ನಂತರ ತಮ್ಮ ಹೆಂಡತಿಯ ಜೊತೆಯಲ್ಲಿ ಇಲ್ಲಿಗೆ ಬಂದು ೧೦ ದಿನವಿದ್ದರು. ತಮ್ಮ ಹೆಂಡತಿಗೆ ಕೂಡ ನನ್ನಿಂದ ದೀಕ್ಷೆ ಕೊಡಿಸಿದರು. ಪಾಪ, ಆಕೆ ಇಲ್ಲಿ ಚಳಿ ಹತ್ತಿದ್ದರಿಂದ ಅಸ್ವಸ್ಥಳಾಗಿ ಬಿಟ್ಟಿದ್ದಳು. ಆದರೆ ಗುಣಹೊಂದಿ ಹೋದಳು. ಸಂಕಲ್ಪ ಮತ್ತು ಇಚ್ಛೆಯ ಪ್ರಶ್ನೆಯನ್ನು ಬಗೆ ಹರಿಸುವುದಕ್ಕಾಗಿ ಶ್ರೀ ಅರವಿಂದಜಿಯ ಹಾಗೆ ನಾನು ಶ್ರೇಣಿಗಳನ್ನು ಮಾಡಬೇಕಾಗುವುದು. ಆ ಶ್ರೇಣಿಗಳನ್ನು ನಾನು ಇಂಗ್ಲಿಷಿನಲ್ಲಿಯೆ ಮಾಡುತ್ತಿರುವೆನು. ಮೊದಲನೆಯದು ಪ್ರಾಣಿಯ ಸ್ತರ ಅಥವಾ ಪಶುವಿನ ಸ್ತರ (Animal plane). ಎರಡನೆಯದು ಮಾನಸಿಕ ಸ್ತರ (Mental plane). ಮೂರನೆಯದು ಆಧ್ಯಾತ್ಮಿಕ ಸ್ತರ (Spiritual plane). ಇವು ಇಚ್ಛೆಗಳ ವಿಧಗಳು. ಇಚ್ಛೆಗಳು ಒಳ್ಳೆಯವೂ ಇರುತ್ತವೆ ಕೆಟ್ಟವೂ ಇರುತ್ತವೆ. ಕೆಟ್ಟ ಇಚ್ಛೆಗಳು, ಕಾಮ, ಲೈಂಗಿಕತೆ ಮುಂತಾದವುಗಳೊಂದಿಗೆ ಸಂಬಂಧವುಳ್ಳವು. ಲೋಭ ಮುಂತಾದುವುಗಳು ಸಹ ಇವರಲ್ಲಿ ಬರುವುವು. ಮತ್ತು ಮಾನಸಿಕ ಸ್ತರದಲ್ಲಿ ಯಾವ ಇಚ್ಛೆಗಳಿರುತ್ತವೋ ಅದರಲ್ಲಿ ತನ್ನ ಏಳ್ಗೆ, ತನ್ನ ದೊಡ್ಡಸ್ತಿಕೆ, ಮತ್ತು ತನ್ನ ಸಾಮರ್ಥ್ಯದ ರಹಸ್ಯವು ಅಡಕವಾಗಿರುತ್ತದೆ. ಈಗ ಈ ವಸ್ತುಗಳು ಆಧ್ಯಾತ್ಮಿಕ ಸ್ತರವನ್ನು ತಲುಪಿದಾಗ ಅಲ್ಲಿ ತನ್ನ ಕರ್ತವ್ಯ ಅಥವಾ ಧರ್ಮ ನೆನಪಿಗೆ ಬರುತ್ತದೆ. ಬಲೆಯಿಂದ ಹೊರಬರುವ ಚಿಂತೆಯುಂಟಾಗುತ್ತದೆ. ಈಶ್ವರ ಪ್ರಾಪ್ತಿಯ ಕಡೆಗೆ ಮನಸ್ಸು ವಾಲ ತೊಡಗುತ್ತದೆ. ಒಂದು ಕಾಲದಲ್ಲಿ ಯಾವುದು ಪಶುವಿನ ಸ್ತರದಲ್ಲಿದ್ದಿತೋ ಅದೇ ಇದು. ಈಗ ಅದರಲ್ಲಿ ಕರ್ತವ್ಯ ಅಥವಾ ಧರ್ಮವೂ ಕೂಡಿದೆ. ಆದುದರಿಂದ ಅದನ್ನು ಇಚ್ಛೆಯೆನ್ನುವುದು ತಪ್ಪಾಗುವುದು. ಸಂಕಲ್ಪದ ಸಂಬಂಧವು ಮಾನಸಿಕ ಸ್ತರದೊಂದಿಗೆ ಇಂತಿದೆ: ಎಂದರೆ, ನೀವು ಧ್ಯೇಯವನ್ನು ಯೋಚಿಸಿ ಆಕಡೆ ವಿಚಾರದ ಕ್ರಿಯೆಯನ್ನಾರಂಭ ಮಾಡುವಿರಿ. ಇದು

ಕೊನೆಯವರೆಗೂ ನಡೆಯುತ್ತಲೇ ಇರುವುದು. ಪ್ರತಿಯೊಂದು ಮಂಡಲದಲ್ಲಿ ಅದಕ್ಕೆ ಹೊಸ ಜೀವನವು ದೊರೆಯುತ್ತ ಹೋಗುವುದು. ಅದರ ರೂಪವು ಎಷ್ಟು ಶುದ್ಧವಾಗುತ್ತ ಹೋಗುವುದೋ ಮತ್ತು ಸಂಶಯಗಳಿಂದ ಬಿಡುಗಡೆ ದೊರೆಯುತ್ತ ಹೋಗುವುದೋ ಅಷ್ಟೇ ಶಕ್ತಿಯುತವಾಗಿ ಇದು ಕಾರ್ಯಮಾಡುವುದು. ಅರ್ಥಾತ್, ಅದರ ಶಕ್ತಿ ವೃದ್ಧಿಯಾಗುತ್ತ ಹೋಗುವುದು. ಈಗ ಇದರಿಂದ "ಮಹಾಮಾಯಾ" ಎನ್ನುವ ಒಂದು ಮಂಡಲದೊಳಗೆ ಪ್ರಾಪಂಚಿಕ ಕೆಲಸಗಳು ಚೆನ್ನಾಗಿ ನೆರವೇರುವವು. ಆ ನಂತರ ಅದರ ರೂಪವು ಕೇವಲ ತತ್ವ ಅಥವಾ ಶುದ್ಧ ಮೂಲಾಂಶವಾಗಿ ಮಾರ್ಪಡುವುದು. ಈ ಸ್ತರವನ್ನು ಮುಟ್ಟಿದ ಮನುಷ್ಯನಿಗೆ ಒಬ್ಬ ವ್ಯಕ್ತಿಯನ್ನು ಕ್ಷಣ ಮಾತ್ರದಲ್ಲಿ ಅಧ್ಯಾತ್ಮದ ಯಾವುದೇ ಹಂತವನ್ನು ದಾಟಿಸುವುದು ಬಹಳ ಸುಲಭ. ಮನುಷ್ಯನು ಬ್ರಹ್ಮನಿಷ್ಠನಾದಾಗ ಅಮೋಘ ಸಂಕಲ್ಪ (ಸತ್ಯ ಸಂಕಲ್ಪ) ಉಂಟಾಗುತ್ತದೆ. ಆದರೆ ಬಂಧು, ಈ ಸಂಕಲ್ಪದ ಯಾವ ಭಾಗವು ವಿಕಾಸಗೊಂಡು ಈಗ ಬಂದಿದೆಯೋ, ಅದು ಹೆಚ್ಚಾಗಿ ಈಶ್ವರೀಯ ಕಾರ್ಯಗಳಲ್ಲಿ ಸಹಾಯ ಮಾಡುವುದು. ಮನುಷ್ಯನು ("ಅನಂತಕೀ ಓರ್"ದಲ್ಲಿ ನೀವು ಓದಿರಬಹುದು)ಸಂಶಯದ ಆಧಾರವನ್ನು ತೆಗೆದು ಹಾಕಿದರೆ ಸಂಕಲ್ಪದಲ್ಲಿ ಶಕ್ತಿಯೇ ಶಕ್ತಿಯಿರುವುದು. ಪಾಶ್ಚಾತ್ಯ ದರ್ಶನವು ಯಾವಾಗಲೂ ಸಂಶಯದ ಮೇಲೆಯೇ ನಿಂತಿದೆ. ಪೌರ್ವಾತ್ಯ ದರ್ಶನದಲ್ಲಿ ಅದರ ಪ್ರವೇಶವಿಲ್ಲ. ಸಂಶಯವನ್ನು ಜೊತೆಯಲ್ಲಿಡುವುದು ಕಳ್ಳನನ್ನು ಮನೆಯಲ್ಲಿಟ್ಟುಕೊಂಡಂತೆಯೆ ಸರಿ. ಬಂಧು, ವಾಸ್ತವದಲ್ಲಿ ಇವೆಲ್ಲ ಮಾತುಗಳು ಅಭ್ಯಾಸದಿಂದ ತಮ್ಮಷ್ಟಕ್ಕೆ ತಾವೇ ವಿಲೋಮಗೊಳ್ಳುವುವು. ಸಾಧನ ಪದ್ಧತಿ ಸರಿಯಾದುದಿದ್ದು ಗುರುವು ಪರಿಪೂರ್ಣನಾಗಿರಬೇಕು. ಸ್ಥೂಲತೆಯನ್ನು ದೂರಗೊಳಿಸಿ, ಸೂಕ್ಷ್ಮತೆಯಲ್ಲಿ ತನ್ನ ನೆಲೆಯೂರುತ್ತ ನಡೆಯಬೇಕು.

ನಾನು ನಾಳೆ ೧೩ ಡಿಸೆಂಬರಕ್ಕೆ ಲಖನೌಗೆ ಹೋಗುತ್ತಿರುವೆನು. ನಾನು ಹಲ್ಲುಗಳನ್ನು ಮಾಡಿಸಿದ್ದು ಅವು ಸ್ವಲ್ಪ ತೊಂದರೆ ಕೊಡುತ್ತಿವೆ. ಅವನ್ನು ಸರಿಪಡಿಸಲು ಡಾಕ್ಟರನು ೩ ಅಥವಾ ೪ ದಿನ ಅಲ್ಲಿರಲು ಹೇಳಿರುವನು. ಅನಂತರ ೨ ಅಥವಾ ೩ ದಿನಗಳಿಗಾಗಿ ಅಲಹಾಬಾದಕ್ಕೆ ಹೋಗುವೆನು. ಈಗ ಅಲ್ಲಿ ವ್ಯಾಜ್ಯದ ಕಾರ್ಯ ಇದೆ. ಅದಲ್ಲದೆ ಮೂವರು ಸತ್ಸಂಗಿಗಳೂ ಸಹ ಬೆಳೆದಿರುವರು. ಮತ್ತು ಈಗ ನಾನು ಅವರ ಕಾರಣದಿಂದಲೇ ಹೋಗುತ್ತಿರುವೆನು. ಚಿ. ಪ್ರಕಾಶನ ಮಗ ಮತ್ತು ಮಗಳಿಗೆ ಗೊಬ್ಬರವದ್ದಿದ್ದವು. ಹುಡುಗನು ಪೂರ್ಣವಾಗಿ ಗುಣವಾಗಿರುವನು. ಹುಡುಗಿಯಲ್ಲಿ ಇನ್ನೂ ಗೊಬ್ಬರದ ಉಷ್ಣತೆಯಿದೆ. ನಾಳೆ ಅಥವಾ ನಾಡಿದ್ದರವರೆಗೆ ಸರಿಹೋಗುವುದು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ. ಸೂ.: ಶ್ರೀ ಈಶ್ವರ ಸಹಾಯ್‌ರ ಪತ್ರ

ಪ್ರಿಯ ಬಂಧು,

ನಮಸ್ಕಾರ. ವಾರ್ಷಿಕ ಲೆಕ್ಕ ಪತ್ರಗಳಿಗಾಗಿ ಒಂದು 'ಮಾದರಿ'ಯನ್ನು ಕಳಿಸುತ್ತಿರುವೆನು. ೧೯೬೨ನೇ ವರ್ಷದ ಮಾಸಿಕ ಲೆಕ್ಕವನ್ನು ಈ ಮಾದರಿಯೊಳಗೆ ತುಂಬಿ ವರ್ಷವಾದ ನಂತರ ಬೇಗ ಕಳಿಸಿಕೊಡಿರಿ. ಬಸಂತ ಪಂಚಮಿ ೩೦ನೇ ಜನವರಿ ಬೆಳಿಗ್ಗೆ ೬.೩೦ ರಿಂದ ೩೧ನೇ ಜನವರಿ ಬೆಳಿಗ್ಗೆ ೭.೩೦ರ ವರೆಗೆ ಇರುವುದು. ಹೋಮವು ೩೦ನೇ ಜನವರಿ ಬೆಳಿಗ್ಗೆ ೯ ಘಂಟೆಗೆ ಆಗುವುದು. ಇದರ ಪ್ರಕಾರ ಆಹ್ವಾನ ಪತ್ರಗಳಲ್ಲಿ ಬರೆಯಲಾಗುವುದು. ಮಿಷನ್ನಿನ ಲೆಕ್ಕ ಪತ್ರ ತಯಾರಿಸುವುದರಲ್ಲಿ ಸಾಕಷ್ಟು ಸಮಯ ಹಿಡಿಯುವುದು. ಮತ್ತು ಹಲವು ಸಲ ಕೆಲವು ಕಡೆಗಳಿಂದ ಕೇಳತಕ್ಕ ಎಷ್ಟೋ ವಿಷಯಗಳು ಉಳಿದುಕೊಂಡು ಬಿಡುವವು. ಆದರ ಮೇಲೆ ಪತ್ರ ವ್ಯವಹಾರಕ್ಕೆ ಸಮಯ ತಗಲುವುದು. ಆದುದರಿಂದ ವಾರ್ಷಿಕ ಲೆಕ್ಕ ಪತ್ರದ ಹಾಳೆಗಳು ಆದಷ್ಟು ಬೇಗ ಇಲ್ಲಿ ಬಂದುಬಿಟ್ಟರೆ ಒಳ್ಳೆಯದಾಗುವುದೆಂದು ನಾನು ಬಯಸುತ್ತೇನೆ.

ಆಶೀರ್ವಾದಗಳೊಂದಿಗೆ,

ಈಶ್ವರ ಸಹಾಯ್

◆ ◆ ◆

"ಓಂ ತತ್‌ಸತ್"

ನಂ.೧೨೭
ನಂ. ಎಚ್-೧೨೩/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ. ೨೭. ೨. ೧೯೬೩

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಎಲ್ಲ ಪತ್ರಗಳು ತಲುಪಿದವು. ಉತ್ತರಿಸುವುದರಲ್ಲಿ ತಡವಾಯಿತು. ನಾನು ಬಹಳ ದಿನಗಳು ಅಸ್ವಸ್ಥನಾಗಿಯೇ ಇದ್ದೆ. ಅಲ್ಲದೆ, ಕೆಲಸಗಳ ಸುಳಿಯಲ್ಲಿ ಸಿಲುಕಿದ್ದರಿಂದ ಎಲ್ಲ ಪತ್ರಗಳ ಉತ್ತರ ಕೊಡುವುದು ಹಾಗೆಯೆ ಉಳಿದು ಬಿಟ್ಟಿತು. ನಾನು ಒಂದು ಪತ್ರ ಎಚ್-೧೦ ದಿನಾಂಕ ೩ ಜನವರಿ ೬೩ ಕ್ಕೆ ಕಳಿಸಿದ್ದೆ. ಅದು ನಿಮಗೆ ತಲುಪಲಿಲ್ಲವೆಂದು ಕಾಣುತ್ತದೆ. ಪ್ರಾಯಶಃ ಬಳ್ಳಾರಿಯ ಕೆಳಗಡೆ 'ಮೈಸೂರ ಸ್ಟೇಟ್ ಅಥವಾ 'ದ' ಭಾರತ' ವೆಂದು ಬರೆಯಲು ಬಿಟ್ಟಿರಬಹುದು. ಆ ಪತ್ರದಲ್ಲಿ ಸಂಸ್ಕಾರಗಳ ಬಗ್ಗೆ ಬರೆಯಲಾಗಿದ್ದಿತು. ನೀವು ನಿಮ್ಮ ಸಮಸ್ತ ಸಂಸ್ಕಾರಗಳನ್ನು ಭೋಗಿಸಿಬಿಟ್ಟಿರುವಿರಿ. ಈಗ ಎರಡು ಎಳೆಗಳು ಅಂಥವಿವೆಯೆಂದು ಅನಿಸುತ್ತಿದೆ. ಅವು ಜೀವವು ಹಾರಿ ಹೋಗಬಾರದೆಂದು ಇತರರ ಕರ್ಮಗಳ ಬಿಗುವು. ಎರಡನೆಯದು ಸಂಕಲ್ಪಶಕ್ತಿಯ ಬಗ್ಗೆ ಅತ್ಯುತ್ತಮವಾದ ಸಂಶೋಧನೆ ಕೊಡಲಾಗಿದ್ದಿತು. ಇದಲ್ಲದೆ ವಿಚಾರಗಳ ಬಗ್ಗೆ ನಾನು ಬಹಳಷ್ಟು ತಾತ್ವಿಕವಾಗಿ

ವ್ಯಾಖ್ಯಾನ ಮಾಡಿದ್ದೆ. ಅದು ನನಗೀಗ ನೆನಪಿನಲ್ಲಿಲ್ಲ. ಅದರಲ್ಲಿ ೧೨ ಅಥವಾ ೧೬ ಪುಟಗಳಿದ್ದವು. ನೀವು ಅಲ್ಲಿಯ ಪ್ರೋತ್ಸಾಹಕರಿಗೆ ಬರೆಯಿರಿ. ಪ್ರಾಯಶಃ ವಿಳಾಸ ತಿಳಿಯದ ಪತ್ರಗಳ ಕಛೇರಿ ಮುಂತಾದುವುಗಳಲ್ಲಿ ದೊರೆಯಬಹುದು. ನನ್ನ ಬಳಿಕೂಡ ಮರಳಿ ಬಂದಿಲ್ಲ. ನಾನು ಫೆಬ್ರುವರಿ ಅಥವಾ ಮಾರ್ಚನಲ್ಲಿ ಬರುವ ನಿರ್ಧಾರ ಮಾಡಿಟ್ಟಿದ್ದೆ. ಆದರೆ ಈಗ ನಾನು ಆ ಸಮಯದಲ್ಲಿ ಬರಲಾರೆ. ಆದುದರಿಂದ ಮೇ ೧೫ ರ ನಂತರ ಪ್ರತೀಕ್ಷೆ ಮಾಡಿರಿ. ಏಕೆಂದರೆ ನೀವು ನನ್ನನ್ನು ಭೇಟಿಯಾಗಲು ವಿಜಯವಾಡಕ್ಕೆ ಬರಲಿಚ್ಛಿಸುತ್ತಿರುವಿರಿ. ದಿನಾಂಕವು ನಿರ್ಣಯವಾದಾಗ ನಿಮಗೆ ತಿಳಿಸುವೆ. ಅಲ್ಲಿ ಕೂಡ ಕೆಲವು ಭಾಷಣಗಳು ಆಗಬಹುದು. ಶ್ರೀ 'ಮಾ' ರ ಆರೋಗ್ಯವು ಈಗ ಚೆನ್ನಾಗಿರಬಹುದು. ಬರೆಯಬೇಕು. ಮಕ್ಕಳಿಗೆ ಆಶೀರ್ವಾದಗಳು.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ.ಸೂ: 'ಸ' ಕೇಳಿರುವ ವಿಷಯಗಳನ್ನು ಪುನಃ ಬರೆದು ಕಳಿಸಿರಿ. ಆ ಪತ್ರವು ಎಲ್ಲಿಯೋ ಸ್ಥಳಾಂತರ ಗೊಂಡಿದೆ.

◆ ◆ ◆

"ಓಂ ತತ್‌ಸತ್"

ನಂ.೧೨೮ 
ನಂ. ಎಚ್-೧೯೬೩/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್ 
ದಿ. ೨೧. ೫. ೧೯೬೩.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಈ ಸಲವಂತೂ ತಿಂಗಳುಗಳಾದರೂ ಪತ್ರಗಳ ಉತ್ತರವನ್ನು ಕೊಡಲೇ ಇಲ್ಲ. ಕೊಂಚ ದೈಹಿಕ ದೌರ್ಬಲ್ಯ, ಕೊಂಚ ಪ್ರಾಪಂಚಿಕ ಚಿಂತೆಗಳು, ಮತ್ತು ಕೊಂಚ ಉದಾಸೀನತೆಯೂ ಇದಕ್ಕೆ ಕಾರಣ. ನಾನು ಹೈಕೋರ್ಟಿಗೆ ಬಹಳ ಸಲ ಹೋಗಬೇಕಾಯಿತು. ಮತ್ತು ಅದರ ಫಲಿತಾಂಶ ಒಳ್ಳೆಯದೇ ಆಯಿತು. ನಾನು ಬಹಳ ಕಾಲದಿಂದ ಬಯಸುತ್ತಿದ್ದ ತೀರ್ಪು ಆಯಿತು. ಈ ಚಿಂತೆಯಂತೂ ಸಂಪೂರ್ಣವಾಗಿ ದೂರವಾಯಿತು.

ಒಂದು ವರ್ಷ ನೀವು ಆಲೂಗಡ್ಡೆಯ ಬೆಳೆಯಲ್ಲಿ ಲಾಭವಾಗಲು ಪ್ರಾರ್ಥಿಸಿದ್ದಿರಿ. ಆಗ ಆ ಬೆಳೆ ಉತ್ತಮವಾಗಿ ಆಯಿತು. ಈಗ ಎರಡು ವರ್ಷದಿಂದ ನಷ್ಟವಾಗುತ್ತಿದೆ. ಮತ್ತು ಈ ವರ್ಷ ಎಲ್ಲಕ್ಕೂ ಹೆಚ್ಚು ನಷ್ಟವಾಗಿದೆ. ವ್ಯವಸಾಯ ಹೆಚ್ಚಾಗಿದ್ದ ಒಂದೆಡೆಯಲ್ಲಿ ಪ್ರಕಾಶನು ನೀರಿನ ಎಂಜಿನನ್ನು ಹಚ್ಚಿದ್ದು ಅದು ೧೫ ದಿನಗಳಿಂದ ಕೆಲಸ ಮಾಡುತ್ತಿದೆ. ಇದಂತೂ ಮನೆಯ ಸ್ಥಿತಿಯಾಯಿತು. ಈಗ ನನ್ನ ಸ್ಥಿತಿಯನ್ನು ಕುರಿತು ಬರೆಯುತ್ತೇನೆ. ಸುಮಾರು ನಾಲ್ಕು ತಿಂಗಳಿಂದ ವಾರಕ್ಕೊಮ್ಮೆ ಅಥವಾ ಎಂಟು ದಿನಗಳಿಗೊಮ್ಮೆ ಭೇದಿ ಮತ್ತು ಆಮಶಂಕೆ

ಒಂದರ ಹಿಂದೊಂದು ಆಗಿ ಬಾಧೆಯಾಗುತ್ತಿದೆ. ಇದುವರೆಗೆ ಬಾಧೆಯಾದಾಗ ಕಾಲ ತಳ್ಳುವುದಕ್ಕೆ ಸ್ವಲ್ಪ ಔಷಧ ಸೇವಿಸುತ್ತಿದ್ದೆ. ಈಗ ವ್ಯವಸ್ಥಿತವಾಗಿ ಚಿಕಿತ್ಸೆ ಆರಂಭ ಮಾಡಿರುವುದರಿಂದ ದಕ್ಷಿಣಭಾರತದ ಪ್ರವಾಸಕಾಲದಲ್ಲಿ ಸಹ ಔಷಧಿಯನ್ನು ಜೊತೆಯಲ್ಲಿಡಬೇಕಾಗುವುದು. ಜನರಿಗೆ ದೇವರ ಮೇಲೆ ನಂಬಿಕೆಯಿಲ್ಲ; ನನಗೆ ನನ್ನ ಸ್ವಾಸ್ಥ್ಯದ ಮೇಲೆ ನಂಬಿಕೆಯಿಲ್ಲ. ಸ್ವಾಸ್ಥ್ಯದ ಮೇಲೆ ನಂಬಿಕೆ ಇರದಿರುವುದು ದೌರ್ಬಲ್ಯದ ಸೂಚನೆಯಾಗಿದ್ದರೆ ದೇವರ ಮೇಲೆ ನಂಬಿಕೆ ಇರದಿರುವುದು ಆತ್ಮಹತ್ಯೆಯ ಸೂಚನೆಯಾಗಿದೆ. ಅಂತೂ ಎಲ್ಲಿಯೂ ಬೆಳೆಗಳು ಈಗ ಸರಿಯಾಗಿ ಆಗುವುದಿಲ್ಲವೆಂದು ಜನರು ಹೇಳುವರು. ಇದರ ಅರ್ಥವೇನಾಯಿತೆಂದರೆ, ದೇವರು ಬಹಳ ಮುದುಕನಾಗಿರುವನು. ಆದುದರಿಂದ ಕೆಲವು ಕೆಲಸಗಳ ನೆನಪು ಆತನಿಗಿರುವುದಿಲ್ಲ. ಆದರೆ ದೇವರು ಅವರಿಗೆ ಯಾವ ಶಕ್ತಿಯನ್ನು ಕೊಟ್ಟಿರುವನೋ, ಆ ಶಕ್ತಿಯಿಂದ ಅವರು ಆತನ ಕೆಲಸಗಳಲ್ಲಿ ಎಷ್ಟು ಗೊಂದಲವುಂಟು ಮಾಡಿರುವರೆಂದು ಬಹುಶಃ ಅರಿಯರು. ಕ್ರಿಯೆಗಳಂತೂ ಪ್ರಮಾಣಾನುಪಾತದಲ್ಲಿ ಮುಂದುವರಿದಿವೆ. ಈಗ ನಾವು ಪ್ರಕೃತಿಯ ವಿರುದ್ಧ ಕೆಲಸ ಮಾಡುತ್ತ ಮಾಡುತ್ತ ವಾತಾವರಣದಲ್ಲಿ ಯಾವ ರೀತಿ ಗೊಂದಲವನ್ನುಂಟು ಮಾಡಿರುವೆವೋ ಮತ್ತು ತದನುಸಾರ ಯಾವ ಕ್ರಿಯೆಗಳಾದುವೋ, ಅದರಿಂದ ನಮ್ಮದೇ ಕೊರಳು ಕೊಯ್ಯ ತೊಡಗಿತು. ಈಗ ಆ ವಸ್ತುಗಳ ಶುದ್ಧೀಕರಣದ ಆವಶ್ಯಕತೆ ಇದೆ. ಅದು ಸ್ವಲ್ಪವಂತೂ ಆಗುತ್ತಲೇ ಇದೆ. ಮುಂದೆ ಕೂಡಾ ಸ್ವಲ್ಪ ಆಗುವುದು. ಇವೆಲ್ಲವುಗಳಿಗಾಗಿ ನಾವೇ ಏನನ್ನಾದರೂ ಮಾಡಬೇಕಾಗುವುದು. ಪ್ರತಿಯೊಬ್ಬ ಸಂತನು ತನಗರಿಯದಂತೆ ಏನನ್ನಾದರೂ ಮಾಡುತ್ತಿರುತ್ತಾನೆ. ನನ್ನಲ್ಲಿ ಧೈರ್ಯವಿದೆ. ಗುರುಮಹಾರಾಜರ ಕೃಪೆಯಿಂದ ಅದರಲ್ಲಿ ಕಿಂಚಿತ್ತೂ ಲೋಪವಿಲ್ಲ. ಮತ್ತು ಸಾಹಸ ಎಂಥದೆಂದರೆ ಎರಡನೆಯ ಕ್ಷಣದ ಆವಶ್ಯಕತೆ ಬೀಳುವುದಿಲ್ಲ. ಈ ಮಾತುಗಳನ್ನೇಕೆ ಬರೆದೆನೆಂದರೆ ನಿಮ್ಮಲ್ಲಿಯೂ ಸಾಹಸ ಹುಟ್ಟಿಕೊಳ್ಳಲಿ ಎಂದು. ಆದರೆ ನಾನು ಸ್ವತಃ ಏಕೆ ಮಾಡುವುದಿಲ್ಲವೆಂದರೆ, ಯಾವ ಜನರು ತಮ್ಮ ಶಕ್ತಿಗಳ ಕೆಟ್ಟ ಪ್ರಯೋಗದಿಂದ ಈ ಗೊಂದಲವನ್ನು ಹುಟ್ಟಿಸಿರುವರೋ, ಅದರ ಫಲವನ್ನು ಅವರು ಭೋಗಿಸಿಕೊಳ್ಳಲಿ. ನಿಸರ್ಗವು ಸಹ ಇದನ್ನೇ ಹೇಳುತ್ತದೆ. ವಿನಾಶ ಕಾರ್ಯವು ಆಗಲೇ ಬೇಕಾಗಿದ್ದು, ಆಗುತ್ತಲೂ ಇದೆ. ಆ ಜನರೇ ಇದಕ್ಕೆ ಕಾರಣರು.

ಡಾ. ವರದಾಚಾರ್ಯರು ತಮ್ಮ ೩ ನೆಯ ಮಾರ್ಚಿನ ಪತ್ರದಲ್ಲಿ ಹೀಗೆ ಬರೆದಿರುವರು: (ಇಂಗ್ಲಿಷಿನಲ್ಲಿ ಒಕ್ಕಣೆ) "ನೀವು ನನಗೆ ಅಥವಾ ಇತರರಿಗೆ ಬರೆದ ಪತ್ರಗಳಲ್ಲಿ ಭವಿಷ್ಯದ ಬಗ್ಗೆ 'ಚ' ಕಾರವನ್ನಾದರೂ ಎತ್ತಿಲ್ಲ. ಅರವಿಂದರ ಅನುಯಾಯಿಗಳು ಈ ವರ್ಷವೋ ಅಥವಾ ೧೯೬೭ ರಲ್ಲಿಯೋ ಬಹಳ ದೊಡ್ಡ ಬದಲಾವಣೆಗಳಾಗುವವೆಂದು ಹೇಳುತ್ತಿರುವರು". ಏನು ಆಗುವುದಿದೆಯೋ ದೇವರೇಬಲ್ಲ. ಅರವಿಂದರ ಅನುಯಾಯಿಗಳು ಘಟನೆಗಳನ್ನು ನೋಡಿ ಹೇಳುತ್ತಿರುವರು. ನಿಸರ್ಗವನ್ನು ಅವಲೋಕಿಸಿ, ಏನಾದರೂ ಹೇಳಬಲ್ಲ ಶಕ್ತಿ, ಅವರಾರಲ್ಲಿಯೂ ಇಲ್ಲ. ಆದುದರಿಂದ ನನಗೆ ಅವರ ೬೩ ನೇ ಇಸ್ವಿಯ ಮೇಲೆ ನಂಬಿಕೆಯಿಲ್ಲ, ಹಾಗೂ ೬೭ನೆಯ ಇಸ್ವಿಯ ಮೇಲೆ ಕೂಡ ಇಲ್ಲ. 'ಮದರ್' (ಶ್ರೀ ಮಾತೆ) ಅವಶ್ಯವಾಗಿ ಒಳ್ಳೆಯವರು. ಆದರೆ ಅವರ ದೃಷ್ಟಿಯು ಹೊರಗಿನ ಪದರಿನ ಮೇಲೆ ಇರುತ್ತದೆ

ಅತಿ ಚೇತನದ ಸ್ಥಿತಿಯನ್ನು ಅದೇ ಹೊರಗಿನ ಪದರಿನ ಮೇಲೆ ಆಹ್ವಾನಿಸುವರು. ಆದುದರಿಂದ ಸಮೀಪದ ಭವಿಷ್ಯದಲ್ಲಿ ಉಂಟಾಗಲಿರುವ ಘಟನೆಯ ಬಗ್ಗೆ ಪತ್ತೆಯಾಗಬಲ್ಲದು. ಆದರೆ, ಪದ್ಧತಿಯೇನೆಂದರೆ ಎಷ್ಟು ಆಳವಾದ ಮಾತನ್ನು ತಿಳಿಯಲಿಚ್ಛಿಸುವರೋ ಅಷ್ಟೇ ಆಳದಲ್ಲಿ ಹೋಗಬೇಕಾಗುವುದು. ಆಗ ನಿಸರ್ಗದ ಮಟ್ಟಕ್ಕನುಗುಣವಾದ ಮಟ್ಟವನ್ನು ತನ್ನಲ್ಲಿ ಸಹ ನಿರ್ಮಿಸಬೇಕಾಗುವುದು. ಈ ಸಮಯದಲ್ಲಿ ನಿಸರ್ಗದ ಕಂಪನಗಳು ಬಹಳ ಸೌಮ್ಯವಾಗಿವೆ. ಅದರ ಕಾರಣವೇನೆಂದರೆ, ಮುಂದೆ ಯಾವ ಘಟನೆಗಳು ಜರುಗಲಿರುವವೋ, ಅವುಗಳಿಗೆ ಶಕ್ತಿಯನ್ನು ನೀಡಲಾಗುತ್ತಿದೆ. ಏಕೆಂದರೆ ಮಂದವಾದ ಕಂಪನಗಳಲ್ಲಿ ಎಲ್ಲಕ್ಕೂ ಹೆಚ್ಚು ಶಕ್ತಿಯಿರುತ್ತದೆ.

ಬಿಜಾಪುರದ ಕಡೆಗೆ ನನ್ನ ಆಕರ್ಷಣೆ ಕಿಂಚಿತ್ತಾದರೂ ಆಗಲಿಲ್ಲ. ಆದರೂ ಗಮನವಿಟ್ಟು ಕಾರ್ಯಕ್ರಮದಲ್ಲಿ ಸೇರಿಸಿದೆ. ಆದರೆ ಗದುಗಿಗಾಗಿ ಎಷ್ಟು ತೀಕ್ಷ್ಣವಾದ ಆಕರ್ಷಣೆಯಿದೆಯೆಂದರೆ, ಮನಸ್ಸು ಅಲ್ಲಿಗೆ ಹೋಗಲು ವಿವಶಗೊಳಿಸುತ್ತಿದೆ. ಆದರೆ ಅಸ್ವಾಸ್ಥ್ಯವು ಪರಾಧೀನನನ್ನಾಗಿ ಮಾಡಿ ಆ ಆಕರ್ಷಣೆಗಿಂತ ಪ್ರಭಲವಾಯಿತು. ಅವರ ಒಪ್ಪಿಗೆಯಿದ್ದರೆ ಗದುಗಿಗೆ ಹೋಗುವುದಿಲ್ಲವೆಂದು ನಾನು 'ಜ' ಗೆ ಕೂಡ ಬರೆದೆ. ಮತ್ತು ಅವರು ನನ್ನ ಇಚ್ಛಾನುಸಾರ ಒಪ್ಪಿದುದಕ್ಕೆ ನಾನು ಸಂತೋಷಗೊಂಡೆನು. ಯಾವ ಠಾಣದಲ್ಲಿ ಬೇಕಾದರೂ ಅವರು ನನ್ನನ್ನು ಭೇಟಿಯಾಗಬಹುದೆಂದು ನೀವು ಅವರಿಗೆ ತಿಳಿಸಿರಿ. ನಾನು ಅಸ್ವಾಸ್ಥ್ಯದ ಕಾರಣ ತಂಗುವ ದಿನಗಳನ್ನು ಕೂಡ ಕಡಿಮೆ ಮಾಡಿರುವೆನು. ಕಾರ್ಯಕ್ರಮವನ್ನು 'ಆ'ಗೆ ಮತ್ತು 'ಸ' ಗೆ ಕಳಿಸಿರುವೆನು. 'ಮಾ ' ಗೆ ಕೂಡ ನಾನು ಬರುವ ಮತ್ತು ತಂಗುವ ಬಗ್ಗೆ ತಿಳಿಸಿರುವೆನು. ವಿಜಯವಾಡಕ್ಕೂ ಪತ್ರದ ಮೂಲಕ ತಿಳಿಸಿರುವೆನು. ಈಗ ಕಾರ್ಯಕ್ರಮವನ್ನು ಕೂಡ ಕಳುಹಿಸಿಕೊಡುವೆನು. ಯಾರು ಯಾರಿಗೆ ಪತ್ರ ಬರೆಯುವ ಅವಕಾಶವೊದಗುತ್ತ ಹೋಗುವದೋ, ಅವರಿಗೆ ದಿನಾಂಕಗಳನ್ನು ತಿಳಿಸುತ್ತ ಹೋಗುವೆನು. " ರಿಯಾಲಿಟಿ ಎಟ್ ಡಾನ್"ನ ಜರ್ಮನ ಭಾಷೆಯ ಅನುವಾದಕ್ಕೆ ಬರೆಯಲಾದ ಮುನ್ನುಡಿಯ ಇಂಗ್ಲಿಷ್ ಅನುವಾದವನ್ನು ನಿಮ್ಮ ಬಳಿಯಲ್ಲಿ ಕಳಿಸುತ್ತಿರುವೆನು. ನೋಡಿಕೊಳ್ಳಿರಿ. ಮಕ್ಕಳಿಗೆ ಆಶೀರ್ವಾದಗಳು.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ.ಸೂ: ಮತ್ತೇನೆಂದರೆ ನೀವು 'ಸ' ಗೆ ಸರಿಯಾದ ಉತ್ತರವನ್ನು ಕೊಟ್ಟಿರುವಿರಿ. ಪ್ರತಿಯೊಬ್ಬ ಪ್ರಶಿಕ್ಷಕನು (ಪ್ರಿಸೆಪ್ಟರ್) ಇದರ ಪ್ರಕಾರ ಕಾರ್ಯ ಪ್ರವೃತ್ತನಾಗಬಹುದು. ಆದರೆ ನಿರ್ಬಂಧವೇನೆಂದರೆ ಆತನು ದುಡುಕಿನಿಂದ ಮಾಡಕೂಡದು. ಮತ್ತು ಅದರ ಪ್ರತಿಕ್ರಿಯೆಯು ಅಭ್ಯಾಸಿಯ ಯೋಗ್ಯತೆಗಿಂತ ಹೆಚ್ಚಾಗಿಲ್ಲವೆಂಬುದರ ಬಗ್ಗೆ ಗಮನವಿಟ್ಟಿರಬೇಕು. ನಾನು ಅಲ್ಲಿಗೆ ಬಂದಾಗ ಇವೆಲ್ಲ ಮಾತುಗಳನ್ನು ನೆನಪಿನಲ್ಲಿಡಿ. ಅದರ ವಿಧಾನ ಹೇಗೆ ಮತ್ತು ಅದರ ಅವಶ್ಯಕತೆ ಎಲ್ಲಿದೆಯೆನ್ನುವುದನ್ನು ತೋರಿಸಿಕೊಡುವೆ.

◆◆◆

"ಓಂ ತತ್‌ಸತ್"

ನಂ.೧೨೯ — ಶಾಹಜಹಾನ್‌ಪೂರ್
ನಂ. ಎಚ್-೨೩೧/ಎಸ್.ಆರ್.ಸಿ.ಎಮ್. — ದಿ. ೨೮. ೫. ೧೯೬೩.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಎರಡೂ ಪತ್ರಗಳು ಇಂದು ಈಗಷ್ಟೆ ತಲುಪಿದವು. ಹಾಸನಕ್ಕೆ ನಿಮ್ಮ ವರ್ಗವಾಗಿದೆಯೆಂದು ತಿಳಿಯಿತು. ನೀವು ಬರೆದಿರುವ ಹಾಗೆ ಕಾರ್ಯಕ್ರಮವು ಬಳ್ಳಾರಿಯದೇ ಇರುವುದು. ಮತ್ತು ನಾನು ಈಶ್ವರ್ ಸಹಾಯ್ ಅವರ ಜೊತೆಯಲ್ಲಿ ನಿರ್ದಿಷ್ಟ ಸಮಯದಲ್ಲಿ ಬಳ್ಳಾರಿ ತಲುಪುವೆನು. ವಿಜಯವಾಡದಲ್ಲಿ ನಿಮ್ಮ ಭಾಷಣ ಆಗಬೇಕೆಂದು ನನ್ನ ಅಪೇಕ್ಷೆ. ಅದಕ್ಕಾಗಿ ನಾನು ಶ್ರೀ 'ಕು' ಅವರಿಗೆ ನೇರವಾಗಿ ಬರೆದು ಈ ಭಾಷಣದ ಬಗ್ಗೆ ಸಾರ್ವಜನಿಕ ಸಭೆಯ ಏರ್ಪಾಡು ಮಾಡಲು ಸಾಧ್ಯವೋ ಹೇಗೆಂಬುದನ್ನು ತಿಳಿಸಲು ಹೇಳಿದ್ದೆ. ಸಂಭವತಃ ಅವರು ಬರೆದಿರಬಹುದು. ನೀವು ಈಗ ಬಳ್ಳಾರಿಯಲ್ಲಿ ಇರಕೂಡದೆಂದು ನಾನು ಇಚ್ಛಿಸುತ್ತಿದ್ದೆ. ಏಕೆಂದರೆ, ನಿಮ್ಮ ಯೋಗ್ಯತೆಯನ್ನು ಅಲ್ಲಿಯ ಸತ್ಸಂಗಿಗಳು ಯಾರೂ ಪ್ರಶಂಸಿಸಲಿಲ್ಲ. ನಾನು ೪೫ ನೇ ಇಸ್ವಿಯಲ್ಲಿ ಹಾಸನದಲ್ಲಿ ಇಳಿದಿದ್ದೆ. ಅಲ್ಲಿಂದ, ಒಂದು ದೇವಾಲಯವನ್ನು ನೋಡಲು ಬೇಲೂರಿಗೆ ಹೋಗಿದ್ದೆ. ಶ್ರೀ ಈಶ್ವರ ಸಹಾಯ್ ಅವರ ಪುಸ್ತಕವು ಮದ್ರಾಸಿನಲ್ಲಿ ಮುದ್ರಣಗೊಳ್ಳುತ್ತಿದ್ದು, ಹೆಚ್ಚು-ಕಡಿಮೆ ಪೂರ್ತಿ ಮುದ್ರಿತವಾಗಿ ಬಿಟ್ಟಿದೆ. ನಾನು ಡಾ. ವರದಾಚಾರಿಯವರಿಗೆ ನಾನಿಲ್ಲದಿರುವಾಗ ಪುಸ್ತಕಗಳನ್ನು ಇಲ್ಲಿಗೆ ಕಳುಹಿಸಕೂಡದೆಂದೂ, ನಾನು ಅಲ್ಲಿಗೆ ಬರುವವರೆಗೆ ಕಾಯಬೇಕೆಂದೂ ಬರೆದಿರುವೆನು. ಗುಲ್ಬರ್ಗಾದಲ್ಲಿ ಆಗಿರುವ ತಮ್ಮ ಭಾಷಣದ ಪ್ರತಿಯನ್ನು ಅವರು ನನ್ನ ಬಳಿ ಕಳುಹಿಸಿರುವರು. ನನ್ನ ಜೊತೆಯಲ್ಲಿ ತರುವೆ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೩೦ — ಶಾಹಜಹಾನ್‌ಪೂರ್
ನಂ. ಎಚ್- ೩೧೨/ಎಸ್.ಆರ್.ಸಿ.ಎಮ್. — ದಿ. ೨೩. ೭. ೧೯೬೩.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಾನು ೨೧ ಜುಲೈಗೆ ಕ್ಷೇಮದಿಂದ ಇಲ್ಲಿಗೆ ತಲುಪಿದೆ. ಒಂದು ದಿನ ಲಖನೌದಲ್ಲಿ ಹೆಚ್ಚು ಹೇಗಾಯಿತೆಂದರೆ, ನನಗೆ ಶ್ರೀ ಈಶ್ವರ ಸಹಾಯ್ ಮತ್ತು ಚಿ. ಉಮೇಶನ ಕಣ್ಣುಗಳು ನಮ್ಮ ಒಬ್ಬ ಸತ್ಸಂಗಿಗಳಾದ ಕಣ್ಣಿನ ಪರಿಣಿತರಿಗೆ

ತೋರಿಸುವುದಿತ್ತು. ಮಾಸ್ಟರ್ ಸಾಹೇಬರ ಒಂದು ಕಣ್ಣಿನಲ್ಲಿ ಪೊರೆ ಆರಂಭವಾಗಿದೆ ಎಂದು ಹೇಳಿರುವರು. ಚಿ. ಉಮೇಶನು ಲಖನೌದಲ್ಲಿ ಬಿ.ಕಾಂ. ಅಂತಿಮದಲ್ಲಿ ಇರುವನು. ಆತನ ಬಲಗಣ್ಣಿನ ದೃಷ್ಟಿಯು ಹೋಗುತ್ತಿರುವುದೆಂದು ಹೇಳಿರುವರು. ಆತನು ಗುಣವಾಗಲೆಂದು ನೀವು ಪ್ರಾರ್ಥನೆ ಮಾಡಿರಿ. ಚಿ. ಸರ್ವೇಶನು ಕೆಳಗೆ ಬಿದ್ದುದರಿಂದ ಬಲಗೈ ಮೂಳೆಯಲ್ಲಿ ಬಿರುಕು ಉಂಟಾಗಿದೆ ಎಂದು ಇಲ್ಲಿಗೆ ಬಂದ ನಂತರ ತಿಳಿಯಿತು. ಪ್ಲಾಸ್ಟರ ಹಾಕಲಾಗಿದೆ. ಚಿಂತೆಯೇನೂ ಇಲ್ಲ. ನಾನು ಬಳ್ಳಾರಿಯಿಂದ ಹೊರಟಾಗ ಗುಂತಕಲ್ ದಾಟಿದನಂತರ ನನಗೆ ಭೇದಿಯಾಗಲಾರಂಭಿಸಿತು. ಮುಂದಿನ ನಿಲ್ದಾಣದಲ್ಲಿ ಮೊಸರು ದೊರೆಯಿತು. ಅದರಲ್ಲಿ ಔಷಧಿ ಕೂಡಿಸಿ ಸೇವಿಸಿದ ಮೇಲೆ ಬೇಧಿ ನಿಂತುಹೋಯಿತು. ತಿರುಪತಿಯಲ್ಲಿ ಡಾ. ಕುಪ್ಪು ಸ್ವಾಮಿಯವರ ಔಷಧಿಯಿಂದ ನಾನು ಸಂಪೂರ್ಣಗುಣವಾದೆ. ಉರಯಿಯಲ್ಲಿ ತಂಗಿದುದರಿಂದ ಕೆಲವು ಸತ್ಸಂಗಿಗಳು ಹೆಚ್ಚಿರುವುರಲ್ಲದೆ ದಕ್ಷಿಣಭಾರತದಲ್ಲಿ ಎಲ್ಲ ಸ್ಥಳಗಳಲ್ಲಿಯೂ ಬೆಳೆದಿರುವರು. ಮದ್ರಾಸಿನಲ್ಲಿ 'ಶೇ' ಅವರ ಭಾವನಾದ 'ಪಿ' ಅವರ ಆದೀನದಲ್ಲಿ ಎರಡನೆಯ ಕೇಂದ್ರವನ್ನು ತೆರೆಯಲಾಯಿತು. ಮದ್ರಾಸಿನಲ್ಲಿ ಆರೋಗ್ಯ ಆಶ್ರಮದೊಳಗೆ ಡಾ. ವರದಾಚಾರ್ಯರ ಭಾಷಣವಾಯಿತು. ಅದು ಒಂದು ದೊಡ್ಡ ಆಶ್ರಮವಿರಬಹುದೆಂದು ನಾನು ತಿಳಿದಿದ್ದೆ. ಆದರೆ ಅಲ್ಲಿ ಕೇವಲ ೬ ಅಥವಾ ೭ ಜನರಿದ್ದರು. ಮತ್ತು ಸುಮಾರು ೨೫ ಜನರು ನಮ್ಮ ಜೊತೆಗಾರರಿದ್ದರು. ಆ ಭಾಷಣವು ಪೂರ್ಣವಾಗುವ ಮುಂಚೆಯೆ ಅಲ್ಲಿಯ ಮಹಾಂತನಾದ ಶ್ರೀ ದೀಕ್ಷರ ಆನಂದರು ಅವರನ್ನು ತಡೆದದ್ದರಿಂದ ಆವರ ಭಾಷಣವು ಅಪೂರ್ಣವಾಗಿ ಉಳಿಯಿತು. (ತಡೆಗೆ ಕಾರಣವನ್ನೇನು ಹೇಳಿದರೆಂದರೆ, ಇನ್ನೂ ಇತರರು ಭಾಷಣ ಕೊಡುವುದಿದ್ದಿತಂತೆ). ಆ ಭಾಷಣವು 'ಸಹಜಮಾರ್ಗ'ದ ಮೇಲಿದ್ದಿತು. ನನ್ನ ಬಳಿ ಬಂದಾಗ ನಾನು ಕಳುಹಿಸಿಕೊಡುವೆ. ತಿರುಚಿನಾಪಲ್ಲಿಯಲ್ಲಿ ಗಣೇಶನ್ ಸಿಕ್ಕಿದ್ದ. ಹಲವು ಸಲ ಭೇಟಿಯಾದ. ಆದೂ ಚಾತುರ್ಯಪೂರ್ಣ ನಮ್ರತೆಯ ರೂಪದಲ್ಲಿ. ನಾನು ಆತನನ್ನು ಸತ್ಸಂಗದಲ್ಲಿ ಕೂಡಗೂಡಲಿಲ್ಲ. ಮತ್ತು ಆತನನ್ನು ಸೇರಿಸಿಕೊಳ್ಳಲು ಕೂಡ ಸಿದ್ಧನಿಲ್ಲ.

ನಾನು ಒಬ್ಬ ಸತ್ಸಂಗಿಯ ಕೈಯಲ್ಲಿ ಒಂದು ಪತ್ರ ಕಳುಹಿಸಿದ್ದೆ. ಆತನ ವರ್ಗಾವಣೆ ಹಾಸನಕ್ಕೆ ಆಗಿದೆ. ಪ್ರಾಯಶಃ ತಲುಪಿರಬಹುದು.

ನಾನು ತಿರುಚಿನಾಪಲ್ಲಿಯಲ್ಲಿ ಅರ್ಧ ಘಂಟೆಯವರೆಗೆ ಸ್ವಾಮಿ ಚಿನ್ಮಯಾನಂದರ ಗೀತೆಯ ಮೇಲಿನ ಉಪನ್ಯಾಸವನ್ನು ಕೇಳಿದೆ. ಅವರಲ್ಲಿ ಆಧ್ಯಾತ್ಮಿಕ ಶಕ್ತಿಯಿಲ್ಲ. ಮತ್ತು ಮೋಡಿ ಮಾಡುವ ಶಕ್ತಿಯೂ ಇಲ್ಲವೆಂದು ಅದರಿಂದ ತಿಳಿಯಿತು. ಆದರೆ ಇಷ್ಟು ಪ್ರಸಂಶೆ ಮಾತ್ರ ಅವಶ್ಯವಾಗಿ ಮಾಡುವೆ; ಜನರ ಸುಧಾರಣೆಯ ಕಡೆಗೆ ಅವರ ಲಕ್ಷ್ಯವಿದೆ.

ನೀವು ನಿಮ್ಮ ಆಧ್ಯಾತ್ಮಿಕ ಪ್ರಗತಿಯ ಬಗ್ಗೆ ನಿಮ್ಮ ತಿಳುವಳಿಕೆಯಲ್ಲಿ ಬಂದಂತೆ ಬರೆಯಿರಿ. ನಾನು ಕೆಲವು ದಿನಗಳ ನಂತರ ಬರೆಯುವೆ. ದೇವರಿಗೆ ಧನ್ಯವಾದಗಳನ್ನರ್ಪಿಸಲು ಯೋಗ್ಯವಾಗುವಷ್ಟು ನಿಮ್ಮ ಸ್ಥಿತಿಯಿದೆ.

ಮೀರಾಳ ಕೈ ಮತ್ತು ಕಾಲಿನ ಬಗ್ಗೆ ನಾನು ಬರೆದು ತೋರಿಸಿದ ಪ್ರಕಾರ ನೀವು ಮಾಡುತ್ತಿರಬಹುದು. ಆದು ಅವಳಿಗೆ ಎಷ್ಟು ಉಪಯುಕ್ತವಾಯಿತೆಂಬುದನ್ನು ಬರೆಯಿರಿ. 'ರಾ' ಗೆ ಎಚ್ಚರಿಕೆ ಕೊಟ್ಟು ಪೂಜೆಯ ಕಡೆಗೆ ಹೆಚ್ಚು ಧ್ಯಾನವಿರಲೆಂದು ಬರೆದು ಬಿಡಿರಿ. ಪೂಜೆ ಮಾಡದಿರುವದರಿಂದ ಅವರಲ್ಲಿ ಸ್ಥೂಲತೆ ಬೆಳೆದು ಹೋಗಿದೆ.

ಮಕ್ಕಳಿಗೆ ಆಶೀರ್ವಾದಗಳು.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ. ಸೂ.: ಜನ್ಮಾಷ್ಟಮಿಯ ವ್ರತವನ್ನು ಆಗಸ್ಟ ೧೨ ರಂದು ಆಚರಿಸಲಾಗುವುದು.

◆ ◆ ◆

"ಓಂ ತತ್‌ಸತ್"

ನಂ.೧೩೧ — ಷಾಹಜಹಾನ್‌ಪೂರ್

ನಂ. ಎಚ್.-೪೫೪/ಎಸ್.ಆರ್.ಸಿ.ಎಮ್. — ದಿ. ೩೦. ೯. ೧೯೬೩.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಬಹಳ ದುಃಖದ ಮಾತೆಂದರೆ ಶ್ರೀ ಶೇಷಾದ್ರಿಯ ಅಣ್ಣಂದಿರಾದ ಶ್ರೀ ಆರ್. ಕೃಷ್ಣಮಾಚಾರಿಯವರು ಮದ್ರಾಸಿನಲ್ಲಿ ೨೯ ಸೆಪ್ಟೆಂಬರ ೬೩ ರಂದು ಈ ಲೋಕದಿಂದ ಹೊರಟುಹೋದರು. ಈಶ್ವರನು ಅವರ ಆತ್ಮಕ್ಕೆ ಶಾಂತಿ ನೀಡಲಿ. ನೀವು ಶ್ರೀ ಆರ್. ಶೇಷಾದ್ರಿಯವರಿಗೆ ಶೋಕಸೂಚಕ ಪತ್ರವನ್ನು ಬರೆದು ಬಿಡಿರಿ. ಅವರು ಪ್ರಾಯಶಃ ಮದ್ರಾಸಿನಲ್ಲಿಯೇ ಇರುವರು.

ವಿಳಾಸ: ೧೫- ಅಲಮೇಲ ಮಂಗಾಪುರಂ,

ಮೈಲಾಪೂರ, ಮದ್ರಾಸ್.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೬೨<br>ನಂ. ಎಚ್-೪೯೭/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್<br>ದಿ. ೧೦. ೧೦. ೧೯೬೩.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಮಗು ಹುಟ್ಟಿದ ಸುದ್ದಿ ಕೇಳಿ ಬಹಳ ಸಂತೋಷವಾಯಿತು. ಭಗವಂತನು ಅವನ ಆಯುಷ್ಯವನ್ನು ವೃದ್ಧಿಸಲಿ. ಮಗು ಮತ್ತು ತಾಯಿ ಆನಂದವಾಗಿರಲಿ. ನಿಮ್ಮ ಎಲ್ಲಾ ಪತ್ರಗಳು ಮುಟ್ಟಿದವು, ಮತ್ತು ಅವೆಲ್ಲವಕ್ಕೂ ಉತ್ತರಿಸುವೆನು. ನೀವು ರಬ್ಬರ್‌ಮುದ್ರೆಯ ಬಗ್ಗೆ ಏನು ಬರೆದಿರುವಿರೋ ಅದನ್ನು ನೀವು ಮಾಡಿಸಿಕೊಳ್ಳಬಹುದು. 'ಹಾಸನ್' ದ ನಂತರ 'ಮೈಸೂರು' ಅಥವಾ 'ಸೌಥ್ ಇಂಡಿಯಾ' ಎಂದು ಬರೆಯಿಸಿರಿ. ಮಾಸ್ಟರ ಸಾಹೇಬರ ಕಣ್ಣಿನ ಪೊರೆ ದೇವರ ದಯದಿಂದ ಹಾಗು ಔಷಧದಿಂದ ಗುಣವಾಗುತ್ತಲಿದೆ. ಉಮೇಶನ ಕಣ್ಣಿನ ಕುರಿತು ನಿಜವಾಗಿಯೂ ಒಂದು ಪವಾಡವೇ ಆಯಿತು. ಎಂಟು ದಿನಗಳೊಳಗಾಗಿ ಆತನ ದೃಷ್ಟಿ ಒಳ್ಳೆಯ ಸ್ಥಿತಿಗೆ ಬಂದು ಬಿಟ್ಟಿತು. ಮತ್ತು ಮೆಡಿಕಲ್ ಕಾಲೇಜಿನ ಒಬ್ಬ ಚತುರ ಡಾಕ್ಟರನಿಗೆ ತೋರಿಸಿದಾಗ ಕಣ್ಣಿನಲ್ಲಿ ಯಾವ ರೋಗವೂ ಇಲ್ಲ; ಆದರೆ ನಿಶ್ಶಕ್ತತೆ ಇದ್ದುದು ತಿಳಿದು ಬಂದಿತು. ದೇವರ ದಯದಿಂದ ಅದೂ ಸಹ ಗುಣವಾಗಬಹುದು. ಆದರೆ ನಿಮ್ಮ ಪ್ರಾರ್ಥನೆಯ ಆವಶ್ಯಕತೆ ಇದೆ. ಹುಡುಗಿಯ ಕೈ ಕಾಲಿನ ವಿಷಯವಾಗಿ ನೀವು ಬಹಳ ಲಾಭವಿದೆಯೆಂದು ಬರೆದಿದ್ದಿರಿ. ಅದೇ ಚಿಕಿತ್ಸೆಯನ್ನು ಪೂರ್ಣ ಗುಣವಾಗುವವರೆಗೆ ಮುಂದುವರಿಸಿರಿ.

ಸರನಾಡಜಿಯವರ ಪತ್ರ ನನ್ನಲ್ಲಿಯೂ ಬಂದಿತ್ತು. ಅವರ ಬಗ್ಗೆ ಬೀದರಿನಲ್ಲಿ ನಾನು ನಿಮಗೆ ನನ್ನ ಅಭಿಪ್ರಾಯ ತಿಳಿಸಿದ್ದೆ. ಅವರಿಗೆ ಕ್ಲೀನಿಂಗಿನ ಅತ್ಯಂತ ಆವಶ್ಯಕತೆ ಇದೆ. ನಾನೂ ಸಹ ಅಲ್ಪ ಸ್ವಲ್ಪ ಕೆಲಸ ಪ್ರಾರಂಭಿಸಿರುವೆನು. ಮತ್ತು ಅವರಿಗೆ ಸ್ವಲ್ಪ ಮಟ್ಟಿಗೆ ಲಾಭವೂ ಸಹ ಇದೆ. ಅವರ ಮೇಲೆ ನೀವೂ ಶ್ರಮಿಸಿರಿ. ರಾಮಕಿಷನ್‌ಜಿಯವರು ಯಾವ ಅಶಾಂತತೆಯ ಕುರಿತು ಬರೆದಿರುವರೋ, ಅವರ ಕ್ಲೀನಿಂಗ ಮಾಡುತ್ತಿರಿ, ಹಾಗು ಹೃದಯದಲ್ಲಿ ಶಾಂತಿಯ ಪ್ರಾಣಾಹುತಿ ಕೊಡಿರಿ. ನರಸಪ್ಪನು ತನ್ನ ಯಾವ ತೊಂದರೆಯ ಬಗ್ಗೆ ಬರೆದಿರುವನೋ ಅವನಿಗೆ ಪಾಯಿಂಟ 'A' ಮೇಲೆ ಬಂಧು ಭಗಿನಿಯರ ಧ್ಯಾನವನ್ನು ಪ್ರಾರಂಭಿಸುವುದಕ್ಕೆ ಬರೆದುಬಿಡಿರಿ. ಅದರ ವಿಧಾನ ನಿಮಗೆ ಗೊತ್ತಿದೆ. ನೀವು ಬೆಂಗಳೂರಿಗೆ ಹೋಗುವ ಅವಕಾಶ ಸಿಕ್ಕಾಗ ಅಲ್ಲಿರುವ ದೊರೆ ಸ್ವಾಮಿಯವರ ಹತ್ತಿರ ಅವಶ್ಯ ಹೋಗಿರಿ. ಅವರೊಬ್ಬರು ಬಹಳ ಪ್ರೇಮಮಯಿ ಇರುವರು. ಹಾಗೂ ೪- ೫ ಸತ್ಸಂಗಿ ಬಂಧುಗಳು ಸಹ ಅಲ್ಲಿ ಇರುವರು. ಮುಂದಿನ ಪ್ರವಾಸದಲ್ಲಿ ನನಗೆ ಹಾಸನಕ್ಕೆ ಬರುವುದೇ ಇದೆ. ಸಾಧ್ಯವಾದ ಮಟ್ಟಿಗೆ ನಾನು ಕನಿಷ್ಟ ಪಕ್ಷ ಒಂದು ದಿನವಾದರೂ ದೊರೆ ಸ್ವಾಮಿಯ ಹತ್ತಿರ ಅವಶ್ಯವಾಗಿ ತಂಗುವೆನು. ಸರನಾಡಜಿಯವರ ವಿಷಯದಲ್ಲಿ ಒಂದು ಮಾತು ಉಳಿಯಿತು. ಅವರು ಟೀನಾ ವಾಳಿ ವಿಷಯಕ್ಕೆ ಬರೆದಿರುವರು. ಈ ವಿಷಯಕ್ಕೆ ಒಂದು ನಾಣ್ನುಡಿ ನೆನಪಿಗೆ ಬರುತ್ತದೆ. "ಊರ ಚಿಂತೆ

ಹಚ್ಚಿಕೊಂಡು ಮುಲ್ಲಾ ಸೊರಗಿದ" ನಂತೆ. ಇದರ ಬದಲು ನಮ್ಮ ಮೇಲೆ ಕೆಟ್ಟ ವ್ಯಕ್ತಿಗಳು ದಾಳಿ ಮಾಡದಿರಲಿ ಹಾಗೂ ಅವುಗಳಿಂದ ರಕ್ಷಿಸಿಕೊಳ್ಳುವ ಚಿಂತೆ ಇದ್ದಿದ್ದರೆ ಅದು ಬಹಳ ಒಳಿತಾಗುತ್ತಿತ್ತು. ನಿಮ್ಮ ಮಾನ್ಯ ತಂದೆಯವರಿಗೆ ಶಾಂತಿಯ ಅವಶ್ಯಕತೆ ಬಹಳವಿರುತ್ತದೆ. ಮತ್ತು ವಿಶೇಷವಾಗಿ ವೃದ್ಧಾಪ್ಯದಲ್ಲಿ ಎಲ್ಲರಿಗೂ ಇದರ ಅವಶ್ಯಕತೆ ಬೀಳುತ್ತದೆ. ಆದರೆ ನಾನೂ ಸಹ ವೃದ್ಧನಾಗುತ್ತಿದ್ದೇನೆ; ಇದರ ಅವಶ್ಯಕತೆ ನನಗೂ ಸಹ ಇರಬಹುದು ಎಂದು ನೀವು ಅಂದುಕೊಳ್ಳಬಹುದು. ಆದರೆ ಈ ವಿಚಾರ ತಪ್ಪಾಗಬಹುದು. ಯಾಕೆಂದರೆ ನಾನು ಯಾವ ಕಾಲಕ್ಕಾದರೂ ತಾರುಣ್ಯ ಅವಸ್ಥೆಯಲ್ಲಿದ್ದಿದ್ದರೆ ವೃದ್ಧನಾಗಬಹುದಾಗಿತ್ತು. ಶ್ರೀರಾಮಚಂದ್ರಮಿಶನ್ ಅವಶ್ಯವಾಗಿ ಪಸರಿಸುವುದು; ಮತ್ತು ಅದರಲ್ಲಿಯೂ ವಿಶೇಷವಾಗಿ ನೀವಿದ್ದಲ್ಲಿ. ಆದರಲ್ಲಿ ನಿಮ್ಮ ಇಚ್ಛಾಶಕ್ತಿಯನ್ನು ಬಲಿಷ್ಠವಾಗಿಟ್ಟು ಪ್ರಯತ್ನಶೀಲರಾಗಿ ಮುಂದುವರಿಯಿರಿ. ನಿಮ್ಮ ವೇತನ ಶ್ರೇಣಿ ನಿರ್ಧಾರಗೊಂಡದ್ದಕ್ಕಾಗಿ ನನಗೆ ಬಹಳ ಸಂತೋಷವಾಗಿದೆ. ಇದರಲ್ಲಿ ನಿಮಗೆ ಬಂದಿರುವ ಹೆಚ್ಚಿನ ಹಣವನ್ನು ಹುಡುಗಿಯರ ಮದುವೆಗಾಗಿ ಜೋಪಾನವಾಗಿಡಿರಿ. ಮತ್ತು ಮುಂದೆ ಆದಷ್ಟು ಮಟ್ಟಿಗೆ ಮಿತವ್ಯಯದಿಂದ ಬಳಸಿರಿ. ಹೋದ ಸಲ ನಾನು ಇಲ್ಲಿ ಇರದಿದ್ದುದಕ್ಕೆ ಪತ್ರಿಕೆಯಲ್ಲಿ ಅಚ್ಚಿನ ತಪ್ಪುಗಳು ಬಹಳ ಉಳಿದುಕೊಂಡವು. ನಿಮ್ಮ ಲೇಖನವನ್ನು ಈ ಬರುವ ಸಂಚಿಕೆಯಲ್ಲಿ ಪುನಃ ತೆಗೆದುಕೊಳ್ಳಲಾಗಿದೆ. ನಾನು ರೇಲ್ವೆ ರಸೀದಿಯನ್ನು ಕಳಿಸುತ್ತಿರುವೆ. ಆದರಲ್ಲಿ ಈ ಕೆಳಕಂಡ ಪುಸ್ತಕಗಳು ಇವೆ.:-

೧) "ಸಹಜ ಮಾರ್ಗ"ದ ಪತ್ರಿಕೆಗಳು - ೫

೨) ಎಫಿಕಸಿ ಆಫ್ ರಾಜಯೋಗ - ೧೦

೩) ಟೆನ ಕಮಾಂಡಮೆಂಟ್ಸ - ೧೦

೪) ಪೀಪ್ ಇಂಟು ಸಹಜಮಾರ್ಗ - ೧೦

೫) ಅನಂತ ಕೀ ಓರ - ೫

ಪಾಲಿಟೆಕ್ನಿಕನ ಪತ್ರಿಕೆ ನನಗೆ ತಲುಪಿದೆ. ನೀವು ನನ್ನ ಪತ್ರಗಳ ಅನುವಾದ ಮಾಡುತ್ತಿರುವಿರಿ ಮತ್ತು ಆದಕ್ಕಾಗಿ ನನ್ನ ಆಶೀರ್ವಾದವನ್ನು ಆಶಿಸುತ್ತಿರುವಿರಿ. ಇದೆಲ್ಲವೂ ಸರಿಯಾದದ್ದು. ಆದರೆ ನಾನು ಒಂದು ಮಾತು ತಿಳಿಸಿಕೊಡುವೆನು. ಅದೇನೆಂದರೆ, ತನ್ನ ಮೇಲೆ ವಿಶ್ವಾಸ ಇಟ್ಟಿದ್ದಾದರೆ ಪ್ರತಿಯೊಂದು ಮಾತು ಸರಿಯಾಗಿ ಬರುತ್ತದೆ.

ಆದರೆ ಒಬ್ಬನು ತನ್ನ ಮೇಲೆ ವಿಶ್ವಾಸವಿಟ್ಟಾಗ ಒಂದು ವೇಳೆ ಆ "ತಾನು"ಎನ್ನುವುದು ಯಾರಿಗೆ ಅನ್ವಯಿಸುವುದೆಂದು ತಿಳಿಯಲಾರದ ಸ್ಥಿತಿ ಉತ್ಪನ್ನವಾದಾಗ ಆತನು ಏನು ಹೇಳುವನೋ, ಏನು ಬರೆಯುವನೋ, ಅದೆಲ್ಲವೂ ಸರಿಯಾಗಿಯೆ ಇರುವುದು. ಅಂದರೆ ಸ್ವಾರ್ಥವು ನಿಃಸ್ವಾರ್ಥವಾಗಬೇಕು. ನಾನು ಶ್ರೀ ಎಸ್.ಎನ್.ಭಟ್ಟಿಯವರ ವಾಕ್ಯವನ್ನು ಓದಿದೆ. ಅವರು ಏನೇನು ಮಾಡುತ್ತಾರೋ ಮಾಡುತ್ತಿರಲಿ. ಸ್ವಲ್ಪ ಲಾಭ ಅವಶ್ಯವಾಗಿ ಆಗುವುದು. ಒಮ್ಮೆ ಡಾ. ವರದಾಚಾರಿಯವರು ಮಿಶನ್ನಿನ ಪ್ರತಿಯೊಬ್ಬ ಸದಸ್ಯನೂ ತನ್ನ ಒಂದು ಚಿಕ್ಕ

ಫೋಟೋ ಮತ್ತು ಅದರ ಹಿಂದಿನ ಭಾಗದಲ್ಲಿ ತನ್ನ ಹೆಸರು ಮತ್ತು ವಿಳಾಸವನ್ನು ಹೆಡ್ ಆಫೀಸಿಗೆ ಕಳಿಸಿದಲ್ಲಿ ಬಹಳ ಸೌಲಭ್ಯ ಉಂಟಾಗಬಹುದೆಂದು ಸಲಹೆ ಮಾಡಿದ್ದರು. ಆದರೆ ನಾನು ಅವರ ಪರವಾಗಿ ಹೆಚ್ಚಾಗಿ ಇಲ್ಲ. ಪ್ರಾಯಶಃ ನನಗೆ ಈ ಎಸ್.ಎನ್. ಚಿಟ್ಟಿಯವರ ಪರಿಚಯವಿದೆ. ಆದರೆ ಅವರು ತಮ್ಮ ಒಂದು ಫೋಟೋವನ್ನು ಕಳಿಸಿದರೆ ಹೆಚ್ಚು ಅನುಕೂಲವಾಗುವುದು. ಇದಲ್ಲದೆ ನೀವು ಆತನನ್ನು ನಿಮಗೆ ಬೇಕಾದಂತೆ ಸಿದ್ಧಗೊಳಿಸಬಹುದು. ನನಗೆ ಒಂದು ತೊಂದರೆ ಉಂಟಾಗುವುದೇನೆಂದರೆ ವರ್ಗವಾಗುವ ವ್ಯಕ್ತಿಯನ್ನು ಪ್ರಿಸೆಪ್ಟರ ಮಾಡಿದಲ್ಲಿ, ಆತನ ಸ್ಥಾನವು ಬೇಗ ತೆರವಾಗುವುದು ಮತ್ತು ನನಗೆ ಪುನಃ ಇನ್ನೊಬ್ಬನನ್ನು ಹುಡುಕಬೇಕಾಗುತ್ತದೆ.

ಬಳ್ಳಾರಿಯಲ್ಲಿ ನೀವು ಯಾರನ್ನು ಆರ್ಗನೈಜರ್‌ನನ್ನಾಗಿ ಮಾಡಿದ್ದಿರೋ ಆತನ ವಿಳಾಸವನ್ನು ನನಗೆ ಕಳಿಸಿಕೊಡಿರಿ. ನಾರಾಯಣರಾವ ಸಹ ಪತ್ರ ಬರೆದಿರುವರು. ಅವರು ನಿಮ್ಮ ಸಲಹೆಯ ಮೇರೆಗೆ ರಾಯಚೂರಿನಲ್ಲಿ ಯಾರಿಗೋ ಆರ್ಗನೈಜರ ಮಾಡಿರುವರು. ಅವರು ರಾಯಚೂರಿಗೆ ಹೋಗಿರುವರು. ಅಲ್ಲಿಂದ ಬಂದ ನಂತರ ಬರೆಯುವರು. ಡಾ. ಕುಲ್ಕರ್ಣಿ ಸ್ವಲ್ಪಾದರೂ ಆಸಕ್ತಿ ವಹಿಸುತ್ತಿಲ್ಲ ಎಂದು ಬರೆದಿರುವರು. ಮತ್ತು ಅವರು ಸಾಯಿಬಾಬಾ ಅವರ ಸುತ್ತಿನಲ್ಲಿ ಸಿಕ್ಕಿಬಿದ್ದಿದ್ದಾರೆ. ಅವರಿಗೆ ಆಧ್ಯಾತ್ಮಿಕ ಲಾಭವಾಗಲಿ ಎನ್ನುವುದು ನಮ್ಮ ನಿಮ್ಮ ಎಲ್ಲರ ಉದ್ದೇಶವಾಗಿದೆ. ಒಂದು ಪಕ್ಷ ಸಾಯಿಬಾಬಾರವರಿಂದ ಅವರಿಗೆ ಲಾಭವಾಗುವಂತಿದ್ದರೆ ಯಾವ ಅಭ್ಯಂತರವೂ ಇಲ್ಲ. ಸಾಯಿಬಾಬಾ ಅವರಲ್ಲಿ ಮೊದಲಿದ್ದ ಮಾತು ಈಗಿಲ್ಲ. ಆಧ್ಯಾತ್ಮಿಕ ವಿಷಯದಲ್ಲಿ ಮೊದಲು ಅವರು ಶೂನ್ಯವಾಗಿದ್ದರು. ಮತ್ತು ಈಗಲೂ ಸಹ ಹಾಗೆಯೇ ಇದ್ದಾರೆ. ಮತ್ತು ಈಗ ಅವರ ಪವಾಡಗಳು ಅವರಿಂದ ಬಿಟ್ಟು ಹೋಗುತ್ತಲಿವೆ. ನಮಗೆ ಸಾಯಿಬಾಬಾರಿಂದ ಯಾವ ಪ್ರಯೋಜನವೂ ಇಲ್ಲ. ಅವರು ಏನು ಬೇಕಾದರೂ ಮಾಡುತ್ತಾ ಹೋಗಲಿ. ಆದರೆ ಅವರಿಂದ ಜನರಿಗೆ ಹಾನಿಯಾಗಲಾರಂಭಿಸಿದರೆ ಮತ್ತು ಅವರು ತಮ್ಮ ದುಷ್ಟ ವೃತ್ತಿಗಳನ್ನು ಬಿಡದಿದ್ದರೆ ಆಗ ನಾನು ಏನಾದರೂ ಮಾಡಬೇಕಾಗಿ ಬರಬಹುದು. ಕೆಲವು ದಿನಗಳ ನಂತರ ಅವರ ಪವಾಡಗಳು ನಿಂತು ಹೋದ ಬಳಿಕ ಅವರು ಬಹುಶಃ ಉಪದೇಶ ಮಾಡಲಾರಂಭಿಸುವರು. ನಾನು ೨೧ ಅಕ್ಟೋಬರಿಗೆ ಆಸ್ಸಾಮಿಗೆ ಹೋಗಲಿರುವೆನು. ರಿಜರ್ವೇಶನ್‌ಗಾಗಿ ನಸೀಬಚಂದರಿಗೆ ಹಣವನ್ನು ಕಳಿಸಿರುವೆನು. ನನ್ನ ಜೊತೆಯಲ್ಲಿ ಮಾಸ್ಟರ ಸಾಹೇಬ, ಕಾಶೀರಾಮ, ಹರದತ್ತಸಿಂಗ ಬರುತ್ತಿರುವರು.

ಈಗ ನಾನು ನಿಮಗೆ ಶುಭ ಸಮಾಚಾರ ಕೊಡುವೆನು. ಅದೇನೆಂದರೆ ನೀವು ದಿನಾಂಕ ೧೩. ಸೆಪ್ಟೆಂಬರ್ ೬೩. ಸಾಯಂಕಾಲ ೪-೫೮ ನಿಮಿಷಕ್ಕೆ ಕೇಂದ್ರಮಂಡಲದ ನಾಲ್ಕನೇ ವೃತ್ತದಲ್ಲಿ ಪದಾರ್ಪಣೆ ಮಾಡಿರುವಿರಿ. ಈಗ ನಿಮಗೆ ಧ್ಯಾನದ ಅಥವಾ ಯಾವುದೇ ಪೂಜೆಯ ಆವಶ್ಯಕತೆಯಿಲ್ಲ. ನಾನು ಧ್ಯಾನದ ಸಮಯವನ್ನು, ಬೆಳಗ್ಗೆ ೧ ಗಂಟೆ, ಸಾಯಂಕಾಲ ೧/೨ ಗಂಟೆ ನಿರ್ದಿಷ್ಟಪಡಿಸಿರುವೆನು. ಆದ್ದರಿಂದ ನಿಮ್ಮ ಈ ೧ ೧/೨ ತಾಸಿನ ಸಮಯವನ್ನು ಉಳಿಸಿರುವೆನು. ಆ ಸಮಯವನ್ನು ನಿಮ್ಮ ಮೆದುಳಿನ ಶಕ್ತ್ಯಾನುಸಾರ ಇತರರ ಆಧ್ಯಾತ್ಮಿಕ ಪ್ರಗತಿಗಾಗಿ ಉಪಯೋಗಿಸಿರಿ. ಕನಿಷ್ಟ ಪಕ್ಷ

**ವಾರದಲ್ಲಿ ಒಂದು ದಿನವಾದರೂ, ನೀವು ನಿಮ್ಮ ಕೇಂದ್ರದ ಎಲ್ಲ ಬಂಧುಗಳಿಗೆ ಪ್ರಾಣಾಹುತಿ ಅವಶ್ಯವಾಗಿ ಕೊಡುವಂತಿರಬೇಕು. ಪ್ರತಿಯೊಬ್ಬರಿಗೂ ವೈಯಕ್ತಿಕವಾಗಿ ಕೊಡಬೇಕೆಂದು ಇದರ ಉದ್ದೇಶವಲ್ಲ. ನೀವು ಎಲ್ಲರನ್ನು ಒಟ್ಟಾಗಿಯೇ ತೆಗೆದುಕೊಳ್ಳಬಹುದು. ಹಾಗೂ ಅವರಲ್ಲಿ ಯಾರನ್ನು ಬೇಕಾದರೂ ವೈಯಕ್ತಿಕವಾಗಿ ತೆಗೆದುಕೊಳ್ಳಬಹುದು.**

ನಾನು ಮದ್ರಾಸಿನಲ್ಲಿದ್ದಾಗ ಡಾಕ್ಟರ ಸಾಹೇಬರು ಹೃದಯದ ಕೆಲವು ಬಿಂದುಗಳ ಬಗ್ಗೆ ಸಂಶೋಧನೆಯನ್ನು ನನಗೆ ಕೊಟ್ಟಿದ್ದರು. ನಾನು ಆವಾಗಲೇ ಸಂಶೋಧಿಸಿ ಅವರಿಗೆ ತಿಳಿಸಿದೆನು. ಆದರೆ ಕೇಂದ್ರದಲ್ಲಿ ಇರುವ ಒಂದು ಬಿಂದುವಿನ ಬಗ್ಗೆ ಸಂಶೋಧನೆ ಮಾತ್ರ ಆಗ ಹೆಚ್ಚು ಪ್ರಶಸ್ತಗೊಳ್ಳಲಿಲ್ಲ. ಈಗ ನಾನು ಸುಮಾರು ಒಂದು ತಿಂಗಳ ಹಿಂದೆ ಅದನ್ನು ಅವರಿಗೆ ಕಳಿಸಿರುವೆನು. ಅದರ ಪ್ರತಿಯನ್ನು ನಿಮಗೂ ಕಳಿಸುತ್ತಿರುವೆನು. ನನ್ನ ಈ ಸಂಶೋಧನೆ ಸಂಪೂರ್ಣ ಸರಿಯಾಗಿದೆ. ಇದನ್ನು ತಿಳಿದುಕೊಳ್ಳಿರಿ. ಹಾಗೂ ನಿಮ್ಮ ಕಡತದಲ್ಲಿ ಇಟ್ಟುಕೊಳ್ಳಿರಿ. ಕಸ್ತೂರಿ ನನ್ನನ್ನು ನೋಡಲು ಇಲ್ಲಿ ಬಂದಿರುವಳು. ನಾಳೆ ಹಿಂತಿರುಗಿ ಹೋಗಲಿರುವಳು. ನಿಮಗೆ ಪ್ರಣಾಮ ತಿಳಿಸಿದ್ದಾಳೆ.

ನಾವು ಆಸ್ಸಾಮ್‌ಗಾಗಿ ಕೆಲವು ಕಿರುಹೊತ್ತಿಗೆಗಳನ್ನು ಮುದ್ರಿಸಿದ್ದೇವೆ. ಅದು 'ಸಹಜಮಾರ್ಗದ ರೂಪರೇಷೆ'ಗಳ ಅನುವಾದವಾಗಿದ್ದು, ಕೊನೆಯಲ್ಲಿ ಸ್ವಲ್ಪ ಬೆಳೆಸಲಾಗಿದೆ. ಎರಡು ಮೂರು ದಿನಗಳಲ್ಲಿ ಬಂದು ಬಿಡುವವು. ನಿಮಗೆ, ಸರ್ನಾಡರಿಗೆ ಹಾಗೂ ಆಯಿಲರೆಡ್ಡಿಯವರಿಗೆ ಒಂದೊಂದು ಪ್ರತಿಯನ್ನು ಕಳಿಸುವೆನು. ಈ ಕಿರುಹೊತ್ತಿಗೆಯನ್ನು ನೋಡಿ ಇದನ್ನು ಕನ್ನಡದಲ್ಲಿಯೂ ಅನುವಾದಿಸುವುದು ಉಚಿತವೇ ಎಂಬ ವಿಚಾರವನ್ನು ನಿರ್ಣಯಿಸಿಕೊಳ್ಳಿರಿ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ಮತ್ತೆ : ಸಾಯಂಕಾಲದ ಶುದ್ಧೀಕರಣದ ಯಾವ ಅಭ್ಯಾಸವು ತೋರಿಸಲ್ಪಟ್ಟಿದೆಯೋ, ಅದರಿಂದ ಜನರಲ್ಲಿ ಲಾಭ ಕಂಡುಬರುತ್ತಿಲ್ಲ. ಕಾರಣವೇನೆಂದರೆ ಅವರು ಅದನ್ನು ತಪ್ಪಾಗಿ ಮಾಡುವರು. ನೀವು ನಿಮ್ಮ ಅಧೀನದಲ್ಲಿರುವ ಕೇಂದ್ರಗಳಲ್ಲಿ ಯಾರು ಸತ್ಸಂಗ ಮಾಡಿಸುತ್ತಿರುವರೋ ಅವರಿಗೆ ಸೂಚನೆ ಕೊಡಿರಿ, ಮತ್ತು ಭೆಟ್ಟಿಯಾದವರಿಗೆಲ್ಲ ಮೌಖಿಕವಾಗಿ ಸಹ ತಿಳಿಸುತ್ತ ಹೋಗಿರಿ. ವಾಸ್ತವವಾಗಿ ಅವರು ಜಡತ್ವದ ಮೇಲೆ (Grossness)ಧ್ಯಾನ ಮಾಡಲಾರಂಭಿಸುವರು. ಮತ್ತು ಹಿಂದುಗಡೆಯಿಂದ ಹೊಗೆಯ ರೂಪದಲ್ಲಿ ಸ್ಥೂಲತೆ ಹೋಗುತ್ತಿರುವದೆಂದು ಚಿಂತನೆ ಮಾಡುವರು. ಬೇಕಾದದ್ದೇನೆಂದರೆ ಅದನ್ನು ಭಾವಸಂಕಲ್ಪ ಬಲದಿಂದ ಹಿಂದುಗಡೆ ಹೊಗೆಯಾಗುವುದಕ್ಕೋಸ್ಕರ ತಳ್ಳುತ್ತಿರಬೇಕು.

◆ ◆ ◆

"ಓಂ ತತ್‌ಸತ್"

ನಂ.೧೩೩
ನಂ. ಎಚ್/೫೧೭/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿನಾಂಕ. ೧೮.೧೦.೧೯೭೩.

ನನ್ನ . . . . . ಜೀ,

ಚಿರಂಜೀವಿಯಾಗಿರಿ. ಇದಕ್ಕೂ ಮುಂಚೆ ಒಂದು ಲಕೋಟೆ ಕಳಿಸಿರುವೆನು. ಅದರಲ್ಲಿಟ್ಟ ಪುಸ್ತಕಗಳ ರೇಲ್ವೆ ರಸೀದಿ ತಲುಪಿರಬಹುದು. ನನ್ನ ಪ್ರವಾಸದ ಕಾರ್ಯಕ್ರಮವನ್ನು ಸಹ ಅದರಲ್ಲಿ ಇಟ್ಟಿದ್ದೆ.

ಬೀದರಿನಿಂದ ಶ್ರೀ ಬಿ. ಎಲ್. ಕೆ ಮೂರ್ತಿಯವರ ಒಂದು ಪತ್ರ ನನ್ನ ಬಳಿ ಬಂದಿತ್ತು. ಅದರಲ್ಲಿ ಶ್ರೀ ಗೋಡಬೋಲೆ ಅವರ ಬಗ್ಗೆ ಬರೆದು ಅವರನ್ನು ಪ್ರಶಿಕ್ಷಕರನ್ನಾಗಿ ಮಾಡಬೇಕೆಂಬ ಸಲಹೆ ಇತ್ತು. ನಿಮ್ಮ ಅಭಿಪ್ರಾಯವು ಆಗದವರೆಗೆ ನಾನು ಇವರ ಬಗ್ಗೆ ಏನೂ ಮಾಡಲಾರೆ. ಶ್ರೀ ಆಯಿಲರೆಡ್ಡಿಯವರು ಬಹಳ ಉತ್ತಮ ಕೆಲಸ ಮಾಡುತ್ತಿರುವರು. ಮತ್ತು ಇಂಥ ಪರಿಸ್ಥಿತಿಯಲ್ಲಿ ಬೇರೆ ಇನ್ನೊಬ್ಬ ಪ್ರಶಿಕ್ಷಕನ ಅವಶ್ಯಕತೆ ಇದೆಯೆಂದು ಅನಿಸುವುದಿಲ್ಲ. ನಾನು ನನ್ನ ಅವಶ್ಯಕತೆಗಾಗಿ ಗುರುಮಹಾರಾಜರ ಶಕ್ತಿಯಿಂದ ಕೆಲವೇ ದಿನಗಳಲ್ಲಿ ಪ್ರಶಿಕ್ಷಕರನ್ನು ಮಾಡುತ್ತಿರುತ್ತೇನೆ. ಈಗಂತೂ ನನ್ನ ಅವಶ್ಯಕತೆ ಪೂರ್ಣಗೊಂಡಿದೆ. ಈಗ ಶ್ರೀ ಗೋಡಬೋಲೆಯವರು ಇತರರ ಸೇವೆಗಾಗಿ ಮುಂದೆ ಬರಲು ಬಯಸಿದ್ದರೆ ಅವರು ತಮ್ಮನ್ನು ತಾವು ಸಜ್ಜುಗೊಳಿಸಲಿ.

ಶ್ರೀ ಬಿ.ಎಲ್.ಕೆ. ಮೂರ್ತಿಯವರ ವಿಚಾರವು ಒಳ್ಳೆಯದಿದೆ. ಮತ್ತು ನಾನು ಅವರ ಪ್ರಶಂಸೆ ಮಾಡುತ್ತೇನೆ. ಬಹುಶಃ ನಿಮಗೆ ಗೋಡಬೋಲೆಯವರ ಪರಿಚಯವಿರಬಹುದು. ಮೊದಲು ಅವರು ಮಿಶನ್ನಿನ ಸೇವೆ ಹೇಗೆ ಮಾಡಬಲ್ಲರೋ ಹಾಗೆ ಮಾಡಲಾರಂಭಿಸಲಿ. ಅದರಿಂದ ನನಗೂ ಸಹ ಅವರ ಅಳತೆ ಗೊತ್ತಾಗಲಿ. ಇವರ ಕುರಿತು ಏನು ಪತ್ರ ವ್ಯವಹಾರ ಆಗಿದೆಯೋ ಅವುಗಳನ್ನು ನಿಮ್ಮ ಕಡತದಲ್ಲಿ ಕಾಯ್ದಿರಿಸಲು ಕಳಿಸುತ್ತಿರುವೆನು. ಇದರಿಂದ ಮುಂದಿನ ವಿಚಾರ ಮಾಡಲು ಅನುಕೂಲವಾಗುವುದು. ಮತ್ತು ನಿಮಗೂ ವಿಷಯ ತಿಳಿದಂತಾಗುವುದು. ನಾನು ೨೧ ಅಕ್ಟೋಬರಿಗೆ ಆಸ್ಸಾಮ ಮುಂತಾದ ಕಡೆಗೆ ಹೋಗಲಿರುವೆನು. ಕಾರ್ಯಕ್ರಮವನ್ನು ನಿಮಗೆ ಕಳಿಸಿರುವೆನು. ಇತ್ತೀಚೆಗೆ ನಾನು ಬಹಳ ದುರ್ಬಲನಾಗಿರುವೆನು. ಆದರೆ ನಿರ್ವಾಹವಿಲ್ಲದೆ ದೇವರ ಮೇಲೆ ಭಾರ ಹಾಕಿ ಹೋಗುವ ಸಂಕಲ್ಪ ಮಾಡಿಯೇ ಬಿಟ್ಟಿರುವೆ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

ನಿಮ್ಮ ವಿಚಾರದಲ್ಲಿ ಆ ಮಗುವಿನ ಹೆಸರು ಪಿ.ರಾಮಪ್ರಸಾದರಾವ್ ಅಂತ ಇದ್ದರೆ ಹೇಗೆ ಇರುವುದು? ಆದರೆ ಈ ಹೆಸರು ಉತ್ತರ ಭಾರತದ್ದಾಗಿದೆ. ಭಗವಂತನು ಅವನಿಗೆ ದೀರ್ಘಾಯುಷ್ಯ ದಯಪಾಲಿಸಲಿ ಮತ್ತು ಆತನು ಆನಂತದಿಂದಿರಲಿ.

◆ ◆ ◆

"ಓಂ ತತ್‌ಸತ್"

ನಂ.೧೩೪
ನಂ. ಎಚ್ /೫೪೭/ಎಸ್.ಆರ್.ಸಿ.ಎಮ್.

ಶಾಹಜಹಾನ್‌ಪೂರ್
ದಿ. ೨೧. ೧೧. ೧೯೬೩.

ನನ್ನ . . . . . ಜೀ,

ಚಿರಂಜೀವಿಯಾಗಿರಿ. ಮಗುವಿನ ಮರಣದ ಸಮಾಚಾರ ಕೇಳಿ ಮನಸ್ಸಿಗೆ ಆಘಾತವಾಯಿತು. ಈಶ್ವರೇಚ್ಛೆಗೆ ಏನೂ ಉಪಾಯವಿಲ್ಲ. ಆದುದರಿಂದ ಉಪಾಯವಿಲ್ಲದೆ ಸಹಿಸಿಕೊಂಡೆನು. ಈಶ್ವರನು ಅದರ ಆತ್ಮಕ್ಕೆ ಶಾಂತಿಯನ್ನೀಯಲಿ ಮತ್ತು ನಿಮ್ಮೆಲ್ಲರಿಗೂ ತಾಳ್ಮೆಯನ್ನೀಯಲಿ. ಯಾವ ರೀತಿಯಾಗಿ ಮೂದಲಿಯಾರರ ಮೊಮ್ಮಗಳ ಮರಣದ ನಂತರ ಅದೇ ಆತ್ಮವನ್ನು ಪುನಃ ಅದೇ ಮನೆಯಲ್ಲಿ ತರಲಾಗಿತ್ತೋ, ಅದೇ ರೀತಿ ಅವನ ಆತ್ಮವನ್ನು ಪುನಃ ನಿಮ್ಮಲ್ಲಿಯೆ ಅದೇ ರೂಪದಲ್ಲಿ ಕಳಿಸಬಹುದಾಗಿತ್ತು. ಯಾಕೆಂದರೆ, ಅವಳು ಮೂದಲಿಯಾರರ ಮಗಳ ಚೊಚ್ಚಲ ಮಗಳಾಗಿದ್ದಳು. ಆಗ ಅವರ ಮನೆಯವರು (ಅಳಿಯ) ಕಾನಪೂರದಲ್ಲಿದ್ದರು. ಅವರು ಪುನಃ ಅದೇ ಮಗು ಅದೇ ರೂಪದಲ್ಲಿ ಬೇಕೆಂದು ಪ್ರಾರ್ಥಿಸುತ್ತಾ ಬಂದಿದ್ದರು. ನಾನು ಅವರಿಗೆ ಇದು ನನಗೆ ಸಂಭವವಿಲ್ಲ ಎಂದು ತಿಳಿಸಿದೆನು. ಇಂಥ ಕಾರ್ಯವು ಶ್ರೀ ಕೃಷ್ಣ ಪರಮಾತ್ಮನಿಂದಲೇ ಸಾಧ್ಯ. ಯಾಕೆಂದರೆ ಆತನು ಸಾಗರದಲ್ಲಿ ಮುಳುಗಿ ಹೋದಂಥ ತನ್ನ ಗುರುಪುತ್ರನನ್ನು ಬದುಕಿಸಿ ತಿರುಗಿ ತಂದುಕೊಟ್ಟಿದ್ದನು. ಅದೇ ಆತ್ಮ ನಿಮ್ಮಲ್ಲಿ ಪುನಃ ಹುಟ್ಟುವಂತೆ ಮಾತ್ರ ಮಾಡಬಹುದು. ಮತ್ತು ಆದದ್ದು ಹಾಗೆಯೆ.

ಪ್ರಸ್ತುತ ಹುಡಗಿಯ ಹೆಸರು ಚಿಕ್ಕುಬಾಯಿ ಅಂತಾ ಇದ್ದು, ಅದು ಅದೇ ರೂಪ ಅದೇ ಆತ್ಮ ಹೊಂದಿದೆ. ನಿಮ್ಮ ಪತ್ರ ತಲುಪಿದಾಗ ಆ ಮಗುವಿಗೆ ಹಲವು ಸಲ ಪ್ರಾಣಾಹುತಿಗಳನ್ನು ಕೊಟ್ಟದ್ದಾಗಿತ್ತು. ಅದರಿಂದಾಗಿ ದೇಹ ಧಾರಣೆಗೆ ಅವಶ್ಯಕವಾದ ವಿಷಯಗಳೆಲ್ಲ ಕಳಚಿ ಹೋಗಿದ್ದವು. ಇದಾದ ನಂತರ ನನಗೆ ಈ ಮೇಲಿನ ವಿಚಾರ ಬಂದಿತು, ಆದರೆ ಆ ಆತ್ಮಕ್ಕೆ ಕೇಳಲಾಗಿ ಅದು ಹಿಂತಿರುಗಿ ಬರಲು ಸಿದ್ಧವಿರಲಿಲ್ಲ. ಇವೆಲ್ಲ ವಿಷಯಗಳು ಆ ಆತ್ಮವನ್ನು ಪುನಃ ತರಲು ಅಡ್ಡಿಯಾದವು. ಯಾವ ವಿಷಯಗಳು ದೂರಾಗಿದ್ದವೋ ಅವುಗಳನ್ನು ಪುನಃ ಉಂಟು ಮಾಡುವುದು ಒಳ್ಳೆಯದಲ್ಲ. ಸೊಸೆಯ ದುಃಖವನ್ನು ದೇವರು ದೂರ ಮಾಡಲಿ.

ಅದಕ್ಕೂ ಉತ್ತಮವಾದ ರೂಪ ಕಾಣಲು ದೊರಕಲಿ. ಹಾಗೆ ಆಗಲಿ. ಮಕ್ಕಳಿಗೆ ಆಶೀರ್ವಾದಗಳು.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೬೫

ನಂ. ಎಚ್-೬೨೯/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್

ದಿ: ೧೭. ೧೨. ೧೯೬೩.

ನನ್ನ . . . . . ಜೀ,

ದೀರ್ಘಾಯುಷಿಗಳಾಗಿರಿ. ನಿಮ್ಮ ಪತ್ರ ತಲುಪಿತು. ಮಗುವಿನ ನೆನಪು ಮತ್ತು ಆದರ ಸಾವಿನ ಶೋಕವು ಇನ್ನೂ ನನ್ನ ಹೃದಯದಿಂದ ದೂರವಾಗಿಲ್ಲ. ಇದೇ ಕಾರಣದಿಂದ ನಾನು ನಿಮಗೆ ಆಸಾಮ ಮತ್ತು ಕಲ್ಕತ್ತೆಯ ವಿಷಯಗಳನ್ನು ಬರೆಯಲಾರವಾದೆ. ಹಾಗೂ ಇನ್ನೂ ಏನೇನೋ ಉಪಯುಕ್ತ ವಿಷಯಗಳನ್ನು ಬರೆಯುವ ಇಚ್ಛೆಯಿತ್ತು; ಬರೆಯಲಾಗಲಿಲ್ಲ. ಅವೆಲ್ಲವನ್ನೂ ಮರೆತುಬಿಟ್ಟೆ. ನನ್ನ ಹೃದಯದಲ್ಲಿ ಶೋಕತಪ್ತವಾಗಿ ನೆಲೆಸಿರುವ ಮಗುವಿನ ನೆನಪು ಹೊರಟು ಹೋಗಲಿ ಎಂದು ಬಯಸುತ್ತೇನೆ. ಆದರೆ ನಿಮ್ಮ ಹೃದಯದಿಂದ ಈ ವಿಚಾರವು ಹೊರಟು ಹೋದಾಗಲೇ ನನಗೆ ಇದು ಸಾಧ್ಯವಾಗುವದು.

ಬಸಂತ ಪಂಚಮಿಯ ಉತ್ಸವವು ೧೮ ಜನವರಿಯಿಂದ ೨೦ ಜನವರಿ ೧೯೬೪ ರ ವರೆಗೆ ಇರುವುದು. ನೀವು ರಾಯಚೂರಿನ ಯಾವುದಾದರೂ ಸತ್ಸಂಗಿಗೆ, ಎಲ್ಲರಿಗೂ ಇದರಲ್ಲಿ ಭಾಗವಹಿಸಲು ಆಮಂತ್ರಣಕೊಡಲು, ಬರೆಯಿರಿ. ನಾನು ನಾರಾಯಣರಾವ್ ಆವರಿಗೆ ಸಹ ಬರೆದು ಬಳ್ಳಾರಿಯ ಒಟ್ಟು ಸತ್ಸಂಗಿಗೆ ಎಲ್ಲರಿಗೂ ಆಮಂತ್ರಣಕೊಡಲು ಸೂಚಿಸುವಂತೆ ತಿಳಿಸಿದ್ದೇನೆ.

ನೀವು ಬಳ್ಳಾರಿ ಮತ್ತು ರಾಯಚೂರಿನಲ್ಲಿ ಯಾವ ಆರ್ಗನೈಜರನನ್ನು ನೇಮಿಸಿದ್ದೀರಿ ಎಂಬುದು ನನಗೆ ತಿಳಿಯದು. ಆದುದರಿಂದ ಅವರಿಗೆ ಏನೂ ಬರೆಯಲಾರದವನಾಗಿದ್ದೇನೆ. ಬಂಧು ಮಾಧವರಾವಜಿ ಸಹ ನಿಮ್ಮ ಜೊತೆಯಲ್ಲಿ ಬರುವುದು ಒಳ್ಳೆಯದು. ನನಗೆ ಸಂತೋಷವಾಗುವುದು. ಮಕ್ಕಳಿಗೆ ಆಶೀರ್ವಾದಗಳು.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೩೬
ನಂ. ಆಯಿ-೨೫/ಎಸ್.ಆರ್.ಸಿ.ಎಮ್.

ಕ್ಯಾಂಪ್: ಮದ್ರಾಸ್
ದಿ. ೯. ೧. ೧೯೬೪.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಾನು ಇಲ್ಲಿಂದ ೧೧ನೇ ಜನೇವರಿಗೆ ವಾಪಸ್ಸು ಹೊರಟಿದ್ದೇನೆ. ಇಲ್ಲಿ ವೀರರಾಘವನ್ ಪ್ರಿಸೆಪ್ಟರ್ ಆಗಿರುವರು. ಅವರ ಕೆಲಸ ಉತ್ತಮವಾಗಿದೆ. ಡಾ. ವರದಾಚಾರಿಯವರು ಸಹ ಇಲ್ಲಿಗೆ ಬಂದಿರುವರು ಮತ್ತು ೧೧ನೇ ತಾರೀಖಿನವರೆಗೆ ಇಲ್ಲಿ ಇರುವರು. ಈ ಹೊತ್ತು ಅವರ ಒಂದು ಭಾಷಣದ ವ್ಯವಸ್ಥೆ ಸಹ ಮಾಡಲಾಗಿದೆ. ಇಲ್ಲಿ ಎಲ್ಲಾ ಕಡೆಗೂ ಅಲ್ಪ ಸ್ವಲ್ಪ ಅಭ್ಯಾಸಿಗಳ ಸಂಖ್ಯೆ ಬೆಳೆದಿದೆ. ಮತ್ತು ತಿರುವಣ್ಣಮಲ್ಲೈಯಲ್ಲಿ ಹೆಚ್ಚು ಕಡಿಮೆ ೬೦ ಜನ ಆಗಿರುವರು. ತಿರುಚಿನಾಪಲ್ಲಿ ಪೂರ್ಣ ಸ್ತಬ್ಧವಾಗಿದೆ. ಆ ಕಡೆಗೂ ಸ್ವಲ್ಪ ಲಕ್ಷ್ಯ ಕೊಡಬೇಕು. ದೇವರ ಕೃಪೆಯಿಂದ ಮಕ್ಕಳೆಲ್ಲಾ ಚನ್ನಾಗಿರಬಹುದು. ಕರೀಗೌಡ ಹಾಗೂ ಇತರ ಸತ್ಸಂಗಿಗಳು ನಿಮ್ಮ ಬಳಿ ಬರುತ್ತಿರುವರೋ ಹೇಗೆ? ಅವಕಾಶ ಸಿಕ್ಕಾಗ ಅವರನ್ನು ಭೆಟ್ಟಿಯಾಗುತ್ತಿರಿ. ಮಕ್ಕಳಿಗೆ ಆಶೀರ್ವಾದಗಳು.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೩೭
ನಂ. ಆಯ್-೩೬೭/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ. ೬. ೮. ೧೯೬೪.

ನನ್ನ . .,. . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಪತ್ರಗಳು ಸರಿಯಾಗಿ ಸಿಗುತ್ತಿವೆ. ಆದರೆ ಯಾವುದಕ್ಕೂ ಉತ್ತರವನ್ನು ಕೊಡಲಾಗಿಲ್ಲ. ಈಗ ತಲುಪಿರುವ ಪತ್ರಕ್ಕೆ ಉತ್ತರವು ಹೋಗಲೇಬೇಕು ಎಂದೆನಿಸುತ್ತಿದೆ. ಯಾಕೆಂದರೆ, ಅದರಿಂದಾಗಿ ನಿಮಗೆ ಬೇಸರವೆನಿಸುವುದು ಬೇಡ. ಈ ಹಿಂದೆ ನಾನು ನನ್ನ ಕಥೆಯನ್ನು ಬರೆದಿದ್ದೆ. ಸುಮಾರು ೪ ತಿಂಗಳ ಹಿಂದೆ ನಾನು ಸೀತಾಪೂರಕ್ಕೆ ಹೋಗಿದ್ದೆ. ಅಲ್ಲಿ ನೋವು ವಿಪರೀತ ಹೆಚ್ಚಾಗಿ, ಕೂಡುವುದು ನಿಲ್ಲುವುದು ಸಹ ಕಠಿಣವಾಗಿತ್ತು, ೪-೬ ದಿನಗಳ ನಂತರ ಸ್ವಲ್ಪ ಹಗುರಾಯಿತು. ಆದರೆ ಎಡಗಾಲಿನ ಸಂದು ನೋವು ವಿಪರೀತವಾಗಿ ನಡೆದಾಡಲು ಆಗುತ್ತಿರಲಿಲ್ಲ. ಮತ್ತು ಕಾಲನ್ನು ಗಟ್ಟಿಯಾಗಿ ಊರಿ

ನಡೆಯಲು ಆಗುತ್ತಿರಲಿಲ್ಲ. ಹಾಗೂ ಸ್ವಲ್ಪ ಕುಂಟಬೇಕಾಗುತ್ತಿತ್ತು. ಡಾಕ್ಟರರು "Barene" ತೆಗೆದುಕೊಳ್ಳಲು ಹೇಳಿದರು. ಆದರೆ ಆದರಿಂದ ಯಾವ ಲಾಭವೂ ಆಗಲಿಲ್ಲ. ಅನಂತರ ಒಬ್ಬ ಒಳ್ಳೆಯ ಹಕೀಮರು ಸಿಕ್ಕರು. ಅವರು ತಮ್ಮ ಔಷಧೋಪಚಾರ ನಡೆಸಿದರು. ಅವರ ಔಷಧದಿಂದ ಸ್ವಲ್ಪ ಗುಣವಾಯಿತು. ಅನಂತರ ದಿಲ್ಲಿಯಿಂದ ಜಜ್ ಸಾಹೇಬರ ಪತ್ರವು ಬಂದಿತು. ಅವರು ೭ ನೇ ಜುಲೈದಿಂದ ಅಲ್ಲಿಯ ಚಾರ್ಜನ್ನು ಬಿಟ್ಟುಕೊಟ್ಟಿದ್ದಾರೆ. ಹಾಗೂ ಅವರು ಜುಲೈ ಕೊನೆಯವರೆಗೆ ದಿಲ್ಲಿ ಬಿಡುವವರಿದ್ದು ಮತ್ತು ನನ್ನನ್ನು ಕರೆಸಿಕೊಳ್ಳುವುದಾಗಿ ಸಹ ಪತ್ರ ಬರೆದಿದ್ದರು. ಅದನ್ನು ನಿರಾಕರಿಸಲು ನನಗೆ ಆಗಲಿಲ್ಲ. ಅಲ್ಲಿ ನಾನು ೪ ದಿನವಿದ್ದು ೧೩ ನೇ ಜುಲೈಗೆ ಹಿಂತಿರುಗಿ ಬಂದೆ. ಇಲ್ಲಿಗೆ ಬಂದ ಮೇಲೆ, ಚಿ. ಸರ್ವೇಶನ ಎಡಗೈ ಮುಂಗೈಯ ಎರಡು ಎಲಬುಗಳು ಮುರಿದಿವೆ ಎಂದು ತಿಳಿಯಿತು. ಅದನ್ನು ಇಲ್ಲಿ ಜೋಡಿಸಲಾಗಲಿಲ್ಲ. ಅದಕ್ಕಾಗಿ ನಾನು ಮತ್ತು ಮಾಸ್ಟರ ಸಾಹೇಬ ಕೂಡಿ, ಜುಲೈ ೧೪ ರಂದು ಅವನನ್ನು ಕರೆದುಕೊಂಡು ಬನಾರಸಿಗೆ ಹೋದೆವು.

ಅಲ್ಲಿ ನನ್ನ ಸಂಬಂಧಿಗಳೊಬ್ಬರು ಆಸ್ಪತ್ರೆಯಲ್ಲಿ ಎಲಬು ಕೀಲುಗಳ ತಜ್ಞರಾಗಿದ್ದು ಅವರು ಸರಿಪಡಿಸಿದರು. ದಾರಿಯಲ್ಲಿ ಒಂದು ಘಟನೆ ನಡೆಯಿತು. ಅದೇನೆಂದರೆ, ನಾನು ಮೂತ್ರಿಗೆ ಹೋದಾಗ ಗಾಡಿಯಲ್ಲಿ ಯಾರೋ ಒಬ್ಬರು ನನ್ನ ಕೈ ಚೀಲ ತೆಗೆದುಕೊಂಡು ಇಳಿದು ಹೋಗಿದ್ದರು. ಅದರಲ್ಲಿ ಇತರ ಸಾಮಾನುಗಳ ಜೊತೆಗೆ ನನ್ನ ಕನ್ನಡಕ, ಹಲ್ಲುಗಳು, ಮಿಠಾಯಿ ಮತ್ತು ಸ್ವಲ್ಪ ನಗದು ಹಣವೂ ಇತ್ತು. ಬನಾರಸದಲ್ಲಿ ೪ ದಿವಸ ಇದ್ದೆ. ಆ ಅವಧಿಯಲ್ಲಿ ವಿಪರೀತ ಹೊಟ್ಟೆ ನೋವು ಶುರುವಾಯಿತು. ಅದು ಇನ್ನೂವರೆಗೂ ಹಾಗೆಯೇ ಇದೆ. ಇಲ್ಲಿಯವರೆಗೂ ಯಾವ ಔಷಧವೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆದರೆ ಈಗ ಗುಣವಾಗಲೇಬೇಕು.

ಚಿ. ಉಮೇಶನು ಬಿ.ಕಾಮ್ ಪಾಸಾಗಿರುವನು. ಮತ್ತು ಅವನು ದಿಲ್ಲಿಯಲ್ಲಿ C. A. ಗಾಗಿ ಪ್ರವೇಶಬೇಕೆಂಬ ಹಟ ಹಿಡಿದಿರುವನು. ಅದು ೪ ವರ್ಷದ ಪಾಠ್ಯಕ್ರಮ ಇದೆ. ಗತ್ಯಂತರವಿಲ್ಲದೆ ಅವನನ್ನು, ದಿಲ್ಲಿಯಲ್ಲಿರುವ ಅವನ ಅಕ್ಕ ಛಾಯಾಳ ಬಳಿ ಬಿಡಬೇಕಾಯಿತು. ಇದಕ್ಕಾಗಿ ಕೆಲವು ತಿಂಗಳು ಪ್ರಯತ್ನ ಪಡಬೇಕಾಯಿತು. ಈಗೊಬ್ಬರು ಆಶ್ವಾಸನೆ ಕೊಟ್ಟಿರುವರು. ಬಹುಶಃ ಆಗಿರಬಹುದು. ಪತ್ರ ಬಂದ ನಂತರ ತಿಳಿಯುವುದು. ಸರ್ವೇಶನು ಹೈಸ್ಕೂಲಿನಲ್ಲಿ ಪಾಸಾಗಿ, ಇಲ್ಲಿಯೇ ಇಂಟರ್ ಮಿಡೀಯೆಟ್ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದಾನೆ. ತಾತ್ಪರ್ಯವೇನೆಂದರೆ, ಎಷ್ಟೋ ವಿಷಯಗಳು ಹೇಗಿವೆಯೆಂದರೆ, ಅಸಹಾಯಕ ಪರಿಸ್ಥಿತಿಯಲ್ಲಿ ಅವೆಲ್ಲವನ್ನು ನೋಡಿಕೊಳ್ಳುವುದು ಪರಮಾತ್ಮನ ಕೈಯಲ್ಲಿವೆ. ನನ್ನ ಕಥೆಯೆಲ್ಲವನ್ನು ತಿಳಿಸಿದ್ದಾಯಿತು. ಈಗ ಮುಂದುವರೆಯುತ್ತೇನೆ. ನೀವು ಜನ್ಮಾಷ್ಟಮಿಯ ವ್ರತವು ಆಗಸ್ಟ ೩೦ ರಂದು ಇರುವುದೆಂದು ಸರಿಯಾಗಿಯೇ ಬರೆದಿರುವಿರಿ. ರಾತ್ರಿಯ ಹೊತ್ತು ಹಾಲು ಹಣ್ಣು ಅಥವಾ ಅಕ್ಕಿಯ ಖೀರು ತೆಗೆದುಕೊಂಡು ವ್ರತವನ್ನಾಚರಿಸಬೇಕು. ಸೊಸೆ ಮತ್ತು ಮಕ್ಕಳು ಸಹ ಇಲ್ಲಿಗೆ ಬರುವ ವಿಚಾರ ಮಾಡಿದ್ದನ್ನು ತಿಳಿದು ನನಗೆ ಸಂತೋಷವಾಯಿತು. ನಿಮ್ಮ ವೇತನ ೬೦೦ ಆದಾಗ ಮಕ್ಕಳನ್ನು ಕರೆಯಿಸಿಕೊಳ್ಳುವೆ ಎಂದು

ನಿಮಗೆ ಈ ಮೊದಲೇ ಹೇಳಿದ್ದೆ. ಬಂಧು ಮಾಧವರಾವ್ ಇವರಿಗೆ ಮಗ ಹುಟ್ಟಿದ್ದು ಬಹಳ ಸಂತೋಷವಾಯಿತು. ದೇವರು ಅವನನ್ನು ದೀರ್ಘಾಯುಷಿಯನ್ನಾಗಿ ಮಾಡಲಿ.

ದಕ್ಷಿಣ ಭಾರತದಲ್ಲಿ ನನ್ನ ಪ್ರವಾಸ ನವ್ಹೆಂಬರ ೩ ನೇ ವಾರದಿಂದಿದೆ. ನಿಮ್ಮಲ್ಲಿ ಸತ್ಸಂಗಿಗಳಿಲ್ಲವಾದ್ದರಿಂದ ನನಗಲ್ಲಿ ವಿಶ್ರಾಂತಿಯೇ ವಿಶ್ರಾಂತಿ. ಆದರೆ ಸತ್ಸಂಗಿಗಳನ್ನು ಹೆಚ್ಚಿಸುವ ಉಪಾಯವನ್ನು ನಾನು ಬರೆಯುವೆ. ನೀವು ಒಂದು ಸಭೆಯನ್ನು ಕರೆಯಿರಿ. ಅದಕ್ಕೆ ನಿಮ್ಮ ಪರಿಚಯದವರನ್ನು ಹಾಗೂ ಕಾಲೇಜು ಸಿಬ್ಬಂದಿಯನ್ನು ಆಹ್ವಾನಿಸಿರಿ. ಮತ್ತು ಸಹಜಮಾರ್ಗದ ಕುರಿತು ಅವರಿಗೆ ತಿಳುವಳಿಕೆಯನ್ನು ನೀಡಿರಿ. ಮತ್ತೆ ಕೆಲವರಿಗೆ ಪುಸ್ತಕಗಳು ಹಾಗೂ ಕಿರುಹೊತ್ತಿಗೆಗಳನ್ನು ಓದಲು ಕೊಡಿರಿ. ಆದರ ನಂತರ ಯಾರಾದರೂ ಸ್ನೇಹಿತರು ಹಾಗು ಸಹಾಯಕರು ಸಿಕ್ಕರೆ ಅಥವಾ ಯಾವುದೇ ವಿಧದ ವೇದಿಕೆ ಸಿಕ್ಕರೆ ಅಲ್ಲಿ ಸಾರ್ವಜನಿಕ ಭಾಷಣಗಳಾಗಬೇಕು. ಮತ್ತು ವಿಜಯವಾಡಾದಲ್ಲಿ ಒಬ್ಬ ಪತ್ರಿಕಾ ವರದಿಗಾರನು ಮಾಡಿದ ಹಾಗೆ ನಾನು ಬರುವ ದಿನಾಂಕ ಮತ್ತು ಅಂದು ನನ್ನನ್ನು ಭೆಟ್ಟಿಯಾಗಲು ಸೂಚನಾ ಪತ್ರಗಳನ್ನು ಹಂಚಿರಿ. ವಿಚಾರ ಮಾಡಿದರೆ ಇನ್ನೂ ಕೆಲವು ಉಪಾಯಗಳು ಹೊಳೆಯಬಹುದು.

ಬೀದರಿನ ಶ್ರೀ ಅಂಜಯ್ಯ ಎಂಬುವವರೊಬ್ಬರು ಮೂರು ದಿವಸ ಇದ್ದು ಹೋದರು. ಅದಕ್ಕೂ ಮುಂಚಿತವಾಗಿಯೇ ಜೂನ ತಿಂಗಳಲ್ಲಿ ಅನೇಕ ಜನ ಬಂಧುಗಳು ಇಲ್ಲಿ ಬಂದಿದ್ದರು. ಅವರಲ್ಲಿ ಶ್ರೀ ರಾಮಚಂದ್ರರಾವ್, ಭೀಮಸೇನರಾವ್ ಮತ್ತು ರಾಮಚಂದ್ರ ಪೂಜಾರಿ ಸಹ ಸೇರಿದ್ದರು. ದೀಕ್ಷೆಯ ಪ್ರಮೇಯ ಮುಂದೆ ಬಂದಿತು. ರಾಮಚಂದ್ರ ಪೂಜಾರಿಯೂ ಬಹಳಷ್ಟು ಸರಿಯಾಗಿ ಇದ್ದಾರೆ. ಮತ್ತು ನಾನು ಬಳ್ಳಾರಿಯಲ್ಲಿ ಹೇಳಿದ ಹಾಗೆ ಭೀಮಸೇನರಾವ ಅವರಿಗೆ ದೀಕ್ಷೆ ಕೊಡಲು ಆಗಲಿಲ್ಲ. ಏಕೆಂದರೆ ಅವರ ತಮ್ಮ ರಾಮಚಂದ್ರರಾವ್ ಸಹ ಇದನ್ನೆ ಬಯಸುತ್ತಿದ್ದರು. ಆದರೆ ಅವರು ಅದಕ್ಕೆ ಕಿಂಚಿತ್ತಾದರೂ ಪಾತ್ರರಿರಲಿಲ್ಲ. ಮತ್ತೆ ಒಬ್ಬರಿಗೆ ಮಾಡಿ ಇನ್ನೊಬ್ಬರಿಗೆ ಮಾಡದೇ ಹೋದರೆ ಪರಸ್ಪರರಲ್ಲಿ ವೈಮನಸ್ಸು ಉಂಟಾಗಬಹುದು. ಆದುದರಿಂದ ರಾಮಚಂದ್ರರಾವ್ ಇವರು ತಮ್ಮ ಅಣ್ಣನ ಬಗ್ಗೆ ಶಿಫಾರಸು ಮಾಡಿದರೆ ಅದು ಸಾಧ್ಯವಾಗುತ್ತದೆ, ಎಂದು ನಾನು ಗತ್ಯಂತರವಿಲ್ಲದೆ ಹೇಳಿದೆ. ಆದರಂತೆ ಅವರು ಬೇಡಿಕೊಂಡರು. ಮತ್ತು ನಾನು ಉಪಾಯವಿಲ್ಲದೆ ವಾಗ್ದಾನ ಮಾಡಿದೆ. ಆದರೆ ಇಂಥ ಇನ್ನೂ ಕೆಲವರು ಬಂದುದಕ್ಕಾಗಿ ನಾನು ಅವರಿಗೆ ದೀಕ್ಷೆ ಕೊಡಲಿಲ್ಲ. ನನ್ನ ತಿಳುವಳಿಕೆಯ ಪ್ರಕಾರ ಗೋಪಾಲರಾವ್ ಇವರು ಈ ವಿಷಯವನ್ನು ಎಷ್ಟೋ ಜನರಿಗೆ ಹೇಳಿರುವರು. ಇದನ್ನಂತೂ ಗುಪ್ತವಾಗಿ ಇಡಬೇಕು. ಏಕೆಂದರೆ, ಅನುಭವ ಇದನ್ನೇ ಹೇಳುತ್ತವೆ. ಒಂದು ರೀತಿಯಿಂದ ನೋಡಿದರೆ ದೀಕ್ಷೆ ಹೊಂದಿದಾಗ ಅವನಿಗೆ ಬಹಳ ಲಾಭವಿದೆ. ಯಾಕೆಂದರೆ ಇಲ್ಲಿ ಇದನ್ನು ದಿವ್ಯ ಶಕ್ತಿಯಿಂದ ಮಾಡಲಾಗುತ್ತದೆ. ಆದರ ತೊಂದರೆ ಏನೆಂದರೆ ಅದಕ್ಕೆ ಯೋಗ್ಯರಾದವರು ಬಹಳ ವಿರಳವಾಗಿ ದೊರಕುವರು. ಕಲವೊಂದು ಕಡೆ ನಾನು ದಾಕ್ಷಿಣ್ಯಕ್ಕೊಳಗಾಗಿ ದೀಕ್ಷೆ ಕೊಡಬೇಕಾಗಿ ಬಂದುದೂ ಉಂಟು. ಸರಿಯಾದ ವ್ಯಕ್ತಿ ದೊರೆತ ಪಕ್ಷದಲ್ಲಿ ನನಗೇನೂ ಸಂಕೋಚವಾಗಲಾರದು.

ಮಿಶನ್ನಿಗೆ ಅವಶ್ಯವಿದ್ದಾಗಲೆಲ್ಲ ಹಣ ಸಿಕ್ಕುವಂತೆ ಯಾವುದಾದರು ಉಪಾಯವಿರಬೇಕೆಂದು ನೀವು ಒಂದು ಪತ್ರದಲ್ಲಿ ಬರೆದಿದ್ದಿರಿ. ಮತ್ತು ಬಹಳ ಹಾರ್ದಿಕವಾಗಿ ಬರೆದಿದ್ದಿರಿ. ಇಷ್ಟು ವಿಚಾರ ಮಾಡಿದ್ದರ ಪರಿಣಾಮವಾಗಿ ಇದರ ನಂತರವೇ ಶ್ರೀ ರಾಘವೇಂದ್ರರಾವ್ S.P. ಯವರು ಆಶ್ರಮಕ್ಕಾಗಿ ೧೦,೦೦೦ ರೂಪಾಯಿ ಕಳಿಸಿಕೊಟ್ಟಿರುವರು. ೩೦೦೦/- ಮೊದಲೇ ಇದ್ದವು. ಇಷ್ಟರಲ್ಲಿ ಒಂದು ಚಿಕ್ಕ ಸಭಾಂಗಣ ನಿರ್ಮಾಣಗೊಳ್ಳುವುದು. ಕೆಲಸವೇನೋ ನಡೆಯುತ್ತಲಿದೆ. ಆದರೆ ಮಳೆಯಿಂದ ಸ್ವಲ್ಪ ವಿಳಂಬವಾಗುತ್ತಲಿದೆ. ಶ್ರೀ ಆಯಿಲರೆಡ್ಡಿ ಸಹ ಅದಕ್ಕಾಗಿ ಸ್ವಲ್ಪ ಹಣ ಶೇಖರಿಸುವುದಾಗಿ ಬರೆದಿದ್ದರು. ಆದರೆ ತಮ್ಮ ಸ್ವಂತ ತೊಂದರೆಗಳಿಂದಾಗಿ ಅವರು ಈ ಕೆಲಸವನ್ನು ಮಾಡಲು ಅಸಮರ್ಥರಾಗಿದ್ದಾರೆ. ಅವರು ಆಗಸ್ಟಿನಲ್ಲಿ ಬರುವುದಾಗಿ ಬರೆದಿರುವರು. ನಾನು ನಿಮಗೆ ಕೊಟ್ಟಿರುವ ಅಂಜನದಿಂದ ನಿಮ್ಮ ದೃಷ್ಟಿಗೆ ಲಾಭವಾಗಿರಬಹುದು. ಅದನ್ನು ಉಪಯೋಗಿಸಲು ಏನೂ ಅಭ್ಯಂತರವಿಲ್ಲ. ಲಾಭವಾಗುತ್ತಿದ್ದರೆ, ನಾನು ಬರುವುದಕ್ಕಿಂತ ಮುಂಚೆ ನನಗೆ ತಿಳಿಸಿದರೆ, ನಾನು ಇನ್ನೊಂದು ಸೀಸೆಯನ್ನು ತರುತ್ತೇನೆ.

ಉತ್ಸವಕ್ಕೆ ಹೈದ್ರಾಬಾದಿನಿಂದ ಬಂದಂತಹ ಮಹೇಂದ್ರಕರ್ ಅವರು, ವರ್ತುಲ ಯಾತ್ರೆಯ ಮೇಲೆ ಪ್ರಯಾಣಿಸುತ್ತಿರುವ ಪ್ರಭಾಕರ ವರ್ಧನ ಎಂದು ಹೆಸರುಳ್ಳ ಒಬ್ಬ ವ್ಯಕ್ತಿಗೆ ನನ್ನ ಬಳಿ ಹೋಗಲು ಹೇಳಿದ್ದರು. ಆತನು ನನ್ನ ಬಳಿ ೨೨ ದಿವಸಯಿದ್ದ. ಮತ್ತು ಆತನು ಮಂಗಳೂರಿನ ರಾಮದಾಸ ಸ್ವಾಮಿ ಇವರ ಪರಿಪಾಠವಾದ ಮರಾ ಮರಾ ಮತ್ತು ರಾಮ, ರಾಮ ಜಪವನ್ನು ಮಾಡುತ್ತಿದ್ದರು. ಆತನ ಬಗ್ಗೆ ನಾನು ಖಾಸಗಿಯಾಗಿ ಬರೆಯುವದೇನೆಂದರೆ, ಆತನ ಶೀಲವೂ ಸಹ ಸ್ವಚ್ಛವಾಗಿದ್ದಿಲ್ಲ. ನಾನು ಎರಡು ಸಲ ಆತನಿಗೆ ಪ್ರಾಣಹುತಿ ನೀಡಲು ಪ್ರಯತ್ನ ಮಾಡಿದೆ. ಅದರ ಪರಿಣಾಮವಾಗಿ ನನಗೇ ತಿರುಗಿ ಸೂಜಿ ಚುಚ್ಚಿತು. ಮತ್ತು ನನ್ನ ಹೃದಯ ಉರಿಯತೊಡಗಿತು. ಅಲ್ಲದೆ ಎಷ್ಟು ದಿನ ಅವರು ಇಲ್ಲಿದ್ದರೋ ಹಾಗೂ ನನ್ನ ಎದುರಿನಲ್ಲಿ ಕೂಡ್ರುತ್ತಿದ್ದರೋ ನನ್ನ ಹೃದಯ ಉರಿಯುತ್ತಲೇ ಇರುತ್ತಿತ್ತು. ಈ ೨೨ ದಿವಸ ನಾನು ಬಹಳ ತ್ರಾಸದಿಂದ ಕಳೆದೆ. ಎಷ್ಟೋ ಮಾತುಗಳಾದ ನಂತರ ಅವರು ಮನ ಬಿಚ್ಚಿ ಹೇಳಿದ್ದೇನೆಂದರೆ ಅವರು ಕೇವಲ ಪ್ರಾಣಹುತಿ ಪಡೆಯುವದಕ್ಕಾಗಿ ಬಂದಿದ್ದರಂತೆ. ಅದರ ಅವರ ಬಾಕಿ ಉದ್ದೇಶ ರಾಮ ರಾಮದ ವಟಗುಡವಿಕೆಯೇ. ಈ ನಡುವೆ ನಾನು ಸೀತಾಪೂರಕ್ಕೆ ಹೋಗಿದ್ದೆ. ಅಲ್ಲಿ ಒಂದು ಸಾರ್ವಜನಿಕ ಸಭೆಯಿತ್ತು. ಮತ್ತು ಆತನು ಜೊತೆಯಲ್ಲಿಯೇ ಇದ್ದನು. ಆತನ ದೃಷ್ಟಿಯಲ್ಲಿ ನನ್ನ ಸ್ಥಾನ ಕೇವಲ ಮದ್ಯ ಕುಡಿಸುವವನದಾಗಿತ್ತು. ಮದ್ಯ ಕುಡಿಸಿದ ನಂತರ ತನಗೂ ಆತನಿಗೂ ಯಾವ ಸಂಬಂಧವೂ ಇಲ್ಲ. ಆತನಿಗೆ ಸಹಜಮಾರ್ಗದಲ್ಲಿ ಎಂಥ ಉನ್ನತ ಸ್ಥಿತಿ ಉತ್ಪನ್ನವಾಗಬಹುದು ಎನ್ನುವ ಕಲ್ಪನೆಯಿರಲಿಲ್ಲ. ಕೊನೆಗೆ ನಾನು ಸತ್ಸಂಗದಲ್ಲಿ ಮಾತುಕತೆಯನ್ನು ಆರಂಭಿಸಿದೆ. ಅದರಿಂದ ಆತನ ಕಣ್ಣು ತೆರೆಯಿತು. ಮತ್ತು ಸಹಜಮಾರ್ಗವನ್ನು ಅನುಸರಿಸಲು ತಯಾರಾದರು. ನಾನು ಆತನನ್ನು ಸ್ವೀಕರಿಸಲು ಯೋಗ್ಯನಲ್ಲವೆಂದು ಕುಮಾರಸ್ವಾಮಿಯವರಿಗೆ ಬರೆದಿರುವೆನು. ಆತನಿಗೆ ಆಳವಾದ ಶಸ್ತ್ರ ಚಿಕಿತ್ಸೆಯ ಅಗತ್ಯವಿದೆ. ಅದನ್ನು ಕೇವಲ ನಿಸರ್ಗ ಮಾತ್ರ ಕೊಡಬಲ್ಲದು. ನಮ್ಮ

ನಿಮ್ಮೊಳಗಿನ ಯಾವನಾದರೂ ಆಳವಾದ ಶಸ್ತ್ರಕ್ರಿಯೆ ಮಾಡಿದನೆಂದು ತಿಳಿಯೋಣ, ಇದು ಬಹಳ್ಳ ತ್ರಾಸದಾಯಕವಾದ ಕೆಲಸ. ಏಕೆಂದರೆ ಪ್ರತಿಕ್ಷಣವೂ ಪ್ರಕೃತಿಗೆ ಅನುಗುಣವಾಗಿ ನೋಡಿಕೊಳ್ಳುವುದು ಮತ್ತು ಸಂಭಾಳಿಸುವುದು ಸಾಧ್ಯವಾಗುವುದಿಲ್ಲ.

ಸಹಜಮಾರ್ಗದ ಪತ್ರಿಕೆಯು ಮುದ್ರಣಾಲಯದಿಂದ ಬಹಳ ವಿಳಂಬವಾಗಿ, ಎಷ್ಟೋ ಸಲ ಆರಾರು ತಿಂಗಳ ನಂತರ ಸಿಗುತ್ತದೆ. ಆದರೆ ಜನರು ನನಗೆ ಮೇಲಿಂದ ಮೇಲೆ ತಗಾದೆ ಮಾಡುತ್ತಾರೆ. ದೇವರು ನಮಗೆ ಸ್ವಂತ ಮುದ್ರಣಾಲಯ ಕೊಟ್ಟಾಗ ಮಾತ್ರ ಈ ತೊಂದರೆ ದೂರಾಗಬಲ್ಲುದು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ.ಸೂ: ನಿಮ್ಮ ತಂದೆಯವರಿಗೆ ಪಾರ್ಶ್ವವಾಯು ಯಾವ ಕಡೆ ಬಡೆದಿದೆ? ಎಡಗಡೆಯೋ ಅಥವಾ ಬಲಗಡೆಯೋ?

◆ ◆ ◆

"ಓಂ ತತ್‌ಸತ್"

ನಂ.೧೩೮
ನಂ.ಆಯ್ ೪೦೧/ಎಸ್.ಆರ್.ಸಿ.ಎಮ್

ಷಾಹಜಹಾನಪೂರ
ದಿ.೯.೯.೧೯೬೪

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಮಾನ್ಯ ತಂದೆಯವರು ಸ್ವರ್ಗಸ್ಥರಾದ ವಿಷಯ ಕೇಳಿ ಬಹಳ ವ್ಯಥೆಯಾಯಿತು. ನಿರ್ವಾಹವಿಲ್ಲದೆ ಸಹಿಸಿಕೊಂಡೆನು. ಈಶ್ವರನು ಅವರ ಆತ್ಮಕ್ಕೆ ಶಾಂತಿಯನ್ನು ನೀಡಲಿ ಮತ್ತು ನಿಮ್ಮೆಲ್ಲರಿಗೂ ತಾಳ್ಮೆಯನ್ನು ದಯಪಾಲಿಸಲಿ.

ನೀವೆಲ್ಲರೂ ನಿಮ್ಮೂರಿಗೆ ಹೋಗಿರಬಹುದೆಂದು ನಾನು ಇಲ್ಲಿಯವರೆಗೆ ಸಂತಾಪ ಸೂಚಕ ಪತ್ರ ಕಳಿಸಿರಲಿಲ್ಲ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೩೯
ನಂ. ಆಯ್ ೪೩೫/ಎಸ್.ಆರ್.ಸಿ.ಎಮ್

ಶಾಹಜಹಾನಪೂರ
ದಿ. ೧೩.೧೦.೧೯೬೪

ನನ್ನ . . . . . ಜೀ,

ಚಿರಾಯುವಾಗಿರಿ. ನಿಮ್ಮ ಪತ್ರ ತಲುಪಿತು. ನಾನು ನಿಮ್ಮ ಅಣ್ಣನ ಹತ್ತಿರ ತಂಗಲು ಬಯಸುತ್ತೇನೆ. ಆದರೆ ಕುಮಾರಸ್ವಾಮಿಯ ಹೆಂಡತಿಯ ಪ್ರೇಮ ಮತ್ತು ದಾಕ್ಷಿಣ್ಯದ ಒತ್ತಡ ಹೃದಯದ ಮೇಲೆ ಅವಶ್ಯವಾಗಿ ಇದೆ. ಶ್ರೀ ಜೋಗಾರಾವ್ ಜನ್ಮಾಷ್ಟಮಿಯಂದು ಇಲ್ಲಿಗೆ ಬಂದಿದ್ದರು. ಅವರು ತಮ್ಮ ಬಳಿ ಇಳಿದುಕೊಳ್ಳಲು ಆಮಂತ್ರಣ ಕೊಟ್ಟು ಹೋಗಿರುವರು. ಈ ವಿಷಯ ಶ್ರೀ ರಾಘವೇಂದ್ರರಾವ ನಿರ್ಧಾರ ಮಾಡುವರೆಂದು ನಾನು ಅವರಿಗೆ ಹೇಳಿದ್ದೆನು. ಅದರಂತೆ ನೀವು ಈಗ ನಿರ್ಧರಿಸಿಯೇ ಇರುವಿರಿ. ಆದುದರಿಂದ ಈಗ ಎಲ್ಲಿಯೂ ತಂಗುವ ಪ್ರಶ್ನೆ ಉದ್ಭವಿಸುವದಿಲ್ಲ. ಕುಮಾರ ಸ್ವಾಮಿಯ ಹತ್ತಿರ ಸ್ಥಳ ಸಾಕಷ್ಟು ಇರಲಿಕ್ಕಿಲ್ಲ. ಆದುದರಿಂದ ಅವರು ನನ್ನನ್ನು ಒತ್ತಾಯಪಡಿಸಲಿಕ್ಕಿಲ್ಲ. ನೀವು ರೂ. ೩೦೦/-ರ ಚೆಕ್ಕನ್ನು ಕಳಿಸಬೇಡಿರಿ. ಇಷ್ಟು ಭಾರ ನಾನು ಅವರ ಮೇಲೆ ಹಾಕಲು ಇಷ್ಟಪಡುವುದಿಲ್ಲವೆಂದು ಜಹಾಗೀರದಾರರಿಗೆ ಬರೆಯುತ್ತಿರುವೆನು. ಆದುದರಿಂದ ಈ ಹಣಕ್ಕೆ ಮಿಶನ್‌ವತಿಯಿಂದ ಪಾವತಿ ಮಾಡಲಾಗುವುದು. ಪೂಜೆಯ ಕೋಣೆಗಾಗಿ ಇಷ್ಟು ಖರ್ಚು ಮಾಡುತ್ತಿರುವ ಅವರ ಪ್ರೇಮ ಭಾವನೆಯು ಅವಶ್ಯವಾಗಿ ಪ್ರಶಂಸನೀಯವಾಗಿದೆ. ಆದರೆ ಪೂಜೆಯ ಕೋಣೆಗಾಗಿ ಒಂದು ಸಾವಿರ ರೂ. ಸೋಫಾ-ಸೆಟ್ ಯಾರ ವಿಚಾರದಲ್ಲಿಯೂ ಬರುವುದಿಲ್ಲ. ಏಕೆಂದರೆ ಪೂಜೆಗಾಗಿ ಸಮತಟ್ಟು ಸ್ಥಳವೆ ಇರಬೇಕೆಂದು ಅವರು ತಿಳಿಯುತ್ತಾರೆ. ಮತ್ತು ಅದಕ್ಕಾಗಿ ಚಾಪೆ ಹಾಗು ತಟ್ಟು ಸಾಕೆಂದು ತಿಳಿಯುತ್ತಾರೆ. ಇಷ್ಟೊಂದು ಉತ್ತಮ ವಸ್ತುವಿಗಾಗಿ ಕೋಣೆ ಮತ್ತು ಅದರ ಸಂರಕ್ಷಣೆಯ ವ್ಯವಸ್ಥೆ ಕೂಡ ಅದೇ ಮಟ್ಟದ್ದಾಗಿರಬೇಕಾಗುವುದು. ಮನಸ್ಸಿನ ಮೇಲೆ ಭಾರ ಹುಟ್ಟಿಕೊಳ್ಳುವದೆಂದು ಇದರ ಅರ್ಥವಾಯಿತು.

ನಾನು ದಕ್ಷಿಣ ಭಾರತದಿಂದ ತಿರುಗಿ ಬಂದು ಸುಮಾರು ಒಂದುವರೆ ವರ್ಷವಾಯಿತು. ನಾನು ಕೆಲವು ಕೇಂದ್ರಗಳನ್ನು ಪ್ರಾರಂಭಿಸಬೇಕೆಂದು ಬಯಸಿದ್ದೇನೆ. ಮತ್ತು ಅದಕ್ಕಾಗಿ ಕೆಲವರಿಗೆ ಮಾತು ಸಹ ಕೊಟ್ಟುಬಿಟ್ಟಿರುವೆನು. ಅವರಲ್ಲೊಬ್ಬರು ರಾಘವೇಂದ್ರರಾವ್ ಸುಪರಿಂಟೆಂಡೆಂಟ್ ಆಫ್ ಪೋಲೀಸ್ ಮತ್ತು ಇನ್ನೊಬ್ಬರಾದ ವಿಜಯವಾಡಾದ ಪಾರ್ಥಸಾರಥಿ ಇರುವರು. ಕುಮಾರಸ್ವಾಮಿಯ ಹೇಳಿಕೆಯ ಮೇರೆಗೆ ಪಾರ್ಥಸಾರಥಿಗೆ ಸತ್ಸಂಗಕ್ಕಾಗಿ ತಾತ್ಕಾಲಿಕ ಅನುಮತಿಯನ್ನು ಕೊಟ್ಟಿರುವೆನು. ನಾನೇನೋ ಪೂರ್ಣ ಅನುಮತಿ ಕೊಡಬಹುದಾಗಿತ್ತು ಹಾಗು ಸಿದ್ಧಗೊಳಿಸಬಹುದಾಗಿತ್ತು. ಆದರೆ ಶ್ರೀ ಮೂದಲಿಯಾರರ ಬಗೆಗಿನ ಅನುಭವದಿಂದಾಗಿ ಅವಸರ ಮಾಡುವುದು ಸಮಂಜಸವಲ್ಲವೆಂದು ಭಾವಿಸಿದೆ. ಅದು

ನಿಮಗೆ ಗೊತ್ತಿರಲೂಬಹುದು. ಮೂರನೆಯವರು ಬಿಜಾಪೂರಿನ ನಾರಾಯಣರಾವ್ ಇದ್ದಾರೆ. ಅವರಿಗೂ ಮಾತು ಕೊಟ್ಟಿರುವೆನು. ನಾಲ್ಕನೆಯದು ಒಂದು ಹೊಸ ವಿಚಾರ ಬಂದಿದೆ. ಅದನ್ನು ನಿಮ್ಮ ಮೇಲೆ ಬಿಡುತ್ತೇನೆ. ಅದು ಏನೆಂದರೆ ಶ್ರೀ ಗುಂಡೆರಾಯರಿಗೂ ಸಹ ಅನುಮತಿ ಯಾಕೆ ಕೊಡಬಾರದು ಎಂಬುದು. ಈ ವಿಚಾರಕ್ಕೆ ನಿಮ್ಮ ಸಮ್ಮತಿ ಇದ್ದರೆ ಅವರ ಹೃದಯದ ಮೇಲೆ ಪದರಿನ ರೂಪದಲ್ಲಿ ಸಂಗ್ರಹವಾಗಿರುವ ಜಡತ್ವವನ್ನು ತೆಗೆದು ಹಾಕಲು ಪ್ರಯತ್ನಿಸಬೇಕು, ಮತ್ತು ನನಗೆ ಸೂಚಿಸಬೇಕು. ಇವೆಲ್ಲರಿಗಾಗಿ ನಾನು ಒಂದು ವರ್ಷದಿಂದಲೂ ಕೈ ಹಚ್ಚಿಲ್ಲ. ಅವರ ನಂತರ ಎಷ್ಟೋ ತಿಂಗಳುಗಳನ್ನು ಕಾಯಿಲೆಯಲ್ಲಿ ಕಳೆದುಬಿಟ್ಟೆ. ಎಷ್ಟೋ ಸಲ ಮಾಡಿದಂತೆ ಇವರೆಲ್ಲರನ್ನೂ ಪ್ರವಾಸ ಕಾಲದಲ್ಲಿಯೇ ಸಿದ್ಧಗೊಳಿಸಬೇಕೋ ಹೇಗೆಂಬುದು ನನಗೆ ಹೊಳೆಯದಂತಾಗಿದೆ. ನನ್ನ ಆರೋಗ್ಯ ಈಗಲೂ ಸರಿಯಾಗಿಲ್ಲ. ಆದರೂ ೨೦ ನವ್ಹೆಂಬರ ದಿನ ಇಲ್ಲಿಂದ ಹೊರಡುವ ಸಂಕಲ್ಪ ಮಾಡಿರುವೆನು. ಒಂದು ದಿನ ತಡವಾದರೂ ಆಗಬಹುದು. ಹೊಸ ವೇಳಾಪಟ್ಟಿ ಇನ್ನೂ ಸಿಕ್ಕಿಲ್ಲ. ಸಿಕ್ಕಮೇಲೆ ಕಾರ್ಯಕ್ರಮ ಪಟ್ಟಿಯನ್ನು ರೂಪಿಸುವೆನು. ನಾನು ಸಂಗಾರೆಡ್ಡಿಗೆ ಅವಶ್ಯವಾಗಿ ಹೋಗುವೆನು. ಕಾರಣವೇನೆಂದರೆ ಅಲ್ಲಿನ ಸುಪರಿಂಟೆಂಡೆಂಟ ಆಫ್ ಪೊಲೀಸ್ ಇವರಿಗೆ ಮಾತು ಕೊಟ್ಟಿರುವೆನು.

ನನ್ನ ಕಾರ್ಯಕ್ರಮ ಪಟ್ಟಿಯಲ್ಲಿ ರಾಯಚೂರನ್ನು ಸೇರಿಸಿದ್ದೆ. ಆದರೆ ನಿಮ್ಮ ಪತ್ರ ಕಂಡಕೂಡಲೆ ಅಲ್ಲಿಯ ಇಚ್ಛೆ ತೆಗೆದುಬಿಟ್ಟೆನು. ಆದರೆ ನನ್ನ ಬದಲು ನೀವೇ ಮೂರು ದಿನಗಳಿಗಾಗಿ ಹೋಗಬೇಕಾಗುವುದು. ಮತ್ತು ೨-೩ ತಿಂಗಳಲ್ಲಿ ಯಾವಾಗಲಾದರು ಹೋಗಿ ಬರಬಹುದು. ಏಕೆಂದರೆ ಅಲ್ಲಿ ಸಂಘಟನೆಯ ಅವಶ್ಯಕತೆಯಿರುತ್ತದೆ. ನನ್ನ ಕಾರ್ಯಕ್ರಮ ತಿಳಿದ ಮೇಲೆ ನೀವು ರಾಯಚೂರ ಸತ್ಸಂಗಿಗಳಿಗೆ ಸೇಡಂನಲ್ಲಿ ನನ್ನನ್ನು ಕಾಣಲು ಸೂಚಿಸಿರಿ. ನಾನು ಅವರಿಗಾಗಿ ಸುಮಾರು ೧೬೦೦ ಮೈಲು ಪ್ರಯಾಣ ಮಾಡಿ ಬರುತ್ತಿರುವಾಗ ಅವರಿಗೆ ೧೫೦ ಮೈಲು ಪ್ರವಾಸ ಮಾಡಲು ಅಸಾಧ್ಯವೇ?

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

ವಿ.ಸೂ.: ನಾನು ಚೆನ್ನಪಟ್ಟಣಕ್ಕೆ ಅವಶ್ಯವಾಗಿ ಹೋಗಬೇಕು. ಕಾರಣ ಅದು ಮೈಸೂರು ಬೆಂಗಳೂರು ಮಾರ್ಗದಲ್ಲಿಯೆ ಬರುತ್ತದೆ.

◆ ◆ ◆

"ಓಂ ತತ್‌ಸತ್"

ನಂ.೧೪೦
ನಂ. ಆಯ್ ೪೯೫/ಎಸ್.ಆರ್.ಸಿ.ಎಮ್

ಷಾಹಜಹಾನಪೂರ್
ದಿ.೨೪.೧೦.೧೯೬೪

ನನ್ನ . . . . . ಜೀ,

ಚಿರಾಯುವಾಗಿರಿ. ನಿಮ್ಮ ಪತ್ರ ತಲುಪಿತು. ಕಾರ್ಯಕ್ರಮದ ಪಟ್ಟಿ ಕಳಿಸುತ್ತಿರುವೆನು. ನಿಮ್ಮ ವಲಯದಲ್ಲಿ ಈ ಕೆಳಕಂಡ ಬಂಧುಗಳಿಗೆ ಕಾರ್ಯಕ್ರಮದ ಪ್ರತಿ ಕಳಿಸುತ್ತಿರುವೆನು.

೧. ಶ್ರೀ ಎನ್ ಕುಮಾರಸ್ವಾಮಿ, ಹೈದ್ರಾಬಾದ. ೨. ಶ್ರೀ ರಾಘವೇಂದ್ರರಾವ್, ಸಂಗಾರೆಡ್ಡಿ. ೩. ಶ್ರೀ ಗೋಪಾಲರಾವ, ಬೀದರ. ೪. ಶ್ರೀ ಆಯಿಲರೆಡ್ಡಿ, ಸೇಡಂ. ೫. ಶ್ರೀ ಎಸ್.ಎ. ಸರ್ನಾಡ, ಗುಲ್ಬರ್ಗಾ. ೬. ಶ್ರೀ ನಾರಾಯಣರಾವ, ಬಿಜಾಪೂರ. ೭. ಶ್ರೀ ಎಮ್.ಡಿ.ಜಹಾಗಿರದಾರ, ಚೆನ್ನಪಟ್ಟಣ. ೮. ಶ್ರೀ ದೊರೆಸ್ವಾಮಿ, ಬೆಂಗಳೂರು. ೯. ಶ್ರೀ ಮಂಜುನಾಥ, ಮೈಸೂರು.

ಇವರಲ್ಲದೆ ಎಲ್ಲಿ ಸತ್ಸಂಗಿಗಳು ಇರುವರೋ ಅವರೆಲ್ಲರಿಗೂ ಸೂಚನೆ ಕೊಡಿರಿ ಎಂದು ಆಯಿಲ ರೆಡ್ಡಿಯವರಿಗೆ ನೀವು ಬರೆಯಿರಿ.

ಯಾವ ಊರು ಅವರಿಗೆ ಸಮೀಪವಾಗುವುದೋ ಅಲ್ಲಿ ಬಂದು ನನ್ನನ್ನು ಕಾಣಲು ರಾಯಚೂರಿನ ಜನರಿಗೆ ನೀವು ಹೇಳಿರಿ. ನಾನು ಒಬ್ಬ ಅಭ್ಯಾಸಿಗೆ ಗುಂಡಪೊಂಗಲು ಪಾತ್ರ ಕೊಡುವೆನೆಂದು ಮಾತು ಕೊಟ್ಟಿರುವೆನು. ರಾಯಚೂರು ಮತ್ತು ಬಳ್ಳಾರಿಯಲ್ಲಿ ಉತ್ತಮವಾದುವು ಸಿಗುತ್ತವೆ ಎಂದು ಕೇಳಿದ್ದೇನೆ. ಯೋಗ್ಯವಾದಲ್ಲಿಂದ ವ್ಯವಸ್ಥೆ ಮಾಡಿರಿ. ಯಾವ ಯಾವ ಪುಸ್ತಕಗಳು ಬೇಕೆಂಬುದನ್ನು ತಿಳಿಸಿದರೆ ನಾನು ಇಲ್ಲಿಂದ ತರುವೆನು.

ಮಕ್ಕಳಿಗೆ ಆಶೀರ್ವಾದಗಳು.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೪೧ ಷಾಹಜಹಾನಪೂರ್
ನಂ.ಆಯ್. ೫೦೮/ಎಸ್.ಆರ್.ಸಿ.ಎಮ್. ದಿ.೭.೧೧.೧೯೬೪

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಕಾರ್ಯಕ್ರಮದ ವಿಷಯಕ್ಕೆ ಶ್ರೀ ಈಶ್ವರ ಸಹಾಯ ಬರೆದಿರುವರು. ಅದನ್ನು ಈ ಪತ್ರದ ಜೊತೆಗೆ ಕಳಿಸಲಾಗುತ್ತಿದೆ. ಉಳಿದ ಪತ್ರಗಳ ಉತ್ತರ ಕೊಡುತ್ತಿರುವೆನು. ನೀವು ಪಾಪಿಯಂತೂ ಎಂದೂ ಇದ್ದಿದ್ದಿಲ್ಲ, ಮತ್ತು ಒಂದು ವೇಳೆ ಹೋದ ಜನ್ಮದಲ್ಲಿ ಇದ್ದಿದ್ದರೆ, ಅದರ ಆವರಣ ಕಳಚಿ ಹೋಗಿದೆ. ಮತ್ತು ಈಗ ಪಾಪದ ಮಾತೇಕೆ? ಮತ್ತು ಒಂದು ವೇಳೆ ಪಾಪಿಯೆಂದು ಒಪ್ಪಿಕೊಂಡರೂ ಅದರ ಜೊತೆಯಲ್ಲಿ ಅವನ ಕೃಪೆಯೂ ಇದೆ. ಒಬ್ಬ ಕವಿಯು ಎಷ್ಟು ಚೆನ್ನಾಗಿ ಹೇಳಿರುವನು: "ಅವನ ಕೃಪೆಯು ಪಾಪಿಗಳನ್ನು ಕೇಳಿದಾಗ ಯಾರು ಪಾಪಿಗಳು ಇದ್ದಿಲ್ಲವೊ ಅವರಿಗೆ ಬಹಳಷ್ಟು ಖೇದವಾಯಿತು". ತನಗೆ ತಾನು ಪಾಪಿ ಎಂದು ತಿಳಿದುಕೊಳ್ಳುವುದು ವಿನಯದ ಒಂದು ಲಕ್ಷಣ. ಈ ವಿಚಾರ ಮುಸಲ್ಮಾನರಿಂದ ಬಂದದ್ದು. ಸಂಭವತಃ ನಮ್ಮಲ್ಲಿ ಹೀಗೆ ಹೇಳಿರಲಿಕ್ಕಿಲ್ಲ. ನಮ್ಮನ್ನು ನಾವು ಪಾಪಿ ಎಂದು ತಿಳಿದಾಗ ನಮ್ಮ ಹೃದಯವು ಆತನ ಕರುಣೆಯ ಕಡೆಗೆ ವಾಲುವುದೆನ್ನುವುದು ಅವಶ್ಯವಾಗಿ ಒಂದು ಶ್ರೇಷ್ಠ ಮಾತು. ಮತ್ತು ಯಾವಾಗ ನಮ್ಮ ಸಂಪೂರ್ಣ ಆಶೆಯನ್ನು ಅವನ ಕರುಣೆಯ ಕಡೆಗೆ ಹಚ್ಚಿಬಿಡುವೆವೊ ಅಂಥ ಸ್ಥಿತಿಯಿಂದ ನಾವು ಹೆಚ್ಚು ಲಾಭ ಪಡೆಯುವೆವು. ಇದು ಶರಣಾಗತಿಯ ಒಂದು ಅಂಗ. ನಾವು ಯಾವಾಗ ಒಂದು ದೊಡ್ಡ ವಸ್ತುವಿನ ಕಡೆಗೆ ವಾಲುವೆವೋ ಆಗ ಸ್ವಾಭಾವಿಕವಾಗಿ ನಮ್ಮ ಸ್ಥಿತಿ ಎಷ್ಟು ಕೆಳಮಟ್ಟದ್ದಾಗುವುದೆಂದರೆ, ಅವನ ಕರುಣೆಯೊಂದೇ ದೃಷ್ಟಿಯಲ್ಲಿರುವುದು ಮತ್ತು 'ನಾನು' ಎಂಬುವುದು ಇರುವುದಿಲ್ಲ. ಇದರರ್ಥ ಏನಾಯಿತೆಂದರೆ, ಅವನ ಕೃಪೆಯು ಒಲಿಯುವುದಕ್ಕಾಗಿ ತೆರಪು ಮಾಡಿಕೊಳ್ಳುವೆವು. ಈ ಮಾತು ವಾಸ್ತವಿಕತೆಯದ್ದಾಯಿತು. ಇದಕ್ಕೆ ಪರಿಮಿತಿಯನ್ನು ಅನ್ವೇಷಕನೇ ಹಾಕಬಲ್ಲ.

ಈಗ ನಿಮ್ಮ ಮಾತು ಬರುತ್ತದೆ. ಯಾವಾಗ ಪತ್ರವು ತಲುಪಿತೋ ಮಿಲನದ ಕ್ಷಣಗಳು ಸಮೀಪ ಬಂದಿವೆ ಎಂದೆನಿಸಿತು. ಈ ಸಾಮೀಪ್ಯದ ವಿಚಾರವು ಸ್ವಾಭಾವಿಕವಾಗಿ ಮನಸ್ಸಿನಲ್ಲಿ ಒಂದು ವಿಧದ ಆವೇಗವನ್ನುಂಟು ಮಾಡಿತು. ಅದು ಪ್ರೇಮದ ಒತ್ತಡದ್ದಾಗಿತ್ತು. ಅದು ಶರೀರದ ಪ್ರತಿಯೊಂದು ಅಂಗಾಂಗವನ್ನು ಅಲುಗಾಡಿಸಿತು. ಹಿರಿಮೆಯ ವಿಚಾರ ಇರಲೇಬೇಕಾಗಿತ್ತು, ಯಾಕೆಂದರೆ, ಒಂದು ಹಿರಿದಾದ ವಸ್ತು ವಿಚಾರದಲ್ಲಿತ್ತು. ದೊಡ್ಡ ವಸ್ತು ವಿಚಾರದಲ್ಲಿದ್ದಾಗ ಎಲ್ಲಿಯವರೆಗೆ ಅದರ ವಿರುದ್ಧವಾದದ್ದು ವಿಚಾರದಲ್ಲಿ ಬರುವುದಿಲ್ಲವೋ ಆ ದೊಡ್ಡಸ್ತಿಕೆಯು ನಾಶವಾಗುವುದಿಲ್ಲ. ದೊಡ್ಡ ವಸ್ತು ವಿಚಾರದಲ್ಲಿದ್ದಾಗ ಅದು ತನ್ನ ಪ್ರಭಾವವನ್ನು ಚಿಕ್ಕದುದರ ಮೇಲೆ ಬೀರಿತು. ಈ ಚಿಕ್ಕ ವಸ್ತುಗಳು ಮಾನವನ

ಜೊತೆ-ಜೊತೆಯಲ್ಲಿ ಯಾವುದಾದರೂ ಒಂದು ಸ್ಥಿತಿಯಲ್ಲಿ, ಅಲ್ಪಸ್ವಲ್ಪವಾದರೂ ಇದ್ದೇ ಇರುತ್ತವೆ. ಆದಕಾರಣ ಆ ವಿಷಯಗಳ ಮೇಲೆ ಪ್ರಭಾವ ಬಿದ್ದಾಗ ಸ್ವಲ್ಪ ಸಮಯದವರೆಗೆ ದೊಡ್ಡದಾಗಿ ಗೋಚರವಾದುವು. ನೀವು ಬರೆದಿರುವುದು ವಾಸ್ತವಿಕತೆಯದಲ್ಲ. ಪ್ರೇಮದ ವರ್ಣನೆ ಎಲ್ಲ ಕಡೆಗೂ ಸಿಗುತ್ತದೆ. ಮಹಾಭಾರತದಲ್ಲಿ ಒಂದು ಉಪಕತೆ ಇದೆ. ಶ್ರೀ ಕೃಷ್ಣಜಿಯವರು ವಿದುರನ ಹತ್ತಿರ ಹೋದಾಗ ವಿದುರನ ಹೆಂಡತಿ ನಗ್ನವಾಗಿ ಸ್ನಾನ ಮಾಡುತ್ತಿದ್ದಳು. ಶ್ರೀ ಕೃಷ್ಣಜಿಯವರ ಧ್ವನಿ ಕೇಳಿ ಎಷ್ಟರ ಮಟ್ಟಿಗೆ ಮೈ ಮರೆತಳೆಂದರೆ, ಹಾಗೆಯೇ ಬಾಗಿಲು ತೆಗೆದುಕೊಂಡು ಬಂದುಬಿಟ್ಟಳು. ಕೃಷ್ಣಜಿಯವರು ತಮ್ಮ ಪಿತಾಂಬರವನ್ನು ಅವಳ ಮೇಲೆ ಹೊದಿಸಿದರು. ಆಕೆಯು ಶ್ರೀ ಕೃಷ್ಣನಿಗೆ ಬಾಳೆಹಣ್ಣನ್ನು ತಿನಿಸಲಾರಂಭಿಸಿದಳು. ಹಣ್ಣಿನ ತಿರುಳನ್ನು ಬಿಸಾಕಿ ಸಿಪ್ಪೆಯನ್ನು ತಿನಿಸುತ್ತಿದ್ದಳು. ವಿದುರಜಿಯವರು ಬಂದು 'ತಿರುಳು ಎಸೆದು ಸಿಪ್ಪೆಯನ್ನು ತಿನಿಸುತ್ತಿರುವೆಯಾ?' ಎಂದು ಕೇಳಿದರು. ಆಗ ಅವಳಿಗೆ ಮೈಮೇಲ ಪ್ರಜ್ಞೆ ಬಂದಿತು. ಮತ್ತು ಹಣ್ಣಿನ ತಿರುಳು ತಿನ್ನಿಸಲು ಪ್ರಾರಂಭಿಸಿದಳು. ಆಗ ಶ್ರೀ ಕೃಷ್ಣಭಗವಾನನು 'ಸಿಪ್ಪೆಯಲ್ಲಿ ಯಾವ ಸ್ವಾದವಿತ್ತೊ ಅದು ತಿರುಳಿನಲ್ಲಿ ಇಲ್ಲ' ಎಂದರು. ಅಂದರೆ, ಪ್ರೇಮ ಮತ್ತು ಭಕ್ತಿ ಇಷ್ಟರ ಮಟ್ಟಿಗೆ ಪರವಶಗೊಳಿಸಿ ವಿದುರರಾಣಿಯ ಯಾವ ಯಾವ ಸ್ಥಿತಿಯಾಗಿತ್ತೊ, ಪ್ರಗತಿಯ ಕೆಳಮಟ್ಟದಲ್ಲಿ ಅಂಥ ಸ್ಥಿತಿ ಕಂಡುಬರುತ್ತದೆ. ಅದರದೊಂದು ಚಿಕ್ಕ ಉದಾಹರಣೆಯೆಂದರೆ, ದೊರೆಸ್ವಾಮಿಯವರು. ಮತ್ತು ನಾವು ನಮ್ಮ ನಮ್ಮ ಯೋಗ್ಯಾನುಸಾರ ಪ್ರಭಾವಿತರಾಗುವೆವು. ಈ ಮಾತಿನಲ್ಲಿ ಮಿಕ್ಕ ಯಾವ ವಿಶೇಷವೂ ಇಲ್ಲ. ಹಾಗು ಇವು ಗಮನಯೋಗ್ಯವಾದ ವಿಷಯಗಳಲ್ಲ.

ತ್ಯಾಗರಾಜನ್‌ರ ಪತ್ರಗಳಿಗೆ ಉತ್ತರ ಕೊಡಲು ಅವಶ್ಯಕತೆ ಇಲ್ಲ. ಆದರೆ ಪತ್ರಗಳನ್ನು ಇಡುತ್ತಾ ಹೋಗಿರಿ. ನನ್ನ ಹತ್ತಿರ ಸಹ ತಲೆಕಾಲಿಲ್ಲದ ಪತ್ರಗಳು ಬರುತ್ತಿರುತ್ತವೆ. ಡಾ.ವರದಾಚಾರ್ಯರ ಬಳಿ ಕೂಡ ಬರುತ್ತವೆ.

ಶ್ರೀ ಮಂಜುನಾಥಜಿಯವರು ಚಿಕ್ಕಮಗಳೂರಿಗೆ ಹೋಗುವುದಕ್ಕಾಗಿ ನನಗೂ ಬರೆದಿರುವರು. ಆದರೆ ನನ್ನ ಆರೋಗ್ಯ ಕೆಲಸವಿಲ್ಲದೆ ಅಲೆದಾಡಲು ಯೋಗ್ಯವಾಗಿ ಕಾಣುವುದಿಲ್ಲ. ನಾನಲ್ಲಿ ಹೋದರೆ ಸ್ವಲ್ಪ ಸಮೃದ್ಧಿಯಾಗುವುದೆಂದು ಅವರ ವಿಚಾರ. ಸಮೃದ್ಧಿಯೆಂದರೆ ನಿಮಗೆ ಅರ್ಥವಾಗಬಹುದು. ಪ್ರಾರ್ಥನೆ ಮತ್ತು ಭಕ್ತಿಯಿಂದ ಸಮೃದ್ಧಿಯುಂಟಾಗುತ್ತದೆ. ಮತ್ತು ಈಗ ನಾನು ಈ ಸಮಯದಲ್ಲಿ, ದುರ್ಬಲನಾಗಿಯೂ ಇದ್ದೇನೆ. ಎಷ್ಟೋ ಸಲ ಉಬ್ಬಸದ ತೊಂದರೆಯಾಗುತ್ತದೆ. ಉಳಿದ ರೋಗಗಳಂತೂ ಕಾಲು ಚಾಚಿ ಕುಳಿತುಕೊಂಡೇ ಬಿಟ್ಟಿವೆ. ವಿಜಯವಾಡದ ಡಾ.ಪಾರ್ಥಸಾರಥಿಯವರು ನನಗೆ ಕೆಲವು ಔಷಧಿಗಳನ್ನು ಕಳಿಸಿರುವರು. ಅಲ್ಲದೆ ವಿಜಯವಾಡದಲ್ಲಿ ಕೆಲವು ಇಂಜಕ್ಷನ್‌ಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದಾರೆ. ಇದು ಅವರ ಪ್ರೇಮ. ಮತ್ತು ಸತ್ಸಂಗಿ ಡಾಕ್ಟರು ಯಾರು ಯಾರು ಇರುವರೋ ಅವರೆಲ್ಲರೂ ಔಷಧಿಗಳನ್ನು ಕಳಿಸಿರುವರು. ಅವುಗಳನ್ನು ತಿನ್ನುವ

ಸಂದರ್ಭವೇ ಬಂದಿಲ್ಲ, ಕಾರಣವೇನೆಂದರೆ ಒಂದು ಕಡೆ ಒಂದು ರೋಗ ತಿರುಗಿ ಬಂದರೆ ಇನ್ನೊಂದು ಕಡೆ ಇನ್ನೊಂದು ಹುಟ್ಟಿ ಬರುತ್ತದೆ.

ಮಕ್ಕಳಿಗೆ ಆಶೀರ್ವಾದಗಳು.

ಆಶೀರ್ವಾದಗಳೊಂದಿಗೆ .

ರಾಮಚಂದ್ರ

ವಿ.ಸೂ.: ಮತ್ತೇನೆಂದರೆ "Voice of the East"ನ ಮೊದಲನೇ ಸಂಪುಟ ಸಿದ್ಧಗೊಂಡಿದೆ. ಡಾ.ವರದಾಚಾರಿಯವರು "Sahajmarg - A New Darshana" ಹಾಗೂ Sahaj Marg and Modern Psychology" ಸಿದ್ಧಗೊಳಿಸಿ ನನ್ನ ಬಳಿ ಕಳಿಸಿರುವರು. ಅವುಗಳನ್ನು ಮುದ್ರಿಸುವ ಚಿಂತೆಯಾಗಿದೆ. 'Ten Commandments" (English) ಮುಗಿದುಹೋಗಿವೆ. ಹಾಗೂ "A peep into Sahaj Marg" ಕೇವಲ ೫೦ ಪ್ರತಿಗಳು ಉಳಿದಿವೆ.

◆ ◆ ◆

"ಓಂ ತತ ಸತ್"

ಷಾಹಜಾನಪೂರ್
ದಿ.೧೩.೨.೧೯೬೫.

ನಂ.೧೪೨
ನಂ.ಜೆ.೮೧/ಎಸ್.ಆರ್.ಸಿ.ಎಮ್

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಈ ವರ್ಷದ ಬಸಂತ ಪಂಚಮಿಯಲ್ಲಿ ಸುಮಾರು ೨೫ ಜನರು ಭಾಗವಹಿಸಿದ್ದರು. ಇದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಸತ್ಸಂಗದಿಂದ ಎಲ್ಲರಿಗೂ ತೃಪ್ತಿಯಾಯಿತು. ನಾರಾಯಣರಾವ ಅವರೂ ಸಹ ಬಂದಿದ್ದರು. ಈಗ ಎಲ್ಲರೂ ತಿರುಗಿ ಹೋಗಿದ್ದಾರೆ. ಈಗ ಕೇವಲ ಶ್ರೀ ಶೇಷಾದ್ರಿ ಹಾಗೂ ಅವರ ಕುಟುಂಬ ಉಳಿದಿದ್ದಾರೆ, ಅವರು ಫೆಬ್ರವರಿ ೧೭ಕ್ಕೆ ಹೋಗುತ್ತಾರೆ. ನಾನು ದಕ್ಷಿಣ ಭಾರತದ ಜನರನ್ನು ರೂಪಿಸಿದ್ದೇನೆ. ಅಂದರೆ ನಿಮ್ಮ ಮೇಲೆಯೂ ಡಾ.ವರದಾಚಾರಿಯವರ ಮೇಲೆಯೂ ಮಾಡಬೇಕಾದ ಕೆಲಸ ಸ್ವಲ್ಪ ಮಾತ್ರ ಉಳಿದಿದೆ. ಮತ್ತು ಈಗ ನಿಮ್ಮಿಬ್ಬರ ಪ್ರಶಿಕ್ಷಣದ ಕೆಲಸ ದೇವರು ತನ್ನ ಕೈಯಲ್ಲಿ ತೆಗೆದುಕೊಂಡಿದ್ದಾನೆ. ಈಗ ನೀವಿಬ್ಬರೂ ನನ್ನ ಕೈಯಿಂದ ಮೀರಿ ಹೋಗಿರುವಿರಿ. ಒಂದು ಕಾಲದಲ್ಲಿ ನಿಮಗೆ ನನ್ನ ಅವಶ್ಯಕತೆಯಿತ್ತು, ಮತ್ತು ಈಗ ಕಾಲ ಹೇಗಿದೆ ಎಂದರೆ ನನಗೆ ನಿಮ್ಮ ಅವಶ್ಯಕತೆಯಿದೆ. ನಾನು ಇನ್ನೂ ಇಬ್ಬರನ್ನು ತೆಗೆದುಕೊಳ್ಳಬೇಕೆಂದು ಇಚ್ಛಿಸಿದ್ದೆ. ಆದರೆ ಈ ವಿಧದ ಪ್ರಶಿಕ್ಷಣಕ್ಕಾಗಿ ಯಾರು ಯೋಗ್ಯರು ಸಿಗಲಿಲ್ಲ. ಒಂದು ಅನುಭವದ ಮಾತನ್ನು ಬರೆಯುವೆನು. ಶೇಷಾದ್ರಿ ಹಾಗೂ ಅವರ ಕುಟುಂಬ

ಇಬ್ಬರನ್ನು ತೆಗೆದುಕೊಂಡೆ. ಅಂದರೆ ಗಂಡ ಮತ್ತು ಹೆಂಡತಿ ಜೊತೆ ಜೊತೆಯಾಗಿ. ಆದರೆ ಅವರ ಹೆಂಡತಿ ಸ್ವಯಂ ಮುಂದುವರಿಯತೊಡಗಿದರು. ಆಕೆ ತನ್ನಷ್ಟಕ್ಕೆ ತಾನೆ ಮುಂದುವರಿದಳು. ಎರಡನೆಯದಾಗಿ ಸರ್ನಾಡಜಿಯವರನ್ನು ಆರಿಸಿದೆನು. ಕೆಲಸ ಪ್ರಾರಂಭಿಸಬೇಕೆಂದಾಗ ಅವರಲ್ಲಿ ಅವರಿಗೆ ತಿಳಿಯದಂತಹ ಪ್ರತಿರೋಧಕ ಇತ್ತು. ಮತ್ತು ಎಲ್ಲಿಯವರೆಗೆ ಇದು ದೂರವಾಗುವುದಿಲ್ಲವೋ ಅಲ್ಲಿಯವರೆಗೆ ಅವರು ಹೇಗಾಗಬೇಕೋ ಹಾಗೆ ಆಗಲಾರರು. ಎಳೆದುಕೊಂಡು ಮೇಲೆ ಒಯ್ಯಬಹುದು. ಈ ವಿಷಯ ಬೇರೆ. ಇದರಿಂದ ವೈಶಿಷ್ಟ್ಯ ಉತ್ಪನ್ನವಾಗುವುದಿಲ್ಲ. ಆದ್ದರಿಂದ ನೀವು ಈ ವಿಷಯದ ಬಗ್ಗೆ ವಿಚಾರ ಮಾಡಿ, ತಿಳಿದುಕೊಂಡು ತೆಗೆದು ಹಾಕಿರಿ. ಆಗ ಸಾಧ್ಯವಾಗಬಹುದಾಗಿದೆ.

ನಾನು ನಿಮ್ಮ ಧ್ಯಾನ ಮುಂತಾದುದನ್ನು ಬಿಡಿಸಿ ನಿಮ್ಮ ೧ ೧/೨ ಗಂಟೆ ವೇಳೆಯನ್ನು ಉಳಿಸಿದ್ದೇನೆ. ಅದನ್ನು ನೀವು ಮಿಶನ್ನಿನ ಸದ್ವಿಲ್ಲದ ಕೆಲಸಗಳಲ್ಲಿ ವಿನಿಯೋಗಿಸಿರಿ. ಬೇರೆ ಕೆಲಸಗಳನ್ನು ಸಹ ನಾನು ನಿಮಗೆ ಕೊಡುತ್ತಾ ಬಂದಿದ್ದೇನೆ. ಆತ್ಮವಿಶ್ವಾಸ ಹೆಚ್ಚಿಸಿದಷ್ಟು ಕೆಲಸ ಉತ್ತಮವಾಗುವುದು. ಬೀದರಿನ ಸ್ಥಿತಿಯನ್ನು ನಿಮಗೆ ಮಾಸ್ಟರ ಸಾಹೇಬರು ಹಾಸನದಲ್ಲಿ ತಿಳಿಸಿದ್ದರು. ಮತ್ತು ಅವರು ಅಲ್ಲಿಯ ಜನರಿಗೆ ತಿಳಿಹೇಳಿದ್ದರು. ಆದರೆ ಅದರಿಂದ ಯಾವ ಪ್ರಯೋಜನವೂ ಕಂಡು ಬಂದಿಲ್ಲ. ಆದರೆ ಅಲ್ಲಿ ಗೊಂದಲು ಉಂಟು ಮಾಡುವವರು ೨-೩ ಜನರು ಮಾತ್ರ ಇರಬಹುದು. ಆದರೆ ಬಂಧು, ಒಂದು ಮೀನವು ಇಡೀ ಕೆರೆಯನ್ನೇ ಹೊಲಸು ಮಾಡಹಬಹುದು. ಮಿಶನ್ನಿನಲ್ಲಿ ಇಂಥ ವಿಷಯಗಳು ನನಗೆ ಸರಿ ಕಾಣುವುದಿಲ್ಲ. ಅಲ್ಲದೆ ಇಂಥ ಜನರ ಆವಶ್ಯಕತೆಯೂ ನಮಗಿಲ್ಲ. ನಮಗಂತೂ ಸತ್ಸಂಗವನ್ನು ಬೆಳೆಸಬೇಕಾಗಿದೆ. ಗುಂಪುಗಾರಿಕೆಯನ್ನು ನಿರ್ಮಿಸಬೇಕಿಲ್ಲ. ನಾನು ಒಂದು ಪತ್ರವನ್ನು ಶಂಭುರಾಯರಿಗೆ ಬರೆದಿದ್ದೇನೆ. ಅದರ ನಕಲನ್ನು ಇದರ ಜೊತೆಗೆ ಇಟ್ಟಿರುವೆನು. ಈ ಪತ್ರವನ್ನು ನಾನು ಗೋಪಾಲರಾಯರ ಸಂಗಡ ಕಳಿಸಿದ್ದೇನೆ. ನೀವು ಇದರಲ್ಲಿ ಯೋಗ್ಯವೆನಿಸಿದ್ದನ್ನು ಮಾಡಿರಿ. ಮತ್ತು ನನಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಿರಿ. ದೀಕ್ಷೆ ಹೊಂದಿದ ಸದಸ್ಯರ ಯಾದಿಯಲ್ಲಿ ಈ ಕೆಳಕಂಡ ಹೆಸರುಗಳನ್ನು ಸೇರಿಸಿಕೊಳ್ಳಿರಿ ಮತ್ತು ಸರ್ನಾಡರಿಗೆ ಬರೆಯಿರಿ. ಏಕೆಂದರೆ, ಅವರು ತಮ್ಮ ಯಾದಿಯಲ್ಲಿ ಹೆಚ್ಚಿಸಿಕೊಳ್ಳಲಿ. ದತ್ತರಾಜರಿಗೂ ಕೂಡ ತಿಳಿಸಿರಿ. ಪಂಪಾಪತಿಗೆ ಇದರ ನಕಲನ್ನು ಪೂರ್ತಿ ಕೊಡಿರಿ. ೧. ಶ್ರೀಮತಿ ದತ್ತರಾಜ ೨. ಪಂಪಾಪತಿ ಗುಲ್ಬರ್ಗಾ ೩. ನಾರಾಯಣರಾವ ಬಿಜಾಪೂರ ೪. ಶಿವಲಿಂಗಪ್ಪ ೫. ಭೀಮಸೇನರಾವ ೬. ರಾಮಚಂದ್ರರಾವ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೪೩
ನಂ. ಜೆ- ೧೫೦/ಎಸ್.ಆರ್.ಸಿ.ಎಮ್ ದಿ.೨೫.೩.೧೯೬೫

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಪ್ರೀತಿಯ ಪತ್ರವು ತಲುಪಿತು. ನಿಮ್ಮ ವೇತನ ಬಹಳ ಕಡಿಮೆ ಇದ್ದುದರಿಂದ ನೀವು ಬಹಳ ಕಷ್ಟಪಟ್ಟಿರಿ ಎಂಬುದನ್ನು ಕೇಳಿ ಬಹಳ ಚಿಂತೆಯಾಯಿತು. ನೀವು ಇದನ್ನು ಮೊದಲೇ ಬರೆಯಬೇಕಾಗಿತ್ತು. ಈ ಕಷ್ಟವನ್ನು ಸ್ವಲ್ಪವಾದರೂ ಕಡಿಮೆ ಮಾಡುವ ಉಪಾಯವನ್ನು ಶೋಧಿಸಬಹುದಾಗಿತ್ತು. ಈಗ ಅಂಥ ಸ್ಥಿತಿ ಇಲ್ಲವೆಂಬ ಬಗ್ಗೆ ಬರೆಯಿರಿ. ಸರ್ನಾಡರ ಪತ್ರವೂ ಬಂದಿತ್ತು. ಅವರು ಉತ್ತಮ ಪ್ರಶಿಕ್ಷಣ ಗ್ರಹಣ ಮಾಡುವುದಕ್ಕೆ ತಮ್ಮನ್ನು ತಾವು ಯೋಗ್ಯರನ್ನಾಗಿ ಮಾಡುತ್ತಿರುವರು. ಇದರಿಂದ ಕಿಂಚಿತ್ ಲಾಭ ಅವಶ್ಯ ಆಗುತ್ತದೆ. ಆದರೆ ಆ ಅವ್ಯಕ್ತ ಪ್ರತಿರೋಧಕವನ್ನು ನೀವೆ ತೊಲಗಿಸಬಲ್ಲಿರಿ. ಅವರಲ್ಲಿ ಏಕಾಗ್ರತೆ ಅವಶ್ಯವಾಗಿ ಇದೆ. ಆದರೆ ಅವರಲ್ಲಿ, ಅವರ ಹೃದಯವು ಪೂರಕವಾಗಿಲ್ಲ. ಮತ್ತು ಅವರು ಅದನ್ನು ಮಾಡಲು ಅಶಕ್ತರಾಗಿದ್ದಾರೆ.

ಡಾ.ವರದಾಚಾರಿ ಮೂರು ದಿವಸಗಳ ಸಲುವಾಗಿ ದಿಲ್ಲಿಗೆ ಬಂದಿದ್ದರು. ೨೫ ಮಾರ್ಚ್‌ದಿಂದ ೨೭ರವರೆಗೆ. ೨೮ ಮಾರ್ಚ್‌ಗೆ ಷಹಜಹಾನಪೂರ ತಲುಪಲಿದ್ದಾರೆ. ಮತ್ತು ಅಂದೇ ಸಾಯಂಕಾಲ ಇಲ್ಲಿ ಒಂದು ಸಭೆಯನ್ನು ಏರ್ಪಡಿಸಲಾಗಿದೆ. ೨೯ ಮಾರ್ಚ್‌ಗೆ ನಾನು ಅವರನ್ನು ಸೀತಾಪೂರಕ್ಕೆ ಕರೆದೊಯ್ಯಲಿದ್ದೇನೆ. ಅಲ್ಲಿ ಸಹ ಸಾಯಂಕಾಲ ಒಂದು ಸಭೆಯ ಏರ್ಪಾಡು ಮಾಡಲಾಗಿದೆ. ೩೦ಕ್ಕೆ ೧೦ ಗಂಟೆಗೆ ಇಲ್ಲಿಗೆ ತಿರುಗಿ ಬಂದು ಸಾಯಂಕಾಲದ ರೈಲಿನಿಂದ ದೆಹಲಿಗೆ ಹೋಗುವರು. ೩೧ ಬೆಳಿಗ್ಗೆ ದೆಹಲಿ ತಲುಪಿ ಅಂದೇ ರಾತ್ರಿ ಮನೆಗೆ ತಿರುಗಿ ಹೋಗುವರು.

ನೀವು ಸರ್ನಾಡಜಿಗೆ ಬೀದರ ಬಗ್ಗೆ ವಿಚಾರಣೆ ನಡೆಸುವುದಕ್ಕಾಗಿ ಬರೆದಿರುವಿರಿ. ಇದು ಒಳ್ಳೆಯದಾಯಿತು. ನಾನೂ ಸಹ ನಿಮ್ಮನ್ನು ಸೂಚಿಸಿ ಆತನಿಗೆ ಬರೆದಿರುವೆನು. ಅಲ್ಲಿಯ ಒಳ್ಳೆಯ ಸತ್ಸಂಗಿಗಳು ಸಹ, ಆ ಕೇಂದ್ರವು ಮುಚ್ಚಲಾಗುವದೆಂಬ ಹೆದರಿಕೆಯಿಂದ ಸ್ವಲ್ಪ ಆತಂಕಗೊಂಡಿರುವರು, ಮತ್ತು ಒಬ್ಬ ಸಜ್ಜನನು ಇನ್ನೊಬ್ಬನ ಹೆಸರು ಬರೆದಿರುವನು. ಮಿಕ್ಕ ಒಬ್ಬರಿಬ್ಬರು ಇನ್ನೊಬ್ಬನ ಹೆಸರು ಬರೆದಿರುವರು. ಈ ..... ಮಹಾಶಯರು ಇನ್ನೂ ಅದೇ ಗುಂಗಿನಲ್ಲಿರುವರು. ಮತ್ತು ಎಷ್ಟರ ಮಟ್ಟಿಗೆ ಜಡವಾಗಿರುವರೆಂದರೆ, ಅವರು ಸತ್ಸಂಗದಿಂದ ಸ್ವಲ್ಪ ಲಘುವಾದ ಅಮಲಿನ ಹೊರತು ಮತ್ತೇನೂ ಲಾಭ ಹೊಂದಲೊಲ್ಲರು. ನಾನವರಿಗೆ ಸರಿ ಮಾಡಲು ಬಯಸಿದ್ದೆ. ಆದರೆ ಕೆಲಸ ಆರಂಭ ಮಾಡಿದಾಗ ಆತನನ್ನು ಮರೆತುಬಿಟ್ಟೆ. ಇನ್ನೊಬ್ಬ .....ಮಹಾಶಯರು ಈ ಕ್ಷೇತ್ರವಲ್ಲಿ ಇರುವ ಸಾಧ್ಯತೆ ಸ್ವಲ್ಪ ಮಟ್ಟಿಗಿದೆ. ಮತ್ತು ನಾನು ಅವರ ಸ್ಥಿತಿ ಬಹಳ ಕೆಟ್ಟು ಹೋದುದನ್ನು ಕಂಡೆ. ಆತನಿಗೆ ಸಹ ಹೇಳಿದೆನು. ಪ್ರಾಯಶಃ ಹಾಸನದಲ್ಲಿ

ನಿಮಗೂ ಹೇಳಿರಬಹುದು. ಇನ್ನೊಬ್ಬ ..... ರು ತಾವು ದೀಕ್ಷೆ ಹೊಂದಿರುವ ಬಗ್ಗೆ ಬಹಳ ಜನರಲ್ಲಿ ಹೇಳಿರುವರು. ಅವರು ದೀಕ್ಷೆ ಹೊಂದಿರುವದರಿಂದ ಪ್ರಿಸೆಪ್ಟರ ಆಗುವುದಕ್ಕೆ ಅಧಿಕಾರ ಹೊಂದಿರುವರೆಂದು ತಿಳಿದಿರಬಹುದು. ಮತ್ತು ಇದೇ ಪ್ರಭಾವ ..... ಇವರ ಮೇಲೆ ಬಿದ್ದಿದೆ. ಆವರು ಸಹ ದೀಕ್ಷೆ ಹೊಂದಬಯಸಲಾರಂಭಿಸಿರುವರು. ನಾನು ಒಂದು ಪತ್ರ ..... ಗೆ ಬರೆದಿರುವೆನು. ಅದರ ಪ್ರತಿ ನಿಮಗೆ ಕಳಿಸುತ್ತಿರುವೆನು. ಸರ್ನಾಡರಿಗೆ ವಿಚಾರಣೆ ಮಾಡುವುದಕ್ಕಾಗಿ ಬರವೇ ಬಿಡಿರಿ. ಮತ್ತು ಅವರನ್ನು ಸರಿ ಪಡಿಸುವ ಪ್ರಯತ್ನವನ್ನು ಮಾಡಲಿ. ಅವರ ಸುಧಾರಣೆ ಸಾಧ್ಯವಾಗದ ಪಕ್ಷದಲ್ಲಿ ವಿಮುಖಗೊಳ್ಳುವುದರ ಹೊರತು ಬೇರೆ ಯಾವ ಉಪಾಯವೂ ಕಾಣುವುದಿಲ್ಲ. ಇದನ್ನು ನಿಮಗೇ ಬಿಡುತ್ತೇನೆ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ಚಿ. ಮೀರಳಿಗಾಗಿ ಯಾವ ಅಂಗಮರ್ಧನ ಅಥವಾ ನೀಡುವ ಚಿಕಿತ್ಸೆ ಹೇಳಿಕೊಟ್ಟಿದ್ದೆನೋ ಅದು ನಡೆದಿದೆಯೋ ಇಲ್ಲವೋ?

◆ ◆ ◆

"ಓಂ ತತ್‌ಸತ್"

ನಂ.೧೪೪
ನಂ.ಜೆ. ೨೧೭/ಎಸ್.ಆರ್.ಸಿ.ಎಮ್.

ದಿ.೨೫.೪.೧೯೬೫.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಎರಡೂ ಪತ್ರಗಳು ತಲುಪಿದವು. ನಾನು ಕಂಚಿನ ಒಂದು ತಾಟು ಮತ್ತು ಎರಡು ಬಟ್ಟಲುಗಳನ್ನು ಕಳಿಸಿದ್ದೆನು. ಅವು ಬಿಜಾಪೂರದಿಂದ ನಾರಾಯಣರಾಯರ ದ್ವಾರಾ ನಿಮ್ಮ ಬಳಿ ತಲುಪುವುವು. ಅದರಲ್ಲಿ ಹುಳಿಯನ್ನು ಹಾಕದಂತೆ ಜಾಗ್ರತೆ ವಹಿಸಬೇಕು. ಆದರೆ ಅದರಲ್ಲಿ ಪದಾರ್ಥಗಳು ಕೆಡಲು ಓತ್ತಾಳಿಗಿಂತ ಹೆಚ್ಚು ಸಮಯ ಹಿಡಿಯುತ್ತದೆ. ನೀವು ಊಟ ಮಾಡುವ ಕಾಲಕ್ಕೆ ಅದರಲ್ಲಿ ಮೊಸರು ಇಡಬಹುದು. ಹಾಲು ಇಟ್ಟರೆ ಕೆಡುವುದಿಲ್ಲ. ಈ ಧಾತುವು ಭಿದುರವಾಗಿದ್ದು, ಒಡೆದು ಚೂರು ಚೂರಾಗುವ ಸ್ವಭಾವವುಳ್ಳದ್ದು. ನೆಲದ ಮೇಲೆ (ಕೆಳಗೆ) ಬಿದ್ದರೆ ತಕ್ಷಣ ಒಡೆದು ಹೋಗುವುದು. ಇದರ ವಿಶೇಷ ಗುಣವೇನೆಂದರೆ, ತಿಕ್ಕಿದಷ್ಟು ಹೊಳಪು ಪಡೆದು ಬಿಳಿಯದಾಗುತ್ತವೆ. ಇದು ಓತ್ತಾಳಿಗಿಂತ ಎರಡು ಪಟ್ಟು ಬೆಲೆಯುಳ್ಳದ್ದು.

ಇಲ್ಲಿ ಶಿವಲಿಂಗಪ್ಪ, ರಾಮಚಂದ್ರ ಪೂಜಾರ ಮತ್ತು ಬೀದರಿನ ಬಿ.ಎಲ್.ಕೆ. ಮೂರ್ತಿ ತಂಗಿರುವರು. ಚೆನ್ನಬಸಪ್ಪ ಮತ್ತು ಅವರ ಹೆಂಡತಿ ನಿನ್ನೆ ತಿರುಗಿ ಹೋದರು. ಬೀದರಿನಲ್ಲಿ ಸ್ವಲ್ಪ ತಪ್ಪು ತಿಳುವಳಿಕೆ ಆಗಿತ್ತು. ಅದು ಸರಿ ಮಾಡಲ್ಪಟ್ಟಿತೆಂದು ಸರ್ನಾಡಜೀ ನನಗೆ ಬರೆದಿರುವರು. ಆದರೂ ಆಕಡೆ ಸ್ವಲ್ಪ ಲಕ್ಷ್ಯವಿಟ್ಟಿರಬೇಕು. ನನಗೆ ತಿಳಿದ ಹಾಗೆ ಗುಜರಾಥಿಯ ಹೃದಯದಲ್ಲಿ ಇಲ್ಲಿಯವರೆಗೆ ಏನೂ ಬದಲಾವಣೆ ಉಂಟಾಗಿಲ್ಲ. ಉತ್ಸವ ಸಮಯದಲ್ಲಿ ಕಾರ್ಯ ನಿರ್ವಾಹಕ ಸಮಿತಿ ತನ್ನ ವಾರ್ಷಿಕ ಸಭೆಯಲ್ಲಿ, ಮಿಶನ್ನಿನ ಸ್ವಂತ ಮುದ್ರಣಾಲಯ ಇರಬೇಕೆಂದು ನಿರ್ಣಯ ತೆಗೆದುಕೊಂಡಿದೆ. ಈಗ ನನ್ನ ಬಳಿ ಕೇವಲ ೩.೦೦೦ ರೂಪಾಯಿ ಇವೆ. ಅದರ ಸಂಪೂರ್ಣ ವೆಚ್ಚ ಸುಮಾರು ೧೫೦೦೦ ರೂಪಾಯಿ ಇದೆ. ಎಲ್ಲಾ ಕೇಂದ್ರಗಳಿಗೆ ಈ ಠರಾವಿನ ಕುರಿತು ಸೂಚನೆ ಕೊಡಬೇಕು. ಎರಡನೆಯದಾಗಿ ಈ ವರ್ಷದಿಂದ ಪತ್ರಿಕೆಯ ವಾರ್ಷಿಕ ಚಂದ ೪ ರೂ. ಮಾಡಲಾಗಿದ್ದು ಆ ಪ್ರಕಾರವೇ ಸಂಗ್ರಹ ಮಾಡಬೇಕು. ಎಲ್ಲ ಕೇಂದ್ರಗಳಿಗೂ ಸೂಚನೆ ಕೊಡಿರಿ.

ನೀವು ಎಂಥ ಉತ್ತರಗಳನ್ನು ಕೊಟ್ಟಿರುವಿರೋ, ಎಂಥ ಪ್ರಶ್ನೆಗಳಿದ್ದವೋ ಹಾಗೆಯೇ ಉತ್ತರಗಳಾದವು. ಅವು ಸರಿಯಾಗಿಯೇ ಇವೆ. ಇದರಲ್ಲಿ ಅಸಂಬದ್ಧತೆಯ ಅಥವಾ ಮೂರ್ಖತೆಯ ಪ್ರಶ್ನೆಯೇ ಇಲ್ಲ. ಡಾ.ವರದಾಚಾರಿ ಇಲ್ಲಿಗೆ ಬಂದಾಗ ಅವರ ಒಂದು ಭಾಷಣ ಆಗಿತ್ತು. ಹಾಗೂ ಇನ್ನೊಂದು ಸೀತಾಪೂರದಲ್ಲಿ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ.ಸೂ: ಮತ್ತೇನೆಂದರೆ ಯಾರು ದೀಕ್ಷೆ ಹೊಂದುವರೋ, ಅವರಲ್ಲಿ ಕೆಲವರು ಬಹಳಷ್ಟು ಸಲ ತಮಗೆ ಏನೂ ಮಾಡುವುದು ಉಳಿದಿಲ್ಲವೇನೋ ಎಂಬಷ್ಟು ತೃಪ್ತರಾಗಿಬಿಡುತ್ತಾರೆ. "ಆಕಳು ವೈತರಣಿಯನ್ನು ದಾಟಿಸುವುದು. ಮತ್ತು ಗುರು ಭವಸಾಗರವನ್ನು ದಾಟಿಸುವನು." ರಾಮಚಂದ್ರ ಪೂಜಾರ ಸಹ ಬಹಳ ತೃಪ್ತರಾಗಿದ್ದಾರೆ. ಮತ್ತು ಈ ಕುಂದು ಅವರಲ್ಲಿ ಸಹ ಬಂದಿದೆ. ಗೋಪಾಲರಾಯರ ಸ್ಥಿತಿ ಏನಾಗಿದೆಯೆಂದರೆ ಅವರಿಗೆ ದೀಕ್ಷೆಯ ಮದ ಬಂದಿದ್ದು ತಮ್ಮನ್ನು ತಾವು ವಿಶಿಷ್ಟ ಅಭ್ಯಾಸಿಯೆಂದು ಭಾವಿಸಲಾರಂಭಿಸಿದ್ದಾರೆ. ಮತ್ತು ಬೇರೆಯವರಿಗೂ ಇದೇ ರೀತಿ ತಮ್ಮನ್ನು ಮನ್ನಿಸಬೇಕೆಂದು ತಿಳಿಸತೊಡಗಿದರು. ಇದರ ಪರಿಣಾಮದಿಂದಾಗಿ ಅವರ ಸ್ಥಿತಿ ಎಷ್ಟು ಕೆಟ್ಟಿತೆಂದರೆ ಈವರೆಗೂ ಪೂರ್ಣ ಸುಧಾರಿಸಲಾಗಿಲ್ಲ. ಬಹಳ ಜಂಭದಿಂದ ವರದಾಚಾರಿಯವರ ಹತ್ತಿರವೂ ತಾನು ದೀಕ್ಷಿತನಾಗಿದ್ದೇನೆಂದು ಹೇಳಿದ್ದಾರೆ. ಇದನ್ನು ಯಾರಿಗೂ ಹೇಳಬಾರದೆಂದು ನಿಷೇಧಿಸಲಾಗಿದ್ದರೂ ಹೇಳಿಕೊಂಡು ಬಿಟ್ಟರು. "ನಿಷೇಧ ಮಾಡಿರುವಾಗ ನನಗೆ ಯಾತಕ್ಕೆ ಹೇಳಿದಿರಿ? ಇದು ಬಹಳ ಅವಿಧೇಯತನ" ಎಂದು ಡಾ.ವರದಾಚಾರಿಯವರು ಆತನಿಗೋ ಅಥವಾ ಬೇರೆ ಇನ್ನಾರಿಗೋ ಹೇಳಿದರಂತೆ.

ಚಿ. ಉಮೇಶ ದೆಹಲಿಯಲ್ಲಿದ್ದಾನೆ. ಇತ್ತಿತ್ತಲಾಗಿ ಬಹಳ ಜ್ವರ ಪೀಡಿತನಾಗಿದ್ದಾನೆ. ಗುಣ ಹೊಂದುವನು. ಚಿಂತೆಗೆ ಕಾರಣವಿಲ್ಲ. ಅಲ್ಲಿ ದೆಹಲಿಯಲ್ಲಿರುವ ಛಾಯಾಳ ಗಂಡನಿಗೆ ವಿಷಮಜ್ವರ ಮರುಕಳಿಸಿದೆ. ಆತನು ಬಿಡುವು ತೆಗೆದುಕೊಂಡು ಕಾನಪೂರಕ್ಕೆ ಹೋಗಿರುವನು. ಇನ್ನೂ ಏನೂ ಸಮಾಚಾರ ಬಂದಿಲ್ಲ. ಆದರೆ ದೇವರ ದಯೆಯಿಂದ ಆತನು ಗುಣಹೊಂದಿದ್ದಾನೆಂದು ಆಶಿಸುತ್ತೇನೆ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆◆◆

ನಂ.೧೪೫

"ಓಂ ತತ್‌ಸತ್"

ನಂ.ಜೆ. ೨೬೫/ಎಸ್.ಆರ್.ಸಿ.ಎಮ್ ದಿ.೨೬.೫.೧೯೬೫.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ದೇವರ ಕೃಪೆಯಿಂದ ಚಿ.ಮೀರಾಬಾಯಿ ಈಗ ಗುಣವಾಗಿರಬಹುದು. ದೆಹಲಿಯಲ್ಲಿರುವ ಚಿ.ಉಮೇಶನು ವಿಪರೀತ ಜ್ವರಕ್ಕೆ ಒಳಗಾದನು. ಆದರ ನಂತರ ಮಂದ ಜ್ವರ ಇರತೊಡಗಿತು. ಸರಾಸರಿ ಒಂದು ತಿಂಗಳಿಂದ ಹೀಗೆಯೆ ಇದೆ. ಇನ್ನೂ ಗುಣವಾಗಿಲ್ಲ. ಡಾಕ್ಟರರು ರಕ್ತದಲ್ಲಿ ESR ಕಡಿಮೆ ಇದೆ ಎಂದು ಹೇಳುತ್ತಿದ್ದಾರೆ. ಈ ಸ್ಥಿತಿಯಲ್ಲಿಯೇ ಅವನು ಆಫೀಸಿಗೆ ಹೋಗಬೇಕಾಗುತ್ತದೆ. ಮತ್ತು ಆಡಿಟ ಮಾಡುವುದಕ್ಕಾಗಿ ಹೊರಗಡೆ ಹೋಗಬೇಕಾಗುತ್ತದೆ. ಹಾಜರಿ ಕಡಿಮೆಯಾಗಬಾರದೆಂದು ಇಷ್ಟೆಲ್ಲ ಮಾಡಬೇಕಾಗುತ್ತದೆ. ಆತನ ಅಕ್ಕ ಚಿ.ಛಾಯ ಒಂದುವರೆ ತಿಂಗಳಿಂದ ಕಾನಪೂರದಲ್ಲಿದ್ದಾಳೆ. ನನ್ನ ಅಳಿಯನಿಗೂ ಕೂಡ ಮಂದ ಜ್ವರದ ಬಾಧೆ ಇತ್ತು. ಆದುದರಿಂದ ಆತನು ಜೂನ ತಿಂಗಳಿನಿಂದ ರಜೆಯ ಮೇಲಿದ್ದಾನೆ. ಈಗ ಉಮೇಶನು ಒಬ್ಬನೆ ಇರುವನು. ಮಾಸ್ಟರ ಸಾಹೇಬ ಮತ್ತು ಚಿ. ಸರ್ವೇಶನನ್ನು ಎರಡು ವಾರಕ್ಕೋಸ್ಕರ ಕಳಿಸಿದ್ದೆನು. ಮಾಸ್ಟರ ಸಾಹೇಬ ಬರೇಲಿಗೆ ಬಂದಿರುವರು. ಒಂದೆರಡು ದಿನಗಳಲ್ಲಿ ತಿರುಗಿ ಬರುವರು. ದಕ್ಷಿಣ ಭಾರತದ ಮಿತ್ರರು ಬರುವವರಿದ್ದಾರೆ. ಆದುದರಿಂದ ನನಗೆ ಹೋಗಲಾಗಲಿಲ್ಲ. ಈ ಹೊತ್ತು ಇದೇ ಈಗ ಈ ಪತ್ರ ಬರೆಯುತ್ತಾ ಇದ್ದಾಗ ಮಾಸ್ಟರ ಸಾಹೇಬರು ಬಂದರು. ಅವರು ಬಹಳ ದುರ್ಬಲರಾಗಿರುವರು. ಹೊಟ್ಟೆನೋವಿನ ಬಾಧೆ ಇತ್ತು. ಇನ್ನೂ ಊಟ ಮಾಡುತ್ತಿಲ್ಲ. ೨೯,೩೦,೩೧ ಮೇ ಅಂದು ಸೀತಾಪೂರದಲ್ಲಿ ಒಂದು ಸಭೆಯನ್ನು ಏರ್ಪಡಿಸಲಾಗಿದೆ. ಬೀದರಿನ ವಿಷಯ ಸರಿಯಾದದ್ದು ಒಳ್ಳೆಯದಾಯಿತು.

ಕನ್ನಡ ಭಾಷೆಯಲ್ಲಿಯ ಅನುವಾದಕ್ಕೆ ನೀವು ಯಾರಾದರೊಬ್ಬ ಯೋಗ್ಯ ವ್ಯಕ್ತಿಯಿಂದ ಮುನ್ನುಡಿ ಬರೆಸಬಯಸಿರುವಿರಿ. ನನಗೆ ಅದು ಒಪ್ಪಿಗೆ ಇದೆ. ಆದರೆ ಯಾರು ಸರಿಯಾಗಿ ಬಲ್ಲರೋ ಅಂಥ ವ್ಯಕ್ತಿ ಸಿಗಬೇಕು. ಮೈಸೂರಿನ ಶ್ರೀ ಯಮುನಾಚಾರ್ಯರು ಯೋಗ್ಯ ವ್ಯಕ್ತಿ ಇರುವರು. ಮತ್ತು ಅವರು ಡಾ. ವರದಾಚಾರ್ಯರ ಸ್ನೇಹಿತರು. ನಾನು ಸಭೆಯಲ್ಲಿ ಅವರಿಗೆ Reality at Dawn ಕೊಟ್ಟಿದ್ದೆನು. ಮತ್ತು ಇತರ ಪುಸ್ತಕಗಳನ್ನು ಅವರಿಗೆ ಕೊಡಲು ಶ್ರೀ ಮಂಜುನಾಥಗೆ ಕೊಟ್ಟು ಬಂದಿದ್ದೆ. ಬಹುಶಃ ಅವರು ಕೊಟ್ಟಿರಬಹುದು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ. ೧೪೬
ನಂ.ಜೆ. ೨೯೧/ಎಸ್.ಆರ್.ಸಿ.ಎಮ್

ದಿ.೧೨.೬.೧೯೬೫

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಶ್ರೀ ಗುಂಡೆರಾಯರ ವರ್ಗ ಸಿಂಧನೂರಿಗೆ ಆಗಿದೆ. ಕೊಪ್ಪಳದಲ್ಲಿ ಒಬ್ಬ ಇಚ್ಛುಕ ಅಭ್ಯಾಸಿಯನ್ನು Organiser ನನ್ನಾಗಿ ಮಾಡಿರಿ ಎಂದು ನಾನು ಅವರಿಗೆ ಬರೆದಿರುವೆನು. ಆತನೊಂದಿಗೆ ಸತ್ಸಂಗ ಕುರಿತು ಪತ್ರ ವ್ಯವಹಾರ ಇಟ್ಟುಕೊಳ್ಳಬೇಕು. ಮತ್ತು ಸಮಯ ಸಿಕ್ಕಾಗ ಪ್ರವಾಸ ಮಾಡಬೇಕು. ಇಲ್ಲದಿದ್ದರೆ ವರ್ಗಾವಣೆಯಾದನಂತರ ಸತ್ಸಂಗಿಗಳು ಆಸಕ್ತಿ-ಉತ್ಸಾಹಗಳನ್ನು ಕಳೆದುಕೊಂಡು ಬಿಡುವರು.

Efficacy of Rajyoga ದ ಕನ್ನಡ ಅನುವಾದಕ್ಕೆ ಯಾರದಾದರೂ ಮುನ್ನುಡಿಯನ್ನು ಬರೆಸಬೇಕೆಂದು ಬಯುಸುತ್ತಿರುವಿರಿ. ನಿಮಗೆ ಸರಿಯೆನಿಸಿದರೆ, ಯಾರು ನಮ್ಮ ಪುಸ್ತಕವೊಂದರ ಸಮೀಕ್ಷೆಯನ್ನು Deccan Heraldನಲ್ಲಿ ಮಾಡಿರುವರೋ (ಅವರು ಚೆನ್ನಾಗಿ ಬರೆಯುವರೆಂದು ನಿಮಗೆ ವಿಶ್ವಾಸವಿದ್ದಲ್ಲಿ) ಅವರಿಂದ ಮುನ್ನುಡಿ ತೆಗೆದುಕೊಳ್ಳಬಹುದು. ಅವರ ಹೆಸರು ಬಹುಶಃ ಗುರುನಾಥರೆಂದೋ ಏನೋ ಇದೆ. ಅವರು ನಮ್ಮ ಸತ್ಸಂಗಿಗಳೊಂದಿಗೆ ಸಂಬಂಧ ಬೆಳೆಸುತ್ತಿರುವರು. ಮಾಸ್ಟರ ಸಾಹೇಬರು ಉಮೇಶನನ್ನು ನೋಡಿಕೊಳ್ಳುವುದಕ್ಕೋಸ್ಕರ ದೆಹಲಿಗೆ ಹೋಗಿದ್ದರು. ಅವರು ಸ್ವತಃ ವ್ಯಾಧಿಗ್ರಸ್ಥರಾದರು. ಕಾಲ್ಸೆಟಿಜ್ ಎಂದು ಕರೆಯುವ ಹೊಟ್ಟೆನೋವಿನಿಂದ ಅವರು ನರಳುತ್ತಿದ್ದು ಈಗ

ಗುಣಮುಖರಾಗುತ್ತಿರುವರು. ಇತ್ತೀಚಿಗೆ ಅವರು ಲಖೀಮಪೂರವಲ್ಲಿರುವರು. ಉಮೇಶನಿಗೆ ಒಬ್ಬ ವೈದ್ಯನಿಗೆ ತೋರಿಸಿರುವರು. ಮಂದ ಜ್ವರವನ್ನು ದೂರ ಮಾಡಲು ಡಾಕ್ಟರರಿಗೆ ಶಕ್ಯವಾಗಲಿಲ್ಲ. ಇನ್ನೂ ಸಮಾಚಾರ ಗೊತ್ತಾಗಿಲ್ಲ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ. ೧೪೭
ನಂ.ಜೆ. ೩೦೪/ಎಸ್.ಆರ್.ಸಿ.ಎಮ್

ದಿ.೨೫.೬.೧೯೬೫

ನನ್ನ ಪ್ರೀಯ . . . . . ಜೀ,

ದೀರ್ಘಾಯುಷಿಯಾಗಿರಿ. ಪತ್ರ ತಲುಪಿತು. ಸೊಸೆ ಮತ್ತು ಮಕ್ಕಳೂ ಸಹ ನನ್ನ ಜೊತೆ ಬೆಂಗಳೂರಿಗೆ ಹೊರಡುವರೆಂದು ಕೇಳಿ ಸಂತೋಷವಾಯಿತು. ನಾನು ಈ ವರ್ಷ ಕೋಲಾರ ಗೋಲ್ಡ ಫೀಲ್ಡ್ ನೋಡಲು ಇಚ್ಛಿಸಿರುವೆನು. ಅದಕ್ಕೋಸ್ಕರ ಅಪ್ಪಣೆ ಪಡೆಯಬೇಕಾಗುತ್ತದೆ. ಅದಕ್ಕಾಗಿ ದೊರೆ ಸ್ವಾಮಿಯವರಿಗೆ ಬರೆದಿರುವೆನು. ಆದುದರಿಂದ ನಿಮ್ಮ ಮತ್ತು ನಿಮ್ಮ ಹೆಂಡತಿ ಮಕ್ಕಳಿಗೋಸ್ಕರ ಅಪ್ಪಣೆ ಪಡೆಯುವುದಕ್ಕಾಗಿ ಅವರಿಗೆ ಬರೆದರೆ ಒಳಿತಾಗುವುದು. ಇದು ಎಲ್ಲರಿಗೂ ಒಂದು ಹೊಸ ವಿಷಯವಾಗುವುದು. ಅವಶ್ಯವಾದ ನಿರ್ದೇಶನಗಳನ್ನು ಬೆಂಗಳೂರಿಗೆ ದೊರೆಸ್ವಾಮಿಯವರಿಗೆ ಬರೆಯಬೇಕು.

ನಾನು S.P.ಗೆ ಕಾರ್ಯಕ್ರಮ ಪಟ್ಟಿ ಕಳಿಸಿರುವೆನು, ಆದರೆ ಹಳೆಯ ವಿಳಾಸಕ್ಕೆ ನಾನು ಅಲ್ಲಿಯೇ ತಂಗಬೇಕೆಂದು ಇಚ್ಛಿಸಿದ್ದೆನು. ಆದರೆ ಸತ್ಸಂಗಿಗಳಿಗೆ ದೂರವಾಗುವುದೆಂದು ಕುಮಾರಸ್ವಾಮಿಯವರ ಹತ್ತಿರ ತಂಗುವೆನು.

ವಿಜಯವಾಡದಿಂದ ಹೈದ್ರಾಬಾದಕ್ಕೆ ಹೋಗಲು ಸಾಧ್ಯವಾದರೆ ಸಿಕಂದ್ರಾಬಾದಿನಲ್ಲಿ ಕೆಲವು ಗಂಟೆಗಳ ಕಾಲ S.P.ರ ಹತ್ತಿರ ತಂಗುವೆನು ಅಥವಾ ಅಲ್ಲಿಯ ವಾಸ್ತವ್ಯ ಕಾಲಕ್ಕೆ ಮಧ್ಯದಲ್ಲಿ ಅವರ ಬಳಿ ಹೋಗುವೆನು. ಮಕ್ಕಳಿಗೆ ಆಶೀರ್ವಾದಗಳು.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ. ೧೪೮
ನಂ.ಜೆ. ೩೩೯/ಎಸ್.ಆರ್.ಸಿ.ಎಮ್ ದಿ.೨೦.೭.೧೯೬೫

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಪತ್ರ ತಲುಪಿದೆ. ಮಗು ಹುಟ್ಟಿದ್ದು ಕೇಳಿ ಬಹಳ ಸಂತೋಷವಾಯಿತು. ದೇವರು ಅವನಿಗೆ ದೀರ್ಘಾಯುಷ್ಯವನ್ನು ದಯಪಾಲಿಸಿ ಅವನನ್ನು ಸಂತೋಷ ಆನಂದದಿಂದ ಇಡಲಿ. ಕನ್ನಡದ ಅನುವಾದ ಮುದ್ರಿತವಾಗಿದೆ. ದೊರೆಸ್ವಾಮಿ ಬೆಂಗಳೂರಿಗೆ ಬಂದಿದ್ದರು. ಮತ್ತು ನನಗೆ ಪುಸ್ತಕ ತೋರಿಸಿದರು. ಮುದ್ರಣ ಚೆನ್ನಾಗಿ ಆಗಿದೆ. ಸೇಡಂಗೆ ಕಳಿಸಿ ಅದರಲ್ಲಿರುವ ತಪ್ಪುಗಳನ್ನು ತಿದ್ದಿಕೊಳ್ಳಬೇಕೆಂಬ ನಿಮ್ಮ ಅಭಿಪ್ರಾಯ ಸರಿಯಾಗಿದೆ. ಒಂದು ಮಹತ್ವದ್ದಾದ ತಪ್ಪು ಅದರಲ್ಲಿ ಏನಾಯಿತೆಂದರೆ ವರದಾಚಾರಿಯವರ Talks on Efficacy of Rajyog ನ್ನು ಮಿಷನ್ನಿನಿಂದ ಪ್ರಕಟಿಸಲಾದ ಪುಸ್ತಕಗಳ ಸೂಚಿಯಲ್ಲಿ ನಮೂದಿಸಲಾಗಿಲ್ಲ. ಒಂದು ಕಾಗದದ ತುಂಡಿನ ಮೇಲೆ ಪುಸ್ತಕ ಮತ್ತು ಅದರ ಲೇಖಕನ ಹೆಸರನ್ನು ಮುದ್ರಿಸಿ, ಪುಸ್ತಕದ ಕೊನೆಯಲ್ಲಿ ಅದನ್ನು ಅಂಟಿಸಲು ನಾನು ದೊರೆಸ್ವಾಮಿಯವರಿಗೆ ಸಲಹೆ ಕೊಟ್ಟಿರುವೆನು. ಈ ಕೆಲಸ ಬಹಳ ಅವಶ್ಯವಿದ್ದು ಇದನ್ನು ನೀವು ಎಚ್ಚರವಹಿಸಿ ಮಾಡಿಸಿರಿ. ಡಾ.ಗುರುಮೂರ್ತಿಯವರ ಮುನ್ನುಡಿಯ ಮೂಲ ಇಂಗ್ಲೀಷ ಮತ್ತು ಅದರ ಕನ್ನಡ ಅನುವಾದವನ್ನು ಮುದ್ರಿಸಿ ಲಗತ್ತಿಸಬೇಕು. ದೊರೆಸ್ವಾಮಿಯವರಿಗೆ ಸಹ ನಾನು ಹೇಳಿರುವೆನು. ಮತ್ತು ನೀವು ಸಹ ಜಾಗರೂಕತೆಯಿಂದ ಈ ಎಲ್ಲ ಕೆಲಸಗಳನ್ನು ಮಾಡಿಸಿ ಅವು ಆದುವೆಂಬ ಬಗ್ಗೆ ನೀವು ಖಚಿತಪಡಿಸಿಕೊಳ್ಳಬೇಕು. ಈ ಸಲ ಕೃಷ್ಣ ಜನ್ಮಾಷ್ಟಮಿ ೨೦ನೇ ಆಗಸ್ಟಗಿದೆ. ಜಹಗೀರದಾರರು ಬರುವೆನೆಂದು ಬರೆದಿರುವರು. ಅಲ್ಲದೆ ಆಯಿಲರೆಡ್ಡಿ ಹಾಗೂ ಕುಮಾರಸ್ವಾಮಿಯ ಹೆಂಡತಿ ಸಹ ಬರುವ ನಿರೀಕ್ಷೆಯಿದೆ.

ಮುದ್ರಣಾಲಯ ತೆಗೆಯುವ ಕೆಲಸ ಇನ್ನೂ ಇತ್ಯರ್ಥವಾಗದೆ ಉಳಿದಿದೆ. ನಮ್ಮ ಆವಶ್ಯಕತೆಯು ಈ ಮುದ್ರಣಾಲಯದ ರುಚಿ ಹಿಡಿಸಿದೆ. ೪ ವರ್ಷಗಳ ಹಿಂದೆ ಒಬ್ಬ ವ್ಯಕ್ತಿಯು ನೀವು ಮುದ್ರಣಾಲಯ ತೆಗೆಯಲಪೇಕ್ಷಿಸಿದರೆ ತಾನು ೨೦೦೦ ರೂ. ಕೊಡಲು ಸಿದ್ಧನಿರುವುದಾಗಿ ಹೇಳಿದನು. ನಾನು ಅವರಿಗೆ "ನೀವು ಇದನ್ನು ನಿಮ್ಮ ಹತ್ತಿರವೇ ಇಟ್ಟುಕೊಳ್ಳಿರಿ. ಮಿಶನ್ನಿನಲ್ಲಿ ಯಾವಾಗ ಹಣ ಶೇಖರಣೆಯಾಗುವುದೋ ಆಗ ನಾನು ಅದನ್ನು ಕೇಳಿ ಪಡೆಯುವೆನೆಂದು",ಹೇಳಿದೆನು. ಈ ಸಲ ಉತ್ಸವದಲ್ಲಿ ಆತನು ಬಲವಂತವಾಗಿ ೨೦೦೦ ರೂ. ಕೊಟ್ಟು ಬಿಟ್ಟಿರುವನು. ಆಗ ಮಿಶನ್ನಿನ ಕಾರ್ಯಕಾರಿಣೀ ಸಮಿತಿ ಈ ಠರಾವನ್ನು ಇಟ್ಟು ಪಾಸು ಮಾಡಿತು. ಇದು ಎಲ್ಲರಿಕ್ಕೂ ಸುಲಭವಾದ ಕೆಲಸವಾಗಿದ್ದಿತು. ಮತ್ತು ಕೆಲವರು ಹಣ ಕೊಡಲು ವಾಗ್ದಾನ ಸಹ ಮಾಡಿದರು. ಇದೆಲ್ಲ ಮಾತುಗಳನ್ನು ಠರಾವಿನ ಜೊತೆಗೆ ಸತ್ಸಂಗದ ಸಂಚರ ತಿಳಿಸಲಾಯಿತು. ಆದರೆ ಆಶ್ಚರ್ಯದ ಮಾತೆಂದರೆ ದಕ್ಷಿಣ ಭಾರತದ ಪ್ರತಿಯೊಂದು ಕೇಂದ್ರದಿಂದ ನಿರ್ದಿಷ್ಟ ಜನರಿದ್ದರು. ಅವರು ತಮ್ಮ ಕೇಂದ್ರಗಳಲ್ಲಿ ಇದರ ಪ್ರಸ್ತಾಪ ಸಹ

ಮಾಡಿಲ್ಲ. ಮಿಶನ್ನಿನ ಆದೇಶಗಳು, ಆದರ ವರದಿ ಮತ್ತು ಕೃಪಾಧಾರೆಯ ಸ್ಥಿತಿಯ ಬಗ್ಗೆ ತಮ್ಮ ತಮ್ಮ ಊರಲ್ಲಿದ್ದ ಎಲ್ಲ ಸತ್ಸಂಗಿಗಳಲ್ಲಿಯೂ ಅವರು ಪ್ರಸ್ತಾಪಿಸಿ ಇತರರಿಗೂ ಹೇಳಬೇಕಾಗಿತ್ತು. ನಾನು ಅದರ ಅಂದಾಜಿನ ಪ್ರತಿ ನಿಮ್ಮ ಬಳಿ ಕಳಿಸುತ್ತಿರುವೆನು. ಇನ್ನೊಂದು ಪ್ರತಿಯನ್ನು ಆಯಿಲರೆಡ್ಡಿಯವರ ಹತ್ತಿರ ಕಳಿಸುವೆ. ಸಂದರ್ಭಾನುಸಾರ ಅದರ ಪ್ರಕಾರ ಕಾರ್ಯ ನಿರ್ವಹಿಸಿರಿ. ಯಾರಿಗೂ ಬಲವಂತ ಮಾಡಕೂಡದು. ಇದರ ವರ್ಗಣಿ ಕೇವಲ ಸ್ವಸಂತೋಷದ್ದಾಗಿದೆ. ಕುಮಾರಸ್ವಾಮಿ ನನಗೆ ಏನು ಬರೆದಿರುವರೆಂದರೆ ಅಲ್ಲಿ (ಹೈದ್ರಾಬಾದಿನಲ್ಲಿ) ಅದಕ್ಕೆ ಅನುಕೂಲಕರವಾದ ಪ್ರತಿಕ್ರಿಯೆ ಕಂಡು ಬರುವುದಿಲ್ಲ. ಅದುದರಿಂದ ಅಲ್ಲಿಗೆ ಬರೆಯುವ ಅವಶ್ಯಕತೆಯಿಲ್ಲ. ಹೈದ್ರಾಬಾದಿನ ರಮೇಶ ಎನ್ನುವ ವ್ಯಕ್ತಿಯು ಬಸಂತ ಪಂಚಮಿಯಲ್ಲಿ ಇಲ್ಲಿಯೇ ಇದ್ದರು. ಅವರು ೫೦೦ ರೂ. ಕಳಿಸಿಕೊಟ್ಟಿರುವರು. ಅವರು "ನಾನು ನನ್ನ ತಂದೆಯ ಹೆಸರಿನಲ್ಲಿ ಈ ಹಣವನ್ನು ಋಷಿಕೇಶಕ್ಕೆ ಕಳಿಸುವವನಿದ್ದೆ. ಆದರೆ ಈ ೪ ದಿನಗಳಲ್ಲಿ ನನಗೆ ಇಲ್ಲಿ ಏನು ಲಾಭವಾಗಿದೆಯೋ ಅದು ಇಷ್ಟೊಂದು ವರ್ಷ ಶಿವಾನಂದರನ್ನು ಅನುಸರಿಸಿದರೂ ಆಗಿಲ್ಲ. ಆದುದರಿಂದ ಈಗ ನಾನು ಈ ಮಿಶನ್ನಿನ ಜೊತೆ ಸಂಬಂಧ ಇಟ್ಟುಕೊಂಡು ಇದನ್ನೇ ಅವಲಂಬಿಸುವೆ" ಎಂದು ಬರೆದಿದ್ದಾರೆ. ನೀವು ಬಿಜಾಪೂರದ ನಾರಾಯಣರಾಯರಿಗೆ ನಿಮ್ಮ ಕಡೆಯಿಂದ ಬರೆಯಿರಿ. ಗುಜರಾತಿ ಜನರು ಸಂಭವತಃ ಇದರಲ್ಲಿ ಏನಾದರೂ ಸಹಾಯ ಮಾಡಬಹುದು. ಮಿಕ್ಕದು ನೀವು ನಿಮ್ಮ ಶಾಖೆಯೊಳಗೆ ನಿಮಗೆ ಯೋಗ್ಯವೆನಿಸಿದ ಹಾಗೆ ಮಾಡಿರಿ.

ನಾನು ಇತ್ತೀಚಿಗೆ ಅನಿವಾರ್ಯವಾಗಿ ಪ್ರವಾಸದಲ್ಲಿದ್ದೇನೆ. ಮಾಸ್ಟರ ಸಾಹೇಬರು ದೆಹಲಿಯಲ್ಲಿ ಉಮೇಶನ ಉಪಚಾರ ಮಾಡುತ್ತಾ ಮಾಡುತ್ತಾ ಸ್ವತಃ ರೋಗ ಪೀಡಿತರಾದರು. ಈಗ ಪೂರ್ಣ ೨ ೧/೨ ತಿಂಗಳಾದ ನಂತರ ಚಿಕಿತ್ಸೆ ಪಡೆದು ಲಖೀಮಪೂರದಿಂದ ತಿರುಗಿ ಬಂದಿರುವರು. ಈಗ ಅವರ ಪ್ರಕೃತಿ ಗುಣವಾಗಿದೆ. ಆದರೆ ಒಂದು ದೊಡ್ಡ ತೊಂದರೆ ಏನಾಗಿದೆ ಎಂದರೆ ಒಂದು ಕಣ್ಣಿನಲ್ಲಿ Cataract ಹೆಚ್ಚು ಕಡಿಮೆ ಪಕ್ವವಾಗಿದೆ. ಮತ್ತು ಎರಡನೆಯ ಕಣ್ಣಿನಲ್ಲಿ ಸಹ ದೃಷ್ಟಿ ಸ್ವಲ್ಪ ಮಂದವಾಗಿದೆ. ಆದರಲ್ಲಿಯೂ ಪೊರೆ ಮೂಡುತ್ತಲಿದೆ. ಚಿ. ಉಮೇಶನು ೨-೨ ೧/೨ ತಿಂಗಳಿಂದ ಮಂದ ಜ್ವರದಿಂದ ಬಳಲುತ್ತಿದ್ದನು. ನೀವು, "ಈ ಪತ್ರ ತಲುಪುವುದರೊಳಗೆ ಉಮೇಶನ ಜ್ವರವು ಕಡಿಮೆಯಾಗುವುದು." ಎಂದು ಬರೆದಾಗಿನಿಂದ, ದೇವರ ದಯೆಯಿಂದ ಜ್ವರವು ಇಲ್ಲ. ಅವನಿಗೂ ದೊಡ್ಡಕರುಳಿನ ಊತದ ಬಾಧೆ ಇತ್ತು. ಅದು ಅವಶ್ಯ ಕಡಿಮೆಯೇನೋ ಆಗಿದೆ. ಆದರೆ ಇನ್ನೂ ಪೂರ್ತಿ ಗುಣವಾಗಿಲ್ಲ. ಅದೂ ಸಹ ದೇವರ ದಯೆಯಿಂದ ಗುಣವಾಗುವುದು. ದೆಹಲಿಯಲ್ಲಿ ಇರುವ ಛಾಯನ ಗಂಡ ಶ್ರೀ ರಾಜೇಂದ್ರಕುಮಾರ ೩ ತಿಂಗಳಿಂದ ರಜೆಯ ಮೇಲಿರುವರು. ಅವರಿಗೆ ವಿಷಮ ಜ್ವರವು ಮರುಕಳಿಸಿತ್ತು. ಅದರ ನಂತರ ಕಿವಿಯಲ್ಲಿ ಸಣ್ಣ ಸಣ್ಣ ಗುಳ್ಳೆಗಳು ಹುಟ್ಟಿದವು. ಮತ್ತು ಕಿವಿಯಲ್ಲಿ ಶಸ್ತ್ರಚಿಕಿತ್ಸೆ ಸಹ ಮಾಡಲಾಯಿತು. ಈಗ ಅವರು ಹೆಚ್ಚು ಕಡಿಮ ಗುಣವಾಗಿದ್ದಾರೆ. ಆದರೆ ಇನ್ನೂ ಬಹಳ ನಿಶ್ಯಕ್ತರಾಗಿರುವರು. ಆದರೆ ಇನ್ನೂ ಒಂದು ತಾಪತ್ರಯವೇನೆಂದರೆ ಲಖನೌದಲ್ಲಿದ್ದ ನನ್ನ ಚಿಕ್ಕ ಭಾವ ೨ ತಿಂಗಳಿನಿಂದ

ರೋಗಪೀಡಿತರಾಗಿದ್ದರು. ಈಗ ಅವರನ್ನು ಅವರ ಮಗನು ಓದುತ್ತಿರುವ ಮೆಡಿಕಲ್ ಕಾಲೇಜಿನಲ್ಲಿ ಸೇರಿಸಲಾಗಿದೆ. ಡಾಕ್ಟರರು ಕ್ಯಾನ್ಸರ ಎಂದು ಸಂಶಯಪಟ್ಟಿರುವರು. ಇದಕ್ಕಾಗಿ ಪರೀಕ್ಷೆಗಳು ನಡೆದಿವೆ. ನಾನು ನಿನ್ನೆ ಅವರನ್ನು ನೋಡಿ ಬಂದಿರುವೆನು. ದೇವರು ಅವರಿಗೆ ಆರೋಗ್ಯ ದಯಪಾಲಿಸಲಿ.

ನಾನು ದಕ್ಷಿಣಭಾರತದಲ್ಲಿ ಪ್ರವಾಸ ಮಾಡುತ್ತಿರುವಾಗ ವಿರಾಮದ ವೇಳೆಯಲ್ಲಿ ಮನುಷ್ಯನು ಪಶುತ್ವವನ್ನು ಬಿಟ್ಟು ಮನುಷ್ಯನಾಗಲು ಯಾವುದಾದರೊಂದು ಉಪಾಯವಿದೆಯೇ? ಎಂದು ವಿಚಾರ ಮಾಡತೊಡಗಿದೆ. ನಾಲ್ಕೂ ದಿಕ್ಕಿನಲ್ಲಿ, ನನ್ನಲ್ಲಿ ಮತ್ತು ಸೃಷ್ಟಿಯಲ್ಲಿ ನೋಡಿದಾಗ ನನಗೆ ಎರಡು ಡೈನಮೋ (ವಿದ್ಯುತ್‌ಜನಕ ಯಂತ್ರ)ಗಳು ಕಂಡುಬಂದವು. ಒಂದು ಡೈನಮೋ ವ್ಯಷ್ಟಿ ಜಗತ್ತನ್ನು ನಿರ್ಮಿಸುವ (ಸೃಷ್ಟಿ ನಿರ್ಮಾಪಕ) ಯಂತ್ರವಾಗಿದ್ದರೆ, ಮತ್ತೊಂದು ವಿಶ್ವವನ್ನು ನಿರ್ಮಿಸುವ ಯಂತ್ರವಾಗಿತ್ತು. ಆಳವಾಗಿ ವಿಚಾರಮಾಡಿದಾಗ ಇದು ತಿಳಿಯಿತು. ಪ್ರಪಂಚವನ್ನೇ ಮಾರ್ಪಾಡು ಮಾಡಲು ಬಯಸಿದ ಶ್ರಿ ಅರವಿಂದಜಿ ಅವರಿಗೆ ವಿಶ್ವ ಸೃಷ್ಟಿಕಾರಕ ಯಂತ್ರದ ಅರಿವು ಇರಲಿಲ್ಲವೆಂಬುದನ್ನು ನೋಡಿ ಖೇದವಾಯಿತು. ಹಾಗಿದ್ದ ಪಕ್ಷದಲ್ಲಿ ಸಂಭವತಃ ಅದರ ವಿಷಯವಾಗಿ ಬರೆದು, ತಮ್ಮ ಶಕ್ತಿಯಿಂದ ಸಂಪೂರ್ಣ ಪ್ರಪಂಚದ ಹಿತ ಮತ್ತು ಕಲ್ಯಾಣಕ್ಕಾಗಿ ಅದನ್ನು ಉಪಯೋಗಿಸುತ್ತಿದ್ದರು. ಆ ಯಂತ್ರವನ್ನು ನಾನಂತೂ ಬಿಟ್ಟೇ ಇರುವೆ. ಅದನ್ನು ಉಪಯೋಗಿಸುವ ಯೋಗ್ಯತೆ ನನಗೆ ತಿಳಿದ ಮಟ್ಟಿಗೆ ಆ "ವಿಶಿಷ್ಟ ವಿಭೂತಿಗೆ" ಮಾತ್ರ ಇದೆ. ಅವರಲ್ಲಿರುವ ಭಯವೂ ಸಹ ಏನೆಂದರೆ, ಮೊದಲನೆಯದಾಗಿ ಪ್ರತಿಯೊಬ್ಬ ಮೂರ್ಖ ಮಹಾತ್ಮನ ವಿಚಾರವು ಇಲ್ಲಿಯವರೆಗೆ ತಲುಪಲು ಸಾಧ್ಯವೇ ಇಲ್ಲ. ಈಗ ನಮ್ಮಲ್ಲಿ ಅದನ್ನು ಉಪಯೋಗಿಸಲು ಶಕ್ತರಾದಂತಹ ಇಬ್ಬರು ಮೂವರು ವ್ಯಕ್ತಿಗಳು ಸಿಗಬಹುದು. ಅಲ್ಲಿ ನಿಲ್ಲಲು ವಿಶೇಷವಾದ ಶಕ್ತಿ ಕೊಡಬೇಕಾಗುವುದರಿಂದ ನಾನು ಅವರಿಗೆ ಇದರ ಸೂಚನೆ ಕೊಡಲು ಬಯಸುವುದಿಲ್ಲ. ಏಕೆಂದರೆ ಅವರ ಜೀವನವು ಅದರಲ್ಲಿ ಎಲ್ಲಿ ಕಲೆತು ಹೋದೀತೋ ಎಂಬ ಭಯ. ಈಗ ವ್ಯಷ್ಟಿ ಜಗತ್ತನ್ನು ನಿರ್ಮಿಸುವ ಯಂತ್ರದ ಬಗ್ಗೆ ಹೇಳುವೆ. ಇದನ್ನು ನಮ್ಮ ಗುರುಮಹಾರಾಜರ ಕೃಪೆಯಿಂದ ನನಗೆ ತಿಳಿದುಕೊಳ್ಳಲು ಸಾಧ್ಯವಾಯಿತು. ಅವರೂ ಸಹ ಒಂದು ಉತ್ತಮ ಪರಿಹಾರವನ್ನು ಸೂಚಿಸಿರುವರು. ನಾನು ವಿಚಾರ ಮಾಡಿ ಕಂಡುಹಿಡಿದುದೂ ಸರಿಯಾಗಿಯೇ ಇದ್ದು ಇದನ್ನು ಗುರುಮಹಾರಾಜರೂ ಸಹ ಅನುಮೋದಿಸಿರುವರು. ಈ ಪರಿಹಾರದಲ್ಲಿ ಯಾವ ಅಪಾಯವೂ ಇಲ್ಲ. ಶ್ರಿ ಗುರುಮಹಾರಾಜರು ತೋರಿಸಿದ್ದು ಅತ್ಯಂತ ಪರಿಣಾಮಕಾರಿಯಾಗಿದೆ. ಅದರಲ್ಲಿ ಕರ್ತೃವಿಗೆ ಬಹಳಷ್ಟು ಜಾಗೃತನಾಗಿರಬೇಕಾಗುತ್ತದೆ. ನಾನು ನಿರೀಕ್ಷಣೆಗಾಗಿ ಇಬ್ಬರು ಮೂವರ ಪ್ರಕರಣಗಳನ್ನು ತೆಗೆದುಕೊಂಡಿರುವೆನು. ಆದರೆ ಈ ಕ್ರಿಯೆಯನ್ನು ಒಮ್ಮೆ ಮಾಡಿದರೆ ಅದು ಪೂರ್ತಿ ಜೀವಮಾನಕ್ಕಾಗಿ ಸಾಕಾಗುವುದೋ ಅಥವಾ ಸಮಯ ಸಮಯಕ್ಕೆ ಮಾಡಬೇಕಾಗುವುದೋ ಎಂಬುದನ್ನು ನೋಡಬೇಕಾಗಿದೆ. ಯಾರಿಗೆ ನಾನು ಪ್ರಾಣಾಹುತಿಯನ್ನು ಕೊಟ್ಟಿರುವೆನೋ, ಅವರಲ್ಲಿ ನಾನಾ ಬದಲಾವಣೆಗಳುಂಟಾಗುತ್ತಿವೆ.

ಆದರೆ ಬದಲಾವಣೆಗಳು ಯಾವ ರೀತಿಯವು ಎಂಬುದು, ಪ್ರಕರಣ ಕಣ್ಣೆದುರಿಗೆ ಬಂದಾಗಲೇ ತಿಳಿಯುವುದು. ಕೆಲವು ವಿಷಯಗಳನ್ನು ನಿಶ್ಚಿತಗೊಳಿಸಿದ ನಂತರ ಪ್ರಶಿಕ್ಷಕರಿಗೆ ಹೇಳಿಕೊಡುವೆನು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ.ಸೂ:ಈ ವಿಧಾನವು ನ್ಯೂಕ್ಲಿಯರ ಪದ್ಧತಿಯದು. ಮತ್ತೇನೆಂದರೆ ಬಿಜಾಪೂರದ ನಾರಾಯಣರಾವ ಅವರ ಸೂಚನಾನುಸಾರ ಶ್ರೀ ವಿಠ್ಠಲರಾವ, ಅಡ್ವೋಕೇಟ, ರಾಯಚೂರ ಇವರಿಗೆ ಆಧ್ಯಾತ್ಮಿಕ ಪ್ರಶಿಕ್ಷಣದ ತಾತ್ಕಾಲಿಕ ಅನುಮತಿಯನ್ನು ಕೊಟ್ಟಿರುವೆನು. ಅವರು ಒಂದು ವಾರ ನನ್ನ ಬಳಿ ಇದ್ದರು. ನಾನು ನಿಮಗೆ ಬರೆಯಲು ಮರೆತುಬಿಟ್ಟೆ. ಈ ವರ್ಷ ದಕ್ಷಿಣ ಭಾರತದ ಪ್ರವಾಸದಲ್ಲಿ ರಾಯಚೂರನ್ನು ಇಟ್ಟುಕೊಳ್ಳಬೇಕೆಂದು ನಿಮ್ಮ ಅಭಿಪ್ರಾಯವಿದೆ. ನಿಮ್ಮ ಹೇಳಿಕೆಯ ಪ್ರಕಾರ ಹೀಗೆಯೇ ಮಾಡುವೆ. ಆದರೆ ಬಿಜಾಪೂರಕ್ಕೆ ಸಹ ಹೋಗಬೇಕಾಗಿದೆ. ಆದುದರಿಂದ ಮಾರ್ಗದ ಪ್ರಯಾಣ ಇಮ್ಮಡಿಯಾಗುತ್ತದೆ. ಇದರ ಪರಿಹಾರವನ್ನು ನೀವು ಕಂಡುಹಿಡಿಯಬೇಕು. ನನಗೆ ಗುಂಡೆರಾಯರ ಹತ್ತಿರ ಹೋಗಬೇಕೆನ್ನುವ ಇಚ್ಛೆಯೂ ಇದೆ.

◆ ◆ ◆

"ಓಂ ತತ್‌ಸತ್"

ನಂ.೧೪೯
ನಂ.ಬೆ. ೩೬೭/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ.೫.೮.೧೯೬೫

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಲಖನೌದಲ್ಲಿ ಇದ್ದ ನನ್ನ ಚಿಕ್ಕ ಭಾವನು ೨೭ ಜುಲೈಗೆ ಸ್ವರ್ಗಸ್ಥನಾದನೆಂದು ಕೇಳಿ ನಿಮಗೆ ಬಹಳ ದುಃಖವಾಗುವದು. ನಮ್ಮ ಅಕ್ಕನಿಗೆ ಎರಡು ಆಘಾತಗಳು ಒಂದರ ಮೇಲೊಂದು ಆದುವು. ಆಕೆಯ ಮಗಳು ಅಗ್ನಿದುರಂತದಲ್ಲಿ ಸುಟ್ಟುಕೊಂಡು ಸತ್ತಳು ಮತ್ತು ಅದರ ೮-೧೦ ತಿಂಗಳಿನ ನಂತರ ಆ ಹುಡುಗಿಯ ತಂದೆಯ ದೇಹಾಂತವಾಯಿತು. ನಮ್ಮ ಅಕ್ಕ ಸರಕಾರಿ ನೌಕರರಿದ್ದಾರೆ. ಇದೇ ಅವರ ಜೀವನೋಪಾಯವಾಗಿದೆ. ಬೇಕಾದಷ್ಟು ಹೊಲಗಳಿವೆ. ಆದರೆ ಅಲ್ಲಿಯ ಜನ ಎಷ್ಟು ತಲೆತಿರುಕರು ಇರುವರೆಂದರೆ, ಬಂದುದೆಲ್ಲವನ್ನು ನುಂಗಲಿಚ್ಛಿಸುತ್ತಿರುವರು. ದೇವರೇ ಸಹಾಯಕನು. ಹುಡುಗನು ದಂತವೈದ್ಯಶಾಸ್ತ್ರದಲ್ಲಿ, ಕೊನೆಯ ವರ್ಷದಲ್ಲಿ ಓದುತ್ತಿರುವನು.

ಜನ್ಮಾಷ್ಟಮಿ ೩೦ನೇ ಆಗಸ್ಟಿಗೆ ಇದೆ. ದೊಡ್ಡ ಬಸಪ್ಪನು ಯಾದಗಿರಿಯಿಂದ ಬಂದಿರುನು. ಮತ್ತು ಜನ್ಮಾಷ್ಟಮಿಯವರೆಗೆ ಇರುವ ಸಾಧ್ಯತೆಯಿದೆ. ಒಬ್ಬ ಸ್ಕಾಟಲ್ಯಾಂಡ ನಿವಾಸಿ (ಸನ್ಯಾಸಿ) ನನ್ನ ಹತ್ತಿರ ತಂಗಿರುವನು. ಈತನು ೨-೩ ವರ್ಷಗಳಿಂದ ಮಹೇಶಯೋಗಿಯ ಪದ್ಧತಿಯನ್ನು ಅನುಸರಿಸುತ್ತಿರುವನು. ಸ್ಕಾಟಲ್ಯಾಂಡದಿಂದ ಬಂದು ೬ ತಿಂಗಳಾಯಿತು. ಮತ್ತು ಹೃಷಿಕೇಶದಲ್ಲಿ ಸ್ವಾಮಿ ಶಿವಾನಂದರ ಆಶ್ರಮದಲ್ಲಿ ತಂಗಿದ್ದನು. M.D.ಜಾಹಾಗೀರದಾರರು ಬರಲಿರುವರು. ನಿಮ್ಮ ಒಪ್ಪಿಗೆಯಿದ್ದರೆ ಮತ್ತು ಮಿಶನ್ನಿನ ಅಭ್ಯಾಸಿಗಳು ಅವರನ್ನು ಕಲೆತುಕೊಳ್ಳಲು ಸಾಧ್ಯವಾದರೆ, ನಾನು ಅವರಿಗೆ ಪ್ರಶಿಕ್ಷಣದ ತಾತ್ಕಾಲಿಕ ಅನುಮತಿ ಕೊಡುತ್ತೇನೆ. ಇವರಲ್ಲಿ ನನ್ನ ಯಾವ ವಿಚಾರವೂ ಇಲ್ಲ. ಇದು ನನ್ನ ಒಂದು ಸಲಹೆ. ನೀವು ನಿರ್ಧಾರ ಮಾಡಿ ನನಗೆ ತಿಳಿಸಿರಿ. ನನ್ನ ಹಿಂದಿನ ಪತ್ರ, ಮುದ್ರಣಾಲಯದ ಅಂದಾಜುಪತ್ರದ ಜೊತೆಯಲ್ಲಿ ಬಹುಶಃ ನಿಮಗೆ ತಲುಪಿರಬಹುದು. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೫೦
ನಂ.ಜೆ.೪೦೧/ಎಸ್.ಆರ್.ಸಿ.ಎಮ್

ಶಾಹಜಹಾನ್‌ಪೂರ್
ದಿ.೧.೯.೧೯೬೫

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ದೇವರ ಕೃಪೆಯಿಂದ ನೀವು ಸುರಕ್ಷಿತವಾಗಿ ಹಾಸನ ತಲುಪಿರಬಹುದು. ಮತ್ತು ಮಕ್ಕಳೆಲ್ಲ ಸಂತೋಷ ಆನಂದದಿಂದಿರಬಹುದು. ಬೀದರದಿಂದ ಗುಜರಾಥಿಯ ಪತ್ರ ಬಂದಿತ್ತು. ನೀವು ಸಹ ಬಹುಶಃ ಅದನ್ನು ಓದಿರಬಹುದು. ಅದರಲ್ಲಿ ಒಂದು ಮಾತು ಏನಿತ್ತೆಂದರೆ, ಬೀದರದಲ್ಲಿದ್ದ ತಪ್ಪು ತಿಳುವಳಿಕೆಯನ್ನು ಸರ್ನಾಡಜಿಯವರು ತಿಳಿಸಿಹೇಳಿ ದೂರ ಮಾಡಿದ್ದರು. ಆದರೆ ಇನ್ನೂ ಹೃದಯದಿಂದ ಅಳಿಸಿಲ್ಲ. ಹೃದಯದಿಂದ ಅಳಿಸಲಾರದಷ್ಟು ಅದೆಂಥ ದೊಡ್ಡ ಮಾತು ಇರಬಹುದು? ಅದನ್ನು ಕೇಳಿ ನನಗೆ ಖೇದವಾಯಿತು. ನಾನು ತಿಳಿದ ಹಾಗೆ ಇದು ಗುಜರಾಥಿಯ ಹೃದಯವೇ ಇದೆ. ಅದರಲ್ಲಿ ಇನ್ನೂ ಕಸರು ಉಳಿದಿದೆ. ಆದುದರಿಂದ ನಾನು ಅವರಿಗೆ ಒಂದು ಪತ್ರ ಬರೆದಿರುವೆನು. ನಿಮ್ಮ ಹತ್ತಿರ ಎಲ್ಲ ದಾಖಲಾತಿ ಇಡುವುದಕ್ಕಾಗಿ ನಾನು ಅದರ ಪ್ರತಿಯನ್ನು ನಿಮಗೆ ಕಳಿಸುತ್ತಿರುವೆನು.

ಮದ್ರಾಸಿಗೆ ಶೇಷಾದ್ರಿಯ ವರ್ಗಾವಣೆಯಾಗಿದೆ. ಆದರೆ ಮಕ್ಕಳೆಲ್ಲರು ಇನ್ನೂ ತಿರುಚಿಯಲ್ಲಿಯೇ ಇರುವರು. ಆದುದರಿಂದ ತಿರುಚಿಯಲ್ಲಿ ಸಹ ನನ್ನ ಕಾರ್ಯಕ್ರಮ

ಇರಬೇಕೆಂದು ಅವರು ಹೇಳಿರುವರು. ಶೇಷಾದ್ರಿಯ ಹೆಂಡತಿ ಬಹಳ ಅನಾರೋಗ್ಯದಿಂದ ಇರುವರು. ಮತ್ತು ಈ ದಿನಗಳಲ್ಲಿ ಆಕೆಯ ಚಿಕಿತ್ಸೆಗೋಸ್ಕರ ತಮ್ಮ ಮನೆಗೆ ಹೋಗಿರುವರು. ಸ್ವಾಮಿ ಜಾನರು ೬ನೆಯ ಸೆಪ್ಟೆಂಬರಿಗೆ ಪುನಃ ಬರುತ್ತಿರುವರು. ನನ್ನ ಬಳಿ ಇದ್ದಾಗ ಅವರಿಗೆ ನೆಮ್ಮದಿ ಅನಿಸುತ್ತದೆ. ಆದರೆ ಅವರು ಸುಮ್ಮನಿರಲು ಇಚ್ಛಿಸುವುದಿಲ್ಲ. ಅವರಿಗೆ ಕೊಡಲು ಯೋಗ್ಯವಾದ ಕೆಲಸ ಕಂಡುಬರಲೊಲ್ಲದು.

ಈ ಒಂದು ವಾರದೊಳಗೆ ನನ್ನ ಹೃದಯದಲ್ಲಿ ಒಂದು ವಿಚಾರ ಬಂದಿದೆ. **ಅದೇನೆಂದರೆ ಪ್ರತಿಯೊಬ್ಬ ಸತ್ಸಂಗಿಯು ಈ ಮಿಶನನ್ನು ತನ್ನದೆಂದು ಭಾವಿಸಿದರೆ ಮಿಶನ್ನಿನಲ್ಲಿ ಎಷ್ಟು ತೊಂದರೆಗಳು ಆಗುತ್ತಿವೆಯೋ ಅವೆಲ್ಲವೂ ದೂರವಾಗುವವು. ಮಕ್ಕಳನ್ನು ನಮ್ಮ ಮಕ್ಕಳೆಂದು ತಿಳಿದಾಗ ಅವರ ಸುಖಕ್ಕಾಗಿ ನಾವು ಎಲ್ಲ ಕಷ್ಟಗಳನ್ನೂ ಸಹಿಸಿಕೊಳ್ಳುತ್ತೇವೆ. ಆದುದರಿಂದ ಮಿಶನ್ನಿನ ಎಲ್ಲ ಪ್ರಶಿಕ್ಷಕರಿಗೆ ಇದನ್ನು ಸೂಚಿಸಿರಿ. ಅವರೆಲ್ಲರೂ ಸತ್ಸಂಗದಲ್ಲಿ ಕಾಲಕಾಲಕ್ಕೆ ಎಲ್ಲರಿಗೂ ಈ ವಿಷಯವನ್ನು ಮನದಟ್ಟಾಗುವ ಹಾಗೆ ತಿಳಿಹೇಳಲಿ. ಈ ವಿಷಯಕ್ಕೆ ನೀವು ಇನ್ನೂ ವಿಚಾರ ಮಾಡಿದಾಗ ಅದರ ಲಾಭಗಳು ಕಂಡುಬರುತ್ತವೆ. ಮಾತೇನೊ ಬಹಳ ಚಿಕ್ಕದಾಗಿದೆ.**

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ.ಸೂ: ಬಿಜಾಪೂರದ ಶ್ರೀ ನಾರಾಯಣರಾಯರಿಗೆ ಸ್ವಲ್ಪ ಉತ್ತೇಜನ ಕೊಡುತ್ತ ಹೋಗಿರಿ. ಆದರಿಂದ ಅವರು ಸತ್ಸಂಗವನ್ನು ಬೆಳೆಸಲು ಪ್ರಯತ್ನ ಮಾಡುತ್ತಿರಲಿ.

◆ ◆ ◆

"ಓಂ ತತ್‌ಸತ್"

ನಂ. ೧೫೧
ನಂ.ಬಿ. ೫೭೧/ಎಸ್.ಆರ್.ಸಿ.ಎಮ್

ಶಾಹಜಹಾನ್‌ಪೂರ
ದಿ.೧೫.೧೦.೧೯೬೫

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಪತ್ರ ಬಂದಿತು. ಶ್ರೀ ರಾಘವೇಂದ್ರರಾವ, **ಸುಪರಿಂಟೆಂಡೆಂಟ್ ಆಫ್ ಪೋಲಿಸ ಸಿಕಂದರಾಬಾದಿನಲ್ಲಿ ಮನೆ ತೆಗೆದುಕೊಂಡಿರುವರು. ಅದು** ಸತ್ಸಂಗಿಗಳಿಗೆ ದೂರವಾಗುವುದು. ಆದುದರಿಂದ ಕುಮಾರಸ್ವಾಮಿಯವರ ಹತ್ತಿರ ತಂಗುವೆನು. ನೀವು ರಜ ತೆಗೆದುಕೊಂಡಿರುವಿರಿ. ಗಳಿಕೆಯ ರಜೆ ಹೆಚ್ಚು ಸಮಂಜಸವಾಗಲಿಕ್ಕಿಲ್ಲ. ಇಂಥ

ಪರಿಸ್ಥಿತಿಯಲ್ಲಿ ನೀವು ಬೇಸಿಗೆಯ ರಜೆಗೆ ಬಿಜಾಪೂರ ಮೈಸೂರಿನಲ್ಲಿ ಅವಶ್ಯವಾಗಿ ಭೇಟಿಯಾಗಿರಿ. ಈ ಕೆಲಸಕ್ಕೆ ಕಿರುಕಳ ರಜೆ ಸಾಕಾಗಬಹುದು. ಇದಕ್ಕೂ ಹೆಚ್ಚಿನ ಸ್ಥಳಗಳಲ್ಲಿ ನೀವು ಬರುವುದಾದರೆ ನನಗೆ ಹೆಚ್ಚಿನ ನೆಮ್ಮದಿ ಸಿಗುವುದು. ಕಾರ್ಯಕ್ರಮದ ಪಟ್ಟಿ ಕಳಿಸುತ್ತೇನೆ. ಮಕ್ಕಳಿಗೆ ನಾನು ಬರುವುದನ್ನು ತಿಳಿಸಿರಿ. ಅವರೆಲ್ಲರಿಗೆ ನನ್ನ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

**ವಿ.ಸೂ:**ಮತ್ತೆ ನಾನು ತಂಗಲಿರುವ ಪ್ರತಿಯೊಂದು ಕೇಂದ್ರಕ್ಕೂ ನನ್ನ ಕಾರ್ಯಕ್ರಮದ ಪ್ರತಿಯನ್ನು ಕಳಿಸುತ್ತಿರುವೆನು. ಈ ಸಲ ರೇಲ್ವೆ ವೇಳಾಪಟ್ಟಿ ಬೇಗ ಸಿಕ್ಕಿತು. ಆದುದರಿಂದ ಕಾರ್ಯಕ್ರಮ ಬೇಗ ಸಿದ್ಧವಾಯಿತು.

◆ ◆ ◆

"ಓಂ ತತ್‌ಸತ್"

ನಂ. ೧೫೨
ನಂ. ಕೆ-೪೦೩/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ
ದಿ.೨೪.೧೦.೧೯೬೬

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಪತ್ರ ತಲುಪಿತು. ದಕ್ಷಿಣ ಭಾರತದ ಪ್ರವಾಸದ ನಂತರ ಇದು ನಿಮಗೆ ಬರೆಯುತ್ತಿರುವ ಮೊದಲನೆಯ ಪತ್ರ. ಈಗ ಪುನಃ ಪ್ರವಾಸದ ಸಮಯ ಬಂದಿದೆ. ನನ್ನ ಪ್ರಕೃತಿ ಸುಮಾರು ೧ ತಿಂಗಳಿನಿಂದ ಸರಿಯಾಗಿಲ್ಲ. ಅದೇ ಹಳೆಯ ನೋವಿನ ತೊಂದರೆ ಇದೆ. ಅದರ ಜೊತೆಯಲ್ಲಿ ಯಾವಾಗಲಾದರೂ ಹೊಟ್ಟೆ ಝಾಡಿಸುತ್ತಿರುತ್ತದೆ. ಮೊದಲಿಗಿಂತ ಗುಣಮುಖವೇನೋ ಅವಶ್ಯವಾಗಿದೆ. ಆದರೆ ನಿಃಶಕ್ತತೆ ಹಾಗೆಯೇ ಇದೆ. ಮತ್ತು ನೋವು ಬಹಳ ಸಲ ಅಧಿಕವಾಗುತ್ತದೆ. ಅಂತೂ ೧೯ ನವ್ಹೆಂಬರದಿಂದ ಮತ್ತೆ ದಕ್ಷಿಣ ಭಾರತದ ಪ್ರವಾಸದ ಕಾರ್ಯಕ್ರಮವನ್ನು ರೂಪಿಸಿರುವೆನು. ೨೯ ನವ್ಹೆಂಬರಿಗೆ ದೆಹಲಿಯಿಂದ ಪ್ರಯಾಣವಿದೆ. ಅದನ್ನು ಇನ್ನೂ ಖಚಿತಪಡಿಸಿಲ್ಲ. ಕಾರಣವೆಂದರೆ ಆರೋಗ್ಯ ಮತ್ತು ನೋವು ಇವೆರಡರ ಸ್ಥಿತಿಯನ್ನು ಇನ್ನೂ ನೋಡಬೇಕಾಗಿದೆ. ನಾನು ಈ ಸಲ ಗುಲ್ಬರ್ಗಾ, ಬಿಜಾಪೂರ ಬಿಟ್ಟಿರುವೆನು. ಏಕೆಂದರೆ ನೋವಿನಿಂದ ಬಿಡುಗಡೆಯಾದರೂ ಸಹ ಇಷ್ಟು ಪ್ರಯಾಣ ಮಾಡುವುದು ಕಷ್ಟವಾಗುವುದು. ಬಿಜಾಪೂರ ಮತ್ತು ಮೈಸೂರು ಬಿಟ್ಟು ಬಿಡುವ ನಿಮ್ಮ ಅಭಿಪ್ರಾಯವು ಸರಿಯಾಗಿಯೇ ಇತ್ತು. ಅವರು ಕಲೆ ಹಾಕಿರುವ ಈ ೨೦ ಜನ ಸತ್ಸಂಗದಲ್ಲಿ ಇರಲು ಯೋಗ್ಯರಲ್ಲವೆಂದು ನಾನು ನಿಮಗೆ ಹೇಳಿದ್ದುದು ಜ್ಞಾಪಕವಿರಬಹುದು. ನಾನು ಕೇವಲ ನಾಲ್ಕಾರು ಜನರನ್ನು ಬಯಸುತ್ತಿದ್ದೆ. ಎಲ್ಲ ಗುಬ್ಬಿಗಳು ಹಾರಿಹೋದದ್ದು ಒಳ್ಳೆಯದಾಯಿತು. ಈಗ ನಾನು ಅಲ್ಲಿ ನಾಲ್ಕಾರು ಜನರಿಂದ ಮಿಶನ್ನನ್ನು ಮತ್ತೆ ಆರಂಭ ಮಾಡಬೇಕಾಗಿದೆ.

ಮತ್ತು ಇದಕ್ಕೆ ಯಾವ ಉಪಾಯ ನಾನು ಯೋಜಿಸಿದ್ದೇನೋ ಅದನ್ನು ನಿಮಗೆ ಮೈಸೂರಿನಲ್ಲಿಯೇ ಹೇಳಿಕೊಟ್ಟಿದ್ದೆನು. ಗೋಪಾಲರಾಯರಿಂದ ಕೆಲಸ ತೆಗೆದುಕೊಳ್ಳಲಾರಂಭಿಸಿರಿ. ಮಿಕ್ಕದ್ದು ಭೇಟಿಯಾದಾಗ ಚರ್ಚಿಸುವೆನು.

ಗುಜರಾತಿಯು ಈ ಸಲ ಬಿಜಾಪೂರಕ್ಕೆ ಹೋಗುವುದಕ್ಕಾಗಿ ಏತಕ್ಕೆ ಬಲವಂತ ಮಾಡುತ್ತಿದ್ದನೆಂದರೆ ಹುಬ್ಬಳ್ಳಿಯಲ್ಲಿ ಆತನ ತಮ್ಮನ ಹತ್ತಿರ, ನಾನು ಔತಣದೂಟ ಮಾಡಬಹುದು. ಇದನ್ನು ನೀವು ಪ್ರೇಮವೆಂದಾದರೂ ತಿಳಿಯಿರಿ ಅಥವಾ ಬುದ್ಧಿಚಾತುರ್ಯವೆಂದಾದರೂ.

ನಿಮ್ಮ ಹತ್ತಿರ ಎಷ್ಟು ಸರಳವೆನಿಸುತ್ತದೆಯೋ ಬೇರೆ ಕಡೆಗೆ ಅಷ್ಟೇ ಕಷ್ಟ ಎನ್ನುವುದು ಸರಿ ಇದೆ. ಏಕೆಂದರೆ ಮಕ್ಕಳೆಲ್ಲ ಸುಪರಿಚಿತರಾಗಿದ್ದಾರೆ. ಮತ್ತು ಅವರ ಮಾತೇನೂ ಅರ್ಥವಾಗುವುದಿಲ್ಲ. ಆದರೂ ವಿರಾಮ ವೇಳೆಯಲ್ಲಿ ಅವರ ಜೊತೆಯಲ್ಲಿ ಚೇಷ್ಟೆ ಮಾಡುತ್ತಿರುತ್ತೇನೆ. ಅದರಿಂದ ಮನಸ್ಸು ಸಂತೋಷವಾಗಿರುತ್ತದೆ. ಆದಕಾರಣ ನಿಮ್ಮ ಹತ್ತಿರವೇ ತಂಗಲು ಮನಸ್ಸು ಬಯಸುತ್ತದೆ. ಆದರೆ ಸ್ಥಳಾಭಾವದಿಂದ ಶ್ರೀ ವಿಠ್ಠಲರಾಯರ ಹತ್ತಿರ ತಂಗುವುದೇ ಯೋಗ್ಯವಾಗಿದೆ. ಆದಾಗ್ಯೂ ನಿಮ್ಮ ನಿರ್ಣಯ ನನಗೆ ಒಪ್ಪಿಗೆ. ಶ್ರೀಕಂಠಯ್ಯನವರು ನನಗೆ ಹೋದವರ್ಷ ತಿರುಪತಿಯಲ್ಲಿ ಭೆಟ್ಟಿಯಾಗಿದ್ದರು. ಅವರಲ್ಲಿ ಗ್ರಹಿಸುವ ಸಾಮರ್ಥ್ಯ ಸ್ವಲ್ಪಾದರೂ ಇದ್ದಿದ್ದಿಲ್ಲ. ಮತ್ತು ಅದರ ಕಾರಣವನ್ನು ಅವಂಗೆ ತಿಳಿಸಲಾಗಿತ್ತು. ಅವರು ಅದನ್ನು ಒಪ್ಪಿಕೊಂಡಿದ್ದರು ಕೂಡ. ಅವರು ನಿಮ್ಮ ಹತ್ತಿರ ಕೂಡುತ್ತಿರಬಹುದು. ನೀವು ಎರಡು-ಮೂರು ಬೈಠಕಗಳಲ್ಲಿ ಇದನ್ನು ದೂರ ಮಾಡಬಲ್ಲಿರಿ. ಅವರು ಬಹಳ ಉತ್ತಮ ವ್ಯಕ್ತಿ ಮತ್ತು ಮಿಶನ್ನಿನಲ್ಲಿ ತೆಗೆದುಕೊಳ್ಳಲು ಯೋಗ್ಯರಾದವರು.

ದೇವರ ದಯೆಯಿಂದ ಹುಡುಗಿಯರಿಗೆ ಒಳ್ಳೆಯ ವರ ಹಾಗೂ ಮನೆ ಸಿಗಲಿ. ನೀವು ಚಿಂತೆ ಮಾಡಬೇಕಾಗಿಲ್ಲ. ಹೀಗೆಯೇ ಆಗುವುದು. ಜನರು ನಿಮ್ಮ ಚರಣ ಸ್ಪರ್ಶ ಮಾಡುವುದರಿಂದ ನಿಮಗೆ ನಾಚಿಕೆಯಾಗುತ್ತದೆ ಎಂದು ನೀವು ಬರೆದಿರುವಿರಿ. ಇದೇ ಮಾತನ್ನು ನಾನು ನನ್ನ ಪೂಜ್ಯ ಲಾಲಾಜಿಯವರಿಗೆ ಹೇಳಿದ್ದೆನು. ಅವರು ಬಹಳ ಉತ್ತಮವಾದ ಉತ್ತರ ಕೊಟ್ಟರು. ಬಹುಶಃ ಅವರು ಕೇಳಿದ್ದೇನೆಂದರೆ "ಚರಣ ಸ್ಪರ್ಷ ಮಾಡಿದಾಗ ನಿನಗೆ ಸಂತೋಷವಾಗುತ್ತದೆಯೋ ಅಥವಾ ಅಸಂತೋಷವೋ ಅಥವಾ ಸ್ವಪ್ರತಿಷ್ಠೆಯ ಭಾಸ ಮತ್ತು ದೊಡ್ಡಸ್ತಿಕೆಯ ಭಾವವೋ"? ನಾನು "ಅವುಗಳ ಪೈಕಿ ಯಾವ ಭಾವನೆಯು ಉಂಟಾಗುವುದಿಲ್ಲ. ಒಂದು ಮೂರ್ತಿಯ ಹಾಗೆ ನಿಂತಿರುತ್ತೇನೆ" ಎಂದು ಉತ್ತರ ಕೊಟ್ಟೆ. ಆಗ ಅವರು ಹೀಗೆ ಹೇಳಿದರು. "ಹಾಗಿದ್ದಾಗ ಯಾರ ಚರಣ ಸ್ಪರ್ಶ ಮಾಡಬೇಕಾಗಿತ್ತೋ ಅವರ ಚರಣಸ್ಪರ್ಶ ಮಾಡಿದ್ದಾರೆ." ನಮ್ಮಲ್ಲಿ ವಿಶೇಷವಾಗಿ ಮಹಾತ್ಮರ ಹಾಗೂ ತಮಗಿಂತ ದೊಡ್ಡವರ ಚರಣ ಸ್ಪರ್ಶ ಮಾಡುವ ಪುರಾತನ ಪ್ರಣಾಳಿ ಇದೆ. ಇದರ ಮೇಲೆ ಒಂದು ಸಂಪೂರ್ಣ ಲೇಖನ ಬರೆಯಬೇಕೆಂದಿದ್ದೆ. ಆದರೆ ಪತ್ರ ಬಹಳ

ದೀರ್ಘವಾಗುವುದೆಂದು ಅದನ್ನು ಕೈ ಬಿಟ್ಟೆ. ಅಲ್ಲಿ ಬಂದಾಗ ಜ್ಞಾಪಕವಿದ್ದರೆ ನಾನು ಎಲ್ಲ ತಿಳಿಹೇಳುವೆನು. ಹಾಫಿಜ್ ಅವರು ಒಂದು ಭವಿಷ್ಯ ನುಡಿದಿರುವರು. ಅದು ಈಗ ನಿಜವಾಗುತ್ತಿದೆ. ಅದೆಂದರೆ, ಕತ್ತೆಯ ತಲೆಗೆ ಕಿರೀಟ ಇಡುವ ಕಾಲ ಬರುತ್ತದೆ. ಅಂದರೆ ಅಯೋಗ್ಯರ ಸನ್ಮಾನವಾಗುವುದು. ಈಗ ಅದು ಆಗುತ್ತಿದೆ. ತಾರತಮ್ಯ ಜ್ಞಾನ ಹೋಗಿಬಿಟ್ಟಿದೆ. ನೀವು ದೇವರ ಕೃಪೆಯಿಂದ ಚರಣಸ್ಪರ್ಶಕ್ಕೆ ಪೂರ್ಣ ಯೋಗ್ಯರಾಗಿರುವಿರಿ. ಮತ್ತು ಚರಣಸ್ಪರ್ಶ ಮಾಡುವವರಿಗೆ ಆ ಸ್ಪರ್ಶದಿಂದ ಲಾಭವೂ ಆಗುತ್ತಿದೆ. ಆದುದರಿಂದ ಇದೇ ನೆಪದಿಂದ ಅವರ ಪಾಲು ಅವರಿಗೆ ದೊರೆಯಲು ಬಿಡಿರಿ. ಮಕ್ಕಳಿಗೆ ಆಶೀರ್ವಾದ.

ಕಿಶನ್‌ರಾವಜಿ ಬಿಜಾಪೂರದಲ್ಲಿ ಬೆಟ್ಟಿಯಾಗಿದ್ದರು. ಅವರು ಪತ್ರ ಬರೆದು ನನ್ನ ಅನಿಸಿಕೆಯನ್ನು ಸರಿಯೆಂದು ಹೇಳಿದ್ದರು. ಇನ್ನೂ ಸುಧಾರಿಸಿದಂತೆ ಕಾಣುವುದಿಲ್ಲ. ಮತ್ತು ಸತ್ಸಂಗದಲ್ಲಿ ಕೂಡಿಸಿಕೊಳ್ಳಲು ಯೋಗ್ಯರಾಗಿ ಉಳಿದಿಲ್ಲ. ನಾನು ಅವರಿಗೆ ರಾಘವೇಂದ್ರರಾವ ಹೇಳಿದಂತೆ ಮಾಡಿರಿ ಎಂದು ತಿಳಿಸಿದ್ದೆ. ಈಗಿದ್ದ ಪರಿಸ್ಥಿತಿಯಲ್ಲಿ ನನ್ನಿಂದ ಏನೂ ಲಾಭ ಸಿಗುವುದಿಲ್ಲ. ತನ್ನ ನಡವಳಿಕೆಯನ್ನು ಆತನು ಇನ್ನೂ ಬಿಟ್ಟಿಲ್ಲ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆◆◆

"ಓಂ ತತ್‌ಸತ್"

ನಂ.೧೫೩.
ನಂ.ಕೆ-೫೩೭/ಎಸ್.ಆರ್.ಸಿ.ಎಮ್. ದಿ.೨೮.೧೧.೧೯೬೬.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನನ್ನ ಆರೋಗ್ಯ ಇನ್ನೂ ಸುಧಾರಿಸಿಲ್ಲ. ಆದರೂ ಮೊದಲಿಗಿಂತ ಸ್ವಲ್ಪ ಗುಣವಾಗಿಯೇ ಇರುವೆನು. ಯಾರು ನಿರಂತರ ಸ್ಮರಣೆ ಮಾಡಿದರೋ ಮತ್ತು ಅವರಿಗೆ ಏನೇನು ವಿಷಯ ಎದುರಿಗೆ ಬಂದವೋ, ಆತನನ್ನು ಆಳವಾಗಿ ಪರಿಶೀಲಿಸಬೇಕಾಗಿದೆ. ಇದೊಂದು ಆಶ್ಚರ್ಯಕರ ವಿಷಯ. ಇಲ್ಲಿಯವರೆಗೆ ಕೇಳಿಲ್ಲ ಮತ್ತು ಯಾರ ಅನುಭವದಲ್ಲಿಯೂ ಬಂದಿಲ್ಲ. ಅವರು ಶಂಕರನ ಉಪಾಸಕರಾಗಿದ್ದರೋ ಹೇಗೆ?

ನಾನು "ಸಹಜಮಾರ್ಗ ಫಿಲಾಸಫಿ"ಯ ಮೇಲೆ ಕಾಪಿರೈಟ ತೆಗೆದುಕೊಂಡಿರುವೆನು. ಮತ್ತು "ಸಹಜಮಾರ್ಗ ರೂಪರೇಷೆ" ಯಲ್ಲಿ ಕೂಡಿಸಿ ಮುದ್ರಿಸುವೆನು. ಈ ವಿಷಯವನ್ನು ಅದರಲ್ಲಿ ಸೇರಿಸುವ ಕನ್ನಡ ಅನುವಾದವನ್ನು ಮುದ್ರಿಸಬೇಕಾಗಿಲ್ಲ.

ಅಮೇರಿಕೆಯ James Kidd ಎಂಬುವವರು ಒಂದು ಮೃತ್ಯುಪತ್ರ ಬರೆದಿರುವರು. ಅದು ೨೮ ಅಕ್ಟೋಬರ ೧೯೬೭ರ National Herald ನಲ್ಲಿ ಪ್ರಕಟವಾಗಿದೆ. ಏನೆಂದರೆ, ಮರಣ ಸಮಯದಲ್ಲಿ ಯಾವ ಆತ್ಮವು ದೇಹವನ್ನು ಬಿಡುತ್ತದೆಯೋ ಅದರ ಬಗ್ಗೆ ವೈಜ್ಞಾನಿಕ ಪ್ರಮಾಣ ಕೊಡುವವರಿಗೆ ಎರಡು ಲಕ್ಷ ಡಾಲರ್ ಕೊಡಲಾಗುವುದು. ಮತ್ತು ಆತ್ಮದ ಇರುವಿಕೆಯ ಬಗ್ಗೆ ಸಂಶೋಧನ ಮಾಡುವವನಿಗೆ ಸಹ ಈ ಹಣ ಕೊಡಲಾಗುವುದು. ಇದರ ಸಭೆ ೧೮ ಮಾರ್ಚ ೧೯೬೭ರಿಂದ ಆರಂಭವಾಗುವುದು. ಇದರಲ್ಲಿ ಎಂಟು ಜನರು ಸ್ಪರ್ಧಿಸಲಿರುವರು. ನೀವು ಸಹ ಪ್ರಯತ್ನ ಮಾಡಿರಿ. ಸಿಕಂದರಾಬಾದಿನಲ್ಲಿ C.ರಾಘವೇಂದ್ರರಾವ್ ತನ್ನ ಹೆಂಡತಿ ಮಕ್ಕಳ ಜೊತೆಯಲ್ಲಿ ೨೬ ಡಿಸೆಂಬರ ೧೯೬೭ಕ್ಕೆ ಶಾಹಜಹಾನಪುರಕ್ಕೆ ಬರಲಿದ್ದಾರೆ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೫೪

ದಿ.೫.೧.೧೯೬೭

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಎರಡನೆಯ ಜನವರಿ ೧೯೬೭ರಂದು ಸಾಯಂಕಾಲ ೮-೫೦ ನಿಮಿಷಕ್ಕೆ ಶ್ರೀ ಈಶ್ವರ ಸಹಾಯ ಅವರು (ಮಾಸ್ಟರ ಸಾಹೇಬರು) ಸಂಪೂರ್ಣ ಮುಕ್ತರಾದರು. ಮತ್ತು ಪ್ರಪಂಚದಿಂದ ಋಣಮುಕ್ತರಾಗಿ ಹೋದರು. ಅವರೊಬ್ಬರೇ ಮಿಶನ್ನಿನ ಪೂರ್ತಿ ಕೆಲಸ ಮತ್ತು ಮುದ್ರಣಯಂತ್ರವನ್ನು ಸಂಭಾಳಿಸಿಕೊಂಡಿದ್ದರು. ಈಗ ನಾನು ತೊಂದರೆಗೊಳಗಾಗಿರುವೆನು.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ಸಂ.೧೫೫
ನಂ.೮೯/ಎಸ್.ಆರ್.ಸಿ.ಎಮ್.

ದಿ.೨೫.೧೧.೬೭

ಪ್ರೀಯ ಬಂಧು,

ಆಶೀರ್ವಾದ. ಈ ವರ್ಷ ಬಸಂತ ಪಂಚಮಿಯ ಉತ್ಸವವು ೧೩ ಫೆಬ್ರುವರಿಯಿಂದ ೧೫ ಫೆಬ್ರುವರಿ ೧೯೬೭ರವರೆಗೆ ಇರುವುದು.

ಇದರಲ್ಲಿ ಪಾಲುಗೊಳ್ಳಲು ನೀವು ಎಲ್ಲ ಬಂಧುಗಳನ್ನು ಆಮಂತ್ರಿಸಿರಿ. ಶ್ರೀ ಗುಂಡೆರಾಯರಿಗೆ ಸಿಂಧನೂರಿನ ಪತ್ತೆಯ ಮೇಲೆ ಆಮಂತ್ರಣ ಕಳಿಸಿರುವೆನು. ಏಕೆಂದರೆ ಅವರ ಇನ್ನೊಂದು ವಿಳಾಸ ರಜಿಸ್ಟರಿನಲ್ಲಿ ನೊಂದಾಯಿಸಿಲ್ಲ. ನೀವು ಸಹ ಅವರಿಗೆ ಬರೆಯಿರಿ.

ಯಾರಿಗೆ ಷಾಹಜಹಾನ್‌ಪೂರಕ್ಕೆ ಬರಲಾಗುವುದಿಲ್ಲವೋ ಅವರು ಒಂದು ಕಡೆ ಕಲೆತು ಈ ಕೆಳಗೆ ನಮೂದಿಸಿದ ವೇಳೆಗಳಲ್ಲಿ ಪೂಜೆಗೆ ಕುಳಿತರೆ ಒಳ್ಳೆಯದಾಗುವುದು.

೧೩ ಫೆಬ್ರುವರಿ: ಬೆಳಗ್ಗೆ ೬-೩೦ರಿಂದ ೭-೩೦ರವರೆಗೆ
ಸಾಯಂಕಾಲ ೬-೨೦ರಿಂದ ೭-೩೦ರವರೆಗೆ

೧೪ ಫೆಬ್ರುವರಿ: ಬೆಳಗ್ಗೆ ೬-೩೦ರಿಂದ ೭-೩೦ರವರೆಗೆ
ಸಾಯಂಕಾಲ ೬-೩೦ರಿಂದ ೭-೩೦ರವರೆಗೆ

೧೫ ಫೆಬ್ರುವರಿ: ಬೆಳಗ್ಗೆ ೬-೩೦ರಿಂದ ೭-೩೦ರವರೆಗೆ

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ. ೧೫೬
ನಂ. ಜಿ.-೨೩/ಎಸ್.ಆರ್.ಸಿ.ಎಮ್.

ದಿ. ೪. ೫. ೧೯೬೭

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಾನು ನಿಮಗೆ ಕಾರ್ಯಕ್ರಮ ಕಳಿಸುತ್ತಿರುವೆನು. ನನ್ನ ಜೊತೆಯಲ್ಲಿ ಇನ್ನಿಬ್ಬರು ಬರುತ್ತಿರುವರು. ಒಬ್ಬರು J.R.K. ರಾಯಜಾದಾ. ಅವರು ಇತಿಹಾಸದಲ್ಲಿ ಉಪನ್ಯಾಸಕರಿದ್ದಾರೆ. ಎರಡನೆಯವರು ಉಮಾಶಂಕರರು. ಸೀತಾಪೂರದಲ್ಲಿ ಪ್ರಿಸೆಪ್ಟರ ಇದ್ದಾರೆ. ೨೩ ಮೇಗೆ ರಿಜರ್ವೇಶನ್ ಆಗಿದೆ. ಈಗ ದೂರದ ಪ್ರಯಾಣಕ್ಕಾಗಿ ಒಂದು ತಿಂಗಳು ಮುಂಚಿತವಾಗಿಯೇ ರಿಜರ್ವೇಶನ್ ಆಗುತ್ತದೆ. ಶ್ರೀ ಸರ್ನಾಡಜಿ ತನ್ನ ಹಳ್ಳಿ ಮಳ್ಳಿಯಲ್ಲಿ ಇರುವರು. ಅವರು ಹೈದ್ರಾಬಾದಕ್ಕೆ ಬರಬೇಕೆನ್ನುತ್ತಾರೆ. ಅವರಿಗೂ ಕಾರ್ಯಕ್ರಮದ ಒಂದು ಪ್ರತಿ ಕಳಿಸಿಕೊಡಿರಿ. ಅವರು ತಮ್ಮ ವಿಳಾಸ ಕಳಿಸಿದ್ದರು. ಅದು ಸಿಕ್ಕರೆ ನಾನು ಕಳಿಸುವೆನು. ಈ ಪತ್ರವನ್ನು ಶ್ರೀ ಗೋಪಾಲರಾಯರು ಬರೆಯುತ್ತಿರುವರು. ನಾನು ಪ್ರತಿಯನ್ನು (ಸರ್ನಾಡರಿಗೆ) ಕಳಿಸಿಕೊಡುವೆ. ಈಗ ನೀವು ಕಳಿಸಿಕೊಡುವ ಅವಶ್ಯಕತೆಯಿಲ್ಲ. ಹಳ್ಳಿಯ ವಿಷಯವಾದ್ದರಿಂದ ಮುಂಜಾಗ್ರತೆಗಾಗಿ ಒಂದು ಪೋಸ್ಟಕಾರ್ಡನ್ನು ಬರೆದುಬಿಡಿರಿ.

ನಾನು ಹೈದ್ರಾಬಾದಕ್ಕೆ ಒಂದು ವಾರ ಸಮಯ ಕೊಟ್ಟಿರುವೆನು. ಏಕೆಂದರೆ ನಿಮ್ಮ ಹೆಸರಿನವರೇ S.P. ಆಗಿರುವರು. ಅವರು ನನ್ನ ಪರೀಕ್ಷೆ ಮಾಡಿಸಿ ವೈದ್ಯರಿಂದ ಔಷಧ ಯೋಜನೆ ಮಾಡಿಸಿ ಕೊಡುವರು. ನನಗೆ ಬಹಳಷ್ಟು ಸಲ ವಾಂತಿ ಭೇದಿಯ ತೊಂದರೆಯಾಗುತ್ತಿರುವುದು. ಆದರಿಂದಾಗಿ ಈಗ ಬಹಳ ನಿಶ್ಶಕ್ತತೆ ಇದೆ. ನೀವು ನಿಮ್ಮ ಸುತ್ತು ಮುತ್ತಲಿನ ಸತ್ಸಂಗಿಗಳಿಗೆ ಸೂಚನೆ ಕೊಡಿರಿ. ಒಬ್ಬರು ಹೋದ ವರ್ಷ ರಾಯಚೂರ ಮತ್ತು ಕೊಪ್ಪಳದಲ್ಲಿ ಭೆಟ್ಟಿಯಾಗಿದ್ದರು. ಅವರು ಗುಂತಕಲ್ಲಿನಲ್ಲಿ ರೇಲ್ವೆ ಪೋಲಿಸ ಆಗಿ ಇರುವರು. ಅವರ ವಿಳಾಸ ತಿಳಿದಿದ್ದರೆ ಅವರಿಗೂ ತಿಳಿಸಿರಿ. ಗುಜರಾತಿ ನನ್ನ ಹತ್ತಿರ ೨೦ ದಿವಸ ಇದ್ದು ಹೋದರು.

ಡಾ. ಕೆ.ಸಿ.ವರದಾಚಾರಿ ಇತ್ತೀಚಿಗೆ ಬಹಳ ನಿಶ್ಶಕ್ತರಾಗಿರುವರು. ಮಧುಮೇಹ ಸ್ವಲ್ಪ ಉಲ್ಬಣಿಸಿದೆ. ಕಣ್ಣಿನ ತೊಂದರೆಯು ಬೆಳೆಯುತ್ತಾ ಇದೆ. ನಾನು ತಿಳಿಸಿದೆನೆಂದು ಹೇಳಿ, ನೀವೂ ಸಹ ಅವರ ಯೋಗ ಕ್ಷೇಮವನ್ನು ವಿಚಾರಿಸಿದರೆ ಬಹಳ ಒಳ್ಳೆಯದಾಗುವುದು. ಮಕ್ಕಳಿಗೆ ನಾನು ಬರುವ ಸಮಾಚಾರ ತಿಳಿಸಿಯೇ ಇರುವಿರಿ. ಅವರು ಬಹಳ ಸಂತೋಷಗೊಂಡಿರಬಹುದು. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೫೭
ನಂ. ಜಿ. ೪೧೧೦/ಎಸ್.ಆರ್.ಸಿ.ಎಮ್. ದಿ. ೨೦. ೭. ೧೯೬೭.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಸಂತೋಷದ ಪತ್ರ ತಲುಪಿತು. ನೀವು ಬರುವ ಸಮಾಚಾರ ಕೇಳಿ ಬಹಳ ಸಂತೋಷವಾಯಿತು. ನಾನು ಷಾಹಜಹಾನಪೂರದಲ್ಲಿಯೇ ಇರುವೆನು.

. . . ನ ಮಗನು ಬಹುಶಃ ಮದ್ರಾಸಿನಿಂದ ಬಂದಿರಲಿಕ್ಕಿಲ್ಲ. ಆದುದರಿಂದ ದಾನಪತ್ರ (Gift deed) ಆಗಿರಲಿಕ್ಕಿಲ್ಲ. ಎಷ್ಟು ಬೇಗ ಆದರೆ ಅಷ್ಟು ಒಳ್ಳೆಯದು. ಯಾಕೆಂದರೆ ಒಂದು ಕೆಲಸ ಪೂರ್ತಿಯಾದಾಗ ಆ ಕಡೆ ಚಿಂತೆ ಇರುವುದಿಲ್ಲ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ,
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೫೮
ನಂ. ೪೫೭೬/ಎಸ್.ಆರ್.ಸಿ.ಎಮ್. ದಿ. ೨೧. ೮. ೧೯೬೭

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನೀವು ರಾಯಚೂರಿಗೆ ಸುರಕ್ಷಿತವಾಗಿ ಮುಟ್ಟಿರಬಹುದೆಂದು ಆಶಿಸುತ್ತೇನೆ. ಮತ್ತು ಮಕ್ಕಳೆಲ್ಲಾ ಸಂತೋಷ ಆನಂದದಿಂದಿರಬಹುದು. ಶ್ರೀ ಆಯಿಲರೆಡ್ಡಿಯವರು ಮೂವರು ಜೊತೆಗಾರರೊಡನೆ ಬಂದಿರುವರು. ಅವರ ಜೊತೆಗಾರರು ದಿಲ್ಲಿ, ಆಗ್ರಾದಲ್ಲಿ ಒಂದೊಂದು ದಿವಸ ಇದ್ದು ತಮ್ಮೂರಿಗೆ ಹಿಂದಿರುಗುವರು. ಶ್ರೀ ಕೃಷ್ಣ ಮೂರ್ತಿ ತಮ್ಮ ಹೆಂಡತಿಯೊಂದಿಗೆ ಆಗ್ರಾಕ್ಕೆ ಬಂದಿರುವರು.

ಪ್ರಶಿಕ್ಷಣದ ವಿಧಾನದ ಕಿರುಹೊತ್ತಗೆಯನ್ನು ನೀವು ತಿದ್ದಿದ್ದಿರಿ. ಮತ್ತು ನಾನು ಸಹ ಸ್ವಲ್ಪ ಬರೆಸಿದ್ದೆ. ಅದು ಸಿಗಲೊಲ್ಲದಾಗಿದೆ. ನೀವು ಅನುವಾದಿಸಿದ ಪತ್ರಗಳ ಬದಲು ಕೈತಪ್ಪಿ ಪ್ರಶಿಕ್ಷಣ ವಿಧಾನದ ಪುಸ್ತಿಕೆ ನಿಮ್ಮ ಜೊತೆಯಲ್ಲಿ ಹೋಗಿದೆಯೋ ಹೇಗೆಂದು ಹುಡುಕಿ ನೋಡಿರಿ. ಯಾಕೆಂದರೆ ಆ ಪತ್ರಗಳ ಅನುವಾದ ನನ್ನಲ್ಲಿ ಉಳಿದು ಬಿಟ್ಟಿದೆ. ಪುಸ್ತಿಕೆ ನಿಮ್ಮ ಜೊತೆಯಲ್ಲಿ ಬಂದಿದ್ದರೆ ರಿಜಿಸ್ಟರ್ಡ್ ಪಾರ್ಸಲ್ ಮೂಲಕ ಕಳಿಸಿರಿ. ನನಗೆ ಅವರ ಬಗ್ಗೆ

ಚಿಂತೆಯಾಗುತ್ತಿದೆ. ಸೊಸೆಗೆ ಕೆಲಸ ಕಲಿಸಿಕೊಡಿರಿ. ಹೆಂಗಸರಿಗೆ, ಹೆಂಗಸರೇ ಪ್ರಶಿಕ್ಷಕರಿದ್ದಾಗ ಹೆಚ್ಚು ಸುಲಭವಾಗುವುದು. ಇದನ್ನು ಎಲ್ಲರಿಗೂ ತಿಳಿಸಿಕೊಡಿರಿ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆◆◆

"ಓಂ ತತ್‌ಸತ್"

ನಂ.೧೫೯

ನಂ. ಜಿ. ೪೫೭/ಎಸ್.ಆರ್.ಸಿ.ಎಮ್. ದಿ. ೨೧. ೮. ೧೯೬೭

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. 'Method of Training - II Part' ನಿಮ್ಮ ಬಳಿ ಕೈ ತಪ್ಪಿ ಬಂದಿದೆಯೋ ಹೇಗೆಂದು ಪತ್ರ ಹಾಕಿದ್ದೆ. ಅದು ಸಿಕ್ಕಿತು. ಇದೇ ಈಗ J. R. K. ರಾಯಜಾದಾ ಬಂದಾಗ ಆತನು ತನ್ನ ಬಳಿ ಇಟ್ಟುಕೊಂಡಿದ್ದನೆಂದು ತಿಳಿಯಿತು. ಈಗದು ನನ್ನ ಬಳಿ ಇದೆ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆◆◆

"ಓಂ ತತ್‌ಸತ್"

ನಂ.೧೬೦

ನಂ. ಸಿ. ೫೫೨/ಎಸ್.ಆರ್.ಸಿ.ಎಮ್. ದಿ. ೨೬. ೧೦. ೧೯೬೭

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಾನು ದಕ್ಷಿಣ ಹಿಂದೂಸ್ಥಾನಕ್ಕೆ ೧ನೇ ಡಿಸೆಂಬರ ೧೯೬೭ ಕ್ಕೆ ತಲುಪ ಬೇಕೆಂದಿದ್ದೇನೆ. ಆದರೆ ಅದು ಸಾಧ್ಯವಾಗುವುದು ಕಷ್ಟವೆನಿಸುತ್ತದೆ. ಯಾಕೆಂದರೆ ಬಾಬು ಉಮಾಶಂಕರ ಇವರ ಹೆಂಡತಿಯು ಒಂದು ತಿಂಗಳಿಂದ ಅನಾರೋಗ್ಯದಿಂದಿರುವರು. ಅವರು ಗುಣ ಹೊಂದಿದ ನಂತರವೇ ಇದು ಸಾಧ್ಯವಾಗಬಹುದು. ಬೇರೆ ಯಾರೂ ನನ್ನ

ಜೊತೆಗೆ ಸಿಗುತ್ತಿಲ್ಲ. ನಾನು ಶ್ರೀ ಈಶ್ವರ ಸಹಾಯ ಅವರ ಮಗ ಶ್ರೀ ನಾರಾಯಣ ಸಹಾಯ ಇವರಿಗೆ ಬರೆದಿರುವೆನು. ಅವರಿಗೆ ರಜೆ ಸಿಕ್ಕರೆ ಮಾತ್ರ ಬರಬಹುದು.

ಶ್ರೀ ಕಂಠಯ್ಯ ಇವರ ಶುದ್ಧೀಕರಣವನ್ನು ನಾನು ಆದಷ್ಟು ಮಟ್ಟಿಗೆ ಮಾಡಿರುವೆನು. ಮತ್ತು ದಾರಿಯನ್ನು ಸಾಕಷ್ಟು ಸುಗಮಗೊಳಿಸಿರುವೆನು. ಉಳಿದದ್ದು ಹೇಗೆ ಹೇಗೆ ಆವಶ್ಯಕತೆ ಬೀಳುವುದೋ ಅದನ್ನು ನೀವು ಮಾಡುತ್ತಲೇ ಇರಿ.. ನನ್ನ ಅಳಿಯ ಚಿ||ರಾಜೇಂದ್ರಕುಮಾರ ಭಾಯಾಳೊಂದಿಗೆ ಸೀತಾಪೂರಕ್ಕೆ ಬಂದಿದ್ದಾರೆ. ಅವರ ಕಣ್ಣಿನ ಸ್ಥಿತಿ ಚೆನ್ನಾಗಿಲ್ಲ. Eds disease ಇದೆ. ಕಣ್ಣುಗಳಲ್ಲಿ ರಕ್ತಸ್ರಾವ ಆಗುತ್ತಾ ಇರುತ್ತದೆ. ಮತ್ತು ಎಡಕಣ್ಣಿನಲ್ಲಿ ನೇತ್ರಜಾಲದಲ್ಲಿ ರಕ್ತಸ್ರಾವದ (Retinal Haemorrhage) ಅನುಮಾನವಿದೆ. ಬಹುಶಃ ಅದನ್ನು ಶಸ್ತ್ರ ಚಿಕಿತ್ಸೆಗೆ ಒಳಪಡಿಸಬೇಕಾಗಬಹುದು. ಈಶ್ವರನು ಅನುಗ್ರಹಿಸಲಿ. ನೀವೆಲ್ಲರೂ ಅವರು ಗುಣಹೊಂದುವುದಕ್ಕಾಗಿ ಪ್ರಾರ್ಥಿಸಿರಿ. ಶ್ರೀ ರಾಜಗೋಪಾಲಾಚಾರಿ ಮದ್ರಾಸಿನಿಂದ ದೆಹಲಿಗೆ ಬಂದಿರುವರು. ಅವರು ಆತನನ್ನು ನೋಡಲು ಹೋಗಿದ್ದರು. ಇಂಥ ಕಾಯಿಲೆಗೆ ಪ್ರಾರ್ಥನೆ ಮಾತ್ರವೇ ಕೆಲಸ ಕೊಡುವುದೆಂದು ಅವರು ಬರೆದಿರುವರು. ಇದು ಬಹಳ ಕಳವಳಕಾರಿ ವಿಷಯ. ಭಾಯಳಿಗೆ ರೊಟ್ಟಿ ಕೊಡುವವನು ರಾಜೇಂದ್ರ ಮಾತ್ರ ಇರುವನು. ಮತ್ತೆ ಯಾವ ಆದಾಯದ ಆಧಾರವೂ ಇಲ್ಲ. ಈಶ್ವರನು ಆತನಿಗೆ ಸಂಪೂರ್ಣ ಆರೋಗ್ಯವನ್ನು ದಯಪಾಲಿಸಲಿ. ತಥಾಸ್ತು.

ಶ್ರೀ ಕಿಶನರಾಯರ ಪತ್ರ ಬಂದಿದೆ. ಅದನ್ನು ನಿಮ್ಮ ಬಳಿ ಕಳಿಸುತ್ತಿರುವೆನು. ಇದಕ್ಕೂ ಮೊದಲಿಗೆ ಒಂದು ಪತ್ರ ಬಂದಿತ್ತು. ಅದನ್ನು ಹರಿದು ಬಿಸಾಕಿದೆ. ನನ್ನ ಬಳಿ ಈಗ ಬೇರೆ ಸತ್ಸಂಗಿಗಳು ಸಹ ಬರುತ್ತಿರುವರು. ಮತ್ತು ೪ ನೇ ನವ್ವೆಂಬರ್ ೬೭ ನೇ ಇಸ್ವಿಯವರೆಗೆ ನನಗೆ ಸೀತಾಪೂರಕ್ಕೆ ಹೋಗಲು ಸಾಧ್ಯವೇ ಇಲ್ಲ. ಈಗ ಕಿಶನ್‌ರಾವ್ ಬರಲು ಅಪೇಕ್ಷಿಸುತ್ತಿರುವರು. ಅವರು ಸರಿಯಾದ ದಾರಿಗೆ ಬರುವವರೆಗೆ ಮತ್ತು ಅವರು ಒಳ್ಳೆಯವರಾಗಿದ್ದಾರೆಂದು ವಿಶ್ವಾಸ ನಿಮಗೆ ಉಂಟಾಗುವವರೆಗೆ ನಾನು ಅವರನ್ನು ಸತ್ಸಂಗದಲ್ಲಿ ತೆಗೆದುಕೊಳ್ಳಲು ಇಷ್ಟಪಡುವುದೇ ಇಲ್ಲ. ಇದಲ್ಲದೆ ಆತನ ಮೆದುಳು ಕೆಡುತ್ತಾ ಇದೆ ಎಂದು ನಾನು ಆತನ ಬಗ್ಗೆ ನಿಮಗೆ ಮೊದಲೇ ಹೇಳಿದ್ದೆ. ಮೆದಳು ಕೆಟ್ಟಿರುವುದನ್ನು ಪ್ರಮಾಣೀಕರಿಸುವ ವಿಷಯ ಅವನ ಪತ್ರದಲ್ಲಿಯೂ ಇದೆ. ಅವರು ಇಲ್ಲಿ ಬರುವುದು ನನಗೆ ಇಷ್ಟವಿಲ್ಲ. ಏಕೆಂದರೆ ಈ ಸಧ್ಯದ ಪರಿಸ್ಥಿತಿಯಲ್ಲಿ ಅವರಿಗೆ ನನ್ನಿಂದ ಯಾವ ಲಾಭವೂ ಆಗುವುದಿಲ್ಲ. ಎರಡನೆಯದಾಗಿ ಅವರ ಮೆದುಳು ಕೆಡುತ್ತಾ ಇದೆ. ಅದಕ್ಕಾಗಿ ನನ್ನ ಬಳಿ ಯಾವ ಚಿಕಿತ್ಸೆಯೂ ಇಲ್ಲ. ನಾನು ೪ ನೆಯ ನವ್ವೆಂಬರ ೬೭ ರ ವರೆಗೆ ಜನರಿಗೆ ವೇಳೆ ಕೊಟ್ಟಿರುವೆನು. ಅದರ ನಂತರ ಒಂದು ನಿಮಿಷ ಕೂಡ ಇಲ್ಲಿ ನಿಲ್ಲಲಾರೆ. ಸೀತಾಪೂರಕ್ಕೆ ಹೋಗುವೆನು. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೬೧
ನಂ. ದಿ. ೫೦೧/ಎಸ್.ಆರ್.ಸಿ.ಎಮ್. ದಿ. ೧೯. ೧೧. ೧೯೬೭

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನನ್ನ ಆರೋಗ್ಯವು ಮೊದಲಿಗಿಂತ ಉತ್ತಮವಾಗಿದೆ. ಈ ನಡುವೆ ನಮ್ಮ ಟೈಪಿಸ್ಟ ಗಂಗಾ ಸ್ನಾನಕ್ಕೋಸ್ಕರ ಹೋಗಿರುವನು. ಮತ್ತು ಆದಕ್ಕಿಂತ ಕೆಲವು ದಿವಸ ಮುಂಚೆಯೇ ರಜೆಯ ಮೇಲಿರುವನು. ಕಾರ್ಯಕ್ರಮ ಪಟ್ಟಿ ಟೈಪು ಆಗಲು ಸಾಧ್ಯವಾಗಲಿಲ್ಲ. ಕೇವಲ ವಿಜಯವಾಡ, ರಾಯಚೂರ ಹಾಗು ಹೈದ್ರಾಬಾದಕ್ಕೆ ಸಿದ್ಧವಾಗಿದೆ. ಅವುಗಳನ್ನು ಕಳಿಸುತ್ತಿರುವೆನು. ನಿಜವಾಗಲೂ ಮಾಸ್ತರ ಸಾಹೇಬರು ಹೋದಾಗಿನಿಂದ ಇಲ್ಲಿಯ ವರೆಗೆ ಸಂಬಾಳಿಸಲಾರದವನಾಗಿದ್ದೇನೆ. ಮತ್ತು ಮಿಷನ್ ಕೆಲಸದೊಂದಿಗೆ ಅವರಿಗೆ ಎಷ್ಟು ಆಸಕ್ತಿ ಇತ್ತೋ ಅದು ಇನ್ನೂ ಹುಟ್ಟಲಾರದಾಗಿದೆ. ನೀವು ಹೇಳಿದಾಗ್ಯೂ ನಾನು ಗುಲ್ಬರ್ಗಾ ಮತ್ತು ಬೀದರಕ್ಕೆ ಹೋಗಲಾರದ್ದಕ್ಕೆ ನನಗೆ ಖೇದವಾಗಿದೆ. ಈ ವಿಚಾರ ನನಗೆ ಬಹಳ ಸಲ ಬರುತ್ತದೆ. ಆದರೆ ಒಂದು ತೊಂದರೆ ಏನೆಂದರೆ, ಈಶ್ವರ ಸಹಾಯರ್ ಮಗನಾದ ನಾರಾಯಣ ಸಹಾಯ ನನ್ನ ಜೊತೆಯಲ್ಲಿ ಬರುತ್ತಿರುವರು. ಅವರಿಗೆ ಹೆಚ್ಚು ದಿನ ರಜೆ ಸಿಗಲಾರದು. ಇತ್ತ ಉಮಾಶಂಕರರ ಹೆಂಡತಿ ಬಹಳ ಅನಾರೋಗ್ಯದಿಂದ ಬಳಲುತ್ತಿದ್ದು ಈಗ ಮೊದಲಿಗಿಂತ ಎಷ್ಟೋ ಗುಣವಾಗಿರುವರು, ಆದರೆ ಔಷಧದ ಅವಶ್ಯಕತೆ ಇನ್ನೂ ಇದೆ. ಆದುದರಿಂದ ಉಮಾಶಂಕರರನ್ನು ಬಿಟ್ಟು ಬಿಟ್ಟೆ. ರಾಯಬಾದಾ ಅಂತೂ ನನ್ನ ಜೊತೆ ಬರುತ್ತಿರುವರು. ಮತ್ತು ಅವರಿಗಾಗಿ ನೀವೇನು ಶಿಫಾರಸು ಮಾಡಿರುವಿರೋ ಅದರ ಬಗ್ಗೆ ಅಲ್ಲಿ ಚರ್ಚೆ ಮಾಡುವೆ. ಶ್ರೀ ವಿಠ್ಠಲರಾವ್ ಕುರಿತು ಏನು ಹೇಳಿರುವಿರೋ ಅದರ ಬಗ್ಗೆ ಅಲ್ಲಿಯೇ ಚರ್ಚೆಯೊಂದಿಗೆ ನಿರ್ಣಯವಾಗುವುದು. ನಿಮ್ಮ ಸಮೀಪದ ಜನರಿಗೆ ಸೂಚನೆ ಕೊಟ್ಟು ಬಿಡಿರಿ. ಗುಂಡೆರಾವ, ಗೋಪಾಲರಾಯರಿಗೆ ಸಹ ರಾಯಚೂರಿನಿಂದ ಸೂಚನೆ ಕಳಿಸಿರಿ. ನಾನು ಈ ಸಲ ಹೊಸ ಕೇಂದ್ರಗಳಾದ ಮಧುರೈ ಹಾಗು ಸೇಲಂಗಳನ್ನು ಒಂದೊಂದು ದಿನಕ್ಕಾಗಿ ತೆಗೆದುಕೊಂಡಿರುವೆನು. ಇವು ಹೊಸ ಕೇಂದ್ರಗಳಿರುವ ಕಾರಣ ಇವುಗಳನ್ನು ತೆಗೆದುಕೊಳ್ಳುವುದು ಅನಿವಾರ್ಯವೆಂದು ಭಾವಿಸಿದ್ದೇನೆ. ಗುಲ್ಬರ್ಗಾ ಮತ್ತು ಬೀದರದಲ್ಲಿ ಹೆಚ್ಚು ಅವಶ್ಯಕತೆ ಇರಲಿಲ್ಲ. ಯಾಕೆಂದರೆ ನೀವು ಅಲ್ಲಿ ಹೋಗುತ್ತಿರುತ್ತೀರಿ. ಅವರಿಗೆ ಅಸಮಧಾನವೇನೋ ಅವಶ್ಯ ಅನಿಸುವುದು, ಆದರೆ ಮಿಷನ್ ಮತ್ತು ಅದರ ಕೆಲಸದ ಬಗ್ಗೆ ಕಾಳಜಿ ಇದ್ದರೆ ಈ ವಿಚಾರ ಹುಟ್ಟಕೂಡದು. ನಾನು ಬರುವುದನ್ನು ಮಕ್ಕಳಿಗೆ ಅವಶ್ಯವಾಗಿ ತಿಳಿಸಿರಿ. ನಿಮ್ಮೆಲ್ಲರಿಗೂ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

ಪಿ.ಸೂ: ರಾಜೇಂದ್ರಕುಮಾರರು ಛಾಯಳ ಜೊತೆಯಲ್ಲಿ ಸೀತಾಪೂರಿನ ಕಣ್ಣಿನ ಆಸ್ಪತ್ರೆಯಲ್ಲಿ ಇರುವರು. ಅಲ್ಲಿ ಬಹಳ ದಿನ ಇರಬೇಕಾಗುವುದು. ಎಡಗಣ್ಣಿನಲ್ಲಿ 'ರೆಟಿನಲ್ ಡ್ಯಾಮರೇಜ' ಆಗಿದೆ. ಮತ್ತು ದೃಷ್ಟಿ ಬಹಳ ಮಂದವಾಗಿದೆ. ಬಲಗಣ್ಣಿನಲ್ಲಿ ಸಹ ಬಹಳಷ್ಟು ರಕ್ತಸ್ರಾವವಾಗಿದೆ. ಈಶ್ವರನು ಕರುಣಿಸಿ ಅವರಿಗೆ ಪೂರ್ಣ ಆರೋಗ್ಯ ದಯಪಾಲಿಸಲಿ. ಛಾಯಳಿಗೆ ರೊಟ್ಟಿ ಕೊಡುವವರು ಅವರೆ. ಅವರಿಗೆ ಬೇರೆ ಯಾವ ಆಸ್ತಿಯೂ ಇಲ್ಲ. ನಾನು ಎರಡು ದಿನಕ್ಕಾಗಿ ಸೀತಾಪೂರಕ್ಕೆ ಹೋಗಿದ್ದೆ. ಈ ದಿನ ಬಂದಿರುವೆನು. ಡಾಕ್ಟರರು ವಿದ್ಯುತ್ ಚಿಕಿತ್ಸೆ ಯಶಸ್ವಿಯಾಗದ ಪಕ್ಷದಲ್ಲಿ ರೆಟಿನಲ್ ಶಸ್ತ್ರ ಚಿಕಿತ್ಸೆ ಮಾಡಲು ಇಚ್ಛಿಸಿದ್ದಾರೆ. ಪ್ರಾರ್ಥನೆ ಮಾಡಬೇಕು ದಾವಣಗೇರೆಯಿಂದ ಮಾಜಿ ಪ್ರಿನ್ಸಿಪಾಲರ ಪತ್ರ ಬಂದಿದೆ. ಅವರು ನನ್ನನ್ನು ಆಹ್ವಾನಿಸಿರುವರು. ಮಿಷನ್ನಿನ ಕೆಲಸ ಮಾಡುವ ಆಶ್ವಾಸನೆಯನ್ನೂ ಕೊಟ್ಟಿರುವರು. ನಾನು ಅವರಿಗೆ ಉತ್ತರ ಕೊಟ್ಟಿದ್ದೇನೆ. ನಾನು ನಿಮ್ಮ ಬಳಿ ವಾಸ ಮಾಡುವ ದಿನಾಂಕಗಳಲ್ಲಿ ನೀವು ಅವರನ್ನು ನಿಮ್ಮ ಕಡೆಗೆ ಆಮಂತ್ರಿಸಿರಿ.

◆ ◆ ◆

"ಓಂ ತತ್‌ಸತ್"

ನಂ.೧೬೨
ನಂ. ಸಿ. ೭೨/ಎಸ್.ಆರ್.ಸಿ.ಎಮ್. ದಿ. ೧೭. ೨. ೧೯೬೮

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಮಮತೆಯ ಓಲೆ ತಲುಪಿತು. ಶ್ರೀ ರಾಘವೇಂದ್ರರಾವ ಮತ್ತು ಶ್ರೀ ರಾಮಕೃಷ್ಣ ಚೆಟ್ಟಿ ಬಹಳ ಪ್ರೇಮ ಮತ್ತು ವಿಶ್ವಾಸದ ಜನರಿರುವರು. ಅವರು ನನ್ನ ಹೃದಯದಲ್ಲಿ ಸಾಕಷ್ಟು ಅವಕಾಶ ಮಾಡಿಕೊಂಡಿರುವರು. ಈಶ್ವರನು ಅವರಿಗೆ ಒಳ್ಳೆಯದು ಮಾಡಲಿ ಮತ್ತು ದಿನಂಪ್ರತಿ ಪ್ರಗತಿಯನ್ನು ನೀಡಲಿ. ಬಂಧು ರಾಮಕೃಷ್ಣರಾವ ಸಾಕಷ್ಟು ದಿನ ಇಲ್ಲಿ ಇದ್ದು ನನಗೆ ಸೇವೆಯ ಉತ್ತಮ ಅವಕಾಶ ಒದಗಿಸಿಕೊಟ್ಟರು. ಅವರ ಸ್ಥಿತಿಯನ್ನು ಕುರಿತು ಬರೆದುದಾದರೆ ಅವರಲ್ಲಿ ಅತಿಯಾದ ಸ್ಥೂಲತೆ ಇದ್ದಿತು. ಅದನ್ನು ದೂರ ಮಾಡಿರುವೆನು. ಆದರೆ ಒಂದು ವಿಷಯ ಎಂಥದು ಕಂಡಿತೆಂದರೆ ಅದರ ಮೇಲೆ ಇನ್ನೂ ನಿಯಂತ್ರಣ ಹೊಂದಲಾರದವನಾಗಿದ್ದೇನೆ. ಎಷ್ಟೋ ದಿನಗಳ ನಂತರ ಆ ಸ್ಥಿತಿಯನ್ನು ತಿಳಿಸುವುದಕ್ಕಾಗಿ ಒಂದು ಶಬ್ದ ದೊರೆತಿದೆ. ಅದೇನೆಂದರೆ ಹೃದಯದ ಮೇಲೆ ಭೂಮಿ(ಪೃಥ್ವಿ)ಯ ಪ್ರಭಾವವಿದೆ. ಅದನ್ನು ನೋಡಿದಾಗ ಹೃದಯದ ಬಣ್ಣ ಮಣ್ಣಿನಂತಹದ್ದಾಗಿ ಕಾಣುತ್ತದೆ. ಅಂದರೆ ಹೊಲದ ಯಾವ ಬಣ್ಣ ಇರುತ್ತದೆಯೋ ಅಂಥದ್ದು. ಇದರಿಂದ ತಿಳಿಯುವುದೇನೆಂದರೆ ಅವರು ಕೇವಲ ಹೊಲದ ಚಿಂತನೆ

ಮತ್ತು ಯಾಂತ್ರಿಕವಾಗಿ ಧ್ಯಾನ ಮಾಡುತ್ತಿರುವರು. ಹೃದಯದ ಬಣ್ಣ ಮಣ್ಣಿನ ಬಣ್ಣದಲ್ಲಿ ಬೆರೆತು ಹಾಲು ಸಕ್ಕರೆಯಾಗಿ ಬಿಟ್ಟಿವೆ. ಧ್ಯಾನದಿಂದ ಶಕ್ತಿಯು ವೃದ್ಧಿಗೊಳ್ಳುತ್ತದೆ. ಮತ್ತು ದೀಕ್ಷೆಯಿಂದ ಇನ್ನೂ ಹೆಚ್ಚಾಗುತ್ತದೆ. ಅವರ ಶಕ್ತಿ ಹೊಲದ ಮೇಲೆಯೇ ಸಾಕಷ್ಟು ವಿನಿಯೋಗವಾಯಿತು. ಅವರನ್ನು ಹೇಗೆ ಸರಿಪಡಿಸಬೇಕೆಂಬುದು ನನಗೆ ತಿಳಿಯದಾಗಿದೆ. ನಿಮ್ಮ ಹತ್ತಿರ ಬಂದಾಗ ನೀವು ಅದರ ಬಗ್ಗೆ ಲಕ್ಷ್ಯ ಕೊಡಿರಿ. ಅಲ್ಲಿಯವರೆಗೆ ಸಾಧ್ಯವಾದಷ್ಟು ಸರಿಪಡಿಸುವೆ. ಸತ್ಸಂಗಿಗಳಲ್ಲಿ ಎಷ್ಟು ತೀವ್ರತೆ ಇರಬೇಕೋ ಅಷ್ಟು ಅವರಲ್ಲಿ ಇಲ್ಲ ಎಂಬ ನಿಮ್ಮ ವಿಚಾರ ಸರಿ ಇದೆ. ಇದರ ನಿಜವಾದ ಕಾರಣ ಸಹಕಾರ ಇಲ್ಲದಿರುವುದು. ಇದು ಕೆಲವೇ ಜನರಲ್ಲಿ ಸಿಗುವುದು. ಸಾಮಾನ್ಯವಾದ ಎರಡನೆಯ ಕಾರಣವೇನೆಂದರೆ ಧ್ಯಾನಕ್ಕಾಗಿ ಹೆಚ್ಚು ಸಮಯ ಕೊಡುವುದಿಲ್ಲ. ಮೂರನೆಯ ಕಾರಣವೇನೆಂದರೆ ಧ್ಯಾನದ ನಂತರ ಪೂಜೆ ಹಾಗು ಧ್ಯಾನದೊಂದಿಗೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳುವುದಿಲ್ಲ. ತಮ್ಮನ್ನು ಭಕ್ತರೆಂದು ಅವಶ್ಯವಾಗಿ ಹೇಳಿಕೊಳ್ಳುವರು. ಅದನ್ನು ಭಕ್ತಿಯೆಂದು ಯಾವ ಅರ್ಥದಲ್ಲಿ ಎನ್ನಬಹುದೆಂದರೆ ಒಳ್ಳೆಯತನ, ಹಾಗು ಹಿರಿತನದ ಮುದ್ರೆ, ಅವರ ಹೃದಯದಲ್ಲಿ ಮೂಡಿರುವುದು. ನಿಜವಾದ ಭಕ್ತಿಯಲ್ಲಿ ನೋವು, ವ್ಯಾಕುಲತೆ ಇರಬೇಕು.

ಬೀದರದಲ್ಲಿ ಸಭೆಯಾಗುವುದು ಒಳ್ಳೆಯದು. ಮತ್ತು ಇಂತಹ ಅವಕಾಶ ಸಿಕ್ಕಾಗ ಅದನ್ನು ಬಿಡಕೂಡದು. ನಾನು ಫ್ರಾನ್ಸಿನಲ್ಲಿ ಮಿಷನ್ನಿನ ಕೇಂದ್ರ ತೆರೆದಿದ್ದು ನಿಮಗೆ ಗೊತ್ತಿರಬೇಕು. ಮತ್ತು ಶ್ರೀ ಆಂದ್ರೆ ಪೋರೆ ಅದರ ಪ್ರಶಿಕ್ಷಕರಾಗಿರುವರು. ಅವರು 'Reality at dawn'ದ ಅನುವಾದವನ್ನು ಫ್ರೆಂಚಿನಲ್ಲಿ ಮಾಡಲು ಇಚ್ಛಿಸುತ್ತಿದ್ದರು. ಅದನ್ನು ಅರವಿಂದಾಶ್ರಮದಲ್ಲಿರುವ ಒಬ್ಬ ಫ್ರೆಂಚ ಅಭ್ಯಾಸಿಗೆ ಕಳಿಸಿರುವರು. ಮತ್ತು ಮುದ್ರಣಕ್ಕಾಗಿ ೨೦೦ ರೂ. ಶೇಖರಿಸಿರುವರು. ಅವರಿಗೆ ಶಾಂತಿ ಬೇಕಾಗಿತ್ತು. ಅದು ಅವರಿಗೆ ದೊರೆಯಿತು. ಆದರೆ ಅವರಿಗಿನ್ನೂ ತೃಪ್ತಿಯಾಗಲಿಲ್ಲ. ಗುರುಮಹಾರಾಜರ ಕೃಪೆ ಮತ್ತು ಮಹಾತ್ಮೆಯ ಪ್ರಭಾವದಿಂದ ಅರ್ಧ ನಿಮಿಷದಲ್ಲಿಯೆ ತೃಪ್ತಿಗೊಂಡರು. ತಿರುಗಾಡುತ್ತಿದ್ದರಾದರೂ ಎಚ್ಚರಿಕೆ ಇರುತ್ತಿರಲಿಲ್ಲ. ಅವರು ತಮಗೆ ಎಚ್ಚರ ಇರುವುದಿಲ್ಲವೆಂದೂ, ಮೋಟಾರಕಾರಿನ ಕೆಳಗೆ ಬಿದ್ದುಹೋಗುವಂತಾಗ ಬಾರದೆಂದು ನನಗೆ ಹೇಳಿದ್ದಾರೆ.

ಇನ್‌ಕಮ್‌ಟ್ಯಾಕ್ಸ ಎಗ್ಝೆಂಪ್ಶನ್ (ಆದಾಯ ತೆರಿಗೆ ವಿನಾಯಿತಿ) ಸರ್ಟಿಫಿಕೇಟ್ ಕಳಿಸುತ್ತಿರುವೆನು. ರಾಯಜಾದಾ ಅವರು ಕಳಿಸಿರಬಹುದೆಂದು ತಿಳಿದಿದ್ದೆ. ಡಾಕ್ಟರ್ ಕೆ.ಸಿ.ವಿ. ತಿರುಚಿ ಮತ್ತು ಮದುರೈ ಪ್ರವಾಸ ಮಾಡಿರುವರು. ಈಗ ೩ ಫೆಬ್ರುವರಿಗೆ ವಿಜಯವಾಡಕ್ಕೆ ಹೋಗುವರು. ನಿಮ್ಮ ಅಧೀನದಲ್ಲಿರುವ ಕೇಂದ್ರಗಳಿಗೆ ಸಿಗದೇ ಇದ್ದಲ್ಲಿ ಇದರ ಪ್ರತಿಯನ್ನು ಕಳುಹಿಸಿರಿ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ.ಸೂ.: ನಾನು ತಿರುಪತಿಯಿಂದ "ಪ್ರಶಿಕ್ಷಣದ ಒಂದು ವಿಧಾನ"ದ ಪ್ರತಿಯನ್ನು ಅಂದರೆ, "ಒಬ್ಬನನ್ನು ಹೇಗೆ ಕ್ರಿಯಾತ್ಮಕನನ್ನಾಗಿ ಮಾಡುವುದು" ನಿಮ್ಮ ಬಳಿ ಕಳಿಸಿದ್ದರೆ ಅದನ್ನು ಟೈಪ್ ಮಾಡಿಸಿ ಅವರ ಒಂದು ಪ್ರತಿ ನನಗೆ ಕಳುಹಿಸಿ ಕೊಡಿರಿ. ಅದರಲ್ಲಿ ಕೆಲವು ವಾಕ್ಯಗಳು ಮತ್ತು ಒಂದು ರೇಖಾ ಚಿತ್ರವು ಸಹ ಇದೆ.

◆ ◆ ◆

"ಓಂ ತತ್‌ಸತ್"

ನಂ.೧೬೩
ನಂ.ಸಿ-೧೩೫/ಎಸ್.ಆರ್.ಸಿ.ಎಮ್. ದಿ.೭.೩.೧೯೬೮

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಪತ್ರ ತಲುಪಿತು. ನಾನು ಪ್ರಿಯ ರಾಮಕೃಷ್ಣನಿಗಾಗಿ ಏನು ಮಾಡಲು ಸಾಧ್ಯವಿತ್ತೊ ಅದನ್ನು ಮಾಡಿದೆನು. ಕಾಲಕಾಲಕ್ಕೆ ನೀವು ಆತನ ಕಡೆಗೆ ಲಕ್ಷ್ಯಕೊಡಬೇಕಾಗುತ್ತದೆ. ಮತ್ತು ಇನ್ನೂ ಅವರ ಮೇಲೆ ಬಹಳ ಪರಿಶ್ರಮ ಮಾಡಬೇಕಾಗಿದೆ. ಶ್ರೀ ಕುಮಾರಸ್ವಾಮಿಯವರಿಗೆ ತಿಳಿಹೇಳಬೇಕು. ಇದು ಅವರ ಭ್ರಮೆ ಇದೆ. ಎರಡನೆಯ ಮಾತೇನೆಂದರೆ, ಭ್ರಮಿಸುವುದು ಅವರ ಸ್ವಭಾವವಾಗಿಬಿಟ್ಟಿದೆ. ಅವರು ನನಗೂ ಸಹ ಭ್ರಾಮಕ ಮಾತುಗಳನ್ನು ಬರೆದಿರುವರು. ಅವರಿಗೆ ನಾನು ತಿಳಿಹೇಳುತ್ತಾ ಉತ್ತರ ಕೊಡುವೆ.

ಮಕ್ಕಳೆಲ್ಲಾ ಸಂತೋಷ ಮತ್ತು ಆನಂದದಿಂದ ಇರುವರು.

ನಿಮಗೆಲ್ಲರಿಗೂ ಆಶೀರ್ವಾದಗಳು.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೬೪
ನಂ.ಜಿ-೨೩೧/ಎಸ್.ಆರ್.ಸಿ.ಎಮ್. ದಿ. ೧೨.೫.೧೯೬೮

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಮಮತೆಯ ಪತ್ರ ತಲುಪಿತು. ಜನರು ಯಾವ ಪ್ರಕಾಶದ ಬೆನ್ನುಹತ್ತಿರುವರೋ ಆ ಪ್ರಕಾಶದ ಆವಶ್ಯಕತೆ ನಮಗಿರುವುದಿಲ್ಲ. ಆ ಪ್ರಕಾಶ ನಮಗೆ ಹಿಡಿಸಲಾರದಂಥ ಒಂದು ಕಾಲ ಬರುವುದು. ಅಲ್ಲಿ ಪ್ರಕಾಶವೂ ಇಲ್ಲ, ಕತ್ತಲೆಯೂ ಇಲ್ಲ. ಅಲ್ಲಿ ಸತ್ಯವು ಸಹ ಬೇರೊಂದು ರೂಪವನ್ನೇ ತಾಳುತ್ತದೆ. ವಾಸ್ತವವೇನೆಂದರೆ, ಎಲ್ಲಿಯವರೆಗೆ ನಾವು ದೃಷ್ಟಿಹೀನರಾಗಿರುವೆವೋ ಅಲ್ಲಿಯವರೆಗೆ ನಮಗೆ ಪ್ರಕಾಶದ ಅವಶ್ಯಕತೆ ಇರುತ್ತದೆ. ಮತ್ತು ನಾವು ದೃಷ್ಟಿಯನ್ನು ಮರಳಿ ಪಡೆದುಕೊಂಡಾಗ ಪ್ರಕಾಶದ ಆವಶ್ಯಕತೆ ಬೀಳುವುದಿಲ್ಲ.

ಹೈದ್ರಾಬಾದಿನಿಂದ ಶ್ರೀ ರಾಮಕೃಷ್ಣ ಚೆಟ್ಟಿ ಮತ್ತು ತಿರುಪತಿಯಿಂದ ಶ್ರೀ ಕಮಲಾನಾಥನ್ ನಾಳೆ ಒಂದು ವಾರದ ಸಲುವಾಗಿ ಬರಲಿರುವರು. ಶ್ರೀ ರಾಮಕೃಷ್ಣರಂತೂ ಮೆಹರಬಾಬಾರ ಪೂಜಾರಿಯಿದ್ದರು. ಮತ್ತು ಅವರನ್ನು ದೇವರೆಂದು ತಿಳಿದು ನೆನೆಸುತ್ತಿದ್ದರು. ಅದರ ಪರಿಣಾಮವೇನಾಯಿತೆಂದರೆ ಅವರಲ್ಲಿದ್ದ ಸ್ಥೂಲತೆ ಎಲ್ಲವೂ ಇವರಲ್ಲಿ ಇಳಿದು ಬಂತು. ಆಧ್ಯಾತ್ಮ ಮಾತ್ರ ಬಾಬಾಜಿಯ ಹತ್ತಿರ ಉಳಿಯಿತು. ನಮ್ಮ ಪಾಲಿಗೆ ಇವರೀಗ ಬಹಳ ಶ್ರಮಕಾರಕವಾಗಿದ್ದಾರೆ. ಕಲಿತ ಮನುಷ್ಯರು ಹೇಗೆ ಮೋಸ ಹೋಗುವರೆಂಬುದು ಆಶ್ಚರ್ಯದ ಸಂಗತಿ. ಮೆಹರಬಾಬಾ ತಮ್ಮನ್ನು ವಿಶೇಷ ವಿಭೂತಿಯೆಂದೂ ತಾವು ಪ್ರಪಂಚದ ಬದಲಾವಣೆ ಮಾಡುತ್ತಿರುವರೆಂದೂ ಹೇಳುತ್ತಾರೆ. ಈ ಮೇ ತಿಂಗಳ ಯಾವುದೋ ದಿನದಂದು ತಮ್ಮ ಮೌನವನ್ನು ಮುರಿಯುವರೆಂದೂ ಆ ದಿನದಂದು ಪ್ರಪಂಚದಲ್ಲಿ ಹೊಸ ಬದಲಾವಣೆಯಾಗುವುದೆಂದೂ ಹೇಳುವರು. ದಿನಾಂಕವು ಫೆಬ್ರುವರಿಯಿಂದ ಮೇಗೆ ಬಂದಿತು. ಮತ್ತು ಸಂಭವತಃ ಮೇದಿಂದ ಮುಂದೆ ಯಾವುದಾದರೂ ಆಗಬಹುದು. ದೇವರು ಅವರನ್ನು ಚಿತ್ತಭ್ರಮೆಯಿಂದ ಕಾಪಾಡಿ ಅವರ ಶಿಷ್ಯರಿಗೆ ವಿವೇಕ ಶಕ್ತಿಯನ್ನು ದಯಪಾಲಿಸಲಿ. ಬುದ್ಧಿವಂತರು ಹಾಗು ಹೆಚ್ಚು ಕಲಿತವರು ಮೆಹರಬಾಬಾರ ಹೇಳಿಕೆಯನ್ನು ಒಪ್ಪುತ್ತಿರುವುದೂ, ಅವರು ತಮ್ಮ ಬಗ್ಗೆ ಏನು ಹೇಳುತ್ತಾರೆಯೋ ಅದನ್ನು ನಿಜವೆಂದು ನಂಬುವುದೂ, ಇದೊಂದು ಕಾಲದ ಮಹಿಮೆಯೆನ್ನಬೇಕು. ನಾನು ಹೇಳುವುದನ್ನು ಮೂರ್ಖರು ಸಹ ಒಪ್ಪಲೊಲ್ಲರು. ಮತ್ತು ನಿಜವಾಗಿಯು ನನ್ನ ಹತ್ತಿರ "ಪರಮ ಅಜ್ಞಾನದ" ಪಾಠವನ್ನು ಕಲಿಯಲು ಯಾರು ತಾನೆ ಬರುವರು? ದೆಹಲಿಯಲ್ಲಿ ಪ್ರಿಸೆಪ್ಟರರಾಗಿರುವ ಶ್ರೀ ಸುಂದರ ಅವರು ಸರಕಾರಿ ಕೆಲಸದ ನಿಮಿತ್ತ ಆಸ್ಟ್ರೇಲಿಯಾಕ್ಕೆ ಹೋಗಿದ್ದರು. ಅಲ್ಲಿಯ ಜನರಲ್ಲಿ ಆಸಕ್ತಿಯಿದೆ. ಸುಂದರ ಅವರ ಬಳಿ ಸಮಯ ಬಹಳ ಕಡಿಮೆಯಿದ್ದ ಕಾರಣ ಹೆಚ್ಚು ಕೆಲಸ ಮಾಡಲು

ಸಾಧ್ಯವಾಗಲಿಲ್ಲ. ಆದಾಗ್ಯೂ ಸಿಡ್ನಿಯಲ್ಲಿ ಇಬ್ಬರು ಅಭ್ಯಾಸವನ್ನು ಆರಂಭ ಮಾಡಿರುವರು. ಮತ್ತು ನ್ಯೂಜಿಲ್ಯಾಂಡ, ಇಂಡೋನೇಷಿಯಾ ಮುಂತಾದವುಗಳಲ್ಲಿ ಕೊಂಚ ಚರ್ಚೆಯೂ ಆಗಿದೆ. ಆಸ್ಟ್ರಾಮಿನಲ್ಲಿ ಕೂಡ ಈಗ ಜಾಗೃತಿ ಉಂಟಾಗಿದೆ. ಅಲ್ಲಿ ಸಂಸ್ಥೆ ಬೆಳೆಯಲಾರಂಭಿಸಿದೆ. ನನ್ನನ್ನು ಬಹಳ ಕರೆಯುತ್ತಿರುವರು. ನನಗೆ ಜೂನ ತಿಂಗಳ ಎರಡನೇ ವಾರದಲ್ಲಿ ಹೋಗಬೇಕಾಗುವುದೇನೋ ಎಂದು ಅನಿಸುತ್ತದೆ.

ನಾನು ನಿಮ್ಮ ಹತ್ತಿರ Commentary on Ten Commandments ನ್ನು ಕಳಸುತ್ತಿರುವೆನು. ನೀವು ಉರ್ದು ಪುಸ್ತಕವನ್ನು ಇಟ್ಟುಕೊಂಡು ಇಂಗ್ಲೀಷ ಅನುವಾದದಲ್ಲಿ ಏನಾದರೂ ಬಿಟ್ಟು ಹೋಗಿದೆಯೋ ಹೇಗೆಂಬುದನ್ನು ಆಳವಾಗಿ ಪರಿಶೀಲಿಸಿ ನೋಡಿರಿ. ನೀವು ಬಳ್ಳಾರಿಯಲ್ಲಿ ತೋರಿಸಿದ ಹಾಗೆ ಒಂದು ಕಡೆ ಸ್ವಲ್ಪ ವಿಷಯ ಬಿಟ್ಟು ಹೋಗಿತ್ತು. ಅಲ್ಲಿ ಒಂದು ಟೈಪ್ ಮಾಡಿದ ಕಾಗದ ಅಂಟಿಸಿರುವೆನು. ಇದು ಬೇಗ ಮುದ್ರಣಗೊಳ್ಳಲಿದೆ. ಆದುದರಿಂದ ಇದನ್ನು ಬೇಗ ಪರಿಶೀಲಿಸಿ ಕಳಿಸಿಕೊಡಿರಿ. ದೀಕ್ಷೆ ಹೊಂದಿದವರ ಪರಿಷ್ಕೃತ ಯಾದಿಯನ್ನು ಕಳಿಸುತ್ತಿರವೆನು. ತೀರಿಕೊಂಡಿರುವವರ ಹೆಸರುಗಳನ್ನು ತೆಗೆಯಲ್ಪಟ್ಟಿವೆ. "Reality at dawn" (ಸತ್ಯೋದಯ) ಮೇ ತಿಂಗಳವರೆಗೆ ಸಿದ್ಧವಾಗುವದು. ನಿಮಗೆ ಎಷ್ಟು ಪ್ರತಿಗಳು ಬೇಕಾಗುವವು ?

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೬೫
ನಂ. -/ಎಸ್.ಆರ್.ಸಿ.ಎಮ್.

ದಿ.೧೪.೫.೧೯೬೮

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಾನು ಪಾರ್ಸಲ್ ಮಾಡಿದ ಮೇಲೆ "Towards Infinity" ಪುಸ್ತಕದಲ್ಲಿ ಕೆಲವು ತಪ್ಪುಗಳಿರುವುದೂ ಅವನ್ನು ಸರ್ನಾಡಜಿಯ ಸಹಾಯದಿಂದ ಸರಿ ಮಾಡಲಾಗಿದೆ ಎನ್ನುವದೂ ನನ್ನ ವಿಚಾರದಲ್ಲಿ ಬಂದಿತು. ತಿದ್ದುಪಡಿ ಮಾಡಿದ ಒಂದು ಪುಸ್ತಕವನ್ನು ಕಳುಹಿಸುತ್ತಿರುವೆನು. ನೀವು ಸಹ ನಿಮ್ಮಲ್ಲಿ ಇರುವ ಪುಸ್ತಕಗಳಲ್ಲಿ ಇದರ ಪ್ರಕಾರ ತಿದ್ದಿಕೊಳ್ಳಿರಿ. ಹೈದ್ರಾಬಾದಿನಿಂದ ಶ್ರೀ ರಾಮಕೃಷ್ಣ ಚೆಟ್ಟಿ ಬಂದಿರುವರು. ತಿರುಪತಿಯಿಂದ ಶ್ರೀ

ಕಮಲಾನಾಥನ್ ಅವರೂ ಬರಲಿರುವರು. ನಾನು ದೀಕ್ಷೆ ಹೊಂದಿದವರ ಯಾದಿ ಕಳುಹಿಸುತ್ತಿರುವೆನು. ಅದರಲ್ಲಿ ಯಾವ ಹೆಸರೂ ಬಿಟ್ಟುಹೋಗಿಲ್ಲವೆಂಬುದನ್ನು ನೋಡಿಕೊಳ್ಳಿರಿ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೬೬
ನಂ.ಸಿ-೩೫೭/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ.೨೮.೮.೧೯೬೪

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ.

ನಿಮ್ಮ ಒಲುಮೆಯ ಓಲೆ ತಲುಪಿತು. ನೀವು ಬರುತ್ತಿರುವುದು ನನಗೆ ಬಹಳ ಸಂತೋಷ. ನಾನು ನಿಮಗೆ ಮನೆಯಲ್ಲಿಯೇ ಸಿಗುವೆ. ಹೊರಗೆಲ್ಲಿಯೂ ಹೋಗುವುದಿಲ್ಲ. ನನ್ನ ಬಳಿ ಬಹಳ ತಮಾಷೆಯಾದ ಪತ್ರಗಳು ಬರುತ್ತಿರುತ್ತವೆ. ಒಬ್ಬರಿಬ್ಬರು ಒಂದು ತಿಂಗಳ ಮುಂಚೆಯೇ", ನೀವು ಇಂಥ ದಿನಾಂಕದಿಂದ ಇಂಥ ದಿನಾಂಕದವರೆಗೆ ಹೊರಗೆ ಹೋಗುವುದಿಲ್ಲವೇ? ಎಂದು ನನ್ನನ್ನು ಕೇಳಿರುವರು. ಕುಮಾರಸ್ವಾಮಿ ಮತ್ತು ಮೋಹನರಾವ್ ನನ್ನ ಬಳಿ ತಂಗಿರುವರು. ಮೊದಲನೇ ತಾರೀಖಿಗೆ ತಿರುಗಿ ಹೋಗುವರು. ಬೀದರದಿಂದ ಲಿಂಗೋಜಿರಾವ್ ಸಹ ಬಂದಿರುವರು. ಅವರು ತಮ್ಮನ್ನು ಸುಧಾರಿಸಿಕೊಳ್ಳಲು ಬಂದಿರುವರೋ ಅಥವಾ ನನ್ನನ್ನು ಕೆಡಿಸಲು ಬಂದಿರುವರೋ ತಿಳಿಯದು. ಅವರ ಮೇಲೆ ಎಷ್ಟು ಶ್ರಮದ ಅವಶ್ಯಕತೆಯಿದೆಯೋ ಅಷ್ಟನ್ನು ಮಾಡಲು ನನ್ನ ಮನಸ್ಸು ಹಿಂಜರಿಯುತ್ತಿದ್ದರೂ ಅದಕ್ಕಾಗಿ ಬಹುಶಃ ನಾನು ಪ್ರಯತ್ನಿಸಬಹುದು. ನಿಮ್ಮ ಕಡೆ ಬಂದಾಗ ನಿಮ್ಮನ್ನು ಅವರು ಭೆಟ್ಟಿಯಾಗುವರು. ಡಾ.ವರದಾಚಾರಿ ಬಂದಿದ್ದರು. ನಾಲ್ಕು ದಿವಸ ಇದ್ದು ಹೋದರು. ದೆಹಲಿ, ಷಾಹಜಹಾನ್‌ಪೂರ್, ಲಖನೌ ಮತ್ತು ಕಲ್ಕತ್ತಾದಲ್ಲಿ ಅವರ ಭಾಷಣಗಳಾದವು. ಈಗ ಅವರು ಕ್ಷೇಮದಿಂದ ಮನೆಯನ್ನು ಮುಟ್ಟಿರುವರು. ಅವರ ಮಗ ನಾರಾಯಣನೂ ಬಂದಿದ್ದನು.

ನೀವು 'ಸತ್ ದರ್ಶನ' ಪುಸ್ತಕದಲ್ಲಿ ವೈರಾಗ್ಯ ಮತ್ತು ಅದರ ನಾನಾ ರೂಪಗಳ ಬಗ್ಗೆ ಓದಿರಬಹುದು. ಉದಾಹರಣೆಗೆ ದೃಢ ವೈರಾಗ್ಯ, ಹಸಿ ವೈರಾಗ್ಯ, ಸ್ಮಶಾನ ವೈರಾಗ್ಯ ಮುಂತಾದವು. ಈಗ ನಾನು ಹೊಸ ವಿಧವಾದ ವೈರಾಗ್ಯದ ರೂಪಗಳನ್ನು ನಿಮಗೆ

ಕೊಡುತ್ತೇನೆ. ಆದರಿಂದ ನೀವು ಪ್ರತಿಯೊಬ್ಬನನ್ನು ಅವನು ಎಷ್ಟು ಆಳದಲ್ಲಿರುವನೆಂದು ಗುರುತಿಸಬಹುದು. ಈಗ ಕೇಳಿರಿ : ಕೆಲವರು ಪ್ರಪಂಚದಿಂದ ವೈರಾಗ್ಯ ತಾಳುವರು. ಇದು ಸರಿಯಾದದ್ದೆ. ಕೆಲವರು ಈಶ್ವರನ ಬಗ್ಗೆ ವೈರಾಗ್ಯ ತಾಳುವರು ಮತ್ತು ಕೆಲವರು ತಮ್ಮ ಜ್ಞಾನದ ಬಗ್ಗೆ ವೈರಾಗ್ಯ ತಾಳುವರು. ಈಶ್ವರನ ಬಗ್ಗೆ ವೈರಾಗ್ಯ ತಾಳುವವರು ಚತುರರು. ಪ್ರಪಂಚದಿಂದ ವೈರಾಗ್ಯ ತಾಳುವವರು ಸಹ ಬುದ್ಧಿವಂತರೆ. ಮತ್ತು ಯಾರು ಜ್ಞಾನದಿಂದ ವೈರಾಗ್ಯ ತಾಳಿರುವರೋ ಅವರು ಮೂರ್ಖರು. ಈಗ ಇವುಗಳ ಪರಿಣಾಮವನ್ನು ಕೇಳಿರಿ. ಈಶ್ವರನ ಬಗೆಗೆ ವೈರಾಗ್ಯ ತಾಳುವವರಿಗೆ ಅಶಾಂತಿ, ಪ್ರಪಂಚದಿಂದ ವೈರಾಗ್ಯ ತಾಳುವವರಿಗೆ ಶಾಂತಿ ಮತ್ತು ಮೆದುಳಿನಿಂದ (ಜ್ಞಾನ) ವೈರಾಗ್ಯ ತಾಳುವವರಿಗೆ ಮೆದುಳು ಕುರು, ಪ್ಯಾರ್ಶ್ವವಾಯು ಮುಂತಾದ ಭಯಂಕರ ರೋಗಗಳು ಬರುವುವು. ಇದೊಂದು ವಿಷಯವಾಯಿತು. ಎರಡನೆಯ ವಿಷಯ ಕೇಳಿರಿ. ಎಷ್ಟು ವಿಧವಾದ ಸಂತರಿರುವರೆಂಬದನ್ನು ನಾನು ನಿಮಗೆ ತೋರಿಸುವೆ. ನೀವು 'ಸತ್ ದರ್ಶನ'ದಲ್ಲಿ ಸಹ ಆ ವಿಧಗಳನ್ನು ಓದಿರಬಹುದು. ನಾನು ನನ್ನ ವಿವರಣೆಯನ್ನು ಕೊಡುವೆನು. ನಾನು ಮೂರು ವಿಧಗಳನ್ನು ವರ್ಣಿಸುವೆನು: ಸಂತ, ಪರಮಸಂತ, ಸದ್ಗುರು.

೧. ಯಾವನು ತನ್ನ ಮೂಲಸ್ಥಿತಿಯಲ್ಲಿ ನೆಲೆಸಿರುವನೋ ಅವನು ಸಂತನು.

೨. ಯಾವನಿಗೆ ತಾನು ಮೂಲಸ್ಥಿತಿಯಲ್ಲಿ ನೆಲೆಸಿರುವುದರ ಅರಿವಾಗಲಿ, ವಿಚಾರವಾಗಲಿ ಇರುವುದಿಲ್ಲವೋ ಅವನು ಪರಮ ಸಂತನು.

೩. ಸದ್ಗುರುವಿನ ಕೆಲಸವೇನೆಂದರೆ, ಈಶ್ವರನಿಂದ ಯಾವ ಸಹಜಶಕ್ತಿಗಳು, ವಿಶಿಷ್ಟ ಕಾರ್ಯಗಳಿಗಾಗಿ ನಮಗೆ ದೊರೆತಿವೆಯೋ, ಅವುಗಳ ನೈಜ ಉಪಯೋಗ ತಿಳಿದುಕೊಂಡು, ಅವನ್ನು ಈಶ್ವರೀಯ ಕೆಲಸಗಳಲ್ಲಿ ಸರಿಯಾಗಿ ಉಪಯೋಗಿಸುವುದು.

ಸಹಜಮಾರ್ಗದ ಮೇಲೆ ಡಾ. ಕೆ.ಸಿ.ವರದಾಚಾರಿಯವರು ಮಾಡಿದ ಭಾಷಣಗಳು ಮದ್ರಾಸಿನಲ್ಲಿ ಮುದ್ರಣಗೊಳ್ಳಲಿವೆ. ನನ್ನ ಹತ್ತಿರ ಇದ್ದಷ್ಟನ್ನು ನಾನು ಕಳಿಸಿರುವೆನು. ಈಶ್ವರನ ದಯೆಯಿಂದ ನಿಮ್ಮ ಮನೆ ಬೇಗ ಆಗಲಿ. ಬೇಗ ಪೂರ್ತಿಯಾದರೆ ನನಗೆ ಸಂತೋಷವಾಗುವುದು. ಯಾಕೆಂದರೆ ನಾನು ರಾಯಚೂರಿಗೆ ಬಂದಾಗ ಅಲ್ಲಿ ಆರಾಮ ಪಡೆಯಬಹುದು. ಯಾವ ಮಗುವಿನಲ್ಲಿ ನಿಮಗೆ ರಕ್ತದೋಷ ಕಾಣುವದೋ, ಆ ಮಗುವಿಗೆ ಅರ್ಧ ಕಪ್ ಬಿಸಿನೀರಿನಲ್ಲಿ ಅರ್ಧ ನಿಂಬೆಹಣ್ಣಿನ ರಸ ಹಿಂಡಿ ಅದರಲ್ಲಿ ಒಂದು ಚಿಟಿಕಿ ಉಪ್ಪನ್ನು ಕಲಿಸಿ, ಹಸಿ ಹೊಟ್ಟೆಗೆ ಕುಡಿಸಿದ್ದಾದರೆ, ಇನ್ನೂ ಹೆಚ್ಚು ಲಾಭದಾಯಕವಾಗುವುದು. ಮಕ್ಕಳಿಗೆ ಆಶೀರ್ವಾದ.

ನಾನು ಒಂದು ಹೊಸ ವಿಷಯ ಬರೆಯುವೆ. ಶ್ರೀ ನಾರಾಯಣರಾವ್ ಗುಲ್ಬರ್ಗಾದಿಂದ ಈ ತಿಂಗಳು ೨೭ ಅಥವಾ ೨೮ಕ್ಕೆ ಬರುವವರಿದ್ದರು. ಆದರೆ ಕಾರಣಾಂತರದಿಂದ ಬರಲು ಸಾಧ್ಯವಾಗಲಿಲ್ಲ. ಈಗ ಸೆಪ್ಟೆಂಬರ ೮ರಿಂದ ೧೦ರವರೆಗೆ ಬರಲಿರುವರು. ನೀವು ಇಲ್ಲಿ ಇದ್ದರೆ ನಿಮಗೆ ತಿಳಿಸಿರೆಂದು ಬರೆದಿದ್ದರು. ನಾನಿಲ್ಲಿರುವೆನೆಂದು

ಬರಿದಿದ್ದೆ. ಅದರ ಮುಂದೆ ಇನ್ನೊಂದು ವಾಕ್ಯ ಬರೆದಿದ್ದೆ. ಏನೆಂದರೆ, "your condition warrants you to be here" (ನಿಮ್ಮ ಸ್ಥಿತಿಯು ಇಲ್ಲಿ ಬರಲು ನಿಮಗೆ ಆಜ್ಞಾಪಿಸುತ್ತದೆ.) ಅದರ ಉತ್ತರವಾಗಿ ಅವರು, "This sentence has shocked me very much" (ನಿಮ್ಮ ಈ ವಾಕ್ಯವು ನನಗೆ ಬಹಳ ದೊಡ್ಡ ಆಘಾತವನ್ನು ಉಂಟುಮಾಡಿದೆ) ಎಂದು ಬರೆದಿದ್ದಾರೆ. ಇದನ್ನು ನಾನು ಕೆಟ್ಟದ್ದಾಗಿ ಭಾವಿಸಲಿಲ್ಲ. ಆಘಾತ ತಟ್ಟಿದ್ದು ಒಳ್ಳೆಯದೇ ಆಯಿತು. ಆದರೆ ಇಲ್ಲಿಯವರೆಗೆ ನಾನು ಇಂಗ್ಲೀಷನ್ನು ಬಹಳ ಕಡಿಮೆ ತಿಳಿದವನೆಂದು ಭಾವಿಸಿದ್ದೆ. ನನ್ನ ಸಹವರ್ತಿಗಳಲ್ಲಿಯೂ ಸಹ ಬಹಳ ಜನರು ಇಂಗ್ಲೀಷ ಬಹಳ ಕಡಿಮೆ ಬಲ್ಲವರಿದ್ದಾರೆಂದು ಈಗ ನನಗೆ ತಿಳಿಯಿತು. ಆದುದರಿಂದ ನನಗೀಗ ಇಂಗ್ಲೀಷ ಬಹಳ ಕಡಿಮೆ ಬರುವುದೆನ್ನುವುದಕ್ಕೆ ಖೇದವಿಲ್ಲ. ಮತ್ತು ಈಗ ಅವರು ತಮ್ಮ ಮೇಲೆ ಬಹಳ ಶ್ರಮವಹಿಸಬೇಕಾಗುವುದು. ನಾನು ರಾಯಚೂರಿನಲ್ಲಿದ್ದಾಗ ಅವರ ಬಗ್ಗೆ ಹೇಳಿದ್ದೆ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ. ೧೬೭
ನಂ.ಸಿ-೩೮೪/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ.೨೫.೯.೧೯೬೮

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಮಮತೆಯ ಪತ್ರ ತಲುಪಿತು. ಓದಿ ಸಂತೋಷವಾಯಿತು. ಹೈದ್ರಾಬಾದಿನ ಆಶ್ರಮದ ಮೇಲೆ "ಶಾಂತಿ ಕೇಂದ್ರ " ಕಟ್ಟುವುದಕ್ಕೆ ಆ ಸಂನ್ಯಾಸಿಗಳು ಕೇಳಿಕೊಂಡಿದ್ದಾರೆ. ಅದಕ್ಕೆ ನಾನು ಸ್ವಲ್ಪವಾದರೂ ಸಮ್ಮತಿಸುವುದಿಲ್ಲ. ಅದನ್ನು ಸಂಪೂರ್ಣವಾಗಿ ನಿರಾಕರಿಸಿಬಿಡಿರಿ. ನಮ್ಮ ಆಶ್ರಮದಲ್ಲಿ ಶಾಂತಿ ಸಾಕಷ್ಟು ಇದೆ. ಆದುದರಿಂದ "ಶಾಂತಿ ಕೇಂದ್ರ" ಕಟ್ಟುವ ಅವಶ್ಯಕತೆಯಿಲ್ಲ. ಎಲ್ಲಿ ಶಾಂತಿಯ ಅವಶ್ಯಕತೆ ಇದೆಯೋ ಅಲ್ಲಿ ಇವರು 'ಶಾಂತಿ ಕೇಂದ್ರ' ತೆಗೆಯಲಿ. ಅದನ್ನು ಇಲ್ಲಿ ತೆರೆದಾಗ ನಮ್ಮ ಆಶ್ರಮದ ಶಾಂತಿ ಕದಡಿಹೋಗುವುದು. ನಮ್ಮ ಆಶ್ರಮದಲ್ಲಿ ಶ್ರೀ ರಾಮಚಂದ್ರ ಮಿಷನ್ ಅಲ್ಲದೆ ಬೇರೆ ಯಾವುದೂ ಕೆಲಸ ಮಾಡಲೂ ಸಾಧ್ಯವಿಲ್ಲ. ನೀವು ಸಂಪೂರ್ಣ ನಿರಾಕರಿಸಿಬಿಡಿರಿ. ಇದು ನನ್ನ ಅಂತಿಮ ನಿರ್ಣಯ. ನೀವು ತತಕ್ಷಣ ಕುಮಾರಸ್ವಾಮಿಗೆ ತಮ್ಮ ತಲೆಯ ಮೇಲೆ 'ಶಾಂತಿ ಕೇಂದ್ರ' ಸರ್ವಥಾ ಕಟ್ಟಿಸಕೂಡದೆಂದು ಬರೆದುಬಿಡಿರಿ. ಮತ್ತು ಅದಕ್ಕಾಗಿ ಯಾವ ರೀತಿಯ

ಅನುಮತಿಯನ್ನು ಕೊಡಕೂಡದು. ನೀವು 'ಶಾಂತಿ ಕೇಂದ್ರ' ನಿರ್ಮಾಣಗೊಳ್ಳುವುದಕ್ಕೆ ಹೇಗೆ ಒಪ್ಪಿಕೊಂಡಿರಿ, ಎಂಬುದು ನನಗೆ ಆಶ್ಚರ್ಯ ಉಂಟುಮಾಡಿದೆ. ಇದರಲ್ಲಿ ಕಾನೂನಿನ ತೊಡಕುಗಳು ಉಂಟಾಗಬಹುದು. ಮುಂದೆ ಖಟ್ಲೆಗಳು ಸಂಭವಿಸಬಹುದು. ಅದರಿಂದ ನಾವು ಬಹಳ ದೂರ ಇರಬಯಸುತ್ತೇವೆ.

**ನಿಮ್ಮ ಈಗಿನ ಸ್ಥಿತಿ "Vision of Absolute" ಇದೆ. ಅಂದರೆ ಸೂಫಿಗಳ ಪಾರಿಭಾಷೆಯಲ್ಲಿ ಇದನ್ನು "ಮಿಲನದ ಸ್ಥಿತಿ"ಯೆನ್ನಬಹುದು. ಆದರೆ ಬಂಧು, ಮುಂದೆ ಇನ್ನೂ ಏನೇನೋ ಇದೆ. ಇದಕ್ಕಿಂತ ಮುಂದೆ ಕೊಂಡೊಯ್ಯುವುದು ಈಶ್ವರನ ಕೈಯಲ್ಲಿದೆ.**

ನಾನು ದಾವಣಗೆರೆಗೆ ಹೋಗಲಾರೆ. ನನ್ನ ಬದಲು ನೀವು ಸಮಯ ಸಿಕ್ಕಾಗ ಹೋಗಿಬನ್ನಿ. ಜಹಗಿರದಾರರ ಪತ್ರ ಬಂದಿತ್ತು. ಗೌರವ ಪಾಸಿನ ಸಲುವಾಗಿ ಒಂದೂವರೆ ತಿಂಗಳು ಮುಂಚಿತವಾಗಿಯೇ ಕಾರ್ಯಕ್ರಮವನ್ನು ತಿಳಿಸಬೇಕೆಂದು ಬರೆದಿದ್ದರು. ಆದರೆ ಹೊಸ ವೇಳಾಪಟ್ಟಿ ಇನ್ನೂ ಬಂದಿಲ್ಲವಾದ ಕಾರಣ ತೊಂದರೆಯಿದೆ. ನಾನು ದೆಹಲಿಯ ಮಹಾಜನ ಅವರಿಗೆ ಇವೊತ್ತು ಪುನಃ ಬರೆಯುತ್ತಿರುವೆನು. ನಾನು ದೆಹಲಿಯಲ್ಲಿ ರೇಲ್ವೆ ಉಪಸಚಿವರಿಗೆ ಸಹ ಹೊಸ ವೇಳಾಪಟ್ಟಿ ಬಂದ ಮೇಲೆ ಕಾರ್ಯಕ್ರಮ ಕಳಿಸಲು ಶಕ್ತನಾಗುವೆನೆಂದು ಬರೆದಿದ್ದೇನೆ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

**ವಿ.ಸೂ:ಶಿವಲಿಂಗಪ್ಪಾ ಮತ್ತು ಆಯಿಲರೆಡ್ಡಿ ನನ್ನ ಬಳಿ ತಂಗಿರುವರು. ಅವರಲ್ಲಿ ಎಷ್ಟು ಸ್ಥೂಲತೆಯಿದೆಯೆಂದರೆ, ಇಲ್ಲಿಯವರೆಗೆ ನನಗೆ ಅದನ್ನು ದೂರ ಮಾಡಲಾಗಿಲ್ಲ. ಹೆಚ್ಚು ಕಡಿಮೆ ಪ್ರತಿಯೊಂದು ಪ್ರಕರಣದಲ್ಲಿಯೂ ನನಗೆ ಇದನ್ನೇ ಮಾಡಬೇಕಾಗುತ್ತದೆ. ಮತ್ತೆ ಕೆಲವೇ ದಿನಗಳ ನಂತರ ಅವರು ಪುನಃ ಮೊದಲಿನಂತೆ ಆಗಿಬಿಡುತ್ತಾರೆ. ಮತ್ತೆ ಹೇಗೆ ಮುಂದುವರಿಸುವುದು? ಶುದ್ಧೀಕರಣದ ಕಾರ್ಯವನ್ನು ದಿನಾಲು ಮಾಡುತ್ತಾರೆ. ಆದರೆ ಅದರ ಯಾವ ಲಾಭವೂ ಕಂಡುಬರುವುದಿಲ್ಲ. ಏನು ತಪ್ಪು ಮಾಡುತ್ತಿರುವರೆಂದು ನೀವೇ ವಿಚಾರ ಮಾಡಿ ನೋಡಿ. ಆ ಪ್ರಕಾರ ತಿಳುವಳಿಕೆ ಕೊಡಿರಿ.**

◆ ◆ ◆

"ಓಂ ತತ್‌ಸತ್"

ನಂ.೧೬೮ ಶಾಹಜಹಾನ್‌ಪೂರ್
ನಂ.ಸಿ.೫೨೯/ಎಸ್.ಆರ್.ಸಿ.ಎಮ್. ದಿ.೭.೧೧.೧೯೬೮

ನನ್ನ . . . . . ರಾವ್,

ದೀರ್ಘಾಯುಷಿಯಾಗಿರಿ. ನಿಮ್ಮ ಮಮತೆಯ ಪತ್ರ ತಲುಪಿತು. ಈ ಸಲ ಆಶ್ರಮವು ಇಲ್ಲಿ ಆಗಿಯೇ ತೀರುವುದು. ಈಶ್ವರನು ಯಾವಾಗ ಜಾಗವನ್ನು ಕೊಟ್ಟಿರುವನೋ, ಅವನೇ ಕಟ್ಟಿಸಿಯೂ ಕೊಡುವನು. ನನಗೆ ಮೊದಲನೆಯ ತರಗತಿಯ ರೇಲ್ವೆ ಪಾಸು ದೊರಕಿದ್ದು ಕೈ ಸೇರಿಯೂ ಇದೆ. ಕಸ್ತೂರಿ ನನ್ನ ಜೊತೆಯಲ್ಲಿ ಬರುತ್ತಲಿದ್ದಾಳೆ. ನಾನು ಆಕೆಯನ್ನು ಹೈದ್ರಾಬಾದಿನಿಂದ ರಾಯಚೂರಿಗೆ ಕಳಿಸಲು ಇಚ್ಛಿಸುವೆ. ಬೀದರ ಮತ್ತು ಗುಲ್ಬರ್ಗಾದ ಪ್ರವಾಸದಲ್ಲಿ ಜೊತೆಯಲ್ಲಿ ಇರಿಸಿಕೊಳ್ಳಲಿಚ್ಛಿಸುವುದಿಲ್ಲ. ನೀವು ಹೈದ್ರಾಬಾದಿನಿಂದ ರಾಯಚೂರಿಗೆ ಹಿಂತಿರುಗುವುದಾದರೆ, ನಿಮ್ಮ ಜೊತೆಯಲ್ಲೇ ಕಳಿಸಿಕೊಡುವೆನು. ಮತ್ತು ಅವಳು ನಿಮ್ಮಲ್ಲಿಯೇ ಇರುವಳು. ಅಲ್ಲಿ ಅವಳಿಗೆ ಹೆಚ್ಚಿಗೆ ಆರಾಮ ಸಿಗುವುದು. ಅಲ್ಲಿ ನನ್ನ ದೈನಂದಿನ ಪದ್ಧತಿ ಹೋದ ವರ್ಷದ ಹಾಗೆಯೆ ಇರುವುದು. ಅರ್ಥಾತ್ ಹಗಲು ಹೊತ್ತು ವಿಠ್ಠಲರಾಯರ ಬಳಿ ಹಾಗೂ ರಾತ್ರಿ ನಿಮ್ಮ ಬಳಿ. ಉಮೇಶನ ಪರೀಕ್ಷೆಯು ಇವೊತ್ತು ಮುಗಿಯಿತು. ಇದು chartered ಕೋರ್ಸಿನ ಕೊನೆಯ ಅವಕಾಶವಾಗಿದೆ. ಇಲ್ಲಿಯವರೆಗೆ ಆತನು ಎರಡು ಅಥವಾ ಮೂರು ಅಂಕಗಳಿಂದ, ಯಾವುದಾದರೊಂದು ವಿಷಯದಲ್ಲಿ ಉಳಿದುಕೊಂಡಿರುವನು. ಆತನ ಯಶಸ್ಸಿಗಾಗಿ ನೀವು ಪ್ರಾರ್ಥನೆ ಮಾಡಿರಿ. ಈಶ್ವರನು ಪ್ರಾರ್ಥನೆ ಮನ್ನಿಸುವನು. ಕುಮಾರಸ್ವಾಮಿ ಈ ದಿನಗಳಲ್ಲಿ ನಿವೃತ್ತಿ ಪೂರ್ವ ರಜೆಯಮೇಲೆ ಇರುವರು. ಅವರು ನನ್ನನ್ನು ಹೀಗೆ ಕೇಳಿರುವರು, ''ನನಗೆ ಮದ್ರಾಸಿಗೆ ಹೋಗಬೇಕೆಂದಾದರೆ ನನಗೆ ಬರೆದು ತಿಳಿಸಬೇಕು. ಏಕೆಂದರೆ ನಾನು ನನ್ನ ಸಾಮಾನುಗಳನ್ನು ಸ್ವಲ್ಪಸ್ವಲ್ಪವಾಗಿ ಕಳಿಸಲು ಆರಂಭಿಸುವೆ. ಒಂದು ವೇಳೆ ನಾನು ಹೈದ್ರಾಬಾದಿನಲ್ಲಿಯೇ ಇರಬೇಕೆಂದರೆ ಅದನ್ನೂ ಬರೆದು ಬಿಡಿರಿ.'' ನಿವೃತ್ತಿಯ ನಂತರ ಮನೆಯ ಬಾಡಿಗೆಯನ್ನು ಕೊಡುವುದು ಅವರಿಗೆ ಸಾಧ್ಯವಿಲ್ಲ. ಆಶ್ರಮದ ಮೇಲೆ ಆಗುತ್ತಿರುವ ಕಟ್ಟಡದಲ್ಲಿ ಅವರನ್ನು ಇರಿಸಬೇಕೆಂದು ನನಗೆನಿಸುತ್ತದೆ. ಅಲ್ಲಿ ಮಿಶನ್ನಿನ ಕೆಲಸವನ್ನು ಮಾಡಲಿ. ಒಬ್ಬ ವ್ಯಕ್ತಿಯು ಸದಾಕಾಲ ಆಶ್ರಮದಲ್ಲಿದ್ದ ಪಕ್ಷದಲ್ಲಿ ಜನತೆಗೆ ಹೆಚ್ಚಿನ ಲಾಭವಾಗುವುದು. ಮತ್ತು ಅವರು ಬಹಳ ಉತ್ತಮ ಪ್ರಶಿಕ್ಷಕರಾಗಿದ್ದು ಅವರ ಪ್ರವೇಶವು ಈಗ ಕೇಂದ್ರಮಂಡಲದಲ್ಲಿದೆ. ಅವರು ಆಶ್ರಮದಲ್ಲಿರುವುದು ಎಲ್ಲ ರೀತಿಯಿಂದಲೂ ಸಮಂಜಸವಾಗುವುದು. ಮಿಷನ್ನಿನ ಕೆಲಸವನ್ನು ಅವರು ಬಹಳ ನಿಷ್ಠೆಯಿಂದ ಮಾಡುವರು. ನಾನು ಅವರಿಗೆ ಒಂದು ಪತ್ರ ಸಹ ಬರೆದಿದ್ದೇನೆ. ಅದರ ಪ್ರತಿಯನ್ನು ನಿಮಗೂ ಕಳಿಸಲಾಗುತ್ತಿದೆ. ನಾನು ಹೀಗೆ ಇಚ್ಛಿಸುವೆನೆಂದು ಸಿ.ರಾಘವೇಂದ್ರರಾಯರಿಗೆ ಸಹ ಸೂಚನೆ ಕೊಡುವೆನು. ಮತ್ತು ಅವರನ್ನು ಆಶ್ರಮದಲ್ಲಿಯೆ ಇಡತಕ್ಕದ್ದು.

ನೀವು "ಗಂಡಹೆಂಡತಿಯರಲ್ಲಿ ಸಾಮರಸ್ಯ"ದ ಬಗ್ಗೆ ಬರೆದಿದ್ದೀರಿ. ಅದು ಎಂಥ ಸಮಸ್ಯೆ ಎಂದರೆ ಇದನ್ನು ಮಹಾ ಮೇಧಾವಿಗಳಾದ ಸಾಕ್ರೇಟೀಸನಂತಹವರಿಗೂ ಈ ಸಮಸ್ಯೆಗೆ ಸೂಕ್ತ ಪರಿಹಾರ ಕಂಡು ಹಿಡಿಯಲಾಗಲಿಲ್ಲ. ಸಾಕ್ರೇಟೀಸನ ಹೆಂಡತಿ ಅತ್ಯಂತ ಮುಂಗೋಪಿಯಾಗಿದ್ದಳು. ಮತ್ತು ಆತನು ಬುದ್ಧಿಪೂರ್ವಕವಾಗಿ ಇಂಥ ಹೆಣ್ಣನ್ನೆ ಮದುವೆಯಾಗಲು ಬಯಸಿದ್ದನು. ಆತನ ಶಿಷ್ಯಂದಿರು "ನೀವು ಹೀಗೆ ಯಾಕೆ ಮಾಡಿದಿರಿ"? ಎಂದು ಕೇಳಿದ್ದಕ್ಕೆ , "ತಾಳ್ಮೆಯ ರೂಢಿ ಹೆಚ್ಚು ಬೆಳೆಯಲೆಂದು ಹೀಗೆಮಾಡಿದೆನು", ಎಂದು ಉತ್ತರ ಕೊಟ್ಟನಂತೆ. ಸಂತನು ಎಷ್ಟು ಮೇಲ್ಮಟ್ಟಕ್ಕೆ ಮುಟ್ಟಿದವನಾಗಿರುವನೋ ಅಷ್ಟೇ ಹೆಚ್ಚಾಗಿ ಆತನ ಹೆಂಡತಿ ಮುಂಗೋಪಿಯಾಗಿರುವುದು ಅನೇಕ ಸಲ ಎಲ್ಲೆಲ್ಲೂ ಓದಿದ್ದು ಮತ್ತು ನೋಡಿದ್ದು ಸಹ ಆಗಿದೆ. ಇದೇನು ಅನಿವಾರ್ಯವಾದ ನಿಯಮವಲ್ಲ. ಆದರೆ ನೋಡಿದಾಗ ಇಂಥವುಗಳೇ ದೃಷ್ಟಿಯಲ್ಲಿ ಕಂಡುಬರುತ್ತವೆ. ಆದರ ಒಂದು ಉದಾಹರಣೆ ಸ್ವತಃ ನಾನೇ ಇರುವೆನು. ಲಾಲಾಜಿ ಮಹಾರಾಜರೂ ಮತ್ತು ಹಲವೊಂದು ಗುರು ಬಂಧುಗಳು ಇಂಥದ್ದೆ ದೂರುವುಳ್ಳವರಾಗಿ ದೊರೆತರು. ಇದೇನೋ ಸಮಾಧಾನಕ್ಕಾಗಿ ಆಯಿತು. ಈಗ ನಿಜವಾದ ಕಾರಣದ ಬಗ್ಗೆ ಹೇಳುತ್ತೇನೆ. ನೀವು ಯೋಗ್ಯರಾಗಿದ್ದರೂ ಮತ್ತು ನಾನು ಆಗಬೇಕೆಂದು ಬಯಸಿದ್ದರೂ ಸಹ, ನಿಮ್ಮ ಪರಿವರ್ತನೆಗೆ ಎಷ್ಟು ಸಮಯ ಹಿಡಿಯಿತೆಂಬುದನ್ನು ಮೊದಲು ಹೇಳಿರಿ. "ನಿಮಗೆ ಕೆಟ್ಟ ಮನುಷ್ಯರ ಅವಶ್ಯಕತೆಯಿದ್ದರೆ ಒಳ್ಳೆಯವರಲ್ಲಿ ಹುಡುಕಿರಿ ಮತ್ತು ಮೂರ್ಖರ ಯಾದಿ ಮಾಡಬೇಕಾದರೆ ಬುದ್ಧಿವಂತರಲ್ಲಿ ಹುಡುಕಿರಿ" ಎಂದು ಗಾದೆಯಿದೆ.

ಪುರುಷನು ತನ್ನ ಸ್ಥಾನದಲ್ಲಿರುವನು. ಹೆಂಗಸು ತನ್ನ ಸ್ಥಾನದಲ್ಲಿರುವಳು.

ಇಲ್ಲಿ ಪುರುಷನೆಂದರೆ ಗಂಡೆಂದು ಅರ್ಥ. ಶಾಸ್ತ್ರೀಯ ಪಾರಿಭಾಷೆಯಲ್ಲಿ ನಾನು ಇದನ್ನು ಉಪಯೋಗಿಸಿಲ್ಲ. ಆದರೆ ಪರಿಸ್ಥಿತಿ ಹೇಗಾಗಿದೆಯೆಂದರೆ ಪುರುಷನು ತನ್ನ ಸ್ಥಾನವನ್ನು ಪ್ರಕೃತಿಯದಾಗಿ ಮಾಡಿಕೊಂಡಿರುವನು. ಮತ್ತು ಸಮತೋಲನ ಸರಿಯಾಗಿ ಕಾಯ್ದುಕೊಂಡು ಹೋಗಲು ಪ್ರಕೃತಿ (ಹೆಣ್ಣು) ಪುರುಷನ ಸ್ಥಾನ ತೆಗೆದುಕೊಳ್ಳುವುದು ಅನಿವಾರ್ಯವಾದದ್ದು. ಇದಂತೂ ನಿಮಗೆ ತಿಳಿದೇ ಇದೆ : ಏನೆಂದರೆ ಆಕೆಯ ಸ್ಥಾನ ಪುರುಷನದ್ದಾದಾಗ ಆಕೆ ಪುರುಷನು ಆಡುವ ಆಟಗಳನ್ನೆ ಆಡುವಳು. ಅಂದರೆ ನಿಸರ್ಗದ ಮೇಲೆ ಪ್ರಭುತ್ವ ಪಡೆಯುವಳು. ಅದು ಸಿಟ್ಟು ಸೆಡವಿನಿಂದಾಗಲಿ ಇನ್ನಾವುದಾದರೂ ರೀತಿಯಿಂದಾಗಲಿ. ಹೇಗಾದರೂ ಪ್ರಭುತ್ವ ಪಡೆಯುವುದು. ಈಗ ವಾಸ್ತವವಾದ ವಿಷಯವನ್ನು ನಿಮ್ಮೆದುರಿಗೆ ಹೇಳುವೆನು. ಆದರೆ ಹಿರಿಯರು ಮತ್ತು ಸಂತರು ಈ ಕಡೆಗೆ ಹೆಚ್ಚು ಲಕ್ಷ್ಯಕೊಡುವುದಿಲ್ಲ. ಒಂದು ರೀತಿಯ ಚೋರಲು (ನುಣುಪಾದ) ಮಡಕೆಯಂತೆ (ಚಿಕನಾಗಡ) ನಾಚಿಕೆಯಿಲ್ಲದ ಜೀವನ ಕಳೆಯಬಯಸುವರು. ನಾನು ಇದಕ್ಕೂ ಮುಂಚೆ ಬರೆದಿರುವ ಮಾತು ಸಾಧಾರಣ ಪ್ರಾಪಂಚಿಕ ಜನರಿಗಾಗಿ ಇತ್ತು. ಮತ್ತು ಈ ಮೇಲಿನ ವಾಕ್ಯ ಸಂತರ ಪರಿಸ್ಥಿತಿಯನ್ನು ತೋರಿಸುತ್ತದೆ. ನಿಮಗಾಗಿ ಹೇಳುವುದಿಷ್ಟೆ : ಸೊಸೆಯು ತನ್ನ ಸ್ಥಿತಿಯನ್ನರಿತುಕೊಳ್ಳುವ ಹಾಗೆ ನೀವು ಆಕೆಯಲ್ಲಿ ಕ್ರಮೇಣ ಬದಲಾವಣೆಯನ್ನು ಏಕೆ ಉಂಟು ಮಾಡಬಾರದು?

ಪ್ರಪಂಚವು ನಿಮ್ಮ ಜೊತೆ ಜೊತೆ ಬರದೇ ಹೋದರೆ ನೀವು ಅದರ ಜೊತೆಯಲ್ಲಿ ಹೋಗುವ ಪ್ರಯತ್ನ ಮಾಡಿರಿ. ಇದರಿಂದ ಕಷ್ಟಗಳಿಂದ ಬಿಡುಗಡೆಯಾಗುವುದು. ಕೊಳಲಿನಿಂದ ಬೇರೆ ಬೇರೆ ಸ್ವರ ಹೊರಡುವುದು. ಎಲ್ಲ ರಂಧ್ರಗಳನ್ನು ಮುಚ್ಚಿದಾಗ ಅದರಿಂದ ಒಂದೇ ಒಂದು ಸ್ವರ ಹೊರಡುವುದು. ಈಗ ನಾನಂತೂ ಬರುತ್ತಿರುವೆನು. ಸಂಕ್ಷಿಪ್ತವಾಗಿ ಪತ್ರ ಬರೆಸಿರುವೆನು. ಮತ್ತು ಮುಂದೆ ಕೇಳಬಯಸಿದರೆ ಅಥವಾ ತಿಳಿಯಬಯಸಿದರೆ ನಾನು ಹೇಗಾದರೂ ಬರುತ್ತಿರವೆನು. ವಿಠ್ಠಲರಾಯರ ಬಗ್ಗೆ ನೀವೇ ನಿರ್ಧರಿಸಿರಿ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

**Changes in programme**

| | | | | | |
|---|---|---|---|---|---|
| Bangalore | Arrival | Sat | 14-12-68 | 13.00 | Island express |
| Bangalore | Dep. | Wed | 18-12-68 | 18.10 | |
| Salem | Arrival | Thu | 19-12-68 | 00.45 | Through Carriage |
| Nagpur | Arrival | Fri | 3-1-69 | 10.40 | Trichi |
| | Dep. | Sat | 4-1-69 | 10.55 | Express |
| Shahjahanpur | Arrival | Sun | 5-1-69 | 18.30 | 5 up Mail |

◆ ◆ ◆

"ಓಂ ತತ್‌ಸತ್"

ನಂ.೧೬೯ ಷಹಜಹಾನ್‌ಪೂರ್
ನಂ.ಸಿ.೪೯/ಎಸ್.ಆರ್.ಸಿ.ಎಮ್. ದಿ.೨೫.೨.೧೯೬೯

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಬಹಳ ತಡಮಾಡಿ ಉತ್ತರ ಕೊಡುತ್ತಿರುವೆನು. ಕಾರಣ ಅದೇ ಆಲಸ್ಯತನ ಮತ್ತು ಈ ನಡುವೆ ಗುಮಾಸ್ತನು ಇಲ್ಲದಿರುವುದು. ತಡವಾಗಿ ಪತ್ರ ಬರೆದು ತಾತ್ಕಾಲಿಕವಾಗಿ ನಿಮ್ಮನ್ನು ಅಸಮಾಧಾನಗೊಳಿಸಿರುವುದರಿಂದ ಅದಕ್ಕೂ ಹೆಚ್ಚಾಗಿ ಸಂತೋಷಗೊಳಿಸುವೆನು. **ಮೊದಲನೆಯದಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಯಾಕೆಂದರೆ ದಿನಾಂಕ (೧೧.೨.೧೯೬೯) ಫೆಬ್ರುವರಿ ೧೧, ೧೯೬೯ ಬೆಳಗ್ಗೆ ೬-೨೫ ನಿಮಿಷಕ್ಕೆ ಬ್ರಹ್ಮನಲ್ಲಿ ನಿಮ್ಮ ಲಯಾವಸ್ಥೆ ಆರಂಭವಾಯಿತು. ಇದೆಲ್ಲವೂ ಪೂಜ್ಯ**

ಲಾಲಾಜಿ ಸಾಹೇಬರ ಅನುಗ್ರಹದಿಂದಲೇ. ಇಲ್ಲದಿದ್ದರೆ ಇಂಥ ಸ್ಥಿತಿಯ ಸಂತನು ನೂರಾರು ವರ್ಷಗಳಲ್ಲಿ ಎಲ್ಲೋ ಒಬ್ಬನು ಸಿಗುವನು. ಮತ್ತು ಅವರ ಪ್ರಶಿಕ್ಷಣದ ವೈಶಿಷ್ಟ್ಯವೇನೆಂದರೆ ಒಂದೇ ಸಮಯದಲ್ಲಿ ಎಷ್ಟೋ ಜನರು ಇಂಥವರಾಗಬಹುದು. ಈ ಸ್ಥಿತಿಯವರೆಗೆ ಮುಟ್ಟಿದ ಎರಡು ಡಜನ ಜನರು ಒಂದು ವೇಳೆ ದೊರೆತು ಅವರು ಭಾರತದೇಶದ ವಿವಿಧ ಸ್ಥಳಗಳಲ್ಲಿ ಇದ್ದು ಪ್ರಶಿಕ್ಷಣ ಮತ್ತು ಪ್ರಚಾರದ ಕೆಲಸ ಮಾಡಿದರೆ ಇಪ್ಪತ್ತು ವರ್ಷಗಳಲ್ಲಿಯೇ ಭಾರತದಲ್ಲಿ ಪ್ರತಿಯೊಂದು ಕಡೆಯೂ ಅಧ್ಯಾತ್ಮಿಕತೆ ಹುಟ್ಟಿಬಿಡುವುದು.

ಆದರೆ ಬಂಧು, ಪೂಜ್ಯ ಲಾಲಾಜಿಯವರ ಕೃಪೆಯಿಂದ ಇಂಥ ಲಕ್ಷಗಟ್ಟಲೆ ಜನರನ್ನು ಸಿದ್ಧಗೊಳಿಸಬಹುದು. ಆದರೆ ನನಗೆ ಜನರೇ ಸಿಗುವುದಿಲ್ಲ. ಕೆಲವೊಬ್ಬರು ರಾಮನಾಮದ ಪುನರುಚ್ಚಾರಣೆ ಮಾಡಿದರೆ ಕೆಲವರು ಮಂತ್ರದ ಜಪದಲ್ಲಿ ಮಗ್ನರಾಗಿರುವರು. ಕೆಲವರು ಹೋಗುತ್ತಾ ಬರುತ್ತಾ ಜಪಮಾಲೆಯನ್ನು ನೇತಾಡಿಸಿಕೊಳ್ಳುವರು. ಮತ್ತು ತಾವು ದೊಡ್ಡ ಪೂಜಕರೆಂದು ತಿಳಿಯುವರು. ಸರಿಯಾದ ಕ್ರಿಯೆಯನ್ನು ಮಾಡದಿದ್ದಾಗ ಹಾದಿ ತಪ್ಪುವುದೆಂಬುದು ಅವರಿಗೆ ತಿಳಿಯುವುದಿಲ್ಲ. ದೇವಸ್ಥಾನಗಳಿಗೆ ಹೋಗಲು ನಿಷೇಧವೇನಿಲ್ಲ. ಆದರೆ ಜನರು ದೇವಸ್ಥಾನಗಳಿಗೆ ಹೋಗಿ ದೇವರನ್ನು ಅಲ್ಲಿಯೇ ಬಿಟ್ಟು ಶುದ್ಧ ಅಜ್ಞಾನಿಗಳಾಗಿಯೇ ಮನೆಗೆ ತಿರುಗುವರು. ನಾವು ಎಷ್ಟರ ಮಟ್ಟಿಗೆ ಅಧೋಗತಿ ಹೊಂದಿರುವವೆಂದರೆ ರಸ್ತೆ ಬದಿಯೊಳಿರುವ ಮೋರಿಯನ್ನು ಪೂಜಿಸುತ್ತಿರುವ ಒಬ್ಬನನ್ನು ನಾನು ಕಣ್ಣಾರೆ ಕಂಡಿರುವೆನು. ತಾಸೆರಡು ತಾಸು ಯಾವುದೋ ವಿಧದ ಪೂಜೆ ಮಾಡಿಕೊಳ್ಳುವ ಪ್ರತಿಯೊಬ್ಬರೂ ತಾವು ದೊಡ್ಡ ಭಕ್ತರೆಂದು ಭಾವಿಸುವರು. ಅವರು ತಮ್ಮಂತೆ ಇರುವ ದೇವರನ್ನು ಪೂಜೆ ಮಾಡಬಯಸುವರು. ಒಬ್ಬ ರೈತನು ಅರಮನೆಯಲ್ಲಿ ಹೋದಾಗ ಅಲ್ಲಿಯ ವಜ್ರವೈಢೂರ್ಯಗಳನ್ನು ಅಷ್ಟು ಮೆಚ್ಚುವುದಿಲ್ಲ. ಆದರೆ ಅಲ್ಲಿ ಒಂದು ನೇಗಿಲು ಇಟ್ಟಿದ್ದರೆ ಅವನು ಅದನ್ನೇ ನೋಡುವನು. ಮತ್ತು ಅದನ್ನೇ ಶ್ಲಾಘಿಸುವನು ಕೂಡ.

ನಿಮಗೆ ಒಂದು ಒಳ್ಳೆಯ ಮಾತು ಹೇಳಿಕೊಡುವೆನು. ಅದು ನಿಮಗೆ ತಿಳಿದಿರಲೂಬಹುದು. ಎಷ್ಟು ಬಾಹ್ಯ ಪೂಜೆ ಅಥವಾ ಕ್ರಿಯೆಗಳಿವೆಯೋ ಅವನ್ನು ಮಾಡುವವರು ಅಹಂಕಾರದಿಂದ ಆರಂಭಿಸುವರೆಂಬುದನ್ನು ನಾನು ಸಹ ಎಷ್ಟೋ ಸಲ ಹೇಳಿರಬಹುದು. ಅದರ ಅಡಿಪಾಯ ಅಹಂಕಾರವಿದ್ದು ಅವರು ಇವೊತ್ತು ಚೆನ್ನಾಗಿ ಪೂಜೆ ಮಾಡಿದೆವೆಂದು ಭಾವಿಸುವರು. ಒಟ್ಟಾರೆ ಇಂಥವರು (ಬಾಹ್ಯ ಪೂಜಕರು) ಅಹಂಕಾರದೊಂದಿಗೆ ಮುಂದುವರೆದರೆ, ಶ್ರೀ ರಾಮಚಂದ್ರ ಮಿಷನ್ನಿನಲ್ಲಿ ದೈವತ್ವದೊಂದಿಗೆ ಮುಂದುವರೆಯುವರು ಮತ್ತು ಅದರ ಶಕ್ತಿಯಿಂದಲೇ ಸಾಕ್ಷಾತ್ಕಾರವನ್ನೂ ಪಡೆಯುವರು. ಇರಲಿ, ಇದೆಲ್ಲ ನಾನು ಸಾಕಷ್ಟು ಗೊಣಗಿದೆ. ಈಗ ನಿಜವಾದ ಉದ್ದೇಶಕ್ಕೆ ಬರುತ್ತೇನೆ. ಆದರೆ ಇದಕ್ಕೂ ಮುಂಚೆ ಒಂದು ನ್ಯಾಯವಾದ ಮಾತನ್ನು ಹೇಳಬಯಸುತ್ತೇನೆ. ಈಗ ನಾನು ನಿಮ್ಮಿಂದ ಗುರುದಕ್ಷಿಣೆ ಪಡೆಯುವ ಹಕ್ಕನ್ನು ಹೊಂದಿರುವೆನು. ನೀವು ಮನಸ್ಸಿಗೆ ಬಂದದ್ದು ಕಳಿಸಬೇಕೆಂಬುದು ಇದರ ಅರ್ಥವಲ್ಲ. ಆದರೆ ನಾನು ಕೇಳಿದ್ದನ್ನು ಕೊಡಬೇಕಾಗುವುದು.

ಇರಲಿ. ಇದಕ್ಕಾಗಿ ನಾನು ಆಮೇಲೆ ಬರೆಯುವೆ. ಇದನ್ನು ಕುರಿತು ನೀವು ಆಲೋಚಿಸಿದರೆ, ನಾನು ಏನನ್ನು ಬಯಸಿರುವೆನೆಂದು ಕಂಡುಹಿಡಿಯಬಹುದು. ನಾನೇನು ಬಯಸುವೆನೋ, ಆ ಬಗ್ಗೆ ಮತ್ತೆ ಬರೆಯುವೆನು. ಈಗಿದ್ದ ಸ್ಥಿತಿಯ ಬಗ್ಗೆ ನಿಮಗೆ ಹೇಗೆನಿಸುವುದೆಂಬುದನ್ನು ನನಗೆ ಬರೆಯಿರಿ. "ನಾನು ಅದನ್ನು ಸರಿಯಾಗಿ ತಿಳಿಸಬಲ್ಲೆನೋ ಇಲ್ಲವೋ" ಎಂಬ ಅನುಮಾನವನ್ನು ಮೊದಲಿನಿಂದಲೇ ಇಟ್ಟುಕೊಳ್ಳಬೇಡಿರಿ. ಕಂಪನ (Vibrations) ಎಲ್ಲಿ ಇರುತ್ತವೆ? ಮಂದವಾಗಿಯೋ ಅಥವಾ ತೀಕ್ಷ್ಣವಾಗಿಯೋ, ಮುಂತಾದುವನ್ನು ತಿಳಿಸಿರಿ. ಇದನ್ನು ನನ್ನ ತಿಳುವಳಿಕೆಗಾಗಿ ಕೇಳುತ್ತಿರುವೆನು. ಏಕೆಂದರೆ ಒಬ್ಬೊಬ್ಬರಾದರು ಈ ಅನುಭವ ಪಡೆದುಕೊಂಡವರು ಮಿಷನ್ನಿನಲ್ಲಿ ಇರುವುದು ನನ್ನ ಸುದೈವ.

ಮತ್ತೊಂದು ಸಂತೋಷದ ಸಮಾಚಾರವೇನೆಂದರೆ ನೀವು ಸರನಾಡಜಿಯವರಲ್ಲಿ ಸಹಕಾರವನ್ನು ಹುಟ್ಟಿಸಿರುವಿರಿ. ಮತ್ತು ಅವರನ್ನು ಈ ವಿಶಿಷ್ಟ ಪ್ರಶಿಕ್ಷಣದಲ್ಲಿ ತೆಗೆದುಕೊಂಡಿರುವೆನು. ಜಹಗೀರದಾರರು ಸಹ ಉತ್ತಮ ಪ್ರಗತಿ ಹೊಂದುವರೆಂದು ಅರ್ಥವಾಗುವ ಚಿಹ್ನೆಗಳನ್ನು ತೋರಿಸಿದ್ದಾರೆ. ಆದರೆ ಇತ್ತೀಚೆಗೆ ಆ ಚಿಹ್ನೆಗಳು ಸ್ವಲ್ಪ ಮಂದವಾಗಿರುವವು. ಅದರ ಕಾರಣವೇನೆಂದು ತಿಳಿಯದು.

ಧಾರವಾಡದಿಂದ ಶ್ರೀರಾಮಚಂದ್ರ ಏನೀತ ಅವರ ಪತ್ರ ಬಂದಿದೆ. ಅವರಿಗೆ ಸಾಯಿಬಾಬರಿಂದ ಏನೂ ಆಧ್ಯಾತ್ಮಿಕ ಲಾಭ ದೊರೆಯಲಿಲ್ಲವಾದ್ದರಿಂದ ಅವರು ಮಿಷನ್‌ನಿನಲ್ಲಿ ಪುನಃ ವಾಪಸು ಬರಲು ಇಚ್ಛಿಸಿದ್ದಾರೆ. ಆ ಪತ್ರ ಬಂದು ತಿಂಗಳ ಮೇಲಾಯಿತು. ನಾನು ಇಲ್ಲಿಯವರೆಗೆ ಅವರಿಗೆ ಯಾವ ಉತ್ತರವನ್ನೂ ಕೊಟ್ಟಿಲ್ಲ. ಬೆಳಿಗ್ಗೆ ದಾರಿ ತಪ್ಪಿದವನು ಸಾಯಂಕಾಲ ಮನೆಗೆ ಬಂದಿದ್ದಾದರೆ ಅವನು ದಾರಿ ತಪ್ಪಿದವನೆಂದು ಅನಿಸಲಾರ. ನೀವು ನನ್ನ ಪರವಾಗಿ ಪುನಃ ಸೇರಬಹುದೆಂದು ಅವರಿಗೆ ಬರೆಯಿರಿ. ಅವರು ಸಮೀಪದಲ್ಲಿರುವ ಪ್ರಶಿಕ್ಷಕನ ಹತ್ತಿರ ಬೇಗ ಹೋಗಬೇಕು. ಅವರು ನಿಮ್ಮನ್ನೇ ಭೇಟಿಯಾದರಂತೂ ಮತ್ತಷ್ಟು ಒಳ್ಳೆಯದು.

ನೀವು ಎಸ್.ರಾಮ್‌ಕಿಷನ್‌ರಾಯರಿಗೆ ತಾತ್ಕಾಲಿಕ ಅನುಮತಿ ಕೊಡಲು ಹೇಳಿರುವಿರಿ. ತಮ್ಮ ಮನೆಯಲ್ಲಿ ದೀಕ್ಷೆ ಹೊಂದಿದವರು ಇವರೇ ಏನು? ಇವರ ಆಕೃತಿ ದೃಷ್ಟಿಯಲ್ಲಿ ಬರಲೊಲ್ಲದಾಗಿದೆ. ಇವರು ಅವರೇ ಆಗಿದ್ದರೆ, ನನಗೆ ತಿಳಿದ ಮಟ್ಟಿಗೆ ನಾನು ರಾಯಚೂರಿನಲ್ಲಿ ಇನ್ನೊಬ್ಬರೆಂದು ತಪ್ಪು ತಿಳಿದು, ಇವರನ್ನೂ ಸ್ವಲ್ಪ ಸಿದ್ಧ ಮಾಡಿದೆ. ನೀವು ಒಂದು ಪುಸ್ತಕವನ್ನು ಬರೆಯಲು ಆರಂಭಿಸಿರುವುದು ಬಹಳ ಒಳ್ಳೆಯದಾಯಿತು. ನೀವು ಚೆನ್ನಾಗಿಯೇ ಬರೆಯುವಿರಿ. ಆಶ್ರಮದ ಕಟ್ಟಡ ಆರಂಭವಾದದ್ದು ಒಳ್ಳೆಯದಾಯಿತು. ದೇವರು ಆ ಕೆಲಸದಲ್ಲಿ ಪ್ರಗತಿಯನ್ನು ದಯಪಾಲಿಸಲಿ.

ಈಗ ಸದ್ಯದಲ್ಲಿ ಕೆಲವು ತಿಂಗಳುಗಳಿಂದ ನನ್ನ ಹತ್ತಿರ ಯಾವ ಬೆರಳಚ್ಚುಗಾರನು ಇಲ್ಲ. ಯಾರಾದರೂ ಸಿಕ್ಕನಂತರ ಠರಾವಿನ ಪ್ರತಿಯನ್ನು ನಿಮಗೆ ಕಳಿಸುವೆನು.

ನಾನು ಎಪ್ಪತ್ತು ವರ್ಷದವನೇನೋ ಆಗಿರುವೆ. ಮತ್ತು ನಾನು ಎಪ್ಪತ್ತು ವರ್ಷವಾದವನೆಂಬ ವಿಷಯ ನನಗೆ ತಿಳಿದಿರಲಿಲ್ಲ. ನನಗೆ ನಾನು ಅರವತ್ತೊಂಬತ್ತು ವರ್ಷದವನೆಂದು ತಿಳಿದಿದ್ದೆ. ನೀವು ಈ ವಿಷಯಕ್ಕೆ ಚಿಂತಿಸಬೇಡಿರಿ. ನಾನು ಜೀವಂತನಾಗಿ ಬಂದಿರುವೆನು. ಜೀವಂತನಾಗಿಯೇ ಹೋಗುವೆನು. ಸಾಯುವ ಪ್ರಶ್ನೆಯೇ ಇಲ್ಲ. ಇನ್ನೊಬ್ಬನು ವರ್ಗಾಯಿಸಿದ ಆಯುಸ್ಸಿನಲ್ಲಿಯೇ ನಾನು ಜೀವನ ನಡೆಸುತ್ತಿರುವ ವಿಷಯ ನಿಮಗೆ ಗೊತ್ತಿದೆ. ಆದುದರಿಂದ ನಾನು ಇನ್ನು ಎಷ್ಟು ದಿವಸ ಇರಬೇಕೆಂಬುದು ತಿಳಿಯದು. ಅಲಹಾಬಾದಿನ ಪ್ರಸಂಗ ನಿಮಗೆ ಜ್ಞಾಪಕವಿರಬಹುದು. ಆಗ ನನ್ನ ಪೂರ್ಣ ಆಯುಷ್ಯದಲ್ಲಿ ಆರು ತಿಂಗಳು ಉಳಿಸಿಕೊಂಡು ಉಳಿದುದೆಲ್ಲವನ್ನು ವರ್ಗಾಯಿಸಿಬಿಟ್ಟಿದ್ದೆ.

ಜನರು ನನ್ನ ಬಳಿ ಬರುತ್ತಾರೆ. ಮತ್ತು ಏನಾದರೂ ಮರೆತು ಹೋಗುತ್ತಾರೆ. ಅದರಂತೆ ಈ ಸಲವೂ ಹಾಗೆಯೇ ಆಗಿದೆ. ಆ ಬಗ್ಗೆ ಯಾರೂ ನನಗೆ ಬರೆಯಲೂ ಇಲ್ಲ. ರಾಯಚೂರ ಎಂದು ಬರೆದಿರುವ ಒಂದು ಪ್ಯಾಂಟನ್ನು ಯಾರೋ ಮಹನಿಯರು ಮರೆತು ಹೋಗಿರುವರು. ಇದು ಶ್ರೀಕಂಠಯ್ಯನವರದೋ ಹೇಗೆ? ಯಾರದೆಂದು ನಿಮಗೆ ಗೊತ್ತು ಮಾಡಿಕೊಳ್ಳಲು ಸಾಧ್ಯವಾದರೆ ಬರೆಯಿರಿ. ಆಗ ನಾನು ಕಳುಹಿಸಬಲ್ಲೆ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ:೧೭೦ ಷಾಹಜಹಾನ್‌ಪೂರ್

ನಂ.ಸಿ ೨೨೧/ಎಸ್.ಆರ್.ಸಿ.ಎಮ್. ದಿ.೫.೪.೬೯

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಶುಭಾಶೀರ್ವಾದದ ನಂತರ ತಿಳಿಸುವದೇನೆಂದರೆ ನಿಮ್ಮ ಸಲಹೆಯ ಪ್ರಕಾರ ಶ್ರೀ ಎಸ್. ರಾಮಕಿಶನರಾವ ಅವರಿಗೆ ೧ನೆಯ ಎಪ್ರಿಲ್ ೧೯೬೯ರಂದು ಆಧ್ಯಾತ್ಮಿಕ ಪ್ರಶಿಕ್ಷಣಕ್ಕಾಗಿ ತಾತ್ಕಾಲಿಕ ಅನುಮತಿ ಕೊಟ್ಟಿರುವೆನು. ಅವರು ಸತ್ಸಂಗದ ತಮ್ಮ ಕೆಲಸ ಆರಂಭ ಮಾಡಲು ನೀವು ಅವರಿಗೆ ಬರೆದು ಅಗತ್ಯವಾದ ಸಲಹೆಗಳನ್ನು ಸಹ ಕೊಡಿರಿ. ನಾನು ನಾಳೆ ಭಾನುವಾರದಂದು ಲಖನೌಕ್ಕೆ ಹೋಗುವೆನು. ನನ್ನ ತಂಗಿ ಕೆಲವು ಆವಶ್ಯಕ ಕೆಲಸಗಳಿಗಾಗಿ ನನ್ನನ್ನು ಕರೆದಿರುವಳು. ಪ್ರಾಯಶಃ ೩ ದಿನಗಳು ಹಿಡಿಯುವುವು. ತಿರುಗಿ ಬಂದ ನಂತರ ನಿಮ್ಮ ಪತ್ರಕ್ಕೆ ಉತ್ತರ ಕೊಡುವೆನು. ರಾಮಕಿಶನರಾವ್‌ರಿಗೆ ಪ್ರಮಾಣ ಪತ್ರವನ್ನು ಜಾರಿ

ಮಾಡಿ ನಿಮ್ಮ ಬಳಿ ಕಳುಹಿಸುವೆನು. ಕುಮಾರಸ್ವಾಮಿಯವರನ್ನು ಕೇಂದ್ರ ಮಂಡಲದಲ್ಲಿ ಕಳಿಸಿರುವೆನು. ಬ್ರಹ್ಮನಲ್ಲಿ ಲಯ ಅವಸ್ಥೆಯನ್ನುಂಟು ಮಾಡಲು ನಾನು ಪ್ರಯತ್ನಿಸಬೇಕೆಂದು ಅವರು ನನ್ನನ್ನು ಪ್ರಾರ್ಥಿಸಿರುವರು. ಇದು ಕೇವಲ ಈಶ್ವರನ ಕೈಯಲ್ಲಿದೆ. ಇನ್ನೂ ವೃತ್ತಗಳನ್ನು ದಾಟುವುದಿದೆ. ಅವನ್ನು ಸಹಜ ರೀತಿಯಲ್ಲಿ ದಾಟಿಸಬೇಕಾದರೆ ಮತ್ತು ಅಭ್ಯಾಸಿಯಲ್ಲಿ ಸಾಕಷ್ಟು ಪ್ರೇಮ (ಭಕ್ತಿ) ಇದ್ದರೆ ಇಪ್ಪತ್ತೊಂದು ವರ್ಷಗಳು ಹಿಡಿಯುವುವು. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೭೧
ನಂ.ಸಿ-೪೩೫/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ.೨೯.೫.೧೯೬೯

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಾನು ಒಂದು ಕೆಲಸಕ್ಕಾಗಿ ಇವೊತ್ತು ಮದ್ರಾಸಿಗೆ ಹೋಗುತ್ತಿರುವೆನು. ೧೭ನೇಯ ಮೇ ೬೯ರ ಬೆಳಿಗ್ಗೆ G.T.Exp.ಯಿಂದ ತಲುಪುವೆನು. ಮತ್ತು ಒಂದು ವಾರ ತಂಗುವೆನು.

ನಾನು ಒಂದು ಪತ್ರ ಕಳಿಸಿದ್ದೆ. ಅದರಲ್ಲಿ ೩ ಎಪ್ರಿಲ್ ೬೯ಕ್ಕೆ ಶ್ರೀ ಎಸ್.ರಾಮಕಿಶನರಾವ್ ಅವರಿಗೆ ತಾತ್ಕಾಲಿಕ ಅನುಮತಿ ಕೊಟ್ಟಿದ್ದನ್ನು ಬರೆದಿದ್ದೆ. ಅದರ ಉತ್ತರ ಬರಲಿಲ್ಲ. ಆ ಪತ್ರ ನಿಮಗೆ ಸಿಕ್ಕಿದೆಯೋ ಇಲ್ಲವೋ ತಿಳಿಯಲಿಲ್ಲ. ಪ್ರಮಾಣಪತ್ರವನ್ನು ಅನಂತರ ಕಳಿಸುವೆನು. ತಿರುಗಿ ಬಂದ ನಂತರ ೬ನೆಯ ಜೂನ ೬೯ಕ್ಕೆ ಅಸ್ಸಾಮಿಗೆ ಹೋಗಲಿರುವೆನು. ಮತ್ತು ೨೯ನೆಯ ಜೂನಗೆ ತಿರುಗಿ ಬರುವೆನು. ಈಸಲ ಅಸ್ಸಾಮಿಗೆ ಹೋಗಲು ಗೌರವ ಪಾಸ್ ದೊರೆಯಲಿಲ್ಲ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೭೨ ಶಾಹಜಹಾನ್‌ಪೂರ್
ನಂ.ಸಿ-೮೬೭/ಎಸ್.ಆರ್.ಸಿ.ಎಮ್. ದಿ.೧೭.೯.೧೯೬೯

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಪತ್ರಗಳೆಲ್ಲಾ ತಲುಪಿದವು. ನಾನು ೧೭ನೆಯ ಅಕ್ಟೋಬರ್ ೬೯ ರಿಂದ ೨೯ನೆಯ ಅಕ್ಟೋಬರ್ ೬೯ ರವರೆಗೆ ನೇಪಾಳಿನ ಎರಡು ಜಿಲ್ಲೆಗಳು ಮತ್ತು ಅವರ ಸಮೀಪವಿರುವ ಬಹರೈಜ ಮುಂತಾದ ಎರಡು ಮೂರು ಜಿಲ್ಲೆಗಳಲ್ಲಿ ಪ್ರವಾಸ ಮಾಡುವೆ. ಆದುದರಿಂದ ನೀವು ಅದಕ್ಕೆ ಬಹಳ ಮುಂಚಿತವಾಗಿ ಆಗಲಿ ಅದರ ಅನಂತರವಾಗಲಿ ಬರಬಹುದು. ಇತ್ತೀಚೆಗೆ ಎರಡು ವಾರಗಳಿಂದ ಹೊಟ್ಟೆಯ ನೋವು ಬಹಳ ಉಲ್ಬಣಗೊಂಡಿದೆ. ಸ್ಥಳೀಯ ಡಾಕ್ಟರನ ಚಿಕಿತ್ಸೆ ನಡೆದಿದೆ. ಆದರೆ ಔಷಧವೇನೂ ವಿಶೇಷ ಲಾಭ ಮಾಡಿಲ್ಲ. ನೋವನ್ನು ತಾಳಿಕೊಳ್ಳುವ ಹಾಗಿದ್ದರೆ ಹೋಗುವೆ. ಇಲ್ಲದಿದ್ದರೆ ಪ್ರವಾಸ ಮುಂದೂಡುವೆ. ಆ ಸಮಯಕ್ಕಿಂತ ಮುಂಚಿತವಾಗಿಯೇ ಖಂಡಿತ ಗುಣಹೊಂದುವೆನೆಂಬ ಆಸೆಯಿದೆ.

ಕನ್ನಡ ಭಾಷೆಯಲ್ಲಿ ಮುದ್ರಣವಾಗುತ್ತಿರುವ ಪುಸ್ತಕಗಳನ್ನು ನನ್ನ ಬಳಿ ಕಳಿಸುವ ಆವಶ್ಯಕತೆ ಇಲ್ಲ. ಸಾಧ್ಯವಾದಷ್ಟು ಹೆಚ್ಚಿನ ಸಂಖ್ಯೆ ದಿನಪತ್ರಿಕೆಗಳಲ್ಲಿ ಅವುಗಳ ವಿಮರ್ಶೆ ಮಾಡಿಸಬೇಕು. ಅದರಿಂದ ವಿಚಾರಗಳ ಪ್ರಸಾರವಾಗುವುದು. ಮತ್ತು ಮಾರಾಟ ಹೆಚ್ಚಾಗುವುದು. ನೀವು ಬರೆಯಲಿಚ್ಛಿಸುತ್ತಿರುವ ಪುಸ್ತಕವನ್ನು ಆರಂಭ ಮಾಡಿರಿ. ಈಶ್ವರನು ಸಹಾಯ ಮಾಡುವನು. ಒಂದು ಜೀವಮಾನದಲ್ಲಿ ಯಾರು ಓದಲಾರದಷ್ಟು ಸಾಹಿತ್ಯವು ಮಿಷನ್ನಿನಲ್ಲಿ ಬೆಳೆಯಲೆಂದು ನನ್ನ ಅಪೇಕ್ಷೆ. ಆದರೆ ಸಾಹಿತ್ಯವು ಉತ್ತಮ ಶ್ರೇಣಿಯದಾಗಿರಬೇಕಲ್ಲದೆ ಸಹಜಮಾರ್ಗದ ಮೇಲಿರಬೇಕು. ಇದರಲ್ಲಿ ಸ್ವರ್ಣಾಡಜಿ ಸಹ ಒಳ್ಳೆಯ ಸಹಾಯ ಮಾಡಬಲ್ಲರು.

ನಾನು ಸರ್ನಾಡಜಿಯನ್ನು ಮತ್ತು **ಕುಮಾರಸ್ವಾಮಿಯನ್ನು ಕೇಂದ್ರ ಮಂಡಲದಲ್ಲಿ ಕಳುಹಿಸಿರುವೆನು. ಇದರ ಮುಂದಿನ ಪ್ರಶಿಕ್ಷಣ ನಿಮ್ಮ ವಶದಲ್ಲಿದೆ.** ನಾನು ಅವರಿಬ್ಬರಿಗೂ ಹೇಳಿರುವೆನು. ನಿಮಗೂ ತೋರಿಸಿರುವೆನು. ಈ ವಿಧದಿಂದ ಉಚ್ಚಮಟ್ಟದ ಪ್ರಶಿಕ್ಷಣ ಕೊಡುವುದಕ್ಕೆ ನಿಮ್ಮಲ್ಲಿ ಧೈರ್ಯ, ಸಾಹಸಗಳು ಬೆಳೆಯುವುವು. ಇದರಲ್ಲಿ ಪ್ರಾಣಾಹುತಿ ಕೊಡುವ ಕಾಲಕ್ಕೆ ಮಂಡಲದ ಮೇಲೆ ಏಕಾಗ್ರತೆ ಮಾಡಿ ಅದನ್ನು ವೀಕ್ಷಿಸುತ್ತ ಹೋಗಬೇಕು. ಒಂದೆರಡು ನಿಮಿಷದ ಪ್ರಾಣಾಹುತಿ ಸಾಕಾಗಬಹುದು. ಯಾವ ವೃತ್ತವೂ ಉದ್ರೇಕಗೊಳ್ಳದ ಹಾಗೆ, ಪ್ರಾಣಾಹುತಿ ಬಹಳ ಲಘುವಾಗಿರಬೇಕು. ಇಲ್ಲಿಯ ಪ್ರಶಿಕ್ಷಣದ ಬಗ್ಗೆ ಬಹಳಷ್ಟು ವಿಷಯಗಳನ್ನು ಬರೆಯ ಬಯಸಿ ಅದನ್ನು ಎರಡನೇಯ

ಭಾಗದಲ್ಲಿ ಸೇರಿಸಬೇಕೆಂದಿದ್ದೆ. ಆದರೆ ನಾನೆಷ್ಟು ಆಲಸಿ ಮತ್ತು ಅಶಕ್ತನಾಗಿರುವೆನೆಂದರೆ, ಯಾವ ಕೆಲಸ ಮಾಡುವುದಕ್ಕೂ ಮನಸ್ಸೇ ಆಗುವುದಿಲ್ಲ. ಆದರೆ ಯಾವ ಕೆಲಸದ ಸಂಬಂಧ "ನನಗಷ್ಟೇ" ಮಾತ್ರ ಇದೆಯೋ ಅದರಲ್ಲಿ ಭಗವತ್ ಕೃಪೆಯಿಂದ ಯಾವ ಕೊರತೆಯೂ ಉಂಟಾಗುವುದಿಲ್ಲ. ಕೇಂದ್ರಮಂಡಲದಲ್ಲಿ ನೀವು ಕೆಲಸ ಮಾಡಲಾರಂಭಿಸಿದಾಗ, ನನಗೆ ಬರೆಯುತ್ತಾ ಹೋಗಿರಿ, ನಾನು ನಿಮಗೆ ತಿಳಿಹೇಳುವೆನು.

ಬೀದರದಲ್ಲಿ ಸಭೆಯು ಚೆನ್ನಾಗಿಯೇ ಆಗಿರಬಹುದೆಂದು ಆಶಿಸುತ್ತೇನೆ. ಸಹಜಮಾರ್ಗ ಪದ್ಧತಿಯ ಮೇಲೆ ಜನರು ಚಿಂತನೆ ಮಾಡಿರಬಹುದು. ಶ್ರೀಗೋಪಾಲರಾವ್‌ಜಿ ಬಂದಿದ್ದರು. ನಾಲ್ಕೈದು ದಿನ ಇದ್ದು ಹೋದರು. ಈ ಸಲ ದಕ್ಷಿಣಭಾರತದ ಪ್ರವಾಸ ಬೇಸಿಗೆಯಲ್ಲಿ ಸಾಧ್ಯವಾಗಬಹುದು. ಏಕೆಂದರೆ ಜರ್ಮನಿಯಿಂದ ರಾಬರ್ಟ ಕೋಚ್ ಮತ್ತು ಫ್ರಾನ್ಸಿನಿಂದ ಆಂದ್ರೆ ಪೋರೆ ಚಳಿಗಾಲದಲ್ಲಿ ಇಲ್ಲಿ ಬರುವವರಿದ್ದು ಪ್ರತಿಯೊಬ್ಬರು ಸುಮಾರು ಎರಡು ವಾರದವರೆಗೆ ಇಲ್ಲಿರುವರು. ಈಗ ಗೌರವ ಪಾಸ್ ದೊರೆಯುವುದಿಲ್ಲ. ಏಕೆಂದರೆ ರೇಲ್ವೇಖಾತೆಯು ಎಲ್ಲವನ್ನು ನಿಲ್ಲಿಸಿಬಿಟ್ಟಿದೆ. ಆದುದರಿಂದ ಸಂಭವತಃ ದಕ್ಷಿಣದ ಪ್ರವಾಸದಲ್ಲಿ ನನ್ನ ಜೊತೆಗೆ ಇಬ್ಬರೇ ಇರಬಹುದು. ನನಗೆ ಪ್ರವಾಸದಲ್ಲಿ ನಿಶ್ಶಕ್ತತೆಯಿಂದ ಬಹಳ ತೊಂದರೆಯಾಗುತ್ತದೆ. ವಿಶೇಷವಾಗಿ ಮೂರನೆ ವರ್ಗದಲ್ಲಿ. ಏಕೆಂದರೆ ಒಂದೇ ಸ್ಥಿತಿಯಲ್ಲಿ ಕುಳಿತುಕೊಳ್ಳಬೇಕಾಗುವುದರಿಂದ ಆಯಾಸಗೊಳ್ಳುತ್ತೇನೆ. ಅನೇಕ ಸಲ ನೋವು ಹುಟ್ಟಿಕೊಳ್ಳುತ್ತದೆ. ಒಳ್ಳೇದು, ತ್ರಾಸವಾಗಲಿ, ಸುಖವಾಗಲಿ ಯಾವ ವಿಧದಿಂದಲಾದರೂ ಈ ದೇಹದಿಂದ ಕೆಲಸ ತೆಗೆದುಕೊಳ್ಳುವುದೇ ಇದೆ. "ಸಹಜಮಾರ್ಗ ಫಿಲಾಸಫಿ" ನಮ್ಮ ಮುದ್ರಣಾಲಯದಿಂದ ಛಾಪಿಸಲ್ಪಟ್ಟಿದೆ. ೧೫ ದಿನಗಳಲ್ಲಿ ಜೋಡಣೆಯಾಗಿ, ಹೊಲಿದು-ಕಟ್ಟಿ ಅದರ ಪ್ರತಿಗಳು ಸಿಗಬಲ್ಲವು. ಅದರ ಶಬ್ದಸೂಚಿ ಬಹಳ ದೊಡ್ಡದಾಗಿದೆ. ಸುಮಾರು ೨೪ ಪುಟಗಳಾಗಬಹುದು. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ.ಸೂ: ಈ ಸಲ ಚಿಟ್ಟಿ ಸಾಹೇಬರು ಮತ್ತು ಅವರ ಹೆಂಡತಿ ಸುಮಾರು ೧೫ ದಿವಸ ಇಲ್ಲಿ ತಂಗಿದ್ದರು. ಅವರಿಬ್ಬರಿಗೂ ಪ್ರಶಿಕ್ಷಣದ ಪೂರ್ಣ ಅನುಮತಿ ಕೊಟ್ಟಿರುವೆನು. ಅಲಹಾಬಾದಿನ ಜಜಸಾಹೇಬರು ಒಂದು ತಿಂಗಳಿದ್ದರು. ಅವರನ್ನು ಬಹಳ ಕಷ್ಟದಿಂದ ಕೇಂದ್ರಮಂಡಲದಲ್ಲಿ ಹಾಕಿದೆ.

◆ ◆ ◆

"ಓಂ ತತ್‌ಸತ್"

ಸಂ.೧೭೩<br>ನಂ.ಸಿ-೮೮೪/ಎಸ್.ಆರ್.ಸಿ.ಎಮ್.

ಶಾಹಜಹಾನ್‌ಪೂರ್<br>ದಿ.೨೪.೯.೬೯

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಸಂತೋಷದ ಪತ್ರ ತಲುಪಿತು. ಇದಕ್ಕೂ ಮುಂಚೆ ಒಂದು ಪತ್ರ ಸಿ.೮೬೭ ದಿ.೧೭.೯.೬೯ ಕಳಿಸಿರುವೆನು. ಅದು ತಲುಪಿರಬಹುದು. ನೋವು ಸ್ವಲ್ಪ ಕಡಿಮೆಯಾಗಿದೆ. ಈಗ ೧೭ನೆಯ ಅಕ್ಟೋಬರ್‌ದಂದು ನೇಪಾಳಕ್ಕೆ ಹೋಗುವುದು ನಿಶ್ಚಯವಾಗಿದೆ. ನಾನು ಈ ಸಲ ನೇಪಾಳಗಂಜವರೆಗೆ ಮಾತ್ರ ಹೋಗಬಲ್ಲೆನು. ಅದು ನೇಪಾಳದಲ್ಲಿದೆ. ಕಾಟ್‌ಮಾಂಡುವಿಗೆ ಹೋಗಲಾರೆ. ಏಕೆಂದರೆ, ಮಳೆಯಿಂದಾಗಿ ವಾಯುಯಾನದ ದಾರಿ ೧೫ನೆ ನವಂಬರ್ ೧೯೬೯ರವರೆಗೆ ಮುಚ್ಚಿರುವುದು. ವಿಮಾನ ನಿಲ್ದಾಣವೇನೋ ಆಗಿದೆ. ಅದರಲ್ಲಿ ನೀರು ತುಂಬಿಬಿಟ್ಟಿದೆ. ಈ ಕಡೆ ಬಹರಾಯಿಚ್ ಮತ್ತು ಇತರ ಸ್ಥಳಗಳ ಪ್ರವಾಸ ಇರುವದು. ನಾನು ೨೪ನೆಯ ಅಕ್ಟೋಬರ್‌ವರೆಗೆ ತಿರುಗಿ ಬರುವೆನು. ಆಗ ನೀವು ಬರಬಹದು. ನನಗೆ ಬಹಳ ಸಂತೋಷವಾಗುವುದು.

ಈ ಸಲ ಪ್ರಿಸೆಪ್ಟರರೆಲ್ಲಾ ಕಲೆತಿರುವ ಸಭೆಯಲ್ಲಿ ಒಂದು ವಿಷಯ ಬರೆಯುವುದು ಮರೆತುಬಿಟ್ಟೆ. ಇನ್ನು ಮುಂದೆ ಯಾವುದಾದರೂ ಸಭೆಯಾದಾಗ ಇದನ್ನು ಗಮನದಲ್ಲಿಡಿರಿ. ಅದೇನೆಂದರೆ ಮಿಷನ್ನನ್ನು ಹೇಗೆ ವಿಸ್ತರಿಸುವುದು? ಪ್ರಶಿಕ್ಷಕರಿಗೆ ಏನು ಮಾಡಬೇಕಾಗುವುದು? ಎರಡನೇಯದಾಗಿ ಸಂಸ್ಥೆಯ ವಿಷಯ. ಇದರಲ್ಲಿ ಏನೇನು ಮಾಡಬೇಕು? ಅದೆಲ್ಲ ಮಾರ್ಗದರ್ಶನಕ್ಕಾಗಿ ಲಿಖಿತದಲ್ಲಿ ಬರಬೇಕು. ಕಾರ್ಯಕರ್ತರಿಗೆ ನಿರ್ದೇಶನಗಳು ಹೋಗುತ್ತಿರಬೇಕು. ಮತ್ತು ಅವರು ತಮ್ಮ ಕಾರ್ಯದ ವರದಿಯನ್ನು ಸಂಚಾಲಕರಿಗೆ ಕೊಡುತ್ತಿರಬೇಕು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ<br>ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೭೪ ಷಾಹಜಹಾನ್‌ಪೂರ್
ನಂ.ಸಿ-೬೪೯/ಎಸ್.ಆರ್.ಸಿ.ಎಮ್. ದಿ.೪.೧೦.೬೯

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಪತ್ರ ತಲುಪಿತು. ನೀವು ೨೪ನೆಯ ಅಕ್ಟೋಬರಿಗೆ ಇಲ್ಲಿ ಬರುತ್ತಿರುವುದು ಸಂತೋಷ. ದಿನಾಂಕ ಮತ್ತು ಸಮಯ ತಿಳಿದಲ್ಲಿ ಸಂಭವತಃ ನಾನು ಅದೇ ಗಾಡಿಯಿಂದ ಲಖನೌಗೆ ಬಂದು ನಿಮ್ಮ ಜೊತೆಗೆ ಷಾಹಜಹಾನಪೂರ್ ತಲುಪುವೆನು. ನೀವು "ಸಹಜಮಾರ್ಗ ಫಿಲಾಸಫಿ" ೫೦ ಪ್ರತಿಗಳನ್ನು ಕೇಳಿರುವಿರಿ. ಅವನ್ನು ನಾನು ರೇಲ್ವೆ ಪಾರ್ಸಲ್‌ದಿಂದ ಕಳಿಸಿರುವೆನು. ಅದರಲ್ಲಿ ೫೦ ಪ್ರತಿಗಳನ್ನು ಶ್ರೀ ವಿಠಲರಾಯರಿಗಾಗಿ ಇಟ್ಟಿರುವೆನು. ಅವುಗಳ ಪ್ರಕಾಶನ ಪೂರ್ವದ ಬೆಲೆಯನ್ನು ವಿಠಲರಾವಜಿ ಕಳಿಸಿರುವರು. ನಾನು ರೇಲ್ವೆ ರಸೀದಿಯನ್ನು ವಿಠಲರಾಯರ ಹೆಸರಿನ ಮೇಲೆ ಮಾಡಿಸಿರುವೆನು. ಏಕೆಂದರೆ ಪಾರ್ಸಲ್ ತಲುಪುವುದರೊಳಗೆ ನೀವು ರಾಯಚೂರು ಬಿಟ್ಟು ಬೇರೆ ಎಲ್ಲಿಯಾದರೂ ಇರಬಹುದು. ರೇಲ್ವೆ ರಸೀದಿಯ ನಂಬರ ೮೬೪೫೭೩ ದಿ. ೧.೧೦.೬೯ ಇದೆ. ರಸೀದಿಯನ್ನು ನಿಮ್ಮ ವಿಳಾಸಕ್ಕೆ ಕಳಿಸಲಾಗುತ್ತಿದೆ. ಸ್ಟೇಶನ್ನಿನಿಂದ ಪಾರ್ಸಲ್ ತರಿಸಿಕೊಳ್ಳುವ ವ್ಯವಸ್ಥೆ ಮಾಡಲು ಇದನ್ನು ಅವರಿಗೆ ಕೊಟ್ಟುಬಿಡಿ.

ನಿನ್ನೆ ಸಂಜೆ ಶ್ರೀ ಆಯಿಲ್‌ರೆಡ್ಡಿ ಮೂವರು ಸತ್ಸಂಗಿಗಳ ಜೊತೆಯಲ್ಲಿ ಬಂದಿರುವರು. ಮತ್ತು ಮದ್ರಾಸಿನಿಂದ ನಾರಾಯಣಸ್ವಾಮಿ ತನ್ನ ಹೆಂಡತಿ ಮತ್ತು ಮಗಳೊಂದಿಗೆ ಬಂದಿರುವರು. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೭೫ ಷಾಹಜಹಾನ್‌ಪೂರ್
ನಂ. ಸಿ-೯೬೯/ಎಸ್.ಆರ್.ಸಿ.ಎಮ್. ದಿ. ೧೪. ೧೦. ೧೯೬೯

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಸಂತೋಷದ ಪತ್ರ ತಲುಪಿತು. ಶ್ರೀಕಂಠಯ್ಯ ಅವರ ಪತ್ರ ಸಹ ತಲುಪಿದೆ. ನೀವು ೨೪ನೆಯ ಅಕ್ಟೋಬರ ೬ ರಂದು ಲಖನೌ ಸ್ಟೇಷನ್ ಮೇಲೆ

ನನ್ನ ಪ್ರತೀಕ್ಷೆ ಮಾಡಬೇಡಿರಿ. ನಾನು ೨೩ ನೆಯ ಅಕ್ಟೋಬರ ೬೯ ರಂದು ಸಾಯಂಕಾಲ ತಲುಪುವ ಟಪಾಲು ಗಾಡಿಯಿಂದ ಷಾಹಜಹಾನಪೂರಕ್ಕೆ ಬರುವೆನು. ಏನಾದರೂ ಅನಿವಾರ್ಯವಾದಲ್ಲಿ ೨೪ ನೆಯ ಅಕ್ಟೋಬರ ೬೯ ಸಂಜೆಯವರೆಗೆ ಬರುವೆನು. ಇಲ್ಲಿ ಕೂಡ ನಿಮ್ಮೆಲ್ಲರ ಸೌಕರ್ಯಕ್ಕಾಗಿ ಅನುಕೂಲ ಮಾಡಬೇಕಾಗಿದೆ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ಸಂ.೧೭೬ ಷಾಹಜಹಾನ್‌ಪೂರ್
ನಂ. ಸಿ-೧೧೨೩/ಎಸ್.ಆರ್.ಸಿ.ಎಮ್. ದಿ. ೧೦. ೧೨. ೧೯೬೯

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಎರಡೂ ಪತ್ರಗಳು ಮುಟ್ಟಿವೆ. ಮೊದಲನೆಯ ಪತ್ರದ ಉತ್ತರವೇನೆಂದರೆ ಶ್ರೀ ರಾಮಚಂದ್ರರೆಡ್ಡಿಯವರು ಕೊಟ್ಟಿರುವುದನ್ನು ಕೆಲಸಕ್ಕೋಸ್ಕರ ಇಟ್ಟುಕೊಳ್ಳಿರಿ. ಇಲ್ಲವಾದರೆ ಅವರಿಗೆ ಅಸಮಾಧಾನವಾಗುವುದು. ನಾನು ಅವರಿಗೆ ಬಂಧುತ್ವ ರೂಪದಲ್ಲಿ ಹೀಗೆ ಹೇಳಿದ್ದೆ ; "ವರದ ಕಡೆಯವರು ಹತ್ತು ಹತ್ತು ಸಾವಿರ ಕೇಳುತ್ತಾರೆ. ಇಷ್ಟನ್ನು ರಾಘವೇಂದ್ರರಾವ್ ಎಲ್ಲಿಂದ ಕೊಡಬಲ್ಲರು?" ಹಾಗೆ ಹೇಳುವ ಉದ್ದೇಶವೂ ಇದೇ ಇತ್ತು. ಅದು ಈಗ ಈಡೇರಿದೆ. ಈಶ್ವರನು ಅವರಿಗೆ ದಿನದಿನಕ್ಕೆ ಪ್ರಗತಿಕೊಡಲಿ. ಈ ಸತ್ಕಾರ್ಯಕ್ಕಾಗಿ ಅವರು ಕೊಟ್ಟಿರುವ ಹಣಕ್ಕಿಂತ ಹೆಚ್ಚಿನ ಹಣ ದೇವರ ದಯೆಯಿಂದ ಇದೇ ವರುಷ ಅವರಿಗೆ ಸಿಗುವುದು.

"ಪ್ರಪಂಚದಿಂದ ಎತ್ತಿಕೊಳ್ಳಲಿ" ಎಂಬ ಯಾವ ವಿಚಾರ ನಿಮ್ಮಲ್ಲಿ ಹುಟ್ಟಿದೆಯೋ ಇದೊಂದು ವಿಧವಾದ ದೌರ್ಬಲ್ಯ ಮತ್ತು ಹೇಡಿತನದ ವಿಚಾರ. ಹೆಂಗಸರು ಗಂಡಸರಿಂದ ಹೆಚ್ಚಾಗಿ ಸಂತೋಷಗೊಂಡಾಗ ಪಾಜ್ ಮನಸ್ಸಿನಿಂದ ಅನೇಕ ಸಲ ಹೀಗೆನ್ನುವರು. ಇದಕ್ಕೆ ಯಾವ ಮಹತ್ವವೂ ಇಲ್ಲ. ಈಗ ಎರಡನೆಯ ಪತ್ರಕ್ಕೆ ಬರುತ್ತೇನೆ ನಿಮ್ಮನ್ನು ಸಂತೋಷಗೊಳಿಸಲು ಒಂದು ಪದ್ಯದ ಪಂಕ್ತಿಯನ್ನು ಹೇಳುತ್ತೇನೆ.

"ಜಲಕೆ ಅಪನೀ ಆಗಮೆ ಖಿದ ಸೂರತೇ ಪರವಾನಾ ಹಮ್
ಬನಗಯೇ ಹಮ್ ರಿಶ್ತಯೆ ಖಾಕ ದರೆ ಜನಾನ್ ಹಮ್"॥

ಅನುವಾದ : "ಪತಂಗದಂತೆ ಸ್ವಂತ ನಮ್ಮ ಅಗ್ನಿಯಲ್ಲಿಯೇ ನಾವು ಸುಟ್ಟು
ಹೋಗಿ ಪ್ರಿಯತಮನ ಬಾಗಿಲ ಧೂಳಾಗಿ ಸೇರಿಕೊಂಡೆವು?

**ಈಶ್ವರನೊಂದಿಗೆ ತತ್‌ಕ್ಷಣ ಸಂಬಂಧ ನಿರ್ಮಿಸುವುದಕ್ಕಾಗಿ 'ದೀಕ್ಷೆ' ಒಂದು ವಿಧಾನವಾಗಿದೆ. ಇಲ್ಲಿದಿದ್ದರೆ ಬಹಳ ಸಮಯ ಹಿಡಿಯುವುದು. ನಾನೇನು ಹೇಳಲಿ? ಜನರು ಇದರ ಪ್ರಾಮುಖ್ಯತೆಯನ್ನು ಅರಿಯರು. ಮತ್ತು ದೀಕ್ಷೆಹೊಂದಿದ ನಂತರ ಈ ಕಡೆ ವಿಚಾರ ಸಹ ಮಾಡುವುದಿಲ್ಲ. ನನ್ನ ಹೊಣೆ ಎಷ್ಟಾಗುವುದೆಂದರೆ ನಾನು ಅವರನ್ನು ಬಿಡಲು ಅಸಮರ್ಥನಾಗುತ್ತೇನೆ. ಆತನಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ನನ್ನ ಸ್ಥಿತಿ ನೀರಿಲ್ಲದ ಮೀನಿನಂತಾಗುವುದು. ಒಂದು ಪ್ರಕರಣದಲ್ಲಿ ನಾನು ಒಂದು ವರುಷದ ಹೊಯ್ದಾಟದ ನಂತರ ದೀಕ್ಷೆಯನ್ನು ಮುರಿಯಬೇಕಾಗಿ ಬಂದು ಗುರುಮಹಾರಾಜರ ಗದರಿಕೆಯ ಲಾಭ ದೊರೆಯಿತು. ಮತ್ತು ಅದು ಸರಿಯಾಗಿಯೇ ಸಿಕ್ಕಿತು. ನಾನೇನೋ ಬಯಸುತ್ತೇನೆ. ಆದರೆ ಮೇಲಿನ ಕಾರಣದಿಂದಾಗಿ ಅಸಹಾಯಕನಾಗುತ್ತೇನೆ. ಕನಿಷ್ಟಪಕ್ಷ ಪ್ರತಿಯೊಬ್ಬ ಪ್ರಶಿಕ್ಷಕನಾದರೂ ದೀಕ್ಷಾಬದ್ಧನಾಗಿಯೇ ಇರಬೇಕು. ಏಕೆಂದರೆ ಶಕ್ತಿಯು ದ್ವಿಗುಣವಾಗುವುದು. ಮನುಷ್ಯನು ಬಹಳ ಪರೀಕ್ಷಿಸಲ್ಪಟ್ಟವನಾಗಿರಬೇಕು. ಮತ್ತು ಆತನು ಮಿಷನ್ನಿಗಾಗಿ ಹೃದಯಾರ್ಪಣೆ ಮಾಡಿದಂತವನಾಗಿರಬೇಕು. ಇದನ್ನು ನೀವೇ ನಿರ್ಣಯಿಸಬಲ್ಲಿರಿ.**

ಈಗ ರಾಜಗೋಪಾಲಾಚಾರಿ ತಿರುಗಾಡುತ್ತಾ ಬಗ್ದಾದ ತಲುಪಿರುವರು. ಅವರು ಬಹಳ ಉತ್ತಮ ಕೆಲಸ ಮಾಡಿರುವರು. ಕೆಲವರು ಐರೋಪ್ಯರು ಇಲ್ಲಿ ಬರಲಿಚ್ಛಿಸಿರುವರು. ಆದರೆ ಶ್ರೀ ಪೋರೆಯು ಅವರನ್ನು ಮದ್ರಾಸಿಗೆ ಕರೆಸಲಿಚ್ಛಿಸಿರುವರು. ಮತ್ತು ನಾನು ಅಲ್ಲಿಗೆ ಹೋಗಬೇಕೆಂದು ಬಯಸಿರುವರು.

ಶ್ರೀ ಚಟ್ಟಿಗೆ ಬರೆದಿರುವ ಪತ್ರದ ಪ್ರತಿಯನ್ನು ಮತ್ತೆ ಅವೇ ವಿಷಯಗಳನ್ನು ಬರೆಯುವ ಆವಶ್ಯಕತೆ ಬೀಳಬಾರದೆಂದು ನಿಮಗೆ ಕಳಿಸುತ್ತಿರುವೆನು. ದೀಕ್ಷೆಯಾದವರ ಪರಿಷ್ಕೃತ ಯಾದಿಯನ್ನು ಕಳಿಸುತ್ತಿರುವೆನು. ಆದರ ಪ್ರತಿಯನ್ನು ನೀವು ಅವರಿಗೆಲ್ಲ ಕಳಿಸಿಕೊಡಿರಿ. ಮತ್ತು ಮುಂದೆ ದೀಕ್ಷೆ ಹೊಂದುತ್ತ ಹೋಗುವವರ ಹೆಸರುಗಳನ್ನು ನಾನು ನಿಮಗೆ ಕಳಿಸುವೆನು. ಕೆಲವು ಕಡೆ ಕಳಿಸಿರುವೆನು ಸಹ. ಪ್ರಾಯಶಃ ಸೇಡಂ ಹಾಗು ಗುಲ್ಬರ್ಗಾಕ್ಕೆ ಕಳಿಸಿರುವೆನು. ನೀವು ನಿಮ್ಮ ಕೇಂದ್ರದ ಜನರಿಗೆ ಕಳಿಸಿಕೊಡಿರಿ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ.ಸೂ: ಮದ್ರಾಸ ತಲುಪಿದ ನಂತರ ನಾನು ಎಲ್ಲೆಲ್ಲಿ ಹೋಗುಬಲ್ಲೆನೆಂಬುದನ್ನು ಬರೆಯಲು ಸಾಧ್ಯ. ಅಲ್ಲದೆ ಅಲ್ಲಿಯೇ ಕಾರ್ಯಕ್ರಮ ಸಿದ್ಧವಾಗುವುದು.

◆ ◆ ◆

"ಓಂ ತತ್‌ಸತ್"

ನಂ.೧೭೭ ಶಾಹಜಹಾನ್‌ಪೂರ್
ನಂ. ಸಿ. ೪೦೩/ಎಸ್.ಆರ್.ಸಿ.ಎಮ್. ದಿ. ೨೩. ೪. ೧೯೭೦

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನನ್ನ ವಿಜಯವಾಡಾ ಪ್ರವಾಸವನ್ನು ಮುಂದೂಡಲಾಗಿದೆ. ಶ್ರೀ ಜಹಾಗೀರದಾರ ಎಪ್ರಿಲ್ ೨೯, ೧೯೭೦ ಕ್ಕೆ ಇಲ್ಲಿ ಬರಲಿರುವರು. ಚಿ. ಉಮೇಶನ ಮದುವೆ ಮುರಾದಾಬಾದಿನಲ್ಲಿ ನಿಶ್ಚಯಿಸಲಾಗಿದೆ. ಮತ್ತು ಮದುವೆಯ ದಿನಾಂಕ ೨೩ ಮೇ ೧೯೭೦ ಕ್ಕೆ ಇದೆ. ಹುಡುಗಿ ಚೆನ್ನಾಗಿದ್ದಾಳೆ. ಮನೆತನವೂ ಚೆನ್ನಾಗಿದೆ. ಚಿ. ವಾಸಂತಿಯ ಮದುವೆ ೨೯ ಮೇ ೧೯೭೦ ಕ್ಕೆ ಇದೆ ಎಂದು ಕೇಳಿ ಸಂತೋಷವಾಯಿತು. ದೇವರು ಈ ಕೆಲಸವನ್ನು ಉತ್ತಮ ರೀತಿಯಲ್ಲಿ ನೆರವೇರಿಸಿಕೊಡಲಿ. ಮಿಷನ್ನಿನ ನೊಂದಾವಣೆಯ ಒಂದು ಪ್ರಮಾಣೀಕೃತ ಪ್ರತಿಯನ್ನು ನಿನ್ನೆ ನಿಮಗೆ ಕಳಿಸಲಾಗಿದೆ. ಅದು ತಲುಪಿರಬಹುದು. ಆಶ್ರಮದ ನಕಾಶೆಯು ಇದುವರೆಗೆ ಬಂದಿಲ್ಲ. ಗುಲ್ಬರ್ಗಾದ ಇಂಜಿನೀಯರ ಚವ್ಹಾಣರು ಸಂಭವತಃ ಮುಂಬಯಿಯ ಸೇಠಜಿಯವರ ಬಳಿಗೆ ಕಳಿಸಿರಬಹುದು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೭೪ ಶಾಹಜಹಾನ್‌ಪೂರ್
ನಂ. ಸಿ-೧೭/ಎಸ್.ಆರ್.ಸಿ.ಎಮ್. ದಿ. ೭. ೧. ೧೯೭೧

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಪತ್ರ ತಲುಪಿತು. ನೀವು ಕೆಲವು ದಿವಸ ನನ್ನ ಜೊತೆಯಿರಬೇಕೆಂದು ಬಯಸುವಿರಿ. ನೀವು ಇಲ್ಲಿ ಬರುವ ಕಾರ್ಯಕ್ರಮ ತಯಾರಿಸಿರಿ. ನಾನು ಮದ್ರಾಸಿಗೆ ಹೋಗುವದಾದರೆ ೧೨ ಅಥವಾ ೧೪ ಫೆಬ್ರುವರಿ ೭೧ ಕ್ಕೆ ಹೋಗುವೆ. ಅದೂ ಶ್ರೀ ಆಂದ್ರೆ ಪೋರೆ ಆ ದಿನಗಳಲ್ಲಿ ಮದ್ರಾಸಿನಲ್ಲಿ ಇದ್ದರೆ ಮಾತ್ರ. ಅವರು ೧೯ ಜನೇವರಿ ೭೧ ಕ್ಕೆ ಇಲ್ಲಿ ಬರಲಿರುವರು ಮತ್ತು ೨೨ ಜನೇವರಿಯವರೆಗೆ ಇರುವರು. ಆಮೇಲೆ ಬನಾರಸಿಗೆ ಹೋಗಿ ೩೧ ಜನವರಿ ಅಥವಾ ಮೊದಲನೆಯ ಫೆಬ್ರುವರಿಗೆ ಮತ್ತೆ ಬರಲಿರುವರು. ಆಗ ನಾನು

ಮದ್ರಾಸಿಗೆ ಯಾವಾಗ ಹೋಗುವೆನೆಂಬುದು ಮತ್ತು ಹೋಗುವೆನೋ ಅಥವಾ ಇಲ್ಲವೋ ಎನ್ನುವುದು ನಿರ್ಧಾರವಾಗುವುದು. ನೀವು ನಿಮ್ಮ ನಿರ್ಧಾರಿತ ದಿನಾಂಕದಂದು ಸುಖವಾಗಿ ಬಂದು ಬಿಡಿರಿ. ನಾನು ಇಲ್ಲಿಯೇ ಇರುವೆನು. ನನಗೆ ಹೈದ್ರಾಬಾದಿನವರು ಕರೆಯುತ್ತಲಿರುವರು. ಆದರೆ ಬಂಧು, ಈಗ ವೃದ್ಧಾಪ್ಯದಿಂದಾಗಿ ತಿರುಗಾಡುವುದಕ್ಕೆ ಪ್ರಕೃತಿ ಸ್ವಲ್ಪ ಆಲಸಿಯಾಗುತ್ತಿದೆ. ಆದುದರಿಂದ ಮನೆಯಲ್ಲಿಯೇ ಒಮ್ಮೊಮ್ಮೆ ವಿಮಾನದಲ್ಲಿ ಚಕ್ರ ಹೊಡೆಯುವೆನು. ಮತ್ತು ಒಮ್ಮೊಮ್ಮೆ ಪ್ರಥಮ ದರ್ಜೆಯ ಕನಸು ಕಾಣುತ್ತಿರುವೆನು. ಎಂದರೆ, ಚಿಂತಿಸಿ ಚಿಂತಿಸಿ ಖುರ್ಚಿಯ ಮೇಲೆಯೇ ಕುಳಿತು ಬಿಟ್ಟಿರುತ್ತೇನೆ. ಕದಲುವ ಮನಸ್ಸು ಆಗುವುದಿಲ್ಲ. ನೀವು ಬರುವ ವೇಳೆಯನ್ನು ತಿಳಿಸಿದರೆ ಯಾರನ್ನಾದರೂ ನಿಲ್ದಾಣಕ್ಕೆ ಕಳಿಸುವೆ. ನಿಮಗೆ ಬರಲು ಸುಲಭವಾಗುವುದು. ಒಂದು ವೇಳೆ ಸೂಚನೆ ಕೊಡಲು ಆಗದಿದ್ದರೂ ನಿಮ್ಮಿಬ್ಬರಿಗೂ ನಮ್ಮ ಮನೆಯ ವಿಳಾಸ ತಿಳಿದೇ ಇದೆ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೭೯
ನಂ. ೯೪/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ. ೧೦. ೧. ೧೯೭೧

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಪತ್ರ ತಲುಪಿತು. ನಾನು ನಿಮಗೆ ಒಪ್ಪಿಸಿರುವ ಕೆಲಸದ ಇತಿ ಮಿತಿಯನ್ನು ಬರೆದಿರುವೆನೆಂದು ನಿಮಗೆ ತಿಳಿದಿದೆ. ಆದುದರಿಂದ ನೀವು ಎಲ್ಲರಿಗಿಂತ ಉತ್ತಮ ಕೆಲಸ ಮಾಡಬಲ್ಲಿರಿ. ನೀವು ಸಡಿಲುತನ ಬಿಟ್ಟು ಬಿಡಿರಿ. ಒಂದು ವೇಳೆ ಬಳಲಿಕೆ ಬರುತ್ತಿದ್ದರೆ ಚಹಾ ಸೇವಿಸಬಹುದು. ನೀವು ಧ್ಯಾನದಲ್ಲಿ ವಿನಿಯೋಗಿಸುತ್ತಿದ್ದ ಸಮಯವನ್ನು ಉಳಿಸಿ ನಾನು ಈ ಕೆಲಸಕೊಟ್ಟಿರುವೆನು. ನೀವು ಆಗಾಗ್ಗೆ ಧ್ಯಾನದಲ್ಲಿ ಕುಳಿತುಕೊಳ್ಳಬೇಕು. ಆದರಿಂದ ಪ್ರಕೃತಿ ಹಗುರಾಗುತ್ತದೆ. ಮತ್ತು ಆಲಸ್ಯವು ಕಡಿಮೆಯಾಗುತ್ತದೆ. ನಾನು ಎಪ್ರಿಲ್‌ನ ಕೊನೆಯಲ್ಲಿ ಅಥವಾ ಮೇ ಯ ಆರಂಭದಲ್ಲಿ ಐರೋಪ್ಯ ದೇಶಗಳಿಗೆ ಹೋಗಲು ನಿರ್ಧರಿಸಿರುವುದು ನಿಮಗೆ ತಿಳಿದೇ ಇದೆ. ಅಮೇರಿಕಾಕ್ಕೆ ಸಹ ಹೋಗಬೇಕಾಗುವುದು. ಏಕೆಂದರೆ ಅಲ್ಲಿ ಕೆಲ ಸತ್ಸಂಗಿಗಳಾಗಿರುವರು. ಡಾಕ್ಟರ ಸಾಹೇಬರ ಮಗ ನಾರಾಯಣರು ರೋಟರಿ ಕ್ಲಬ್ ಕಡೆಯಿಂದ ಅಮೇರಿಕಾಕ್ಕೆ ಹೋಗಿ ಅಲ್ಲಿ ಒಳ್ಳೆಯ ಕೆಲಸ ಮಾಡಿರುವರು.

ಕೈರೋನಲ್ಲಿ ಒಬ್ಬ ಗ್ರೀಕನು ಅಭ್ಯಾಸವನ್ನಾರಂಭಿಸಿದ್ದನು. ಆತನು ಒಂದು ವರ್ಷದ ಹಿಂದೆ ಮದ್ರಾಸಿನಲ್ಲಿ ನನಗೆ ಸಿಕ್ಕಿದ್ದನು. ಮತ್ತು ಬಹಳ ತೃಪ್ತನಾಗಿ ಹೋದನು. ಈಗ ಅವನು ಆಸ್ಟ್ರೇಲಿಯ ತಲುಪಿ ಅಲ್ಲಿಯೇ ವಾಸ ಮಾಡುತ್ತಿರುವನು. ಮತ್ತು ಆತನು ಮಿಷನ್ನಿನ ಕೆಲಸ ಮಾಡಲು ಮಾತು ಕೊಟ್ಟಿರುವನು. ಅವನು ಮನಃ ಪೂರ್ವಕ ಕೆಲಸ ಮಾಡುವನೆಂದು ನನಗೆ ವಿಶ್ವಾಸವಿದೆ. ಆತನಿಗೆ ಪ್ರಶಿಕ್ಷಣಕ್ಕೆ ತಾತ್ಕಾಲಿಕ ಅನುಮತಿ ಕೊಡಲಾಗಿದೆ. ನೀವು ಯೋಗ್ಯನೆಂದು ಭಾವಿಸಿದವರನ್ನು ಮಿಷನ್ನಿನ ಕೆಲಸಕ್ಕಾಗಿ ಸಂಘಟಕನೆಂದು ನೇಮಿಸಬಹುದು. ಅಲ್ಲಲ್ಲಿ ಸಭೆಗಳನ್ನು ಏರ್ಪಡಿಸುವುದರಿಂದ ಮಿಷನ್ನು ತೀವ್ರವಾಗಿ ವಿಸ್ತರಿಸುವುದು.

ಹಳ್ಳಿಗಳಲ್ಲಿ ಸತ್ಸಂಗ ಸೇರಲು ಬಯಸುವ ನೂರಾರು ಬಾಂಧವರು ಇದ್ದಾರೆಂದು ಬರೆದಿರುವಿರಿ. ನಾನು ನಿರ್ದೇಶನಗಳನ್ನು ಸಹ ಕೊಟ್ಟಿರುವೆನು. ಅವು ಮುದ್ರಿತವಾಗಿದ್ದು ನಿಮ್ಮ ಬಳಿಯೂ ಇರಬಹುದು. ಅವುಗಳನ್ನು ಓದಿಕೊಳ್ಳಿರಿ. ಓದು ಬರಹ ಬಲ್ಲವರು ಮತ್ತು ಹೆಚ್ಚು ತಿಳುವಳಿಕೆಯುಳ್ಳವರು ಆಗಿರಬೇಕು. ಹಳ್ಳಿಗರಿಗೆ ಈ ಪದ್ಧತಿ ತಿಳಿಯುವುದಿಲ್ಲ. ಮತ್ತು ಅವರಿಗಾಗಿ ಬಹಳ ಶ್ರಮ ಪಡಬೇಕಾಗುವುದು. ಹಳ್ಳಿಯಲ್ಲಿ ಸಾಮಾನ್ಯವಾಗಿ ಇರತಕ್ಕಂಥಹ ತಮ್ಮ ಚಟವನ್ನು ಬಿಡುವುದಿಲ್ಲ. ಅಂಥವರಲ್ಲಿ ಮಿಷನ್ನಿನ ಹೆಸರು ಕೆಡಿಸುವವರು ಸೇರಿಬಿಟ್ಟರೆ ಗತಿಯೇನು? ಹಳ್ಳಿಗರಿಂದ ಈ ವಿಧದ ಪ್ರತಿಯೊಂದು ವಿಷಯವನ್ನು ನಿರೀಕ್ಷಿಸಬಹುದು. ಆದರೆ ಯಾವನಿಗಾದರೂ ತೀವ್ರ ತಳಮಳ ಇದ್ದರೆ ಮಾತ್ರ ತೆಗೆದುಕೊಳ್ಳಲಡ್ಡಿಯಿಲ್ಲ.

ಈಗ ಲಾಲಾಜಿಯವರ ಕೃಪೆಯಿಂದ ಮಿಷನ್ನು ಯಾವ ಸ್ಥಿತಿಯಲ್ಲಿದೆಯೆಂದರೆ ನೀವು ಗುಣಮಟ್ಟದ ಮೇಲೆ ಹೆಚ್ಚು ಗಮನ ಇಟ್ಟುಕೊಳ್ಳಬೇಕು, ನಂತರ ಸಂಖ್ಯೆಯ ಬಗ್ಗೆ. ಇದರ ಅರ್ಥ ಸತ್ಸಂಗ ಬೆಳೆಸಬಾರದೆಂದೇನೂ ಅಲ್ಲ. ಆದರೆ ಒಳ್ಳೆಯವರನ್ನು ಮತ್ತು ಸುಶಿಕ್ಷಿತರನ್ನು ತೆಗೆದುಕೊಳ್ಳಬೇಕು. ಈಗ ನಿಮಗೆ ಒಳ್ಳೆಯ ಗುಣ ಮಟ್ಟದ ಜನರು ಸಹ ಹೆಚ್ಚಾಗಿ ಸಿಗುವರು. ಕಾಲವು ನಮಗೆ ಈಗ ಅನುಕೂಲವಾಗುತ್ತಿದೆ. ನಮಗೆ ಮಿಷನ್ನಿನ ಉದ್ದೇಶ ಮತ್ತು ಶಿಕ್ಷಣ ಇಂಥದಿದೆಯೆಂಬ ಪ್ರಚಾರದ ಆವಶ್ಯಕತೆಯಿದೆ.

ಒಂದು ವಿಷಯ ಬರೆಯಲು ನಾನು ಮರೆತೆ. ಏನೆಂದರೆ, ನೀವು ಆಗಾಗ್ಗೆ ೧೫–೨೦ ನಿಮಿಷಗಳ ಕಾಲ ನಿಮ್ಮ ಶುದ್ಧೀಕರಣ ಮಾಡಿಕೊಳ್ಳಿರಿ. ಏಕೆಂದರೆ ನೀವು ಕಶ್ಮಲದಲ್ಲಿ ಕೆಲಸಮಾಡುತ್ತಿರುವಾಗ ಅದು ನಿಮಗೂ ತಟ್ಟಬಹುದು. ಪ್ರತಿಯೊಬ್ಬ ಪ್ರಶಿಕ್ಷಕರಿಗೂ ಇದು ಆವಶ್ಯಕವಾಗಿದೆ.

ನವ್ಹೆಂಬರ ತಿಂಗಳಿನಲ್ಲಿ ನನ್ನ ಬಳಿ ಕೆಲವರು ಇಟಾಲಿಯನ್ನರು ಕೆಲವರು ಡೆನ್ಮಾರ್ಕಿನವರು, ಮತ್ತು ಒಬ್ಬಿಬ್ಬರು ಬೇರೆ ದೇಶಗಳಿಂದ ಬರುವವರಿದ್ದಾರೆ. ನಾನು ನನ್ನ ತಮ್ಮನ ಮಗಳ ಮದುವೆಗೆ ಹೋಗಬಯಸುತ್ತಿದ್ದೆ. ಮತ್ತು ಅದು ಆವಶ್ಯಕವಾದದ್ದು ಇದೆ. ಆದರೆ ಅವರಿಗೆ ನನ್ನ ಆವಶ್ಯಕತೆ ಬಹಳವಿದ್ದಾಗ್ಯೂ ಈಗ ಹೋಗಲಾರೆ. ಎಲ್ಲ ಮಕ್ಕಳನ್ನು ಹಾಗೂ ಸೊಸೆಯಂದಿರನ್ನು ಮದುವೆಗೆ ಕಳಿಸುತ್ತಿದ್ದೇನೆ.

ನನ್ನ ಬಳಿ ಬರುತ್ತಿರುವ ಸತ್ಸಂಗಿಗಳಲ್ಲೆಲ್ಲ ಬಹಳ ಸ್ಥೂಲತೆ ಕಂಡು ಬರುತ್ತಿದೆ. ತಪ್ಪೇನೋ ಸತ್ಸಂಗಿಗಳದೆ. ಆದರೆ ಪ್ರಶಿಕ್ಷಕನು ಈ ಆರೋಪದಿಂದ ಮುಕ್ತನಾಗಲಾರನು. ಎಷ್ಟೋ ಸತ್ಸಂಗಿಗಳು ಶುದ್ಧೀಕರಣದ ಪದ್ಧತಿಯನ್ನು ಅರ್ಥಮಾಡಿಕೊಂಡಿಲ್ಲ. ಮತ್ತು ತಪ್ಪು ರೀತಿಯಲ್ಲಿ ಮಾಡುತ್ತಿರುವರೆಂದು ಸಹ ನನ್ನ ಅಭಿಪ್ರಾಯವಾಗಿದೆ. ನಾನು ಹೆಚ್ಚು ಕಡಿಮೆ ಪ್ರತಿಯೊಂದು ಕೇಂದ್ರದಲ್ಲಿ ಪದ್ಧತಿಯನ್ನು ತಿಳಿಸಿಕೊಟ್ಟಿರುವೆನು. ಎಲ್ಲಿ ಆವಶ್ಯಕತೆಯಿದೆಯೋ ಅಲ್ಲಿ ನೀವೂ ಸಹ ಹೇಳುತ್ತಿರುವಿರಿ. ನನಗೆ ಈ ವಿಷಯದಲ್ಲಿ ಅವರ ಶ್ರಮದ ಪರಿಣಾಮ ಅಷ್ಟಾಗಿ ಕಾಣುತ್ತಿಲ್ಲ. ಖೇದದ ಮಾತೇನೆಂದರೆ, ಇದು ಇಷ್ಟು ಸುಲಭವಾದ ಪದ್ಧತಿಯಿದ್ದರೂ ಇದನ್ನು ಸುಶಿಕ್ಷಿತರೂ ಸಹ ಅರ್ಥಮಾಡಿಕೊಳ್ಳುತ್ತಿಲ್ಲ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೪೦ ಶಾಹಜಹಾನ್‌ಪೂರ್
ನಂ. ಸಿ-೩೨೬/ಎಸ್.ಆರ್.ಸಿ.ಎಮ್. ದಿ. ೨೪. ೬. ೧೯೭೧

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಚಿ. ಉಮೇಶನಿಗೆ ೨೦ ಜೂನರಂದು ಒಬ್ಬ ಮಗ ಹುಟ್ಟಿರುವನೆಂಬುದು ಬಹಳ ಸಂತೋಷದ ಸಮಾಚಾರ. ತಾಯಿ ಮತ್ತು ಕೂಸು ಕ್ಷೇಮವಾಗಿದ್ದಾರೆ. ಇಲ್ಲಿ ಎಲ್ಲವೂ ಕ್ಷೇಮ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೮೧ ಶಾಹಜಹಾನ್‌ಪೂರ್
ನಂ. ಸಿ-೩೫೩/ಎಸ್.ಆರ್.ಸಿ.ಎಮ್. ದಿ. ೨. ೬. ೧೯೬೧

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಮಮತೆಯ ಓಲೆ ತಲುಪಿತು. ಮದ್ರಾಸಿನಿಂದ ಈವೊತ್ತು ಜಹಗೀರದಾರರ ಪತ್ರ ಬಂದಿದೆ. ಅವರು ಈಗ ಚೆನ್ನಪಟ್ಟಣಕ್ಕೆ ತಿರುಗಿ ಹೋಗಿರಬಹುದು. ಅಲ್ಲಿ ತಾಯಿ ಮತ್ತು ಮಗ ಕ್ಷೇಮದಿಂದ ಇರುವರು. ಮಗುವಿಗೆ ಸ್ವಲ್ಪ ದೃಷ್ಟಿ ತಗುಲಿದೆ ಎಂದು ತಿಳಿಸಿರುವರು. ಈಗ ಅದು ಗುಣವಾಗಿರಬಹುದು. ಚಿ.ವಾಸಂತಿಯ ಸ್ಥಿತಿಯ ಬಗ್ಗೆ ಓದಿ ಚಿಂತೆಯಾಯಿತು. ನಾನು ಏನು ಪ್ರಾರ್ಥನೆ ಮಾಡಬಲ್ಲೆನೋ ಅದನ್ನು ಮಾಡಲಾರಂಭಿಸಿರುವೆನು. ದೇವರು ಆಕೆಗೆ ಬೇಗ ಆರೋಗ್ಯ ದಯಪಾಲಿಸಲಿ. ಆಕೆಯ ಸ್ಥಿತಿಯನ್ನು ಮುಂದಿನ ಪತ್ರದಲ್ಲಿ ಬರೆಯುವೆನು. ಲಾಲಾಜಿ ಸಾಹೇಬರಿಗೆ ಧನ್ಯವಾದಗಳು. ಎಲ್ಲರಿಗೂ ಒಳ್ಳೆಯ ಲಾಭವಾಗುತ್ತಿರುವುದು. ಬಂಧು, ಇದೆಲ್ಲ ಅವರ ಕೆಲಸವೇ ಆಗಿದ್ದರೂ ಬಹುಮಾನ ನನಗೇ ಸಿಗುತ್ತದೆ. ನಿಜಸ್ಥಿತಿಯೇನೆಂದರೆ ನನಗೆ ದೃಷ್ಟಿಯೇ ಇಲ್ಲವಾಗಿದೆ. ಎಲ್ಲವೂ ಆತನ ದೃಷ್ಟಿಯೇ. ಅದನ್ನು ಆತನಿಗೇ ಒಪ್ಪಿಸಿ ಬಿಟ್ಟಿರುವೆ. ಬಾಣವು ಬಿಲ್ಲಿನಿಂದ ಬಿಡಲ್ಪಡುವುದು. ಪ್ರಶಂಸೆಯೇನೋ ಬಾಣ ಬಿಡುವವನಿಗೆ ಸಿಗುತ್ತದೆ.

ಲಖೀಮಪೂರ ನಿವಾಸಿಯಾದ ಪಂಡಿತ ಪ್ರೇಮಸಾಗರರು ಸಹಜಮಾರ್ಗದ ಮೇಲೆ ಒಪ್ಪಿಸಿದ್ದ ಪ್ರಬಂಧವು ಸ್ವೀಕೃತವಾಗಿ ಆತನಿಗೆ ಡಾಕ್ಟರೇಟ ಪದವಿ ದೊರಕಿರುವುದು ಎಲ್ಲರಿಗೂ ಸಂತೋಷದ ಸಂಗತಿ. ಈಗ ಸಹಜಮಾರ್ಗದ ಸಿದ್ಧಾಂತವು ಸ್ಥಾಪಿತವಾಯಿತು. ನಿಮ್ಮ ಸತ್ಸಂಗದಲ್ಲಿ ಸಹ ಈ ಸಮಾಚಾರ ತಿಳಿಸಿರಿ. ಇದರಿಂದ ಆ ಜನರಿಗೆ ಸಂತೋಷವಾಗುವುದು. ನೀವು ಯಾವ ಇಂದ್ರಿಯಾಸಕ್ತಿಯ ಬಗ್ಗೆ ಬರೆದಿರುವಿರೋ ಇದೊಂದು ನೈಜತೆಯ ರಹಸ್ಯ. ಇದನ್ನು ನಾನು ಬಹಿರಂಗ ಗೊಳಿಸಿಲ್ಲ. ಕೇವಲ ಒಂದು ಸುಳಿವು ಮಾತ್ರ ಕೊಡುತ್ತಿರುವೆನು. ನಿಮ್ಮ ಮನಸ್ಸಿಗೆ ಕಟೆಯಬಾರದೆಂದು ಅದರ ರೂಪವನ್ನೂ ಸ್ವಲ್ಪ ಉತ್ತಮಗೊಳಿಸಲು ಪ್ರಯತ್ನಿಸುವೆ.

ನನಗೆ ಸ್ವಲ್ಪ ಅಪಥ್ಯದಿಂದ ಯಾವಾಗಲಾದರು ಹೊಟ್ಟೆನೋವು ಹೆಚ್ಚಾಗಿ ಬಿಡುತ್ತದೆ. ಕೆಲಸದ ಒತ್ತಡವಂತೂ ಇದ್ದೇಇರುತ್ತದೆ. ಜನರು ಇಷ್ಟೆಲ್ಲಾ ಖರ್ಚು ಮಾಡಿಕೊಂಡು ಬರುತ್ತಾರೆ. ಅಂದಬಳಿಕ ನಾನು ಕೆಲಸ ಮಾಡದೇ ಇರಲು ಹೇಗೆ ಸಾಧ್ಯ. ಜನರು ನನಗೆ ಸ್ವಲ್ಪವಾದರೂ ವಿಶ್ರಾಂತಿ ಕೊಡಬಯಸುವದಿಲ್ಲವೆನ್ನುವ ವಿಷಯ ಮಾತ್ರ ನಿಜ. ಕಾರ್ಯದರ್ಶಿಯು ಪ್ರತಿ ತಿಂಗಳು ೧೧ರಿಂದ ೨೦ರವರೆಗೆ ನನಗೆ ವಿಶ್ರಾಂತಿಗಾಗಿ ಬಿಡುವು ಇರಬೇಕೆನ್ನುವದನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದಾನೆ ಕೂಡ. ಆದರೆ ಬಂಧು, ಇಲ್ಲಿಯೇ ಒಂದು

ವಿಷಯ ಆವಶ್ಯವಾಗಿ ಹೇಳಬಯಸುವೆ. ಅದೇನೆಂದರೆ ಕೆಲವರು ತಮ್ಮ ಸ್ವಾರ್ಥವನ್ನು ಪ್ರೇಮವೆಂದು ತೋರಿಸಿಕೊಳ್ಳುವರು. ಹಾಗೂ ಈ ದೂರು ಹೆಚ್ಚಾಗಿ ಉತ್ತರಭಾರತದವರ ಬಗ್ಗೆ ಇದೆ.

ಬಿ.ಸರ್ವೇಶನು ಬಿ.ಎಸ್.ಸಿಯಲ್ಲಿ ಅನುತ್ತೀರ್ಣನಾಗಿರುವನು. ಇದು ಬಹಳ ವಿಷಾದಕರವಾಗಿದೆ. ಈಶ್ವರನು ಅವನನ್ನು ಇನ್ನು ಮುಂದೆ ಉತ್ತೀರ್ಣಗೊಳಿಸಲಿ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೮೨
ನಂ.ಸಿ-೬೪/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ. ೨೮. ೧೦. ೧೯೭೧.

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಒಲುಮೆಯ ಓಲೆ ತಲುಪಿತು. ನಾನು ಬಿಜಾಪೂರದಲ್ಲಿ ಇದ್ದಾಗ ಸೊಲ್ಲಾಪುರದ ಕೆಲವು ಜನರು ಅಲ್ಲಿ ನನಗೆ ಭೆಟ್ಟಿಯಾಗಿದ್ದರು. ಅವರು ಒಳ್ಳೆಯ ಜನರಿರುವರು. ಅಲ್ಲಿ ಸತ್ಸಂಗ ಬೆಳೆಸುವುದು ಒಳ್ಳೆಯದು. ನೀವು ಯಾದಗಿರಿಯಲ್ಲಿ ಏರ್ಪಡಿಸಿದ್ದ ಸಭೆ ನಿಜವಾಗಲೂ ಬಹಳ ಯಶಸ್ವಿಯಾಗಿತ್ತು. ನೀವು ಸಭೆಯನ್ನು ಏರ್ಪಡಿಸಿದಾಗಲೆಲ್ಲ ಸಾರ್ವಜನಿಕರನ್ನು ಆಮಂತ್ರಿಸುತ್ತಿರಬಹುದು. ಅದರಿಂದ ನಮ್ಮ ವಿಚಾರಗಳು ಪ್ರಸಾರಗೊಂಡು ಜನರು ಮಿಷನ್ನಿನ ಬಗ್ಗೆ ತಿಳುವಳಿಕೆ ಪಡೆಯುವರು.

ನಾನು ಒಂದು ಹೊತ್ತಿನಲ್ಲಿ ಎರಡು-ಮೂರು ತಾಸಿಗಿಂತ ಹೆಚ್ಚು ಕೆಲಸ ಮಾಡಲಾರೆ. ಪರದೇಶದ ಪತ್ರವ್ಯವಹಾರ ಸಹ ಬಹಳ ಬೆಳೆದಿದೆ. ನವ್ಹೆಂಬರಿನ ಆರಂಭದಿಂದ ಐರೋಪ್ಯ ಜನರು ಬರತೊಡಗುವರು. ಅವರು ಮೊದಲಿನಿಂದಲೇ ದಿನಾಂಕಗಳನ್ನು ನಿಗದಿ ಪಡಿಸಿರುವರು. ನನ್ನ ಅಕ್ಕನ ಮಗನ ಮಗಳ ಮದುವೆ ೨೧.೧೧.೭೧ಕ್ಕೆ ಇದೆ. ಅದು ಮೈನಪುರಿಯಲ್ಲಿದೆ. ಮತ್ತು ಮನೆತನದಲ್ಲಿ ನಾನು ಎಲ್ಲರಿಗಿಂತ ಹಿರಿಯವನಾಗಿರುವುದರಿಂದ ಅಲ್ಲಿ ಹೋಗುವುದು ಅನಿವಾರ್ಯವಾಗಿದೆ. ಆದರೆ ಪಾಶ್ಚಾತ್ಯರು ಬರುವ ದಿನಾಂಕಗಳ ಕಾರಣದಿಂದ ನಾನು ಅಲ್ಲಿ ಹೋಗಲು ಅಸಮರ್ಥನಾಗಿರುವೆನು. ಮಕ್ಕಳು ಮಾತ್ರ ಅವಶ್ಯ ಹೋಗುವರು.

ಡಾ. ವರದಾಚಾರಿಯವರ ಮಗ ನಾರಾಯಣ ಅಮೇರಿಕದಿಂದ ತಿರುಗಿ ಬಂದಿರುವರು. ಅವರು ಅಲ್ಲಿ ಒಳ್ಳೆಯ ಕೆಲಸ ಮಾಡಿರುವರು. ಅಲ್ಲಿ ಕೆಲವರು ಸದಸ್ಯರು ಸಹ ಬೆಳೆದಿರುವರು. ರಾಜಗೋಪಾಲಾಚಾರಿಯವರಿಗೆ ಕಾಮಾಲೆಯಾದುದರಿಂದ ಅವರು ಹೋಗಲಶಕ್ತರಾದರು. ಅವರ ಮಗ ಪಾರ್ಥಸಾರಥಿಯವರು ಕಂಪನಿಯ ಕೆಲಸದ ಮೇಲೆ ಹೋಗಿದ್ದರು. ಅವರು ಬಹಳ ಒಳ್ಳೆಯ ಕೆಲಸ ಮಾಡಿರುವರು. ಆಸ್ಟ್ರೇಲಿಯಾದಲ್ಲಿ ಕೇಂದ್ರವನ್ನು ತೆರೆದಂತಾಗಿದೆ. ಅಲ್ಲಿ ಒಬ್ಬ ಗ್ರೀಕನು ನೆಲೆಸಲು ಹೋಗುತ್ತಿರುವನು. ಆತನು ನನ್ನ ಅಪ್ಪಣೆ ಹೊಂದಿದ ಮಿಷನ್ನಿನ ಅಭ್ಯಾಸಿಯಾಗಿದ್ದಾರೆ. ನಾನೂ ಸಹ ಈಗ passport ಗಾಗಿ ಅರ್ಜಿ ಹಾಕುತ್ತಿರುವೆ.

ನಿಮಗೆ ವಹಿಸಿದ್ದ ಪಶ್ಚಿಮದ ಕೆಲಸ ಬಹಳ ಸಡಿಲಾಗಿ ನಡೆಯುತ್ತಿದೆ. ನಾನು ಕಸ್ತೂರಿಗೆ ಸಹ ಇದೇ ಕೆಲಸ ಕೊಟ್ಟೆ. ಆಕೆಯು ಚೆನ್ನಾಗಿ ಮಾಡಿರುವಳು. ನೀವೂ ಸಹ ಕೆಲಸ ಒಳ್ಳೆಯ ವಿಧಾನದಿಂದ ಮಾಡಲು ಬದ್ಧರಾಗಿರಿ. ನಿಮಗೆ ನಾನು ಪೂರ್ತಿ ಪ್ರಪಂಚವನ್ನು ಕೊಟ್ಟಿರುವೆನು. ಆಕೆಗೆ ಕೇವಲ ಪಶ್ಚಿಮದ್ದು ಮಾತ್ರ ಕೊಟ್ಟಿರುವೆನು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೮೩ — ಷಾಹಜಹಾನಪೂರ

ನಂ. ಸಿ/೨೪೩/ಎಸ್.ಆರ್.ಸಿ.ಎಮ್. — ದಿ.೨೧.೧೨.೭೧

ನನ್ನ ರಾಘವೇಂದ್ರರಾವಜಿ.

ದೀರ್ಘಾಯುಷಿಯಾಗಿರಿ. ನಾನು ಪಾಸಪೋರ್ಟಗಾಗಿ ಅರ್ಜಿ ಕೊಟ್ಟಿರುವೆನು. ಬೇಗನೆ ಬರಲಿರುವುದು. ಅಮೇರಿಕಾಕ್ಕೆ ವೀಸಾ ಇಲ್ಲ. ಆದರೆ ಅನುಮತಿ ತೆಗೆದುಕೊಳ್ಳಬೇಕಾಗುವುದು. ಅಲ್ಲಿಯ ಸತ್ಸಂಗಿಗಳು ತಾವು ನನ್ನನ್ನು ಆಮಂತ್ರಿಸಿರುವರೆಂದೂ ನನ್ನ ಎಲ್ಲ ಸ್ಥಳೀಯ ವೆಚ್ಚವನ್ನು ಹೊರುವೆವೆಂದೂ ಹೇಳಿಕೆ ಕೊಡಬೇಕಾಗುವುದು. ಲಂಡನ್ನಿನಲ್ಲಿ ಸಹ ಸುಮಾರು ಇದೇ ತೊಂದರೆಯಿದೆ. ಕೆಲಸವೇನೋ ಆಗಿಯೇಬಿಡುವುದೆಂದು ನನಗೆ ವಿಶ್ವಾಸವಿದೆ. ತೀವ್ರ ತಳಮಳವುಳ್ಳ ಅಭ್ಯಾಸಿಗಳು ಬಹಳ ಕಡಿಮೆ ದೊರೆಯುವರು.

ಅಭ್ಯಾಸಿಯು ಈಶ್ವರನ ಸಾಕ್ಷಾತ್ಕಾರ ಬಯಸುವವನೆನ್ನುವುದನ್ನು ಎಲ್ಲಾ ಪ್ರಶಿಕ್ಷಕರು ಖಚಿತಪಡಿಸಿಕೊಳ್ಳುತ್ತಿರಬಹುದು. ಮತ್ತು ಇಷ್ಟು ಸಾಕಾಗುವುದು. ಅವರಿಗೆ ರುಚಿ ಹುಟ್ಟಿತೆಂದರೆ

ಬಿಡಲು ಬಯಸುವದಿಲ್ಲ. ಇದು ಈಶ್ವರನ ಕೃಪೆ. ಆದಷ್ಟು ಮಟ್ಟಿಗೆ ಬುದ್ಧಿವಂತ ಜನರನ್ನು ತೆಗೆದುಕೊಳ್ಳಬೇಕು. ಭಗವಂತನನ್ನು ತಿಳಿಯಬಯಸುವ ಸುಶಿಕ್ಷಿತರಿಗೆ ಯಾವಾಗಲೂ ಪ್ರಾಧಾನ್ಯವಿರಬೇಕು. ನಾನು ಈ ವಯಸ್ಸಿನಲ್ಲಿ ಹೆಚ್ಚು ಸಂವೇದನಾಶೀಲನಾಗಿರುವೆನು. ಆದುದರಿಂದ ಶಿಷ್ಟಾಚಾರಕ್ಕೆ ವಿರುದ್ಧವಾದ ಅತ್ಯಂತ ಚಿಕ್ಕ ವಿಷಯವಾದರೂ ನನಗೆ ತಿಳಿದು ಬರುತ್ತದೆ.

ಮಿಷನ್ನಿನಲ್ಲಿ ಚರಣಸ್ಪರ್ಶ ಮಾಡುವವರ ಕೊರತೆಯಂತೂ ಇಲ್ಲ. ಆದರೆ ಸದ್ವರ್ತನೆಯ ಅಭಾವ ಅವಶ್ಯ ಇದೆ. ಎಲ್ಲದಕ್ಕೂ ಹೆಚ್ಚಾಗಿ ನಾನು ಕಾಣುವ ದೋಷವೆಂದರೆ ಮಿಷನ್ನನ್ನು ತಮ್ಮದೆಂದು ಭಾವಿಸುವುದಿಲ್ಲ. ಈ ಅಲ್ಪನ ಮನೆಯನ್ನು ತಮ್ಮ ಮನೆಯಂತೆ ಬಗೆಯುವುದಿಲ್ಲ. ಬಹಳ ಸುಲಭವಾದ ಮಾತು ಹೇಳುವೆನು. ಜನರು ಇವರಂತೆ ನಡೆದುಕೊಂಡರೆ ಬಹಳಷ್ಟು ಸುಧಾರಣೆಯಾಗುವುದು. ನಮ್ಮ ವರ್ತನೆಯಿಂದ ಯಾರಿಗಾದರೂ ತೊಂದರೆಯಾಗುವುದೋ ಹೇಗೆ ಎಂದು ಮನುಷ್ಯನು ವಿಚಾರಿಸಿ ಅದರ ಉತ್ತರದಂತೆ ಕಾರ್ಯತತ್ಪರನಾದರೆ ಎಲ್ಲ ವಿಷಯಗಳು ಸರಿಯಾಗುವವು. ಅಲ್ಲಲ್ಲಿ ಸಭೆಗಳನ್ನು ಕರೆದು **ನೀವು ಒಳ್ಳೆಯ ಕೆಲಸ ಮಾಡುತ್ತಿರುವಿರಿ. ಆದರಿಂದ ಮಿಷನ್ನು ಬೇಗ ವಿಸ್ತಾರಗೊಳ್ಳುವುದು. ನೀವು ಕೆಲಸವನ್ನು ಚೆನ್ನಾಗಿ ಮಾಡುತ್ತಿರುವಿರಿ. ಆದರ ಪರಿಣಾಮವೂ ಒಳ್ಳೆಯದಾಗುವುದು. ನಿಮಗೆ ತಿಳಿದ ಹಾಗೆ ನಾನು ನಿಮ್ಮ ಮಿತಿಯನ್ನು ಮುರಿದುಹಾಕಿರುವೆನು. ಇದಲ್ಲದೆ ನಿಮ್ಮಲ್ಲಿ ಬಹಳ ಹೆಚ್ಚು ಶಕ್ತಿಯಿದೆ. ನಾನು ಇದರ ಆಶ್ವಾಸನೆ ನೀಡುವೆ. ಅಂದಮೇಲೆ ಈ ದೌರ್ಬಲ್ಯದ ವಿಚಾರ ಏತಕ್ಕಾಗಿ ಬಂತು? "ಪ್ರಾಯಶಃ ನಾನು ಮಾಡುವುದರಲ್ಲಿ ಮತ್ತು ವಿಧಿಯಂತೆ ಆಗುವುದರಲ್ಲಿ ಇವೆರಡರಲ್ಲಿರುವ ಸಂಬಂಧ ಶೂನ್ಯಸಮಾನವಾಗಿದೆ" ಎಂದು ನೀವು ಬರೆದಿರುವಿರಿ. ಈ ವಿಚಾರವನ್ನು ತತ್‌ಕ್ಷಣ ದೂರ ಮಾಡಿಬಿಡಿರಿ.**

ಈ ವರ್ಷ ಬಸಂತ ಪಂಚಮಿ ಜನವರಿ ೨೦ ರಿಂದ ೨೨, ೧೯೭೨ ರವರೆಗೆ ಇರುವುದು. ನಿಮ್ಮ ಆಧೀನದಲ್ಲಿರುವ ಕೇಂದ್ರಗಳಿಗೂ, ಎಲ್ಲೆಲ್ಲಿ ಇತರ ಬಾಂಧವರಿರುವರೋ ಅವರಿಗೂ ಭಾಗವಹಿಸುವುದಕ್ಕೆ ಸೂಚನೆ ಕೊಡಿರಿ. ನೀವು ಭಾಗವಹಿಸುತ್ತಿರುವುದು ನನಗೆ ಸಂತೋಷ. ಈ ಸಲದ ಸಂಘಟನಾ ಸಮಿತಿಯಲ್ಲಿ ನೀವಿರುವುದು ಅತ್ಯಂತ ಆವಶ್ಯಕವಾಗಿದೆ. ಏಕೆಂದರೆ ಭವಿಷ್ಯದ ಕಾರ್ಯಕ್ರಮ ನಿರ್ಣಯಿಸಿಕೊಳ್ಳಲಿಕ್ಕೆ ಇದು ಮೊದಲನೆಯ ಸಭೆಯಾಗಿದೆ. ನನಗೆ ಶ್ರೀ ವಿಠ್ಠಲರಾವ ಅವರ ನೆನಪು ಬಹಳ ಸಲ ಬರುತ್ತದೆ. ಆವರೂ ಬರುವರೇನು? ಕೆಲಸದಿಂದ ಬಿಡುವು ಮಾಡಿಕೊಂಡು ಅವರೂ ಬಂದರೆ ಬಹಳ ಸಂತೋಷವಾಗುವುದು.

ಒಬ್ಬ ಅಮೇರಿಕನ್, ಒಬ್ಬ ಇಂಗ್ಲಿಷ್ ಮನುಷ್ಯ ಮತ್ತು ಡೆನ್ಮಾರ್ಕಿನ ಒಬ್ಬ ಮಹಿಳೆ ಈಗ ನನ್ನ ಬಳಿ ತಂಗಿರುವರು. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೮೪
ನಂ. C-೭೮೯/ಎಸ್.ಆರ್.ಸಿ.ಎಮ್.

ಶಾಹಜಹಾನ್‌ಪೂರ್
ದಿ.೨೯.೮.೭೨

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಗುಂಡೆರಾಯರ ಹೆಂಡತಿ ಸ್ವರ್ಗಸ್ಥಳಾದ ಸಮಾಚಾರ ಕೇಳಿ ಬಹಳ ಖೇದವಾಯಿತು. ಅವರಿಗೆ ಸಂತಾಪ ಸೂಚಕ ಪತ್ರವನ್ನು ಕಳಿಸಿರುವೆ. ಈಶ್ವರೇಚ್ಛೆಗೆ ಏನೂ ಮಾಡಲಾಗದು. ಡಾ॥ಶಾಮರಾವ ತನ್ನ ಕರ್ತವ್ಯವನ್ನು ಸರಿಯಾಗಿ ಪಾಲಿಸಬೇಕು. ಮತ್ತು ಅವರು ಮಾಡುತ್ತಿರಲೂ ಬಹುದು. ಆದರೆ ಸಂಸತ್ ಸದಸ್ಯರು ಕಾರಣವಿಲ್ಲದೆ ವಿರುದ್ಧವಾಗಿರುವರೆಂಬುದು ಅಷ್ಟೇನೂ ಸರಿಯಾಗಿ ಕಾಣಲಿಲ್ಲ. ಆದರಲ್ಲೂ, "ಆತನು ಷಾಹಜಹಾನ್‌ಪೂರಕ್ಕೆ ಯಾಕೆ ಹೋಗಿದ್ದನು"? "ಗ್ರುಪ್ ಮೆಡಿಟೇಶನ್ (ಸಾಮೂಹಿಕ ಸತ್ಸಂಗ) ಯಾಕೆ ಮಾಡುತ್ತಾನೆ?" ಎನ್ನುವ ಟೀಕೆ ಇನ್ನೂ ಕೆಟ್ಟದ್ದಾಗಿದೆ. ಇರಲಿ ಯಾವನು ಪ್ರಪಂಚದ ನ್ಯಾಯಾಧೀಶನಿರುವನೋ ಅವನೇ ಸ್ವಯಂ ಇದರ ವ್ಯವಸ್ಥೆ ಮಾಡುವನು. ಡಾಕ್ಟರ ಸಾಹೇಬರ ಹಿತಕ್ಕಾಗಿ ನಾವು ಪ್ರಾರ್ಥನೆ ಸಲ್ಲಿಸಬೇಕು. ಮನುಷ್ಯನು ತನ್ನ ಮತ್ತಿನಲ್ಲಿ ಎಷ್ಟು ಮುಳುಗಿರುತ್ತಾನೆಂದರೆ, ತಾನು ತನಗಾಗಿ ಏನು ಮಾಡುತ್ತಿರುವೆನೆನ್ನುವ ಅರಿವೂ ಸಹ ಇರುವುದಿಲ್ಲ. ಕಚೇರಿಯ ಜೋರು ಕಚೇರಿಯವರೆಗೆ ಇರಬೇಕು. ಅಧಿಕಾರಯ ಕರ್ತವ್ಯವೇನೆಂದರೆ, ಕಚೇರಿಯಲ್ಲಿ ಕೆಲಸ ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳಬೇಕು.

ವಾಸಂತಿಗೆ ಮಗುವಾದದ್ದು ಮತ್ತು ಅದು ದೈವಾಧೀನವಾದದ್ದು ಬಹಳ ಖೇದದ ವಿಷಯ.

ಮದ್ರಾಸಿನಲ್ಲಿ ಶತಮಾನೋತ್ಸವದ ದಿನಾಂಕ ೨೫.೨.೭೩. ಎಂದು ನಿರ್ಣಯಿಸಲಾಗಿದೆ. ನೀವೆಲ್ಲರೂ ಅಲ್ಲಿ ತಲುಪಬೇಕು. ೭.೨.೭೩ಕ್ಕೆ ಇಲ್ಲಿ ಬಸಂತ ಇದೆ. ಎರಡೂ ಕಡೆ ಹೋಗುವ ವೆಚ್ಚವನ್ನು ಯಾರು ನಿರ್ವಹಿಸಲಾರರೋ ಅವರು ಮದ್ರಾಸಿಗೆ ಅವಶ್ಯವಾಗಿ ತಲುಪಬೇಕು. ಅವರಿಗೆ ಇಲ್ಲಿಯೂ ಸುಸ್ವಾಗತವಿದೆ. ಮತ್ತು ಮೂರು ದಿವಸ ಸತ್ಸಂಗವು ಇಲ್ಲಿ ಹೇಗೆ ನಡೆಯುವದೋ, ಅಲ್ಲಿಯೂ ಸಹ ನಡೆಯುವುದು. ಅದನ್ನು ಸಫಲಗೊಳಿಸುವುದಕ್ಕಾಗಿ ನಾವೆಲ್ಲರೂ ಎಲ್ಲ ವಿಧದ ಸಹಾಯ ಮಾಡಬೇಕು, ಸಹಕರಿಸಬೇಕು.

ನನಗೆ ನೋವು ಇನ್ನೂ ತೊಂದರೆ ಕೊಡುತ್ತಲಿದೆ. ರಾಜ್ಯಗಳ ಸಂಘಟಕರು ಕೇವಲ ಹೆಸರಿಗೆ ಮಾತ್ರ ಕುಳಿತಿರುವರು. ಏನು ಮಾಡಬೇಕೆನ್ನುವ ಬಗ್ಗೆ ಒಬ್ಬರಿಗೊಬ್ಬರು ಯಾವ ಸಲಹೆಯನ್ನು ಕೊಡುತ್ತಲಿಲ್ಲ. ಮತ್ತು ಏನನ್ನಾದರೂ ಮಾಡುವುದಕ್ಕೂ ಆರಂಭಿಸಿಲ್ಲ. ಸಂಸ್ಥೆಯ ಕಡೆಗೆ ಲಕ್ಷ್ಯಕೊಡಿರಿ. ನಿಮಗೆ ಯಾವ ಕೆಲಸ ವಹಿಸಿರುವೆನೋ, ಅದನ್ನು ಮಾಡುತ್ತಿರುವಿರಿ. ಆದರೆ ಕೆಲಸವು ಅತ್ಯಂತ ನಿಧಾನವಾಗಿದೆ. ನಿಮ್ಮಲ್ಲಿ ಯಾವ ಕೊರತೆ ಇದೆಯೆಂಬ ಬಗ್ಗೆ ನೀವು ಸ್ವತಃ ವಿಚಾರ

ಮಾಡಿರಿ. ನಿಮ್ಮ ಸ್ವಂತ ಶುದ್ಧೀಕರಣದ ಕ್ರಿಯೆಯನ್ನು ಮತ್ತೆ ಆರಂಭಿಸಿರಿ. ಅದನ್ನು ಆಗಾಗ್ಗೆ ನಾನೂ ಮಾಡಿಕೊಳ್ಳುತ್ತೇನೆ. ನೀವು ಆಸಕ್ತಿಯಿಂದ ಕೆಲಸ ಮಾಡುತ್ತ ಹೋಗಿರಿ. ಇದು ಆವಶ್ಯವಾದದ್ದು, ಅನಿವಾರ್ಯವಾದದ್ದೂ ಆಗಿದೆ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೮೫
ನಂ.ಸಿ.೫೮೫/ಎಸ್.ಆರ್.ಸಿ.ಎಮ್.

ಷಾಹಜಹಾನ್‌ಪೂರ್
ದಿ.೧೧.೪.೧೯೭೨

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ.

ನಿಮ್ಮ ಒಂದು ಪತ್ರ ಬಂದಿತ್ತು. ಅದರಲ್ಲಿ, ಏನು ಬರೆದಿದ್ದೀರೆಂಬುದು ಜ್ಞಾಪಕವಿಲ್ಲ. ಒಳ್ಳೆಯದು ನೀವು ಬರೆದುದು ಸರಿಯಾಗಿಯೇ ಇತ್ತು. ಆದರಲ್ಲಿ ಯಾವುದೋ ಸಭೆಯ ಕುರಿತು ಕೂಡ ಬರೆದಿದ್ದಿರಿ. ಸಭೆ ಸೇರುವುದು ನಿಜವಾಗಿಯೂ ಆವಶ್ಯಕವಾಗಿದೆ. ಪ್ರಚಾರವೂ ಸಾಧ್ಯವಾದಷ್ಟು ಆಗಬೇಕು. ಗಣಿಯಿಂದ ಹೊರಗೆ ಬಂದ ನಂತರವೇ ಚಿನ್ನಕ್ಕೆ ಬೆಲೆ ಬರುತ್ತದೆ. "ಲಾಲ ಕೀಮತ ಕೋ ಪಹುಂಚತಾ ಹೈ ಬದಖ್‌ಷಾಂ ಛೋಡಕರ " (ಮಾಣಿಕ್ಯವು ಬದಖ್‌ಷಾಂ ಬಿಟ್ಟಾಗಲೇ ಆದಕ್ಕೆ ಬೆಲೆ ಬರುತ್ತದೆ.)

ನನ್ನ ಬಳಿ ವಿದೇಶದ ಜನರು ಬಹಳ ಇದ್ದರು. ೪, ೬ ಮತ್ತು ೧೦ ನವ್ಹೆಂಬರ ೭೧ ರಿಂದಲೇ ಬರುತ್ತಲಿದ್ದರು. ಕೊನೆಯವ್ಯಕ್ತಿ ನಿನ್ನೆ ಹೋದ. ಇನ್ನಂತೂ ಬಹಳ ಸಂತೃಪ್ತರಾಗಿ ಹೋಗುತ್ತಾರೆ. ಬಹುತೇಕವಾಗಿ ಪ್ರೇಮದಲ್ಲಿ ಆತ್ತರೂ ಸಹ ಈಗ ಅಲ್ಲೇನಾಗುತ್ತದೋ ನೋಡಬೇಕು. ಆದರೆ ಗುರುಮಹಾರಾಜರ ಕೃಪೆ ಪ್ರವಹಿಸುತ್ತಿರುವಾಗ ಅಲ್ಲಿ ಕೂಡ ಚೆನ್ನಾಗಿಯೇ ಇರುವುದು. ಲಂಡನ್ನಿನಿಂದ ಒಬ್ಬಿಬ್ಬರು ಪತ್ರಗಳಲ್ಲಿ ಪ್ರಶ್ನೆಗಳನ್ನು ಸಹ ಬರೆದು ಕಳಿಸಿರುವರು. ನನಗೊಂದು ಸುವಾರ್ತೆಯನ್ನು ಕೊಟ್ಟಿರುವರು. ಅದೆಂದರೆ, ಕೆಲವು ಪ್ರಶ್ನೆಗಳನ್ನು ಅಲ್ಲಿಗೋಸ್ಕರವಾಗಿ ಕಾಯ್ದಿರಿಸಿರುವರು. ಇಲ್ಲಿ ಎಷ್ಟು ಪ್ರಶ್ನೆಗಳಾದವೋ ಅವುಗಳ ಉತ್ತರ ಕೊಡಲಾಗಿದೆ. ಅವರು ವೈಜ್ಞಾನಿಕವಾದ ಉತ್ತರಗಳನ್ನು ಬಯಸುತ್ತಾರೆ. ನಾನು ವಿಜ್ಞಾನ ಓದಿಲ್ಲ. ಎರಡನೆಯ ತೊಂದರೆ ಏನೆಂದರೆ ನಾನು ತತ್ತ್ವಶಾಸ್ತ್ರಕ್ಕೆ ಶರಣಾಗತನಾಗಿಲ್ಲ. ಒಂದು

ವೇಳೆ ನಾನು ಶರಣಾಗತನಾಗಿದ್ದರೆ ''ಆತ''ನಿಗೆ ಆಗಿರುವೆ. 'ಆತ'ನಿಂದಲೇ ವಿಜ್ಞಾನದ ಆರಂಭವಾಗುವುದು. ಇಂದಿನವು ಎಂಥ ವೈಜ್ಞಾನಿಕ ಯಂತ್ರ ಸೃಷ್ಟಿಗಳೋ ದೇವರೇ ಬಲ್ಲ. ಅವುಗಳಲ್ಲಿ ಬೆರಳು ಸಿಕ್ಕಿಬಿದ್ದರೆ ಕೈಯಲ್ಲದಿದ್ದರೂ ಬೆರಳು ಮಾತ್ರ ಖಂಡಿತ ಕತ್ತರಿಸಿಹೋಗುತ್ತದೆ. ಜನರು ತಮ್ಮ ಪ್ರಶ್ನೆಗಳ ಉತ್ತರವನ್ನು ವೈಜ್ಞಾನಿಕವಾಗಿ ಕೊಡಬೇಕೆಂದು ನನಗೆ ಬಲವಂತ ಮಾಡುವರು. ನನ್ನ ವಿಚಾರಸರಣಿಯನ್ನು ಎಲ್ಲೋ ಒಂದು ಕಡೆ ಟೀಕಿಸಿಯೂ ಇರುವರು. ಆದರೆ ಗುರುಮಹಾರಾಜರ ಕೃಪೆಯಿಂದ ಅದಕ್ಕೆ ಉತ್ತರ ಚೆನ್ನಾಗಿಯೇ ಕೊಡಲಾಯಿತು. ಮತ್ತು ಆತನು ತೃಪ್ತಿ ಹೊಂದದೇ ಇರಲಾರ. ಇನ್ನೊಂದು ವಿಷಯ ನನಗೇನು ಕಾಣಿಸಿತೆಂದರೆ, ಜನರು ತಮ್ಮ ಸಾಮಾನ್ಯ ಪತ್ರಗಳ ಮೇಲೆ ಸಹ, ವೈಯಕ್ತಿಕ ಮತ್ತು ಗೌಪ್ಯ ಅಂತ ಬರೆದಿದ್ದಾರೆ. ಆದ್ದರಿಂದ ನಾನು ಆ ಪತ್ರಗಳನ್ನು ಬಹಿರಂಗಗೊಳಿಸಿಲ್ಲ. ಆದರೆ ನನ್ನ ಉತ್ತರಗಳೇನೂ ಗೌಪ್ಯವಾದುವಲ್ಲ. ಎಲ್ಲರಿಗೂ ಉಪಯೋಗವಾಗುವಂಥವುಗಳಾಗಿವೆ. ಅವುಗಳಲ್ಲಿಯ ಹೆಸರು ತೆಗೆದು ಹಾಕಿ ಪತ್ರಿಕೆಯಲ್ಲಿ ಕೊಡುವುದಕ್ಕೋಸ್ಕರ ಯಾರಾದರೂ ಪಾಶ್ಚಾತ್ಯ ಕಾಯಿದೆ ಬಲ್ಲವರನ್ನು ಕೇಳಬೇಕಾಗುತ್ತದೆ.

ಈಗ ನಿಜ ಉದ್ದೇಶಕ್ಕೆ ಬರುತ್ತೇನೆ. ನಿಮಗೆ ನಾನು ಒಂದು ಕರ್ತವ್ಯ ವಹಿಸಿಕೊಟ್ಟಿರುವೆನು. ಪ್ರವಾಸದ ಕಾರ್ಯಕ್ರಮ ನಿಮ್ಮ ಬಳಿ ತಲುಪಿರಬಹುದು. ನಾನು ಅಲ್ಲಿ ಎಷ್ಟು ಕರ್ತವ್ಯನಿರತನಾಗಿರುತ್ತೇನೋ ನೀವು ಅದಕ್ಕಿಂತ ಕಡಿಮೆ ಇರಕೂಡದೆಂದು ನಾನು ಬಯಸುವೆ. ನಿಮ್ಮ ಆತ್ಮ ವಿಶ್ವಾಸರ್ಕ್ಕಾಗಿ ನಾನು ಪುನಃ ಬರೆಯುವೆ. ನಿಮ್ಮ ಕಾರ್ಯಸಾಮರ್ಥ್ಯಕ್ಕಿದ್ದ ಮಿತಿಯನ್ನು ನಾನು ಮುರಿದುಹಾಕಿರುವೆನು. ನೀವು ಇಲ್ಲಿಯವರೆಗೆ ಮಾಡಿರುವ ಕೆಲಸದ ಪರಿಣಾಮ ಸಹ ಚೆನ್ನಾಗಿ ಆಗಿರುವುದನ್ನು ನಾನು ನೋಡುತ್ತಿದ್ದೇನೆ. ಮುಂದಾದರೂ ಇನ್ನೂ ಹೆಚ್ಚು ಪರಿಣಾಮವಾಗುವ ನಂಬಿಕೆ ಇದೆ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

ವಿ.ಸೂ:ನಾನು ಪಶ್ಚಿಮದಿಂದ ತಿರುಗಿ ಬರುವ ಕಾಲಕ್ಕೆ ನೇರವಾಗಿ ಮದ್ರಾಸಿಗೆ ಬರಬೇಕೆಂದು ಸಂಕಲ್ಪಿಸಿದ್ದು ಕೆಲವು ಕೇಂದ್ರಗಳನ್ನು ತೆಗೆದುಕೊಳ್ಳಬೇಕೆಂದಿರುವೆ. ಅದರಲ್ಲಿ ನೀವು ಸಹ ಇರುವಿರಿ.

◆ ◆ ◆

"ಓಂ ತತ್‌ಸತ್"

ನಂ.೧೮೬
ನಂ.ಸಿ.೭೬೨/ಎಸ್.ಆರ್.ಸಿ.ಎಮ್.

ಶಾಹಜಹಾನ್‌ಪೂರ್
ದಿ.೨.೫.೭೩

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಮಮತೆಯ ಓಲೆ ತಲುಪಿತು. ಇಬ್ಬರು ಹುಡುಗಿಯರ ಮದುವೆ ಒಟ್ಟಿಗೆ ಆಗುವ ಸುವಾರ್ತೆ ನನಗೆ ಬಹಳ ಸಂತೋಷ ನೀಡಿತು. ಮತ್ತು ಜೊತೆಯಲ್ಲಿ ಉಪನಯನವೂ ಸಹ ಇದೆ. ನಾನು ೨೦೦ ರೂಪಾಯಿಯ ಅತ್ಯಲ್ಪ ಹಣವನ್ನು ಕಳಿಸುತ್ತಿರುವೆನು. ಇದನ್ನು ನೀವು ಹುಡುಗಿಯರಿಗಾಗಿ ಯೋಗ್ಯ ತಿಳಿದಂತೆ ವೆಚ್ಚ ಮಾಡಿರಿ. ಮತ್ತು ೧೧ ರೂಪಾಯಿ ಉಪನಯನಕ್ಕೋಸ್ಕರ ಇವೆ. ಈಶ್ವರನು ಈ ಮದುವೆಯನ್ನು ಸುವ್ಯವಸ್ಥೆಯಿಂದ ನೆರವೇರಿಸಲಿ. ಹುಡುಗಿಯರು ಸಂತೋಷ ಆನಂದದಿಂದ ಇರಲಿ. ನಾನು ಈ ಮದುವೆಗಳಲ್ಲಿ ಪಾಲ್ಗೊಳ್ಳಲು ಪ್ರಯತ್ನಿಸಲು ಸಾಧ್ಯವಿತ್ತು. ಆದರೆ ವಿದೇಶಿ ಅಥಿತಿಗಳು ನನ್ನ ಬಳಿ ತಂಗಿದ್ದು ಇನ್ನೂ ಕೆಲದಿನ ಇರುವರು. ಎರಡನೇಯದಾಗಿ ೧೯ನೆಯ ಏಪ್ರಿಲ್‌ನಿಂದ ನಾನು ಈಶ್ವರನ ಹೆಸರು ತೆಗೆದುಕೊಂಡು ಆಶ್ರಮದ ಕಟ್ಟಡದ ಕೆಲಸವನ್ನಾರಂಭಿಸಿರುವೆನು. ಅದರಲ್ಲಿ ನಾನಾ ರೀತಿಯ ತೊಂದರೆಗಳು ಎದುರಾಗುತ್ತಿರುವವು. ಅವೆಲ್ಲವೂ ದೇವರ ದಯೆಯಿಂದ ಸರಿ ಹೋಗುವವು.

ಒಂದು ಬ್ಯಾಂಕ್ ಡ್ರಾಫ್ಟ್ (೨೧೧ ರೂಪಾಯಿಯದು) ಈ ಪತ್ರದ ಜೊತೆಗೆ ಕಳುಹಿಸುತ್ತಿರುವೆನು. ಅದರ ನಂ.S ೬೦೬೧೬೦ ದಿನಾಂಕ ೨.೫.೭೩ ಇದೆ. ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೮೭
ನಂ.ಸಿ.೧೧೦೯/ಎಸ್.ಆರ್.ಸಿ.ಎಮ್.

ಶಾಹಜಹಾನ್‌ಪೂರ್
ದಿ.೮.೮.೭೩

ನನ್ನ . . . . . ಜೀ,

ಮಮತೆಯ ಓಲೆ ತಲುಪಿತು. ನೀವು ಮಾಡಿರುವ ಸತ್ಸಂಗದ ಕೆಲಸ ಸರಿಯಾಗಿದೆ. ನಾನು ೭ ಸಪ್ಟಂಬರ ೭೩ಕ್ಕೆ ಕಲಕತ್ತೆಗೆ ಹೋಗುವವನಿದ್ದೇನೆ. ಈಗ ನೀವು ಬರುತ್ತಿರುವುದರಿಂದ

೧೪ ಅಥವಾ ೧೫ನೆಯ ಸಪ್ಟಂಬರ ಇಟ್ಟುಕೊಂಡು ಕಲಕತ್ತೆಯವರಿಗೆ ಸಹ ಬರೆದಿರುವೆನು. ಆದುದರಿಂದ ನೀವು ಸುಖವಾಗಿ ಬರಬಹುದು ಮತ್ತು ನನ್ನ ಬಳಿ ತಂಗಬಹುದು.

ಇಲ್ಲಿ ಆಶ್ರಮದ ಕೆಲಸ ಕುಂಟುತ್ತಾ ನಡೆದಿದೆ. ಈಗ ಅದರ ಅಂದಾಜು ೩ ಲಕ್ಷಕ್ಕಿಂತ ಸ್ವಲ್ಪ ಹೆಚ್ಚಾಗುವುದು. ಇದರಲ್ಲಿ ಇಷ್ಟು ಹಣ ಹಿಡಿಯುತ್ತದೆಂದು ನನಗೆ ತಿಳಿದಿರಲಿಲ್ಲ. ಸಾಮಾನುಗಳೆಲ್ಲ ಬಹಳ ದುಬಾರಿಯಾಗುತ್ತಿವೆ. ನನಗೆ ಸಿಮೆಂಟು, ಫ್ಯಾಕ್ಟರಿಯಿಂದ ನೇರವಾಗಿ ದೊರಕಿದೆ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ.ಸೂ: ನೀವು ಬರುವ ದಿನಾಂಕವನ್ನು ಸೂಚಿಸಿರಿ.

◆ ◆ ◆

"ಓಂ ತತ್‌ಸತ್"

ನಂ.೧೮೮ ಶಾಹಜಹಾನ್‌ಪೂರ್

ನಂ.ಸಿ.೧೧೮೫/ಎಸ್.ಆರ್.ಸಿ.ಎಮ್. ದಿ. ೨೧.೮.೧೯೭೩

ನನ್ನ . . . . ... ಜೀ,

ದೀರ್ಘಾಯುಷಿಯಾಗಿರಿ. ಒಲುಮೆಯ ಓಲೆ ತಲುಪಿತು. ನೀವು ಬರುತ್ತಿರುವಿರೆಂದು ತಿಳಿದು ಸಂತೋಷವಾಯಿತು. ಬೆಂಗಳೂರಿನಲ್ಲಿ ಆಶ್ರಮ ಆಗಬೇಕೆಂದು ನೀವು ಬಯಸುವಿರಿ. ಎಲ್ಲಿಯವರೆಗೆ ಶಾಹಜಹಾನ್‌ಪೂರ ಆಶ್ರಮ ಆಗುವುದಿಲ್ಲವೋ, ಅಲ್ಲಿಯವರೆಗೆ ಯಾವುದೇ ಹೊಸ ಆಶ್ರಮ ಆಗಬಾರದೆಂದು ಕಾರ್ಯಕಾರೀ ಸಮಿತಿಯ ನಿರ್ಣಯವಿದೆ. ನಾವೆಲ್ಲರೂ ಇದನ್ನು ಪಾಲಿಸುವುದು ಅಗತ್ಯ. ನೀವು ಹಣ ಸಂಗ್ರಹಿಸಬಹುದು. ಏಕೆಂದರೆ ಅದರಲ್ಲಿ ಸಹ ಬಹಳ ಸಮಯ ಹಿಡಿಯುವುದು. ನನಗೆ ಇದರಲ್ಲಿ ೧೦ ವರ್ಷ ಹಿಡಿದಿದ್ದವು. ಇನ್ನೂ ಹಣದ ಆವಶ್ಯಕತೆ ಇದೆ. ಈಶ್ವರರು ಇಬ್ಬರಿದ್ದರೆ ಯಾರೂ ಸಾಕ್ಷಾತ್ಕಾರ ಮಾಡಿಕೊಳ್ಳಲು ಸಾಧ್ಯವಿರುತ್ತಿದ್ದಿಲ್ಲ. ಆದುದರಿಂದ ಇನ್ನೂ ಹಣ ಬೇಕಾಗುವ ಎರಡು ಆಶ್ರಮಗಳು ಆರಂಭವಾದರೆ, ವಿಚಾರವು ಕವಲೊಡೆಯುವುದು. ಅದರ ಪರಿಣಾಮವಾಗಿ ಎರಡೂ ಅಪೂರ್ಣವಾಗಿ ಉಳಿದುಬಿಡುವುವು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೮೯
ನಂ.ಸಿ.೪೫/ಎಸ್.ಆರ್.ಸಿ.ಎಮ್.

ಶಾಹಜಹಾನ್‌ಪೂರ್
ದಿ.೯.೧.೭೪

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಈ ವರ್ಷ ಬಸಂತ ಪಂಚಮಿಯು ೨೭ರಿಂದ ೨೯ ಜನವರಿ ೧೯೭೪ ರವರೆಗೆ ಇರುವುದು. ನೀವೆಲ್ಲರೂ ಪಾಲ್ಗೊಳ್ಳಿರಿ. ಮತ್ತು ಉತ್ಸವದಲ್ಲಿ ಪಾಲ್ಗೊಳ್ಳಲು ಎಲ್ಲ ವಿಭಾಗಗಳಿಗೆ ಸೂಚನೆ ಕೊಡಿರಿ. ನಾನು ಸರ್ನಾಡಜಿಗೆ ಕೂಡ ಬರೆದಿರುವೆನು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೯೦
ನಂ.೫೧೩/ಎಸ್.ಆರ್.ಸಿ.ಎಮ್.

ಶಾಹಜಹಾನ್‌ಪೂರ್
೧.೩.೧೯೭೬

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಬೀದರದಿಂದ ಗುಂಡೇರಾವ್ ಸಿವಾಡೆ ಅವರ ಒಂದು ತಂತಿ ಬಂದಿದೆ. ಅದರ ಪ್ರತಿಯನ್ನು ನಿಮ್ಮ ಬಳಿಗೆ ಕಳಸುತ್ತಿರುವೆನು. ಅದರ ಉತ್ತರ ನಾನು ಶ್ರೀ ರಾಮಶಾಸ್ತ್ರೀಯವರಿಗೆ ಕಳುಸುತ್ತಿರುವೆನು. ಅದರ ಪ್ರತಿಯನ್ನೂ ಕಳುಸುತ್ತಿರುವೆನು. ಇದಕ್ಕಿಂತ ಬಹಳ ಮುಂಚೆ ಗುಂಡೇರಾವ್ ಸಿವಾಡೆಯವರ ಒಂದು ಪತ್ರ ತಲುಪಿತ್ತು. ಅದರಲ್ಲಿ ಅವರು ಧಮ್ಮಿನ ತೊಂದರೆಯ ಬಗ್ಗೆ ಬರೆದಿದ್ದರು. ತತ್ಸಂಬಂಧವಾದ ಕೆಲವು ಕಷ್ಟಗಳನ್ನೂ ಸಹ ತಿಳಿಸಿದ್ದರು. ಇವೇ ಅವರ ಸಮಸ್ಯೆಗಳಾಗಿವೆ. ಜನರು ನಮ್ಮ-ನಿಮ್ಮಲ್ಲಿ ಬ್ರಹ್ಮವಿದ್ಯೆ ಕಲಿಯಲು ಬಂದು ತಮ್ಮ ರೋಗಗಳನ್ನೂ ಹಾಗು ಪ್ರಾಪಂಚಿಕ ಕೆಲಸಗಳನ್ನೂ ಸರಿ ಮಾಡಲು ನಮ್ಮನ್ನು ಒತ್ತಾಯಿಸಲು ಪ್ರಯತ್ನ ಮಾಡುತ್ತಾರೆ. ಇದು ಬಹಳ ಖೇದದ ವಿಷಯ. ಅವತಾರಪುರುಷರೂ ಸಹ ತೊಂದರೆಗಳಿಂದ ಮುಕ್ತರಾಗಿರದಾಗ ನಮ್ಮ ಪಾಡೇನು? ಇಂಥವರು ತಮ್ಮ ಕಷ್ಟಗಳಿಂದ ಬಿಡುಗಡೆ ಸಿಗುವಂಥ ಸ್ಥಳಕ್ಕೆ ಹೋಗಬೇಕು. ಮತ್ತು ಆರೋಗ್ಯವಂತರಾಗಬೇಕು. ಈ ಅನುಭವಗಳು ನಮಗೆ ನಿಮಗೆ ಎಲ್ಲರಿಗೂ ಆಗುತ್ತವೆ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೯೧ ಷಾಹಜಹಾನ್‌ಪೂರ್
ನಂ.ಸಿ-೧೦೦೮/ಎಸ್.ಆರ್.ಸಿ.ಎಮ್. ದಿ.೧೭.೮.೧೯೭೬

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಪತ್ರ ಬಂತು. ವಿಠ್ಠಲರಾವಜಿಯವರ ಪತ್ರವೂ ಬಂದಿದೆ. ನಿಮ್ಮಿಬ್ಬರಿಗೂ ಒಂದೇ ವಿಷಯ ಬರೆಯುತ್ತಿರುವೆನು. ನೀವಿಬ್ಬರೂ ಚಿಂತೆ ಮಾಡಬೇಕಾಗಿಲ್ಲ. ನಾನು ವಿನಾಯಿತಿಗಾಗಿ ಲಖನೌಗೆ ಅರ್ಜಿ ಕಳಿಸಿರುವೆನು. ಈ ಕೆಲಸ ಆಗುವುದೆಂದು ಬಲವಾದ ವಿಶ್ವಾಸವಿದೆ. ನೀವು ಇದರಲ್ಲಿ ಏನೂ ಮಾಡುವ ಅವಶ್ಯಕತೆ ಇಲ್ಲ. ಏನಾದರೂ ತೊಂದರೆಯಾಗಿ ನಿಮ್ಮ ಸಹಾಯದ ಅವಶ್ಯಕತೆ ಉಂಟಾಯಿತೆಂದರೆ ತತ್‌ಕ್ಷಣ ಸೂಚನೆ ಕೊಡುವೆ. ಇಲ್ಲಿ ಹೇಳಿಕೆಯು ಸಹ ದಾಖಲು ಮಾಡಬೇಕಾಗುವುದು. ಅದು ಮಿಷನ್ನಿನ ಕಡೆಯಿಂದ ಮಾಡಲಾಗುವುದು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

ವಿ.ಸೂ: ನಾನು ಸುಗ್ರೀವಾಜ್ಞೆಯ ಒಂದು ಪ್ರತಿಯನ್ನು ಲಖನೌದಿಂದ ತರಿಸಿ ಅನಂತರ ನಿಮಗೆ ಕಳಿಸುವೆನು. ಮದ್ರಾಸಿನಿಂದ ಪಾರ್ಥಸಾರಥಿಯವರ ೧೩.೮.೭೬ರ ಪತ್ರ ಬಂದಿದೆ. ಅದರ ಪ್ರತಿಯನ್ನು ನಿಮಗೆ ಕಳಿಸಿರುವೆ. ಇದನ್ನು ಆಳವಾಗಿ ಓದಿ ನಿಮ್ಮ ಅಭಿಪ್ರಾಯವನ್ನು ಮದ್ರಾಸಿಗೆ ಮತ್ತು ಇಲ್ಲಿಗೆ ಕಳುಹಿಸಿಕೊಡಿರಿ.

◆ ◆ ◆

"ಓಂ ತತ್‌ಸತ್"

ನಂ.೧೯೨ ಷಾಹಜಹಾನ್‌ಪೂರ್
ನಂ.ಸಿ Nil/ಎಸ್.ಆರ್.ಸಿ.ಎಮ್. ದಿ.೨೩.೩.೧೯೭೭

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಫ್ರಾನ್ಸಿನ ಸತ್ಸಂಗಿಗಳು ಮೇ ತಿಂಗಳ ೨ ಅಥವಾ ೩ನೇ ವಾರದಲ್ಲಿ ಒಂದು ಸಭೆಯನ್ನು ಏರ್ಪಡಿಸಲು ಬಯಸುತ್ತಿರುವರು. ಅದರಲ್ಲಿ ಐರೋಪ್ಯದೇಶಗಳ ಪ್ರಶಿಕ್ಷಕರು ಭಾಗವಹಿಸಬಯಸಿರುವರು. ಭಾರತದಿಂದ ಕಸ್ತೂರಿ

ಚತುರ್ವೇದಿಯನ್ನು ಆಮಂತ್ರಿಸಲಾಗಿದೆ. ಇಬ್ಬರ ಟಿಕೇಟು ಮುಂತಾದ ಪೂರ್ಣ ಖರ್ಚನ್ನೂ ಅಲ್ಲಿಯ ಸತ್ಸಂಗಿಗಳು ವಹಿಸುವರು.

ನಾನು ೨೮ನೆಯ ಮಾರ್ಚಗೆ ಕಾನಿಂದ ದಿಲ್ಲಿಗೆ ಹೋಗುವೆ. ಮತ್ತು ದಿಲ್ಲಿಯಿಂದ ೩೦ ಮಾರ್ಚನ ಸಾಯಂಕಾಲ ಮದ್ರಾಸ್ ತಲುಪುವೆ. ಅಲ್ಲಿಂದ ೬ ಏಪ್ರಿಲ್‌ಗೆ ಮಲೇಶಿಯಾ ಮತ್ತು ಒಂದೆರಡು ಸ್ಥಳಗಳಿಗೆ ಪ್ರಯಾಣ ಬೆಳೆಸುವೆ. ೨೩ನೆಯ ಏಪ್ರಿಲ್ ೭೭ಕ್ಕೆ ಮದ್ರಾಸಿಗೆ ತಿರುಗಿ ಬರುವೆ. ಅದರ ನಂತರ ನನ್ನನ್ನು ೩೦ ಏಪ್ರಿಲ್‌ಗೆ ಮದುರೈಗೆ ಹೋಗಲು ಜನರು ಒತ್ತಾಯಿಸಿರುವರು. ಅಲ್ಲಿಂದ ೨ನೇ ಅಥವಾ ೩ನೇ ಮೇಗೆ ಷಾಹಜಹಾನ್‌ಪುರಕ್ಕೆ ಪ್ರಯಾಣ ಬೆಳೆಸುವೆ.

ಕಸ್ತೂರಿಯ ಜೊತೆಯಲ್ಲಿ ಇಂಗ್ಲಿಷಿನಿಂದ ಉರ್ದುವಿನಲ್ಲಿ ಅನುವಾದ ಮಾಡಬಲ್ಲ ಒಬ್ಬ ವ್ಯಕ್ತಿ ಅವಶ್ಯವಾಗಿ ಇರಬೇಕಾಗುವುದು. ಮತ್ತು ಕಸ್ತೂರಿಯು ಹಿಂದಿಯಲ್ಲಿ ಅವರಿಗೆ ಉತ್ತರ ಕೊಡಲು ಸಾಧ್ಯವಾಗಬೇಕು. ನಿಮಗೆ ರಜೆ ಸಿಗಬಹುದೇನು? ಅಲ್ಲಿ ಕೇವಲ ಒಂದು ವಾರ ಹಿಡಿಯುವುದು. ಮತ್ತು ಹೋಗಲು ಬರಲು ೧೪ ತಾಸುಗಳು. ಪಾರ್ಥಸಾರಥಿ ನನ್ನ ಜೊತೆಯಲ್ಲಿ ಹೋಗುತ್ತಿರುವುದರಿಂದ ಅವರು ಆಕೆಯ ಜೊತೆಯಲ್ಲಿ ಹೋಗಲಾರರು. ನಾನು ಕಸ್ತೂರಿಯ ಜೊತೆಯಲ್ಲಿ ಒಬ್ಬ ಒಳ್ಳೆಯ, ಯೋಗ್ಯತೆಯ ಮನುಷ್ಯನನ್ನು ಕಳುಹಿಸಲಿಚ್ಛಿಸುತ್ತೇನೆ. ಏಕೆಂದರೆ ಅವರೂ ಚೆನ್ನಾಗಿ ಪ್ರಭಾವಿತರಾಗಬೇಕು. ಇದಕ್ಕಾಗಿ ನೀವು ಬಹಳ ಯೋಗ್ಯರಾಗಿರುವಿರಿ. ಇದರ ಉತ್ತರವನ್ನು ನೀವು ನನಗೆ ಮದ್ರಾಸಿನ ವಿಳಾಸಕ್ಕೆ ಬೇಗ ಕೊಡಿರಿ. ಮಕ್ಕಳಿಗೆ ಆಶೀರ್ವಾದಗಳು.

ಆಶೀರ್ವಾದಗಳೊಂದಿಗೆ<br>ರಾಮಚಂದ್ರ

◆ ◆ ◆

"ಓಂ ತತ್‌ಸತ್"

ನಂ.೧೯೩ — ಷಾಹಜಹಾನ್‌ಪೂರ್<br>
ನಂ. ೫೨೮/ಎಸ್.ಆರ್.ಸಿ.ಎಮ್. — ದಿ. ೧೭. ೧೨. ೧೯೭೭

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮ ಪತ್ರ ತಲುಪಿತು. ಅದನ್ನು ಓದಿ ಸಮಾಧಾನವಾಯಿತು.

ಕೆಲಸವಂತೂ ಎಲ್ಲರೂ ಕಲೆತು ಹಂಚಿಕೊಂಡು ಮಾಡಲೇಬೇಕಾಗಿದೆ. ಮತ್ತು ಅದು ಅವಶ್ಯವಾಗಿ ಆಗುವದು. ಆದರೆ ನನ್ನ ಬಳಿ ಯಾರು ಉನ್ನತ ಮಟ್ಟದ ಅಭ್ಯಾಸಿಗಳಿರುವರೋ

ಅವರಲ್ಲಿ ಐದು ಜನರನ್ನು ತೆಗೆದುಕೊಂಡಿರುವೆನು. ಅವರ ಹೆಸರುಗಳು ಈ ರೀತಿ ಇವೆ. (೧)ಶ್ರೀ ರಾಘವೇಂದ್ರರಾವ್, ಗುಲ್ಬರ್ಗಾ. (೨) ಶ್ರೀ ಪಿ. ರಾಜಗೋಪಾಲಚಾರಿ, ಮದ್ರಾಸ (೩) ಶ್ರೀ ಎಸ್. ಎ. ಸರ್ನಾಡ, ಗುಲಬರ್ಗಾ. (೪) ಶ್ರೀ ದೇವರಾಮ್. ಎಚ್. ಚಾವಡಾ, ನವಸಾರಿ. (೫) ಡಾ. ಎಸ್. ಪಿ. ಶ್ರೀವಾತ್ಸವ, ಲಖೀಮಾಪುರ. ಇವರ ಬಳಿ ಕೆಲಸ ಮಾಡಲು ಶಕ್ತಿ ಇದೆ. ಅವಶ್ಯಕತೆ ಉಂಟಾದಾಗ ಲಭಿಸುತ್ತಿರುವದು ಕೂಡ. ಅವರ ಹೃದಯದಲ್ಲಿ ಕೇವಲ ನಮಗೆ ಈ ಕೆಲಸ ಮಾಡುವದಿದೆ ಎಂದಿದ್ದರೆ ಸಾಕು. ಆಗ ಈ ವಿಚಾರದಿಂದ ಸಹ ಅವರ ಕೆಲಸದಲ್ಲಿ ಸಹಾಯ ಸಿಗುವುದು. ಕೆಲಸದ ಹುಮ್ಮಸ್ಸನ್ನು ಅವರೆಲ್ಲರೂ ಬೆಳೆಸಿಕೊಳ್ಳಬೇಕಾಗುವದು. ಕೆಲಸ ಮಾಡುವದರಿಂದ ಮತ್ತು ಅದರೊಂದಿಗೆ ಸಂಬಂಧ ಇಟ್ಟುಕೊಂಡಿರುವದರಿಂದ ಹುಮ್ಮಸ್ಸು ಬೆಳೆಯುವುದು. ಮಾರ್ಗದರ್ಶನವು ಸಹ ಎಲ್ಲರಿಗೂ ಸಿಗುತ್ತಿರುವುದು, ಮತ್ತು ಒಮ್ಮನಸ್ಸಾಗಿ ಕೆಲಸ ಮಾಡುವ ಅವಶ್ಯಕತೆ ಇದೆ. ನೀವು ಭಾವಿಸುವಂತೆ ಕಾರ್ಯಕಾರಿಣಿ ಸಮಿತಿಯ ಹೆಸರುಗಳನ್ನು ಪತ್ರಿಕೆಯಲ್ಲಿ ಕೊಡುವುದು ಅವಶ್ಯವಿದೆ. ನಿಮ್ಮ ಈ ಅಭಿಪ್ರಾಯವು ಸರಿಯೆಂದು ಕಂಡು ಬರುತ್ತದೆ. ನಾನು ಮದ್ರಾಸಿನ ಬಂಧು ಪಾರ್ಥಸಾರಥಿಗೂ "ಅಧ್ಯಕ್ಷರ ಸಲಹಾ ಸಮಿತಿ"ಯ ಬಗ್ಗೆ ಒಂದು ಕರಡು ಸಿದ್ಧ ಮಾಡಲು ಬರೆದಿರುವೆನು.

ನೀವು ಮತ್ತು ಸರ್ನಾಡಜಿ ಇಬ್ಬರು ಕಲೆತು ಒಂದು ಕರಡು ಸಿದ್ಧಮಾಡಿರಿ. ಬಸಂತದಲ್ಲಿ ಅದರ ಮೇಲೆ ಚರ್ಚೆಯಾಗಬಹುದು.

ಡಾ. ಸೊರಚ್ ಪ್ರಸಾದ್‌ರು ಸಮಿತಿಯ ಬಗ್ಗೆ ರೂಪರೇಷೆಗಳನ್ನು ಬರೆದು ಕಳಿಸಿರುವರು. ಅದರ ಒಂದು ಪ್ರತಿ ನಿಮಗೆ ಕಳುಹಿಸುತ್ತಿರುವೆನು.

ಚಟ್ಟಿ ಸಾಹೇಬರು ನಮ್ಮೆಲ್ಲರನ್ನು ತಮ್ಮವರೆಂದು ತಿಳಿಯುತ್ತಿರುವರೆಂಬುದನ್ನು ನೋಡಿ, ಕೇಳಿ ನನಗೆ ಸಂತೋಷವಾಯಿತು. ಅವರು ಪ್ರೇಮಲರಂತೂ ಇದ್ದೇ ಇರುವರು. ಅದರಲ್ಲೇನೂ ಸಂಶಯವಿಲ್ಲ.

ಈ ವರ್ಷ ಬಸಂತ ಪಂಚಮಿಯ ಉತ್ಸವವು ೧೧ ಫೆಬ್ರವರಿ ೧೯೭೮ ಇಸ್ವಿಯ ಬೆಳಗ್ಗೆ ೬.೩೦ ಗಂ. ಯಿಂದ ೧೩ ಫೆಬ್ರವರಿ ೧೯೭೮ ಇಸ್ವಿಯ ಬೆಳಗ್ಗೆ ೭.೩೦ ಗಂ. ಯವರೆಗೆ ನಡೆಯುವುದು.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ನಂ.೧೯೪
ನಂ.Nil/ಎಸ್.ಆರ್.ಸಿ.ಎಮ್.

ಶಾಹಜಹಾನ್‌ಪೂರ್
ದಿ. ೧೬. ೧೧. ೧೯೭೮

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ನಿಮ್ಮೆರಡು ಪತ್ರಗಳು ತಲುಪಿದವು. ನೀವು ಬಹಳ ಉತ್ತಮ ಕೆಲಸ ಮಾಡುತ್ತಿರುವಿರಿ. ಬಹಳ ಸಂತೋಷವಾಯಿತು. ಮತ್ತು ಚನ್ನಾಗಿಯೇ ಮಾಡುವಿರಿ. ನನಗೂ ಸಹ ನಿಮ್ಮ ಸ್ಮರಣೆ ಯಾವಾಗಲೂ ಇರುತ್ತದೆ. ಅಲ್ಲಿಯ ಜನರು ಬಹಳ ಒಳ್ಳೆಯವರು. ಮತ್ತು ಅವರಲ್ಲಿ ಪ್ರೇಮಿಸುವವರು ಸಹ ಇರುವರು.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

ವಿ.ಸೂ:Give my love to all the Abhyasis and blessings to all of you.
ಎಲ್ಲ ಅಭ್ಯಾಸಿಗಳಿಗೆ ನನ್ನ ಪ್ರೀತಿ ಹಾಗು ನಿಮ್ಮೆಲ್ಲರಿಗೂ ಆಶೀರ್ವಾದಗಳು.

◆ ◆ ◆

"ಓಂ ತತ್‌ಸತ್"

ನಂ.೧೯೫
ನಂ. ೧೧೬೮/ಎಸ್.ಆರ್.ಸಿ.ಎಮ್.

ಶಾಹಜಹಾನ್‌ಪೂರ್
ದಿ. ೧೧. ೪. ೧೯೭೯

ನನ್ನ . . . . . ಜೀ,

ದೀರ್ಘಾಯುಷಿಯಾಗಿರಿ. ಬಂಧು ಜಹಗೀರದಾರರು ೭ ಎಪ್ರಿಲ್‌ಗೆ ಬರೆದ ಪತ್ರ ತಲುಪಿತು. ಮನುಷ್ಯನಿಗೆ ನಾನಾವಿಧವಾದ ಕಷ್ಟಗಳನ್ನು ಭೋಗಿಸಬೇಕಾಗುವುದು. ಪ್ರಾಪಂಚಿಕ ಕೆಲಸಗಳಲ್ಲಿ ಯಾರೂ ಸಹಾಯ ಮಾಡಲಿಲ್ಲ. ಇದು ಕೂಡ ಒಂದು ಅನುಭವವಿದೆ.

ನಾನೂ ಕರುಳು ಹುಣ್ಣಿನ ರೋಗಿಯಾಗಿದ್ದೇನೆ. ನಿಮ್ಮ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ಆಗಿರಬಹುದು. ಈಶ್ವರನು ಬೇಗ ರೋಗದ ಪರಿಹಾರ ದಯಪಾಲಿಸಲಿ. ಬೇಗ ಗುಣಮುಖ ಹೊಂದಲು ನಾನು ಪ್ರಾರ್ಥನೆ ಮಾಡುವೆ. ಚಿಂತೆ ಮಾಡ ಬೇಕಾದ ಯಾವ ಕಾರಣವೂ ಇಲ್ಲ. ನೋಡಿಕೊಳ್ಳುವವನು ಈಶ್ವರನಿದ್ದಾನೆ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ

ರಾಮಚಂದ್ರ.

◆ ◆ ◆

"ಓಂ ತತ್‌ಸತ್"

ಶಾಹಜಹಾನ್‌ಪೂರ್
ದಿ. ೭. ೭. ೧೯೮೦

ನಂ.೧೯೬
ನಂ. ೩೨೩೦/ಎಸ್.ಆರ್.ಸಿ.ಎಮ್.

ಪ್ರೀಯ ಬಂಧು,

ಆಶೀರ್ವಾದ. ಇಲ್ಲಿ ಎಲ್ಲವೂ ಕ್ಷೇಮ. ನಿವೆಲ್ಲರೂ ಸಹ ಬಹಳ ಚೆನ್ನಾಗಿರುವಿರೆಂದು ಆಶಿಸುತ್ತೇನೆ. ನನಗೆ ಒಂದು ವಾರದಿಂದ ನಿಮ್ಮ ಮತ್ತು ಸರ್ನಾಡಜಿಯ ನೆನಪು ಬಹಳ ಬರುತ್ತಲಿದೆ. ನೀವು ಇಲ್ಲಿ ಬರುತ್ತಿರುವದು ಬಹಳ ಒಳ್ಳೆಯದಾಯಿತು. ಇದರಿಂದ ನಾವು ಬಹಳ ಸಂತುಷ್ಟರಾಗಿರುವೆವು. ಸರ್ನಾಡಜಿಗೆ ಬಿಡುವು ಇದ್ದಲ್ಲಿ ಅವರೂ ಬಂದು ಬಿಡಲಿ. ಮಿಷನ್ನಿನ ಬಗ್ಗೆ ಕೆಲವು ಅವಶ್ಯಕವಾದ ಮಾತುಗಳನ್ನು ಆಡಬೇಕಾಗಿದೆ.

ಮಕ್ಕಳಿಗೆ ಆಶೀರ್ವಾದ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

ವಿ.ಸೂ:ಜರ್ಮನಿಯಲ್ಲಿ ನನ್ನ ತಪಾಸಣೆಯಾಯಿತು. ಎಲ್ಲ ವಿಷಯಗಳು ಕ್ರಮಬದ್ಧವಾಗಿರುವವು. ಆಗಾಗ್ಗೆ ಉದರದಲ್ಲಿ ಹಗುರಾದ ನೋವು ಆಗುತ್ತದೆ. ಈಗ ನಾನು ಔಷಧವಿಲ್ಲದೆ ಗುಣವಾಗುತ್ತಿರುವೆನು. ಅಲ್ಲಿಯ ಡಾಕ್ಟರುಗಳ ಅಭಿಪ್ರಾಯವೇನೆಂದರೆ ಔಷಧ ಸೇವನೆ ಬಿಟ್ಟು ಬಿಡಬೇಕು ಮತ್ತು ಆಹಾರ ಸೇವನೆಯನ್ನು ಹೆಚ್ಚು ಮಾಡಬೇಕು.

◆ ◆ ◆

"ಓಂ ತತ್‌ಸತ್"

ಶಾಹಜಹಾನ್‌ಪೂರ್
ದಿ. ೧೩.೯.೧೯೮೦

ನಂ.೧೯೭
ನಂ. ೪೦೯೧/ಎಸ್.ಆರ್.ಸಿ.ಎಮ್.

ನನ್ನ . . . . . ಜೀ,

ಧೀರ್ಘಾಯುಷಿಯಾಗಿರಿ. ಪತ್ರ ತಲುಪಿತು. ವಿಷಯಗಳು ತಿಳಿದವು. ಯಾವುದನ್ನು ನಾವು ಪ್ರಾರಂಭಿಸಿರುವೆವೋ ಅದು ಬೆಳೆಯುತ್ತಲೇ ಹೋಗುವದು ಒಳ್ಳೆಯದು. ನಾವು ಮನಃ ಪೂರ್ವಕವಾಗಿ ಕಾರ್ಯ ನಿರತರಾದರೆ ಕಲ್ಲು ಕೂಡ ಮೇಣವಾಗಬಲ್ಲದು.

ಅನುಮತಿಯ ಸುಲಭ ಉಪಾಯವೇನೆಂದರೆ ಆ ಕಡೆ ಸಹ ಲಕ್ಷವಿಡಬೇಕು. ಶಿಸ್ತನ್ನು ಸ್ಥಿರಗೊಳಿಸಲು ಮತ್ತು ಅದರಿಂದ ಲಾಭ ಪಡೆಯಲು ಎಲ್ಲಕ್ಕಿಂತ ಮೊದಲು ಸಿದ್ಧರಾಗಿರಬೇಕು. ಮತ್ತು ಅಗತ್ಯವಾದ ಶಿಸ್ತು ನೆಲೆಸಿರಲೇ ಬೇಕು. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಇದರ ಬಗ್ಗೆ ಪಾರ್ಥಸಾರಥಿಯವರಿಂದ ತಿಳಿದುಕೊಳ್ಳಿರಿ. ನೀವು ಮತ್ತು ಅವರು ಕಲೆತು ಕಾರ್ಯವಿಧಾನವನ್ನು ರೂಪಿಸಿಕೊಂಡು ಅದರಂತೆ ಆಚರಿಸಿರಿ.

ಕೆಲವು ಸಭೆಗಳು ಆಗುತ್ತಿರಬೇಕೆಂಬ ವಿಚಾರವು ಒಳ್ಳೆಯದೆ. ಇದರಿಂದ ಹೆಚ್ಚು ಲಾಭ ಸಿಗುವದು. ಇದನ್ನು ಗಣನೆಗೆ ತೆಗೆದುಕೊಂಡು ನಾನು ನಿಮಗೆ 'ತಿನ್‌ಸುಕಿಯಾ'ಕ್ಕೆ ಹೋಗಲು ಅನುಮತಿ ಕೊಡುತ್ತೇನೆ. ನೀವು ನಿಮ್ಮ ಕಾರ್ಯಕ್ರಮವನ್ನು ಕಳುಹಿಸಿ ಕೊಡಿರಿ.

ಆಶೀರ್ವಾದಗಳೊಂದಿಗೆ
ರಾಮಚಂದ್ರ.

◆ ◆ ◆

ಓಂ ತತ್ ಸತ್

# ಶ್ರೀ ರಾಮಚಂದ್ರ ಮಿಷನ್, ಷಾಹಜಹಾನ್‌ಪೂರ [ಉ.ಪ್ರ.]

## ಪ್ರಾರಂಭಿಕ ಅಭ್ಯಾಸಿಗಳಿಗೆ ಧ್ಯಾನದ ವಿಧಾನ

ಮುಂಜಾನೆ :- ದೈವೀ ಪ್ರಕಾಶ ನಿಮ್ಮ ಹೃದಯದಲ್ಲಿ ಇದೆಯೆಂದು ಚಿಂತಿಸುತ್ತಾ ಒಂದು ತಾಸು ಕಾಲ ಧ್ಯಾನದಲ್ಲಿ ಕೂಡಬೇಕು. ಮನಸ್ಸನ್ನು ಬಲಾತ್ಕರಿಸದೇ ಇದನ್ನು ಸರಳ ಮತ್ತು ಸ್ವಾಭಾವಿಕ ರೀತಿಯಲ್ಲಿ ಮಾಡಿ. ಅಲ್ಲಿ ಬೆಳಕು ಕಾಣದಿದ್ದರೆ ಅದಕ್ಕಾಗಿ ಚಿಂತಿಸಬೇಡಿ. ಒಂದೇ ಭಂಗಿಯಲ್ಲಿ ಕುಳಿತು ಧ್ಯಾನ ಮಾಡುತ್ತಾ ದೈವೀ ಪ್ರಕಾಶ ಊಹಿಸಿ ಹೃದಯದ ಕಡೆ ಲಕ್ಷ್ಯ ಕೊಡಲು ಪ್ರಾರಂಭಿಸಿ. ಏಕಾಗ್ರತೆಯ ಕಡೆ ಮನಸ್ಸನ್ನು ಬಲಾತ್ಕರಿಸಬೇಡಿ. ಧ್ಯಾನದ ಸಮಯದಲ್ಲಿ ಬರುವ ವಿಚಾರಗಳ (ಭಾವನೆಗಳ) ಕಡೆ ಮನಸ್ಸು ಕೊಡದಿರಿ. ಈ ವಿಚಾರಗಳು ಬರಬಾರದಿತ್ತೆಂದು ಅವುಗಳೊಡನೆ ಹೋರಾಡಬೇಡಿ. ಕರೆಯದೆ ಬಂದ ಅತಿಥಿಗಳೆಂದು ತಿಳಿದು ಇವುಗಳ ಕಡೆ ಲಕ್ಷ್ಯವಿಡದಿರಿ.

ಸಾಯಂಕಾಲ:- ಅರ್ಧ ಗಂಟೆ ಕಾಲ ಅದೇ ಭಂಗಿಯಲ್ಲಿ ಕುಳಿತು ನಿಮ್ಮಲ್ಲಿರುವ ತೊಡರುಗಳು, ಸ್ಥೂಲತೆ ಮತ್ತು ಅಂಧಕಾರಗಳಿಂದ ಒಳಗೂಡಿದ ಅಶುದ್ಧ ವಿಚಾರ ಜಾಲಗಳೆಲ್ಲ ನಿಮ್ಮ ಬೆನ್ನ ಹಿಂದೆ ಹೊಗೆ ಅಥವಾ ಆವಿ ರೂಪದಲ್ಲಿ ಹೋಗುತ್ತಿವೆಯೆಂದು ಪ್ರೇರೇಪಿಸಬೇಕು (ಸೂಚಿಸಬೇಕು). ಹೊರಹಾಕಬೇಕಾದ ಇವುಗಳ ಮೇಲೆ ಧ್ಯಾನಿಸಬಾರದು. ಸುಮ್ಮನೆ ಹೊರದೂಡುತ್ತಿರಬೇಕು ಮಾತ್ರ.

ಪ್ರಾರ್ಥನೆ: ಓ ನಾಥ! ನೀನೇ ಮಾನವ ಜೀವನದ ಗುರಿ
ನಮ್ಮ ಇಚ್ಛೆಗಳು ನಮ್ಮ ಆತ್ಮೋನ್ನತಿಯಲ್ಲಿ ಬಾಧಕಗಳಾಗಿವೆ.
ನೀನೆ ನಮ್ಮ ಏಕಮಾತ್ರ ಸ್ವಾಮಿ ಮತ್ತು ಇಷ್ಟದೈವ.
ನಿನ್ನ ಸಹಾಯವಿಲ್ಲದೆ ನಿನ್ನ ಪ್ರಾಪ್ತಿಯು ಅಸಂಭವ.

ರಾತ್ರಿ:- ಮಲಗುವದಕ್ಕೆ ಮುಂಚೆ ನಮ್ರತೆಯಿಂದ ಕುಳಿತುಕೊಂಡು ಸ್ವಲ್ಪ ಸಮಯ ಪ್ರಾರ್ಥನೆ ಮಾಡಿರಿ. ಭಕ್ತಿಭಾವದಿಂದ ಮೇಲಿನ ಶಬ್ದಗಳನ್ನು ಒಂದೆರಡು ಸಲ ಮನಸ್ಸಿನಲ್ಲಿ ಉಚ್ಚರಿಸಿದ ನಂತರ ಅದರ ನಿಜಾರ್ಥದ ಮೇಲೆ ಧ್ಯಾನ ಮಾಡುತ್ತ ಅದರಲ್ಲಿಯೆ ಮುಳುಗಿಬಿಡಲು ಪ್ರಯತ್ನಿಸಿರಿ.